ISSN 2454-6054

# ಸಂವಾದ

ಏಪ್ರಿಲ್ 2020 ಬೆಲೆ ರೂ.40



ಅಂಬೇಡ್ಕರ್ ವಿಶೇಷಾಂಕ
2020

## ವರ್ತಮಾನದ ಅಂಬೇಡ್ಕರ್



Dr. B.R. AMBEDKAR
Architect of the Indian Constitution

Aided By Govt. of Karnataka



Sri. M.H. JAYAPRAKASH NARAYAN
Founder Secretary

## PANCHAJANYA VIDYA PEETHA WELFARE TRUST (REGD.)

# Dr. AMBEDKAR INSTITUTE OF TECHNOLOGY

(An Autonomous Institution, Aided by Government of Karnataka, Affiliated to Visvesvaraya Technological University and Approved by AICTE, New Delhi)

Mallathahalli, Bengaluru – 560 056




**For Educational Empowerment**

## PROGRAMS OFFERED

### UNDERGRADUATE PROGRAMS
(B.E. Programs)

- Civil
- Mechanical
- Electrical & Electronics
- Electronics & Communication
- Industrial Engineering & Management
- Electronics & Instrumentation
- Computer Science
- Telecommunication
- Information Science
- Medical Electronics

### POSTGRADUATE PROGRAMS
(M.Tech, MCA & MBA Programs)

- Master of Computer Applications
- Master of Business Administration
- Computer Science & Engineering
- VLSI Design & Embedded System
- Power Electronics
- Digital Communication & Networking
- Structural Engineering
- Machine Design
- Computer Networking & Engineering
- Cyber Forensics & Information Security

### DOCTORAL PROGRAMS
(Ph.D. Degrees)

- Civil Engineering
- Mechanical Engineering
- Electrical & Electronics Engineering
- Electronics & Communication Engineering
- Instrumentation Technology
- Telecommunication Engineering
- Computer Applications
- Business Administration
- Computer Science & Engg.
- Information Science & Engg.
- Medical Electronics
- Industrial Engg. & Management
- Physics ●Chemistry ●Mathematics

## 100% PLACEMENT ASSISTANCE
**Leading Recruiters**

Infosys · HEWLETT PACKARD · NOKIA Connecting People · accenture · Mindtree Welcome to possible · TATA CONSULTANCY SERVICES · Continental The Future in Motion · Tech Mahindra IT Services and Telecom Solutions · NTT DATA Global IT Innovator · XORIANT Solutions Pvt. Ltd · WIPRO Applying Thought · subex · UniTech · PRDC · CGI Experience the commitment

## ACCREDITATIONS, AFFILIATION & APPROVALS

NAAC A · NBA · UGC · AICTE · TEQIP-3 · nirf

## SALIENT FEATURES OF Dr. AIT

- Institution is managed by high profile visionaries
- Accredited by NAAC with "A" Grade
- Accredited by National Board of Accreditation (NBA)
- An institution with 163rd NIRF Ranking
- Well-motivated and qualified faculty
- Track record of Good Academic results
- Autonomous Institution
- The Students and faculty are the beneficiaries of TEQIP Phase I, II & III
- Digital Evaluation System
- An Institution with World Bank Funded TEQIP
- Students are groomed for Entrepreneurship, Innovation and Incubation
- Students are encouraged for Research and Development activities
- Multi facility co-education
- Eco-friendly campus
- Collaboration with foreign universities
- Congenial ambience for academic activity
- State of the art computing facility and information centre
- Smart class rooms, amphi-theatre, seminar halls and auditorium
- Separate hostel facility for boys and girls within the campus
- Affordable fees structure
- An integrated campus offering engineering, management, computer applications and research programs
- Transport facility available
- Ragging free campus
- Wi-Fi enabled campus
- Pre-placement Training in every semester
- Turnitin plagiarism software available
- CCTV enabled campus

**For Admission Contact : Managing Trustee, Panchajanya Vidya Peetha Welfare Trust (R)**
**Near Jnanabharathi Campus, Bengaluru - 560 056 Tel :080-23215070 Mobile : 9741940511**
**Fax : +91 80 23217789 E-mail : principal@dr-ait.org, secretarypvpwt@gmail.com Website : www.dr-ait.org**

ಸಂವಾದ

ಮಾಸ ಪತ್ರಿಕೆ

ಸಂಪುಟ 18 ಸಂಚಿಕೆ 06

ಏಪ್ರಿಲ್ 2020

ಸಂಪಾದಕ:
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು೫೬೦ ೦೯೧

**EDITOR:**
**INDUDHARA HONNAPURA**

PRINTED AND PUBLISHED BY
**S.R. GOVINDU**
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE 560 091

✆ **Circulation: 9108830437**
**9945264687**

✆ **Editorial: 9448048306**

**email Editorial**
**samvaadapatrike@gmail.com**
**samvaada@hotmail.com**
**honnapura@yahoo.co.in**

**Circulation :**
**samvaadacirculation@gmail.com**

## ಒಳಪುಟಗಳಲ್ಲಿ

❑ ಪತ್ರಗಳು ೦೪
❑ ಅತಿಥಿ ಸಂಪಾದಕರ ಮಾತು: ೦೫
❑ ಅಂಬೇಡ್ಕರ್ ದೃಷ್ಟಿಯಲ್ಲಿ ಧರ್ಮ ಮತ್ತು ದೇಶಪ್ರೇಮ
○ ಬರಗೂರು ರಾಮಚಂದ್ರಪ್ಪ ೦೬
❑ ಜಾತಿ ಎಲ್ಲಿದೆ ಎನ್ನುವವರ ಮುಂದೆ ವಾಸ್ತವವನ್ನು ರಾಚುವ 'ಕ್ಯಾಸ್ಟ್ ಮಾಟರ್ಸ್'
○ ಡಾ.ಭಾರತೀದೇವಿ ಪಿ ೦೮
❑ ಅಂಬೇಡ್ಕರ್–ಗ್ರಾಮ್‌ಶಿಯ ದಲಿತ/ ಸಬಾಲ್ಟ್ರನ್ ಚಿಂತನೆ ಮುಖಾಮುಖಿ
○ ಶಶಿಕುಮಾರ್ ೧೨
❑ ಸತ್ಯ ಮತ್ತು ಅಹಿಂಸೆಯ ಬಗ್ಗೆ ಅಂಬೇಡ್ಕರ್, ಫ್ಯನಾನ್, ಗಾಂಧಿ
○ ಮನಶ್ ಫಿರಾಕ್ ಭಟ್ಟಾಚಾರ್ಜಿ ೧೬
○ ಡಾ. ವೈ ರಮೇಶ್
❑ 'ಸ್ವಾತಂತ್ರ್ಯ'ವನ್ನು ಬಂಧಿಸಿರುವ ಸರಪಳಿಗಳು
○ ಕೆ ಫಣಿರಾಜ್ ೨೦
❑ ಎಲ್ಲ ಕಾಲಕ್ಕೂ ಪ್ರಸ್ತುತರಾದ ಬಾಬಾ ಸಾಹೇಬರು
○ ಜಿ ರಾಜಶೇಖರ ೨೩
❑ ಅಂಬೇಡ್ಕರ್‌ರವರ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಕೃತಿ: ಒಂದು ವಸ್ತುನಿಷ್ಠ ವಿಶ್ಲೇಷಣೆ
○ ರಘೋತ್ತಮ ಹೋಬ ೨೪
❑ ಅಂಬೇಡ್ಕರ್ ಪತ್ರಿಕೆಗಳು: ಮೂಕ ಭಾರತದ ಮಾತುಗಳು
○ ರಮೇಶ ಅರೋಲಿ ೨೮
❑ ನೀರು ಮತ್ತು ಉಪ್ಪು: ಮರುಕೊಳಿಸುತ್ತಿರುವ ನೆನಪು
○ ಕೆ ವಿ ನಾರಾಯಣ ೩೨
❑ ಇದು ನಗುವಂತಹ ವಿಷಯವಲ್ಲ!
○ ಮೂಲ: ಸೂರಜ್ ಯೆಂಗ್ಡೆ
ಅನು: ಶ್ರೀನಿವಾಸರಾಜು ದೊಡ್ಡೇರಿ ೩೪










❑ ಅಂಬೇಡ್ಕರ್ ಅವರ ಅವಿರತ ಬದುಕಿನ ಕ್ಷಣಗಳೊಂದಿಗೆ ಒಡನಾಡಿದ ಅನುಭವ
○ ಸುಭಾಷ್ ರಾಜಮಾನೆ೩೭
❑ ಅಂಬೇಡ್ಕರ್: ಫೋಟೋ ಫ್ರೇಮ್ ಮಾತ್ರವಾದರೆ ಸಾಲದು
○ ರಂಗನಾಥ ಕಂಟನಕುಂಟೆ ೩೮
❑ ಬಡವರ ಬ್ಯಾರಿಸ್ಟರ್ ಡಾ. ಬಿ. ಆರ್. ಅಂಬೇಡ್ಕರ್
○ ವಿಕಾಸ್ ಆರ್.ಮೌರ್ಯ ೪೦
❑ ಅಂಬೇಡ್ಕರ್ ಮತ್ತು ಜೆಎನ್‌ಯು
○ ಪುರುಷೋತ್ತಮ ಬಿಳಿಮಲೆ ೪೪
❑ ಸೀಮಾತೀತ ಸಿನಿಮಾ–6
○ ಬಿ ಶ್ರೀಪಾದ ಭಟ್ ೪೬
❑ ಕಥೆ: ಗಿಳಿಯು ಪಂಜರದೊಳಿಲ್ಲ
○ ರೇಣುಕಾ ಹೆಳವರ್ ೫೦
❑ ನಾಡು–ನುಡಿ: ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ
○ ಮೇಟಿ ಮಲ್ಲಿಕಾರ್ಜುನ ೫೪
❑ ಸಂವಿಧಾನ ಅಂಬೇಡ್ಕರ್ ಮತ್ತು ಪೌರತ್ವ
○ ಡಾ॥ ಎ ಅನಿಲ್ ಕುಮಾರ್ ೫೮
❑ ಸಮಾಜವಾದ, ಪ್ರಜಾಸತ್ತೆ ಮತ್ತು ಅಂಬೇಡ್ಕರ್
○ ಪ್ರದೀಪ ಕೆಂಚನೂರು ೬೪
❑ ಭಾರತದ ಕೃಷಿ ಮತ್ತು ಡಾ.ಅಂಬೇಡ್ಕರ್
○ ಅನಸೂಯ ಕಾಂಬಳೆ ೬೮
❑ ಹಂಗೇರಿಯಲ್ಲಿ ಬೇರುಬಿಟ್ಟ ಅಂಬೇಡ್ಕರ್
○ ಪ್ರದೀಪ್ ಅತ್ರಿ/ಪರಿಮಳ ಕಮತರ ೭೪
❑ ಧಮ್ಮಯಾನ–20
○ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ೭೭
❑ ಕಾವ್ಯ: ನವಭಾರತ ನಿರ್ಮಾತೃ ೧೯
❑ ಬಾಬಾ ಸಾಹೇಬ್ ಮತ್ತು ಡಾಕ್ಟರ್ ಸಾಹೇಬ್ ೩೦






ಮುಖಪುಟ ವಿನ್ಯಾಸ: ಸರೋವರ್ ಬೆಂಕಿಕೆರೆ

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

# ಜಮ್ಮು-ಕಾಶ್ಮೀರದ ಬಂಧನ ರಾಜಕಾರಣ




## ಪತ್ರಾಗಾರ

ಅಧಿಕಾರಕ್ಕೆ ಬಂದಾಗಿನಿಂದಲೂ ಸರ್ವಾಧಿಕಾರಿ ಧೋರಣೆ ಮೂಲಕ ಇಡೀ ದೇಶವನ್ನು ತೆಕ್ಕೆಗೆ ತೆಗೆದುಕೊಳ್ಳಬೇಕೆಂದು ಹವಣಿಸುತ್ತಿರುವ ಕೋಮುವಾದಿ ಬಿಜೆಪಿ ಸರ್ಕಾರ ಪ್ರತಿ ರಾಜ್ಯದಲ್ಲೂ ಒಂದಿಲ್ಲೊಂದು ಕುತಂತ್ರದ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದೆ. ಸಂಪೂರ್ಣವಾಗಿ ಜನರ ಆಶೀರ್ವಾದ ಸಿಗದೇ ಹೋದರೂ ವಾಮಮಾರ್ಗದ ಮೂಲಕ ಅಧಿಕಾರ ಹಿಡಿಯುವ ಅದರ ಪ್ರಯತ್ನ ನಿತ್ಯ ನಿರಂತರವಾಗಿದ್ದು, ಇತ್ತೀಚೆಗೆ ಮಧ್ಯ ಪ್ರದೇಶದಲ್ಲಿ ಅಧಿಕಾರ ಹಿಡಿಯಲು ಬಳಸಿದ ಕುತಂತ್ರ ಅದಕ್ಕೆ ಜೀವಂತ ಉದಾಹರಣೆ. ಕರ್ನಾಟಕದಲ್ಲಿ ಬಳಸಿದ ತಂತ್ರವನ್ನೇ ಮಧ್ಯಪ್ರದೇಶದಲ್ಲೂ ಪ್ರಯೋಗಿಸಿ ಯಶಸ್ಸು ಕಂಡಿರುವ ಬಿಜೆಪಿ, ಜಮ್ಮು ಕಾಶ್ಮೀರವನ್ನಂತೂ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡಿದೆ.

ಜಮ್ಮು-ಕಾಶ್ಮೀರದ ರಾಜಕೀಯ ನಾಯಕರುಗಳ ಮೇಲೆ ಪಬ್ಲಿಕ್ ಸೇಫ್ಟಿ ಆಕ್ಟ್ (ಪಿಎಸ್ಎ) ಅನ್ನು ಹೇರುವುದರ ಮೂಲಕ ಕೇಂದ್ರ ಸರ್ಕಾರವು ಕಾಶ್ಮೀರದ ವಿಷಯದಲ್ಲಿ ಒಂದು ಪ್ರಜಾತಾಂತ್ರಿಕ ಹಾಗೂ ಅನುಸಂಧಾನದ ಧೋರಣೆಯನ್ನು ಅನುಸರಿಸುವ ಬಗ್ಗೆ ತನಗೆ ಕಿಂಚಿತ್ತೂ ಆಸಕ್ತಿಯಿಲ್ಲವೆಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಕಾಶ್ಮೀರದ ಹಲವಾರು ರಾಜಕೀಯ ನಾಯಕರುಗಳನ್ನಂತೂ 2019ರ ಆಗಸ್ಟ್‌ನಲ್ಲಿ ಕಾಶ್ಮೀರದಲ್ಲಿ ಆರ್ಟಿಕಲ್ 370 ಅನ್ನು ರದ್ದು ಮಾಡಿದಾಗಿನಿಂದಲೂ ಗೃಹಬಂಧನದಲ್ಲಿರಿಸಲಾಗಿದೆ. ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕರೂ ಮತ್ತು ಸಂಸತ್ ಸದಸ್ಯರೂ ಆದ ಫರೂಕ್ ಅಬ್ದುಲ್ಲಾ ಸಹ 2019ರ ಸೆಪ್ಟೆಂಬರ್‌ನಿಂದ ಪಿಎಸ್ಎ ಅಡಿ ಬಂಧಿಸಿಡಲಾಗಿದೆ. ಸಂವಿಧಾನವು ವಿಧಿಸಿರುವ ಕಾನೂನಾಳ್ವಿಕೆಯನ್ನು ಪಾಲಿಸುತ್ತಾ ನಿರಂತರವಾಗಿ ಚುನಾವಣಾ ಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತಲೇ ಬಂದಿರುವ ಮುಖ್ಯಧಾರೆ ಪ್ರಜಾತಾಂತ್ರಿಕ ನಾಯಕರ ವಿರುದ್ಧ ಹರಿಬಿಟ್ಟಿರುವ ಈ ದಮನವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ಈ ನಾಯಕರುಗಳ ವಿರುದ್ಧ ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಕ್ರೋಡೀಕರಿಸಿರುವ ಡೊಸಿಯರ್ (ಬೇಹುಮಾಹಿತಿ ವರದಿ)ಯು ಈ ನಾಯಕರುಗಳು ಸಾರ್ವಜನಿಕ ಭದ್ರತೆಗಾಗಲೀ ಅಥವಾ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಲೀ ಆತಂಕವುಂಟು ಮಾಡಲಿದ್ದಾರೆಂದು ವಿವಾದೀತವಾಗಿ ಸಾಬೀತು ಪಡಿಸುವಂತ ಕನಿಷ್ಠ ಪುರಾವೆಗಳನ್ನೂ ಒದಗಿಸಿಲ್ಲ. ವಾಸ್ತವದಲ್ಲಿ ಎನ್‌ಸಿಪಿ ಮತ್ತು ಪಿಡಿಪಿ ನಾಯಕರುಗಳ ಮೇಲೆ ಹೊರಿಸಿರುವ ಕೆಲವು ಆರೋಪಗಳು ಅತಿ ಅಸಂಬದ್ಧವಾಗಿದ್ದರೆ ಇನ್ನು ಕೆಲವು ಉದ್ದಿಶ್ಯಪೂರ್ವಕ ಹಾಗೂ ಅನುಕೂಲಸಿಂಧು ಆಪಾದನೆಗಳಾಗಿವೆ.

ಇಂಥಾ ಕ್ರಮಗಳು ಕಾಶ್ಮೀರದ ಅನುದಿನದ ಸಾರ್ವಜನಿಕ ಜೀವನದಿಂದ ಸ್ಥಾಪಿತ ಪ್ರಜಾತಾಂತ್ರಿಕ ಶಕ್ತಿಗಳನ್ನು ಹೊರದೂಡುತ್ತದೆ ಅಥವಾ ಅವರಿಗಿರುವ ಅವಕಾಶಗಳನ್ನು ಕಿತ್ತುಕೊಳ್ಳುತ್ತದೆ. ಅಷ್ಟುಮಾತ್ರವಲ್ಲ, ಕಾಶ್ಮೀರದ ಜನತೆಯನ್ನು ಒಳಗೊಳ್ಳಲು ಮತ್ತು ಅವರ ಅಬಿವ್ಯಕ್ತಿಗೆ ಅವಕಾಶ ಕೊಡುವ ರಾಜಕೀಯ ಸಾಧನವನ್ನು ಕಿತ್ತುಕೊಳ್ಳುವ ಮೂಲಕ ಕಾಶ್ಮೀರದ ಜನತೆಯನ್ನು ಒಳಗೊಳ್ಳುವ ಅವಕಾಶವನ್ನು ಮುಚ್ಚಲಾಗುತ್ತಿದೆ. ಈ ರೀತಿ ಆ ರಾಜ್ಯದಲ್ಲಿ ಒಂದು ರಾಜಕೀಯ ನಿರ್ವಾತವನ್ನೇ ಸೃಷ್ಟಿಸುವ ಮೂಲಕ ಮುಂದೆ ಆ ಜಾಗವನ್ನು ಪ್ರಜಾತಾಂತ್ರಿಕ ಪ್ರಕ್ರಿಯೆಗಳನ್ನು ಒಪ್ಪದ ಶಕ್ತಿಗಳು ಆವರಿಸಿಕೊಳ್ಳುವಂತೆ ಮಾಡುವುದರ ಹಿಂದಿನ ತರ್ಕವೇನು? ಇದು ಒಂದು ವಿಶಾಲವಾದ ಮಾನವೀಯ ಅಥವಾ ಹಕ್ಕುಗಳು ಮತ್ತು ನ್ಯಾಯದ ಬಗೆಗಿನ ಸರ್ವ ಸಹಜ ಮಾನದಂಡಗಳಲ್ಲಿ ಮಾತ್ರವಲ್ಲದೆ ಒಂದು ಸಂಕುಚಿತವಾದ ಕಾನೂನು-ಸುವ್ಯವಸ್ಥೆಯ ದೃಷ್ಟಿಕೋನದಿಂದಲೂ ಸಹ ಅನಪೇಕ್ಷಣೀಯವಾದ ಕ್ರಮವಾಗಿದೆ. ಕಾಶ್ಮೀರವನ್ನು ಸೆರೆಮನೆಯೆಂದು ಘೋಷಿಸಿ ಎಂದು ಹೇಳಿದ ಕಾಶ್ಮೀರದ ನಾಯಕರೊಬ್ಬರ ಉದ್ವಿಘ್ನ ಹೇಳಿಕೆ ಉತ್ಪ್ರೇಕ್ಷೆಯ ಹೇಳಿಕೆಯೇನೂ ಆಗುವುದಿಲ್ಲ.

**ಅನೂಪ್‌ಪಾರ್ಥ, ಬೆಂಗಳೂರು**

## ಅಂಬೇಡ್ಕರ್ ಹಬ್ಬ ಮುಂದೂಡಿಕೆ

**ಜಗತ್ತಿನಾದ್ಯಂತ ಕೊರೋನಾ ವೈರಸ್ ಸಮಸ್ಯೆ ಕಾಡುತ್ತಿರುವ ಕಾರಣ ದೇಶದಲ್ಲೂ ಲಾಕ್‌ಡೌನ್ ಘೋಷಿಸಲಾಗಿದ್ದು, ಏ.14ರಂದು ಬೆಂಗಳೂರಿನ ಸ್ಫೂರ್ತಿಧಾಮದಲ್ಲಿ ಆಯೋಜಿಸಲಾಗಿದ್ದ ಅಂಬೇಡ್ಕರ್ ಹಬ್ಬವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸಲಾಗುವುದು.**


## ಚಂದಾ ವಿವರ   ಬಿಡಿ ಪ್ರತಿ ರೂ. 40

| ಚಂದಾ ಅವಧಿ: | 1 ವರ್ಷಕ್ಕೆ | 3 ವರ್ಷಕ್ಕೆ | 5 ವರ್ಷಕ್ಕೆ |
|---|---|---|---|
| ವ್ಯಕ್ತಿಗಳು: | ರೂ. 450 | ರೂ. 1400 | ರೂ. 2300 |
| ಸಂಸ್ಥೆಗಳು : | ರೂ. 500 | ರೂ. 1440 | ರೂ. 2400 |

ಆಜೀವ ಚಂದಾ (ವ್ಯಕ್ತಿಗಳು) ರೂ. 25,000/
ಆಜೀವ ಚಂದಾ (ಸಂಸ್ಥೆಗಳು) ರೂ. 50,000/

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕುಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:

A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
**A/C No: SB30140484351,**
**IFS Code: SBIN0005198**

## ಚಂದಾದಾರರ ಗಮನಕ್ಕೆ

'ಸಂವಾದ' ಪತ್ರಿಕೆಯ ಚಂದಾ ವಿವರ, ಹೊಸದಾಗಿ ಚಂದಾದಾರರಾಗುವವರು, ನವೀಕರಿಸುವವರು, ಪತ್ರಿಕೆ ಸರಬರಾಜಿನಲ್ಲಾಗುವ ವ್ಯತ್ಯಯದೂರುಗಳನ್ನು ಕುರಿತ ಮಾಹಿತಿಗಾಗಿ ಈ ಕೆಳಕಂಡ ಸಂಖ್ಯೆಗಳನ್ನು ಮಾತ್ರ ಸಂಪರ್ಕಿಸಬೇಕಾಗಿ ವಿನಂತಿ. ಬ್ಯಾಂಕ್‌ಗೆ ನೇರವಾಗಿ ಚಂದಾ ಹಣ ಸಂದಾಯ ಮಾಡುವವರು ಕೂಡಲೇ ತಮ್ಮ ಹೆಸರು, ಹಣದ ಮೊತ್ತ ಹಾಗೂ ವಿಳಾಸವನ್ನು ಎಸ್‌ಎಂಎಸ್ ಅಥವಾ ಇಮೇಲ್ ಮೂಲಕ ಮಾಹಿತಿ ನೀಡಲು ಕೋರಿದೆ.

**ಮೊಬೈಲ್: 9108830437, 9945264687**
ಇಮೇಲ್: **samvaadacirculation@gmail.com**



# ಅಂಬೇಡ್ಕರ್: ದಮನಿತರ ಅರಿಯುವ ತಾಯ್ತನದ ಕಣ್ಣೋಟ

ಅಂಬೇಡ್ಕರ್ ವಿಶೇಷಾಂಕ

2020

ಏಪ್ರಿಲ್ ತಿಂಗಳು ಬಂತೆಂದರೆ 'ಸಂವಾದ'ಕ್ಕೆ ಪ್ರತಿ ವರ್ಷವೂ ಹಬ್ಬವೇ! ಕಾರಣ ಅಂಬೇಡ್ಕರ್ ಜಯಂತಿ. ಅಂಬೇಡ್ಕರ್ ಎಲ್ಲ ಕಾಲಕ್ಕೂ ಪ್ರಸ್ತುತರಾಗಿದ್ದು ಅವರ ವಿಚಾರಗಳು, ಚಿಂತನೆಗಳು ಬರಹಗಾರರಿಗೆ ಅಕ್ಷಯ ಪಾತ್ರೆ. ಮೊಗೆದಷ್ಟು ಹೊಸ ಹೊಸ ವಿಚಾರಗಳು ಒಡಮೂಡುತ್ತಲೇ ಇರುತ್ತವೆ. ಅದೇ ರೀತಿ ಈ ವರ್ಷವೂ ಏಪ್ರಿಲ್ ತಿಂಗಳ 'ಸಂವಾದ' ಅಂಬೇಡ್ಕರ್ ವಿಶೇಷಾಂಕವಾಗಿ ಮೂಡಿಬಂದಿದ್ದು, ಸಂಚಿಕೆ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಅದನ್ನು ಅತ್ಯಂತ ನಾಜೂಕಾಗಿ ರೂಪಿಸಿಕೊಟ್ಟ ಸಂಶೋಧಕ ಡಾ. ಅರುಣ್ ಜೋಳದ ಕೂಡ್ಲಿಗಿ ಅವರಿಗೆ 'ಸಂವಾದ' ಬಳಗ ಈ ಮೂಲಕ ಧನ್ಯವಾದ ಅರ್ಪಿಸುತ್ತದೆ.

**-ಇಂದೂಧರ ಹೊನ್ನಾಪುರ**
**ಸಂಪಾದಕ**

ಇದೊಂದು ಆಕಸ್ಮಿಕ. ಇಂದೂಧರ ಹೊನ್ನಾಪುರ ಸರ್ 'ಅರುಣ್, ಏಪ್ರಿಲ್ ಸಂವಾದವನ್ನು ಅಂಬೇಡ್ಕರ್ ವಿಶೇಷ ಸಂಚಿಕೆಯಾಗಿ ಸಂಪಾದಿಸುವಿರಾ? ಎಂದಾಗ ಕ್ಷಣವೂ ಯೋಚಿಸದೆ ಒಪ್ಪಿದ್ದೆ. ನನ್ನ ಅವಸರ ನೋಡಿ 'ಅರ್ಜಂಟೇನಿಲ್ಲ, ಸಮಯ ತಗೊಂಡು ಹೇಳಿ' ಎಂದಿದ್ದರು. ಕೆಲವು ಆಪ್ತರ ಜತೆ ಚರ್ಚಿಸಿ ಮತ್ತೊಮ್ಮೆ ಒಪ್ಪಿಗೆ ನೀಡಿದ್ದೆ.

'ಸಂವಾದ' ಪತ್ರಿಕೆ ಬಾಬಾ ಸಾಹೇಬರ ಅರಿವಿನ ವಿಸ್ತರಣೆಯಾಗಿ, ಕರ್ನಾಟಕದ ಎಲ್ಲ ಬಗೆಯ ದಮನಿತರ ಧ್ವನಿಯಾಗಿ, ಭಿನ್ನಮತಗಳನ್ನು ಆಲಿಸುತ್ತಿದೆ. ಏಕಕಾಲದಲ್ಲಿ ಅಕಾಡೆಮಿಕ್ ಶಿಸ್ತು, ಚಳವಳಿಯ ಸಖ್ಯ, ತಾಯ್ತನದ ಕಣ್ಣೋಟ ಬೆರೆತಿವೆ. ಹೀಗಾಗಿ ಕನ್ನಡದಲ್ಲಿ ಸಂವಾದಕ್ಕೆ ವಿಶಿಷ್ಟ ಗುರುತಿದೆ. ದಲಿತ ಚಳವಳಿಯ ಭಾಗವಾಗಿದ್ದ ಇಂದೂಧರ ಹೊನ್ನಾಪುರ ಅವರು ಸಂವಾದವನ್ನು ಅರ್ಥಪೂರ್ಣವಾಗಿ ರೂಪಿಸುತ್ತಿದ್ದಾರೆ. ಇಂತಹ ಜೀವಪರ ಪತ್ರಿಕೆಯಲ್ಲಿ ಕಳೆದ ನಾಲ್ಕು ವರ್ಷದಿಂದ ನನ್ನ ಜನಕಥನ ಕಾಲಂಗೆ ಅವಕಾಶ ಕಲ್ಪಿಸಿದ್ದಕ್ಕೆ, ಈ ಸಂಚಿಕೆಯ ಅತಿಥಿ ಸಂಪಾದಕ ಜವಬ್ದಾರಿ ನೀಡಿದ್ದಕ್ಕೆ ಕೃತಜ್ಞತೆಗಳು.

ಈ ಸಂಚಿಕೆ, ಪ್ರಜಾಪ್ರಭುತ್ವ, ಬಾಬಾಸಾಹೇಬರ ಕನಸಿನ ಸಂವಿಧಾನ ದುರ್ಬಲಗೊಳ್ಳುತ್ತಿರುವ ವರ್ತಮಾನದ ಗಾಯಗಳಿಗೆ ಅಂಬೇಡ್ಕರ್ ಅರಿವಿನ ಔಷಧಿಯನ್ನು ಶೋಧಿಸುವ ಸಣ್ಣ ಪ್ರಯತ್ನ. ಭಾರತವನ್ನು ಒಳಗೊಂಡಂತೆ ಪ್ರಜಾಪ್ರಭುತ್ವ ಅಳವಡಿಸಿಕೊಂಡ ದೇಶಗಳಲ್ಲಿ ಇದೀಗ ಸರ್ವಾಧಿಕಾರ–ಫ್ಯಾಸಿಸಮ್ ಮತ್ತೆ ತಲೆಯೆತ್ತುತ್ತಿದೆ. ಇದರ ವಿರುದ್ಧದ ಪ್ರತಿರೋಧಕ್ಕೆ ಅಂಬೇಡ್ಕರ್ ಚಿಂತನೆ ಮದ್ದಾಗಿದೆ. ಹಾಗಾಗಿ ಈ ಸಂಚಿಕೆಯಲ್ಲಿ ವರ್ತಮಾನದ ಎಳೆ ಹೆಣಿಗೆಯಂತಿದೆ. ಈ ದೇಶದ ಹೊಸ ತಲೆಮಾರು ಬಾಬಾ ಸಾಹೇಬರನ್ನು ತಮ್ಮ 'ಹೀರೋ' ಎಂದು ಗುರುತಿಸಿಕೊಂಡ ಹೊತ್ತಿನಲ್ಲಿ, ಈ ನಡಿಗೆಗೆ ಪ್ರಜ್ಞಾವಂತಿಕೆಯಿಂದ ಶಕ್ತಿ ತುಂಬಬೇಕಿದೆ. ಯುವ ಚಿಂತಕ ಸೂರಜ್ ಯಂಗ್ಡೆ 'ಭಾರತೀಯ ಸಮಾಜದ ದಿಕ್ಕೆಟ್ಟ ದೋಣಿಯನ್ನು ಸಮಾನತೆಯ ತತ್ವ, ಸಾಮಾಜಿಕ ಏಳಿಗೆ, ಸ್ಥಿರ ಪ್ರಜಾಪ್ರಭುತ್ವ ಎಂಬ ದಂಡೆಗೆ ಮುಟ್ಟಿಸಲು ದೃಢ ಮನಸ್ಸಿನಿಂದ ಹುಟ್ಟುಹಾಕುತ್ತಾ ಕುಳಿತಿರುವ ನಾವಿಕನಂತೆ ಅಂಬೇಡ್ಕರ್ ಭಾಸವಾಗುವುದಿದೆ' ಎನ್ನುತ್ತಾರೆ. ಈ ಮಾತು ವರ್ತಮಾನಕ್ಕೂ ಅನ್ವಯಿಸುತ್ತದೆ.


ಮೊದಲನೆಯದಾಗಿ, 'ಅಂಬೇಡ್ಕರ್' ವ್ಯಕ್ತಿ ಗ್ರಹಿಕೆ ಪಲ್ಲಟವಾಗಿ ಲೋಕದ ದಮನಿತರನ್ನು ಅರಿಯುವ ತಾಯ್ತನದ ಕಣ್ಣೋಟವಾಗಿ, ಕೋಟ್ಯಾಂತರ ಜನರೊಳಗೆ ಮರುಹುಟ್ಟು ಪಡೆದ ಬಿಡುಗಡೆಯ ದಾರಿಯಾಗಿ, ಬಾಬಾ ಸಾಹೇಬರ ಅರಿವಿನ ಬೌಗೋಳಿಕತೆ ಇದೀಗ ಜಾಗತಿಕವಾಗಿದೆ. ಭಾರತವೆಂಬ ಬೃಹತ್ ಮರದ ಸೌಂದರ್ಯವನ್ನು ವರ್ಣಿಸುವವರ ಮಧ್ಯೆ, ಈ ಮರದ ಬೇರಿಗೆ ನೀರು ಗೊಬ್ಬರವಾದ ಸಮುದಾಯದ ಪ್ರತಿನಿಧಿಯಾಗಿ, ನೆಲದ ಬಿರುಕಿನಿಂದ ತೂರಿ ಬಂದ ಬಾಬಾ ಸಾಹೇಬರು, ಮರಳಿ ಎರೆಹುಳಿವಿನಂತೆ ಭೂಮಿಯ ಒಳ ಹೊಕ್ಕು ನೆಲದಡಿ ದುಡಿವ ಜನರ ಮೇಲೆತ್ತಿ, ಯಾರದೋ ಮರದ ಬೇರುಗಳಿಗೆ ಪೋಷಕಾಂಶಗಳಾಗುವ ಬದಲು ನೀವುಗಳೆ ಹೆಮ್ಮರವಾಗಿ ಎಂಬ ಸ್ವಾಭಿಮಾನ ತುಂಬಿದರು. ಹಾಗಾಗಿಯೇ ಇಂದು ದಲಿತ ಮಹಿಳೆ ಕೆಳಜಾತಿ ಆದಿವಾಸಿ ಅಲೆಮಾರಿ ಅಲ್ಪಸಂಖ್ಯಾತ ಹಿಂದುಳಿದ ವರ್ಗಗಳ ಮೊದಲ ಮತ್ತು ಎರಡನೆ ತಲೆಮಾರು ಅಂಬೇಡ್ಕರ್ ಬೆಳಕಿನಲ್ಲಿ ಮುನ್ನಡೆಯುತ್ತಿದೆ. ಇದರ ಫಲವೆ ಸಿ.ಎ.ಎ/ಎನ್.ಆರ್.ಸಿ/ಎನ್.ಪಿ.ಆರ್ ವಿರುದ್ಧದ ಹೋರಾಟದಲ್ಲಿ ಅಂಬೇಡ್ಕರ್ 'ಯೂತ್ ಐಕಾನ್' ಆಗಿ ರೂಪುತಳೆದರು.

ಒಂದೆಡೆ ಭಾರತದಲ್ಲಿ ಬಾಬಾಸಾಹೇಬರನ್ನು ದಲಿತ ಸಮುದಾಯಗಳ ಜತೆ, ಅವರ ಚಿಂತನೆಯನ್ನು ಕೆಲವು ನಿರ್ದಿಷ್ಟ ಸಂಗತಿಗಳ ಜತೆ ತಳಕುಹಾಕಲಾಗುತ್ತಿದ್ದರೆ, ಮತ್ತೊಂದೆಡೆ ಅಂಬೇಡ್ಕರ್ ಜಾಗತಿಕ ಚಿಂತಕರ ವ್ಯಾಪ್ತಿಗೆ ವಿಸ್ತರಿಸುತ್ತಿದ್ದಾರೆ. ಹೀಗಾಗಿ ಅಂಬೇಡ್ಕರ್ ಓದು ಮತ್ತು ಚಿಂತನೆ ವ್ಯಾಪಕವಾಗುತ್ತಿದೆ. ಬೇರೆ ಬೇರೆ ಸೈದ್ಧಾಂತಿಕ ಹಿನ್ನೆಲೆಯವರು ಅಂಬೇಡ್ಕರರನ್ನು ಓದುತ್ತ ತಮ್ಮ ಈತನಕದ ತಿಳಿವನ್ನು ತಿದ್ದಿಕೊಳ್ಳುತ್ತಿದ್ದಾರೆ. ವಿಶೇಷವಾಗಿ ಈ ಸಂಚಿಕೆಯಲ್ಲಿ ಹೊಸ ತಲೆಮಾರಿನ ಚಿಂತಕರು ಬಾಬಾ ಸಾಹೇಬರ ಅರಿವಿಗೆ ಮುಖಾಮುಖಿಯಾಗಿದ್ದಾರೆ.

ಈ ಸಂಚಿಕೆಗಾಗಿ ಹಿರಿಯರು, ಸ್ನೇಹಿತರು ತಮ್ಮ ಅಮೂಲ್ಯ ಸಮಯವನ್ನು ಮೀಸಲಿಟ್ಟು ಲೇಖನ ಬರೆದುಕೊಟ್ಟಿದ್ದಾರೆ. ಎಲ್ಲರಿಗೂ ಮನದುಂಬಿ ವಂದಿಸುವೆ. ಕೊರೋನದ ಪರಿಣಾಮ ವಿಶೇಷಾಂಕವನ್ನು ಮುದ್ರಿಸಲಾಗುತ್ತಿಲ್ಲ. ಹಾಗಾಗಿ ಸಂಚಿಕೆಯ ಪಿಡಿಎಫ್ ಪ್ರತಿಯನ್ನು ವಿತರಣೆ ಮಾಡಲಾಗುತ್ತಿದೆ. ಈ ಸಂಚಿಕೆಗಾಗಿ ಪಿ.ಮಹಮದ್, ಸತೀಶ್ ಆಚಾರ್ಯ, ದಿನೇಶ್ ಕುಕ್ಕಜಡ್ಕ ಅವರು ಕಾರ್ಟೂನ್ ರಚಿಸಿಕೊಟ್ಟಿದ್ದಾರೆ. ಮಿತ್ರ ಸರೋವರ್ ಬೆಂಕಿಕೆರೆ ಚೆಂದದ ಪೋಸ್ಟರ್ಸ್ ಮತ್ತು ಈ ಸಂಚಿಕೆಯ ಆಕರ್ಷಕ ಮುಖಪುಟ ಮಾಡಿಕೊಟ್ಟಿದ್ದಾನೆ, ಮುಖಪುಟಕ್ಕೆ ತಮಿಳುನಾಡಿನ ಹಿರಿಯ ಕಲಾವಿದ ಮಾರ್ತಾಂಡ ರಾಜಶೇಖರನ್ ಅವರ ತೈಲವರ್ಣ ಕಲಾಕೃತಿಯನ್ನು ಬಳಸಿಕೊಳ್ಳಲಾಗಿದೆ. ಹರೀಶ್, ರಾಠೋಡ್ ಪುಟವಿನ್ಯಾಸ ಚೆಂದಗೊಳಿಸಿದ್ದಾರೆ. ಬಿ.ಯು.ಸುಮಾ ಮೇಡಂ ನೆರವನ್ನು ಮರೆಯುವಂತಿಲ್ಲ. ಎಲ್ಲರಿಗೂ ಮನದುಂಬಿ ವಂದಿಸುವೆ. ಎಂದಿನಂತೆ ಈ ಸಂಚಿಕೆ ಕುರಿತ ನಿಮ್ಮ ಮೆಚ್ಚುಗೆ, ಅಭಿಪ್ರಾಯ, ಟೀಕೆ, ವಿಮರ್ಶೆಗಳಿಗೆ ಸ್ವಾಗತ.

**-ಅರುಣ್ ಜೋಳದಕೂಡ್ಲಿಗಿ**
**ಗೌರವ ಸಂಪಾದಕರು**

# ಅಂಬೇಡ್ಕರ್ ದೃಷ್ಟಿಯಲ್ಲಿ ಧರ್ಮ ಮತ್ತು ದೇಶಪ್ರೇಮ




ಕನ್ನಡದ ವೈಚಾರಿಕ ವಲಯವನ್ನು ರೂಪಿಸಿದ ಹಿರಿಯರಲ್ಲಿ ಪ್ರಮುಖರು. ವರ್ತಮಾನದ ವಿದ್ಯಮಾನಗಳಿಗೆ ಸಕ್ರಿಯವಾಗಿ ಪ್ರತಿಕ್ರಿಯಿಸುತ್ತ ಸದಾ ಕ್ರಿಯಾಶೀಲವಾಗಿರುವ ಪಬ್ಲಿಕ್ ಇಂಟಲೆಕ್ಚುವಲ್. ಕನ್ನಡ ಸಾಹಿತ್ಯಕ್ಕೆ ಬಂಡಾಯದ ಹಿನ್ನೆಲೆಯ ಚಳವಳಿಯ ಆಯಾಮ ನೀಡಿದವರು. ಅರಿವಿನ ವಿಸ್ತಾರಕ್ಕಾಗಿ 'ನೋಡುಗ' ವರ್ಗವನ್ನೂ ತಲುಪಲು ಸಿನೆಮಾ ರಂಗದಲ್ಲಿಯೂ ಪ್ರಯೋಗ ಮಾಡುತ್ತಿದ್ದಾರೆ. ಬರಗೂರು ಅವರ ಬರಹ, ಮಾತುಕತೆ, ಸಿನೆಮಾಗಳ ಮೂಲಕ ಅವರದ್ದೇ ಆದ ಒಂದು ಚಿಂತನಾ ಮಾದರಿಯೊಂದನ್ನು ರೂಪಿಸಿದ್ದಾರೆ.

**ಬರಗೂರು ರಾಮಚಂದ್ರಪ್ಪ**

1956 ಅಕ್ಟೋಬರ್ 14 ಡಾ.ಅಂಬೇಡ್ಕರ್ ಅವರು ಬೌದ್ಧಧರ್ಮವನ್ನು ಸ್ವೀಕರಿಸಿದ ದಿನ. ಹಿಂದೂ ಧರ್ಮದೊಳಗಿನ ಸಾಮಾಜಿಕ ಅಸಮಾನತೆಯ ಅವಮಾನದಿಂದ ಹೊರಬರಲು ಅಂಬೇಡ್ಕರ್ ಕೈಗೊಂಡ ದಿಟ್ಟಕ್ರಮಗಳಲ್ಲಿ 'ಬುದ್ಧ ದಮ್ಮ ಸ್ವೀಕಾರ'ವೂ ಒಂದು. ಅವರ ನೋವು ಎಷ್ಟು ಅಗಾಧವಾದುದು ಎಂಬುದಕ್ಕೆ 1931ರ ಆಗಸ್ಟ್ 14 ರಂದು ಅವರೇ ಗಾಂಧೀಜಿಯವರಿಗೆ ಹೇಳಿದ ಮುಂದಿನ ಮಾತುಗಳೇ ಸಾಕ್ಷಿಯಾಗಿವೆ. "ನನಗೊಂದು ತಾಯಿನಾಡಿಲ್ಲ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ. ನಮ್ಮನ್ನು ಅತ್ಯಂತ ಕೀಳಾಗಿ ಕಾಣುವ ಈ ನಾಡನ್ನು, ಈ ಧರ್ಮವನ್ನು ನನ್ನ ನಾಡೆಂದು, ನನ್ನ ಧರ್ಮವೆಂದು ಹೇಗೆ ಕರೆಯಲಿ ? ಹೇಗೆ ಭಾವಿಸಲಿ ? ಈ ವಿಷಯದಲ್ಲಿ ನಾನು ದೇಶದ್ರೋಹಿ ಎನ್ನುವುದಾದರೆ ಅದಕ್ಕೆ ಕಾರಣ ಈ ನಾಡು. ತುಳಿತಕ್ಕೊಳಗಾದ ನನ್ನ ಜನಕ್ಕೆ ಮಾನವೀಯ ಹಕ್ಕುಗಳನ್ನು ದೊರಕಿಸುವ ಹೋರಾಟದಲ್ಲಿ ದೇಶದ ಹಿತಕ್ಕೆ ತೊಂದರೆ ಎನ್ನುವುದಾದರೆ ಅದನ್ನು ದ್ರೋಹವೆಂದು ನಾನು ಪರಿಗಣಿಸುವುದೇ ಇಲ್ಲ."

ಅಂಬೇಡ್ಕರ್ ಅವರ ಈ ಮಾತುಗಳು ಧರ್ಮ ಮತ್ತು ದೇಶಪ್ರೇಮಕ್ಕೆ ಹೊಸ ವ್ಯಾಖ್ಯಾನವನ್ನು ಒದಗಿಸುತ್ತವೆ. ದೇಶಪ್ರೇಮವೆನ್ನುವುದು ಜನರ ಒಳಗಿನಿಂದ ಹುಟ್ಟಿ ಬೆಳೆಯುವ ಭಾವರೂಪಕವಾಗಬೇಕು. ಶ್ರೇಷ್ಠ–ಕನಿಷ್ಠಗಳ ನೆಲೆಯಲ್ಲಿ ಜನರನ್ನು ಜಾತಿ–ಧರ್ಮಗಳಾಗಿ ಒಡೆದು ಆಳುವ ದೇಶದಲ್ಲಿ ನೈಜ ದೇಶಪ್ರೇಮಕ್ಕೆ ಅವಕಾಶ ಕಡಿಮೆ. ನೈಜ ದೇಶಪ್ರೇಮ ಮತ್ತು ಧರ್ಮಪ್ರೇಮ ಬೆಳೆಯಬೇಕಾದರೆ ಎಲ್ಲರನ್ನೂ ಒಳಗೊಂಡ ಸಮಾನ ನೆಲೆಯಲ್ಲಿ ಮೊದಲು ಸಾಮಾಜಿಕ ಪ್ರೇಮವನ್ನು ಬಿತ್ತಿ ಬೆಳೆಯಬೇಕು. ಆಗ ದೇಶ ಮತ್ತು ಧರ್ಮ ಪ್ರೇಮ ನೈಸರ್ಗಿಕ ಒರತೆಯಾಗಿ ಉಕ್ಕಿ ಹರಿಯುತ್ತದೆ. ಕರುಳು ಕುಕ್ಕುವ ಹುಸಿಶ್ರೇಷ್ಠತೆಯ ಅಹಮ್ಮು ಆವರಿಸಿದ ಸಮಾಜದಲ್ಲಿ ನೈಜ ದೇಶಪ್ರೇಮ ಉಕ್ಕುವುದಿಲ್ಲ. ಅದೊಂದು ಆಜ್ಞಾಪಾಲಕ ಕವಾಯತು ಆಗುತ್ತದೆ. ಅಂಬೇಡ್ಕರ್ ಅವರು ಗಾಂಧೀಜಿಯವರಿಗೆ ಹೇಳಿದ ಸಂಕಟ ಮೂಲ ಸ್ಫೋಟ ನುಡಿಗಳಿಂದ ಇಷ್ಟೆಲ್ಲ ವ್ಯಾಖ್ಯಾನಿಸಬಹುದಾಗಿದೆ.



ವಿಶೇಷವೆಂದರೆ, ಮೊದಲು ಜಾತಿಪದ್ಧತಿಯು ಹಿಂದೂಧರ್ಮದ ಸ್ಥಿರತೆಗೆ ಕಾರಣವಾಗಿದೆಯೆಂದು ಹೇಳುತ್ತಿದ್ದ ಗಾಂಧೀಜಿ, ಅಂಬೇಡ್ಕರ್ ಅವರ ಭೇಟಿಯಾದ 1931ರಲ್ಲೇ "ಜಾತಿಯು ಅಂತಸ್ತಿನ ಭೇದವನ್ನು ಕಲ್ಪಿಸುವುದಾದರೆ ಅದು ಪಾಪ ವ್ಯವಸ್ಥೆ" ಎಂದು ಟೀಕಿಸಿದರು. ಮುಂದುವರೆದು 1936ರಲ್ಲಿ ಹೀಗೆ ಹೇಳಿದರು : "ತನ್ನ ಎಲ್ಲ ಭಯಾನಕತೆಯಿಂದ ಇಂದು ಕಾಣಿಸುತ್ತಿರುವ ಜಾತಿಯನ್ನು ಶಾಸ್ತ್ರಗಳು ಪುರಸ್ಕರಿಸುವುದಾದರೆ ನಾನು ನನ್ನನ್ನು ಹಿಂದೂ ಎಂದು ಕರೆದುಕೊಂಡು ಅದರಲ್ಲಿ ಉಳಿಯಲಾರೆ" ಎಂದು ಹೇಳಿದರು. ಆದರೆ, ಹಿಂದೂ ಧರ್ಮದೊಳಗಿನ ವಿಷಮತೆಯ ಬಗ್ಗೆ ಗಾಂಧೀಜಿಯವರಿಗೆ ಬೇಸರವಿದ್ದರೂ ಅವರು ಹಿಂದೂವಾಗಿಯೇ ಉಳಿದರು. ಅಸ್ಪೃಶ್ಯತೆಯ ಅಮಾನವೀಯತೆಯನ್ನು ಅನುಭವಿಸಿದ್ದ ಅಂಬೇಡ್ಕರ್ ಹಿಂದೂಧರ್ಮವನ್ನು ತೊರೆದರು. ಗಾಂಧೀಜಿಯವರಿಗೆ ಇದ್ದದ್ದು ಅಸ್ಪೃಶ್ಯತೆಯ ಅರಿವು. ಅಂಬೇಡ್ಕರ್ ಅವರಿಗೆ ಇದ್ದದ್ದು ಅಸ್ಪೃಶ್ಯತೆಯ ಅನುಭವ. ಅರಿವು ಮತ್ತು ಅನುಭವಗಳ ಅಂತರವೇ ಇಬ್ಬರ ಕ್ರಿಯೆಗಳ ಅಂತರವೂ ಆಗಿತ್ತು. ಇದು ಅಪ್ರಾಮಾಣಿಕ ಅಂತರವಲ್ಲ. ಆದ್ದರಿಂದ ಅಸ್ಪೃಶ್ಯತೆಯ ಅರಿವಿನ ಜನ ಮತ್ತು ಅಸ್ಪೃಶ್ಯತೆಯ ಅನುಭವದ ಜನರ ಅಂತರ ಅಳಿಸಿಹೋದ ಒಗ್ಗಟ್ಟಿನ ಅಸ್ಪೃಶ್ಯತಾ ವಿರೋಧಿ ಹೋರಾಟವು ನಮ್ಮ ದೇಶದಲ್ಲಿ ಮುಖ್ಯ. ಸಖ್ಯವಿಲ್ಲದ ಸಿದ್ಧಾಂತಿಗಳ ಸಂಕುಚಿತ ನಡವಳಿಕೆಯಿಂದ ಇಂಥ ಹೋರಾಟದ ಸಾಧ್ಯತೆಗಳು ಕ್ಷೀಣಿಸುತ್ತಿರುವುದು ಇಂದಿನ ಒಂದು ವಿಷಾಧಕರ ವಾಸ್ತವ.

ಹಾಗೆ ನೋಡಿದರೆ, ಅಂಬೇಡ್ಕರ್ ಅವರು ಬುದ್ಧದಮ್ಮವನ್ನು ಸ್ವೀಕರಿಸುವುದಕ್ಕೆ ಪ್ರೇರಣೆಯಾದದ್ದು ಹಿಂದೂಧರ್ಮದ ಬಗೆಗಿನ ಸಿಟ್ಟಲ್ಲ; ಸಂಕಟ ಮೂಲ ವಿಷಾದ. ನಮ್ಮ ಸಾಮಾಜಿಕ ಅಸಮಾನತೆಯನ್ನು ತೊಡೆಯಲು ಎಷ್ಟೇ ಪ್ರಯತ್ನಿಸಿದರೂ ಅದನ್ನೇ ಒಡಲುರಿಯಾಗಿ ಬೆಳೆಸಿಕೊಂಡು ಹಿಂದೂಪದ್ಧತಿಯ ಪ್ರಣಾಳಿಕೆ ಮಾಡಿಕೊಂಡವರನ್ನು ಕುರಿತ ಸಿಟ್ಟು ಅನಂತರ ಸಂಕಟವಾಗಿ, ವಿಷಾದವಾಗಿ ರೂಪಾಂತರಗೊಂಡು ಅಂಬೇಡ್ಕರ್ ಮತಾಂತರಕ್ಕೆ ಮುಂದಾದರು. ಇಷ್ಟಕ್ಕೂ ಅವರು ಹಿಂದೂ ಧಾರ್ಮಿಕತೆಯಲ್ಲಿ ನಂಬಿಕೆಯನ್ನೇ ಇಟ್ಟುಕೊಂಡಿರಲಿಲ್ಲವಾದ್ದರಿಂದ ಮತಾಂತರ ಎನ್ನುವ ಬದಲು 'ಸ್ವೀಕಾರ' ಎನ್ನುವುದೇ ಸರಿಯಾದೀತು. ಆದರೆ ತಾಂತ್ರಿಕ ಪರಿಭಾಷೆಯಲ್ಲಿ ತಮ್ಮದು ಮತಾಂತರವೆಂದೇ ಅಂಬೇಡ್ಕರ್ ಭಾವಿಸುತ್ತಾರೆ ಮತ್ತು ಜನರಿಗೆ ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳಿ ಎಂದು ಕರೆ ಕೊಡುತ್ತಾರೆ.

"ಕುಡಿಯಲು ನೀರು ಕೊಡದ, ಕೊನೇ ಪಕ್ಷ ದೇವರನ್ನೂ ನೋಡಲು ಬಿಡದ, ಧರ್ಮ ಧರ್ಮವೇ ಅಲ್ಲ. ಅದು ಪಾಪದ, ಕೊಚ್ಚೆಯ ರಾಶಿ, ಅಂತಹುದನ್ನು ಧರ್ಮ ಎಂದು ಕರೆಯಬಾರದು. ನೀವು ವಿದ್ಯಾವಂತರಾಗುವುದನ್ನು ನಿಷೇಧಿಸಿದ, ನಿಮ್ಮ ಭೌತಿಕ ಸುಖಗಳನ್ನೆಲ್ಲ ಸರ್ವನಾಶ ಮಾಡಿದ ಧರ್ಮದಲ್ಲಿ ನೀವು ಒಂದು ಕ್ಷಣ ಕೂಡ

**‘ಶ್ರೇಷ್ಠ–ಕನಿಷ್ಠಗಳ ನೆಲೆಯಲ್ಲಿ ಜನರನ್ನು ಜಾತಿ–ಧರ್ಮಗಳಾಗಿ ಒಡೆದು ಆಳುವ ದೇಶದಲ್ಲಿ ನೈಜ ದೇಶಪ್ರೇಮಕ್ಕೆ ಅವಕಾಶ ಕಡಿಮೆ. ನೈಜ ದೇಶಪ್ರೇಮ ಮತ್ತು ಧರ್ಮಪ್ರೇಮ ಬೆಳೆಯಬೇಕಾದರೆ ಎಲ್ಲರನ್ನೂ ಒಳಗೊಂಡ ಸಮಾನ ನೆಲೆಯಲ್ಲಿ ಮೊದಲು ಸಾಮಾಜಿಕ ಪ್ರೇಮವನ್ನು ಬಿತ್ತಿ ಬೆಳೆಯಬೇಕು. ಆಗ ದೇಶ ಮತ್ತು ಧರ್ಮ ಪ್ರೇಮ ನೈಸರ್ಗಿಕ ಒರತೆಯಾಗಿ ಉಕ್ಕಿ ಹರಿಯುತ್ತದೆ. ಕರುಳು ಕುಕ್ಕುವ ಹುಸಿಶ್ರೇಷ್ಠತೆಯ ಅಹಮ್ಮು ಆವರಿಸಿದ ಸಮಾಜದಲ್ಲಿ ನೈಜ ದೇಶಪ್ರೇಮ ಉಕ್ಕುವುದಿಲ್ಲ. ಅದೊಂದು ಆಜ್ಞಾಪಾಲಕ ಕವಾಯತು ಆಗುತ್ತದೆ’**

ಇರಬಾರದು... ಧರ್ಮ ಇರುವುದು ಮನುಷ್ಯರಿಗಾಗಿ; ಮನುಷ್ಯರಿರುವುದು ಧರ್ಮಕ್ಕಾಗಿ ಅಲ್ಲ, ಸಮಾನತೆ, ಪ್ರೀತಿ ಮತ್ತು ಕರುಣೆಗಳು ಧರ್ಮದ ಆಧಾರಸ್ತಂಭಗಳಾಗಿರಬೇಕು. ಇವುಗಳಾವುವೂ ಹಿಂದೂಧರ್ಮದಲ್ಲಿ ಕಾಣುತ್ತಿಲ್ಲ. ಇವುಗಳನ್ನು ಯಾವ ಧರ್ಮದಲ್ಲಿ ಕಾಣುವಿರೊ ಆ ಧರ್ಮಕ್ಕೆ ಮತಾಂತರಗೊಳ್ಳಿ. ನನ್ನ ಸಂಶೋಧನೆಯ ಪ್ರಕಾರ ಈ ಎಲ್ಲ ಗುಣಗಳೂ ಬೌದ್ಧಧರ್ಮದಲ್ಲಿವೆ. ಸ್ವಾತಂತ್ರ್ಯಕ್ಕಾಗಿ ಮತಾಂತರಗೊಳ್ಳಿ; ಸಮಾನತೆಗಾಗಿ ಮತಾಂತರಗೊಳ್ಳಿ; ಆತ್ಮಗೌರವಕ್ಕಾಗಿ ಮತಾಂತರಗೊಳ್ಳಿ.” (ಉಲ್ಲೇಖ : ಎನ್.ಆರ್.ಶಿವರಾಂ ಅವರ ‘ಅಂಬೇಡ್ಕರ್ ಥಾಟ್ಸ್’)

## ಅಂಬೇಡ್ಕರ್ ವಿಶೇಷಾಂಕ

ಹೀಗೆ ಮತಾಂತರಗೊಳ್ಳುವುದಕ್ಕೆ ಮುಂಚೆ ಅಂಬೇಡ್ಕರ್ ಅವರು ಧರ್ಮ ಮೀಮಾಂಸೆ ಕುರಿತು ಸಾಕಷ್ಟು ಅಧ್ಯಯನವನ್ನು ನಡೆಸಿದ್ದರು. ‘ಹಿಂದೂ ಸಮಾಜ’ವೆನ್ನುವುದು ಮಹಮದೀಯರ ದಾಳಿಗೆ ಮುಂಚೆ ಇರಲೇ ಇಲ್ಲವೆಂಬುದು ಅವರ ಕಾಣ್ಕೆಯಾಗಿತ್ತು. ಮಹಮದೀಯರಿಗಿಂತ ಭಿನ್ನವಾದ ‘ಜಾತಿ ಸಮೂಹ’ವನ್ನು ಹಿಂದೂ ಎಂದು ಗುರುತಿಸಲಾಯಿತೆಂದು ಅವರ ಪ್ರತಿಪಾದನೆ. ಜಾತಿ ವ್ಯವಸ್ಥೆಯು ಒಂದು ನಮ್ಮ ದೇಶದ ದೊಡ್ಡ ರೋಗವಾಗಿದ್ದು ಇದು ಹಿಂದೂಗಳನ್ನು ನಾಶದತ್ತ ಕೊಂಡೊಯ್ಯುತ್ತಿದೆಯಾದರೂ ಜಾತಿಪದ್ಧತಿಯ ಹಿಂದೂಗಳ ಸಾಮರಸ್ಯಕ್ಕೆ ಮಾರಕವಾಗಿದೆಯೆಂದೂ ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದರು. ಜಾತಿ ಪದ್ಧತಿ ಅಳಿಯದೆ ದೇಶದ ಉದ್ಧಾರವಿಲ್ಲವೆಂಬುದು ಅವರ ಖಚಿತ ನಿಲುವಾಗಿತ್ತು. ಹಿಂದೂ ಧರ್ಮದ ಮುಂಚೂಣಿ ನೇತಾರರು ಜಾತಿಪದ್ಧತಿಯ ನಾಶಕ್ಕೆ ಆದ್ಯತೆ ಕೊಡದೆ ಇದ್ದದ್ದು ಅವರ ಪ್ರತಿರೋಧಕ್ಕೆ ಒಂದು ಪ್ರಮುಖ ಕಾರಣವಾಗಿತ್ತು. ತಮ್ಮ ಪ್ರತಿರೋಧದ ಫಲಿತವೆಂದರೆ ಅವರು ಹಿಂದೂಧರ್ಮದ ಹುಳುಕುಗಳನ್ನು ಅಧ್ಯಯನ ಮೂಲದಿಂದ ಅನಾವರಣಗೊಳಿಸಿದರು. ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಟ ಕಟ್ಟಿದರು. ಈ ಹೋರಾಟದಲ್ಲಿ ಅವರು ಮಹಿಳೆಯರನ್ನು ಮರೆಯದೆ ಲಿಂಗತಾರತಮ್ಯ ನೀತಿಯನ್ನು ವಿರೋಧಿಸಿದರು. ತಮ್ಮ ಆರ್ಥಿಕ ಚಿಂತನೆಗಳ ಮೂಲಕ ಕಾರ್ಮಿಕರ ಒಳಿತನ್ನೂ ಬಯಸಿದರು. ಇಂತಹ ಸಮತಾ ಸಂವೇದನೆಗೆ ಹಿಂದೂ ಸಮಾಜವು ಸ್ಪಂದಿಸುತ್ತಿಲ್ಲವೆಂಬುದು ಅವರ ಆಕ್ರೋಶದ ಮೂಲ ಆಕರವಾಗಿತ್ತು. ಹಾಗೆಂದು ಅವರು ಇಡೀ ಹಿಂದೂಗಳನ್ನು ದ್ವೇಷಿಸಲಿಲ್ಲ; ಬ್ರಾಹ್ಮಣರ ಬಗ್ಗೆ ಬಿರುನುಡಿಯಾಡಿದರೂ ಇಡೀ ಬ್ರಾಹ್ಮಣ ಕುಲಕ್ಕೆ ಕೆಟ್ಟ ಪಟ್ಟ ಕಟ್ಟಲಿಲ್ಲ. ಹಿಂದೂಗಳು ಮತ್ತು ವಿಶೇಷವಾಗಿ ಬ್ರಾಹ್ಮಣರನ್ನು ಅವರು ಟೀಕಿಸುವಾಗ ಜಾತಿ ಮತ್ತು ವರ್ಣ ವ್ಯವಸ್ಥೆಯ ವಿಷಬೀಜ ಬಿತ್ತನೆ ಮಾಡಿದವರು ಕಣ್ಣೆದುರಿಗಿದ್ದರು. ಈ ಹಿನ್ನೆಲೆಯಲ್ಲಿ ಹಿಂದೂ ಎನ್ನುವ ಪದ್ಧತಿಯಲ್ಲಿದ್ದ ಸಾಮಾಜಿಕ ಅಸಮಾನತೆಯ ತತ್ವಕ್ಕೆ ಅವರು ಎದಿರೇಟು ನೀಡಿದರು.



ಹಾಗೆಂದು ಅಂಬೇಡ್ಕರ್ ಅವರ ವಿವೇಕ ಕೈಕೊಡಲಿಲ್ಲ. ಹಾಗಾಗಿ ಹಿಂದೂಗಳು ತನ್ನನ್ನು ವೈರಿಯಂತೆ ಕಾಣುವುದು ಅವಿವೇಕ ಎಂದರು. ತಾವು ಹಿಂದೂಗಳನ್ನು ಪ್ರೀತಿಸುತ್ತಲೇ ಅವರಲ್ಲಿರುವ ಕೊಳಕನ್ನು ನಿವಾರಿಸಲು ಹೋರಾಡುತ್ತಿರುವುದಾಗಿ ಹೇಳಿದರು. ಅಲ್ಲದೆ ಕ್ರಮೇಣ ಹಿಂದೂಗಳಲ್ಲಾಗುತ್ತಿರುವ ಬದಲಾವಣೆಯನ್ನೂ ಗಮನಿಸಿದರು. ಹಳೆಯ ಸಂಪ್ರದಾಯಕ್ಕೆ ಬದ್ಧರಾದ ಬ್ರಾಹ್ಮಣರಿಗೆ ಅಸ್ಪೃಶ್ಯತೆಯ ಆಚರಣೆಯಲ್ಲಿ ತಪ್ಪು ಕಾಣಿಸುವುದಿಲ್ಲವಾದರೂ ಆಧುನಿಕ ಹಿಂದೂಗಳಿಗೆ ಅಸ್ಪೃಶ್ಯತೆಯ ತಪ್ಪು ಅರಿವಾಗುತ್ತಿದೆ ಎಂದು ಗುರುತಿಸಿದರು. ಬ್ರಾಹ್ಮಣರ ಬದಲು ಬ್ರಾಹ್ಮಣತ್ವವನ್ನು ವಿರೋಧಿಸುವ ತತ್ವಕ್ಕನುಗುಣವಾಗಿ ‘ಈ ಬ್ರಾಹ್ಮಣತ್ವವು ಬ್ರಾಹ್ಮಣರಲ್ಲಿ ಮಾತ್ರವಲ್ಲದೆ ಎಲ್ಲ ಜನವರ್ಗಗಳಲ್ಲೂ ಇರಬಹುದು’ ಎಂದು ಸ್ಪಷ್ಟಪಡಿಸಿದರು. ಅಂಬೇಡ್ಕರ್ ಅವರ ಈ ಮಾತು ಇಂದು ಇನ್ನಷ್ಟು ನಿಜವಾಗುತ್ತಿದೆ. ಆದ್ದರಿಂದ ಇಂದಿಗಿಂತ ಅಂದು ಹೆಚ್ಚು ಜಡವಾಗಿದ್ದ ಸಂಪ್ರದಾಯಸ್ಥ ಸಾಮಾಜಿಕ ಚರಿತ್ರೆಯ ಹಿನ್ನೆಲೆಯಲ್ಲಿ ಮತ್ತು ಸ್ಥಿತ್ಯಂತರದ ಚಲನೆಯಲ್ಲಿ ನಾವು ಅಂಬೇಡ್ಕರ್ ಅವರನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಡಾ.ಅಂಬೇಡ್ಕರ್ ಧರ್ಮ ವಿರೋಧಿಯಲ್ಲ. ಹಿಂದೂಧರ್ಮದ ಭಾಗವಾಗಿದ್ದ ಜಾತಿ ಮತ್ತು ವರ್ಣವ್ಯವಸ್ಥೆಯ ವಿರೋಧಿ. ಧರ್ಮವು ಸಮಾಜಕ್ಕೆ ಅಗತ್ಯ ಎಂದೇ ಪ್ರತಿಪಾದಿಸಿದ್ದ ಅವರು ತಮ್ಮ ಆದರ್ಶದ ಧರ್ಮವನ್ನು ಬುದ್ಧತತ್ವ ಹಾಗೂ ಬುದ್ಧ ದಮ್ಮದಲ್ಲಿ ಕಂಡುಕೊಂಡರು.

ನಿರ್ದಿಷ್ಟ ಸಮುದಾಯಗಳನ್ನು ಹೊರಗಿಟ್ಟ ಹಿಂದೂಧರ್ಮಕ್ಕೆ ವಿಷಾದಪೂರ್ವಕ ಪ್ರತಿರೋಧವಾಗಿ ಬುದ್ಧ ದಮ್ಮವನ್ನು ಸ್ವೀಕರಿಸಿದರು. ಬುದ್ಧಗುರು ಬದುಕಿದ ಪ್ರಜಾಸತ್ತಾತ್ಮಕತೆ, ಸಮಾನತೆ ಮತ್ತು ಸಹೋದರತೆಗಳೇ ನಿಜವಾದ ಧರ್ಮ ಎಂದು ನಂಬಿ ನಡೆದರು. ದೇವರ ಬಗ್ಗೆ ಮೌನ ತಾಳಿದ, ವೇದ ಪ್ರಾಮಾಣ್ಯ ಮತ್ತು ಚಾತುರ್ವರ್ಣ್ಯಗಳನ್ನು ವಿರೋಧಿಸಿದ ಬುದ್ಧ ಒಬ್ಬ ‘ವಿಚಾರವಾದಿ’ ಎಂದು ಕ–ರೆದರು. ಇದು ನಮ್ಮ ಕೆಲವು ವಿಚಾರವಾದಿಗಳಿಗೆ ಅರ್ಥವಾಗಬೇಕು. ಬುದ್ಧ ಭಕ್ತರು ಬುದ್ಧನಿಗೂ ಸಂಪ್ರದಾಯದ ಸಂಕೋಲೆ ತೊಡಿಸದಿದ್ದರೆ ಸಾಕು. □

## ಜಾತಿ ಎಲ್ಲಿದೆ ಎನ್ನುವವರ ಮುಂದೆ ವಾಸ್ತವವನ್ನು ರಾಚುವ

# ‘ಕ್ಯಾಸ್ಟ್ ಮ್ಯಾಟರ್ಸ್’

**‘21ನೇ ಶತಮಾನದ ಕಾಲು ಭಾಗ ಪೂರೈಸಿರುವ ಈ ಹೊತ್ತಲ್ಲಿ ಅಸಮಾನ ಭಾರತ ಸಮಾನತೆಯ ಹಾದಿಯಲ್ಲಿ ಕ್ರಮಿಸಿರುವ ದೂರ ಎಷ್ಟು ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ಹೀಗೆ ನೋಡಿದಾಗ ಹಳೆಯವು ಅನಿಸಿದರೂ ಮತ್ತವೇ ಮಾತುಗಳನ್ನು ಆಡಬೇಕಾಗಿರುವುದು ವ್ಯವಸ್ಥೆಯ ದುರಂತವೇ ಆಗಿದೆಯೇನೋ. ಬದುಕಿನ ವಾಸ್ತವ, ನೋವಿನ ಸ್ವರೂಪ ಎಲ್ಲವೂ ಮತ್ತೆ ಮತ್ತೆ ಅದೇ ರೂಪದಲ್ಲಿ ಕಣ್ಣಿಗೆ ರಾಚುತ್ತಿರುವುದು ತಲ್ಲಣ ಉಂಟುಮಾಡುತ್ತದೆ. ಅಂಬೇಡ್ಕರ್ ಶಿಕ್ಷಿತರಾಗಿ, ದಮನಿತರ ಹಕ್ಕುಗಳಿಗಾಗಿ ಹೋರಾಟ ಮಾಡಿ ಶತಮಾನ ಕಳೆದ ಬಳಿಕವೂ ಅದೇ ಬಗೆಯ ಹಿನ್ನೆಲೆಯ ಸೂರಜ್ ಯೆಂಗ್ಡೆ ಅವೇ ಮಾತುಗಳನ್ನು ಆಡಬೇಕಾಗಿ ಬಂದಿರುವುದು ಒಟ್ಟು ಸಮಾಜವನ್ನು ನಾಚಿಕೆಗೆ ತಳ್ಳಬೇಕಾದ, ತಲ್ಲಣಕ್ಕೆ ಈಡುಮಾಡಬೇಕಾದ ಸಂಗತಿಯಾಗಿದೆ’**

ಜನ ಶಿಕ್ಷಿತರಾಗಿ ಉದ್ಯೋಗ ಪಡೆದಂತೆಯೇ ಜಾತಿಯ ಪ್ರಶ್ನೆಗೆ ಬದಿಗೆ ಸರಿಯುತ್ತಿದೆ ಎಂಬ ವಾದವನ್ನು ಇವತ್ತು ಜಾಣತನದಿಂದ ಹರಿಯಬಿಡಲಾಗುತ್ತಿದೆ. ಸಾವಿರಾರು ವರ್ಷಗಳಿಂದಲೂ ಅಘೋಷಿತ ಮೀಸಲಾತಿಯ ಅನುಕೂಲ ಪಡೆದ ಜನಗಳು, ಮೀಸಲಾತಿಯ ಫಲಾನುಭವಿಗಳಾದ ವರ್ಗಗಳೂ ಮೀಸಲಾತಿಯ ವಿರುದ್ಧ ದನಿಯೆತ್ತುವಂತೆ ಮಾಡಲಾಗಿದೆ. ಇವೆಲ್ಲದರ ನಡುವೆ ಜಾತಿ ತನ್ನ ಕರಾಳತೆಯನ್ನು ವಿವಿಧ ರೂಪಗಳಲ್ಲಿ ಹೊರಹಾಕುತ್ತಿದೆ. ಹುಟ್ಟಿನ ಕಾರಣಕ್ಕೆ ಸಹಜವಾಗಿಯೇ ಒಂದಷ್ಟು ಅನುಕೂಲಗಳನ್ನು ಹೊಂದಿರುವ ಜನ, ಚಾರಿತ್ರಿಕವಾಗಿ ಜಾತಿಯ ಕಾರಣಕ್ಕೆ ಅತ್ಯಂತ ಹೀನಾಯವಾಗಿ ತುಳಿತಕ್ಕೊಳಗಾದ ಜನ ಹಾಗೂ ಸಾಮಾಜಿಕ ಕಲ್ಯಾಣ ಯೋಜನೆಗಳ ಫಲ ಪಡೆದು ಶಿಕ್ಷಿತರಾದ ಜನರೂ ಇಂದು ಜಾತಿ ಇಲ್ಲ ಎನ್ನುತ್ತಾ, ತಮ್ಮ ವಲಯಗಳಲ್ಲಿ ಬಹಳ ನಾಜೂಕಾಗಿ, ಕೆಲವೊಮ್ಮೆ ಕ್ರೂರವಾಗಿ ಜಾತಿಯನ್ನು ಆಚರಿಸುತ್ತಾರೆ, ಜಾತಿ ಹಿಂಸೆಗೆ ತುತ್ತಾಗುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಸೂರಜ್ ಯೆಂಗ್ಡೆ, ನಿಜಕ್ಕೂ ಭಾರತದಂತಹ ಸಮಾಜದಲ್ಲಿ ಜಾತಿಯ ಹಾಜರಿ ಅನ್ನೋದು ಹೆಜ್ಜೆ ಹೆಜ್ಜೆಗೂ ಹೇಗೆ ಎದುರಾಗುತ್ತಿದೆ ಎನ್ನುವ ವಾಸ್ತವವನ್ನು ವಿವಿಧ ಆಯಾಮಗಳಲ್ಲಿ ಈ ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಜಾತಿಯನ್ನು ಚಾರಿತ್ರಿಕವಾಗಿ, ರಾಜಕೀಯವಾಗಿ, ಸಾಮಾಜಿಕ–ಆರ್ಥಿಕ ವಾಸ್ತವದ ಹಿನ್ನೆಲೆಯಲ್ಲಿ, ವಿವಿಧ ಆಯಾಮಗಳಲ್ಲಿ ನೋಡುವ ಬಗೆ ಇಲ್ಲಿದೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಸರ್ವಾಂತರ್ಯಾಮಿಯಾದ ಜಾತಿಯ ಎಳೆಗಳನ್ನು ಅರ್ಥಮಾಡಿಕೊಳ್ಳದೆ ಭಾರತದ ಸಮಾಜ, ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂಬ ನೆಲೆಯಿಂದ ಈ ಕೃತಿ ಹೊರಟಿದೆ.

ಸೂರಜ್ ಯೆಂಗ್ಡೆ, ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಹುಟ್ಟಿ ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ಉನ್ನತ ಅಧ್ಯಯನ ನಡೆಸಿ ಪ್ರಸ್ತುತ ಹಾರ್ವರ್ಡ್ ಕೆನೆಡಿ ಸ್ಕೂಲ್‌ನಲ್ಲಿ ಪೋಸ್ಟ್ ಡಾಕ್ಟೋರಲ್ ಫೆಲೋ ಆಗಿ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಅಧ್ಯಯನ ಮತ್ತು ಹೋರಾಟ ಎರಡೂ ಜೊತೆಜೊತೆಗೇ ಸಾಗಬೇಕೆನ್ನುವ ಸೂರಜ್ ಯೆಂಗ್ಡೆ ಜಾತಿಯ ಪ್ರಶ್ನೆಯನ್ನು ಕೇವಲ ಭಾರತದ ಆಂತರಿಕ ಸಮಸ್ಯೆಯಾಗಿ ನೋಡದೇ ಮಾನವ ಹಕ್ಕಿನ ಉಲ್ಲಂಘನೆಯಾಗಿ, ಘನತೆಯನ್ನು ಬದುಕಿನ ನಿರಾಕರಣೆಯಾಗಿ ವಿಸ್ತೃತ ನೆಲೆಯಲ್ಲಿ ನೋಡುತ್ತಾರೆ. ಲಿಂಗ, ಜನಾಂಗ ಜಾತಿಯ ತಾರತಮ್ಯಗಳನ್ನು ಅವು ಮಾನವ ಘನತೆಯನ್ನು ನಿರಾಕರಿಸುತ್ತವೆ ಎಂಬ ನೆಲೆಯಲ್ಲಿ ಒಟ್ಟಾಗಿ ನೋಡುತ್ತಾ ಜಾತಿಯ ಪ್ರಶ್ನೆ ಹೇಗೆ ಇವೆರಡಕ್ಕಿಂತ ಭಿನ್ನ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ. ಈ ಕೃತಿ ಶ್ರೇಣೀಕೃತವಾದ ಭಾರತದ ಸಾಮಾಜಿಕ–ಆರ್ಥಿಕ ವಾಸ್ತವವನ್ನು ತೆರೆದು ತೋರುತ್ತದೆ. ತಾವು ಸ್ವತಃ ಬಾಲ್ಯದಲ್ಲಿ ಕಂಡುಂಡ ಅನುಭವಗಳನ್ನು ಅಕಡೆಮಿಕ್ ವಿಶ್ಲೇಷಣೆಯೊಂದಿಗೆ ಮೇಳೈಸಿ ಇವರು ಪ್ರಸ್ತುತಪಡಿಸುವ ಬಗೆ ವಿಶಿಷ್ಟವಾದುದು. ಫುಲೆ, ಅಂಬೇಡ್ಕರ್ ಅವರು ಎದುರಾದ ಪ್ರಶ್ನೆಗಳನ್ನು ಇಂದಿಗೂ ಎದುರು ಹಾಕಿಕೊಂಡಾಗ ಕಾಣುವ ವಾಸ್ತವ ಹೆಚ್ಚೇನೂ ಭಿನ್ನವಾಗಿಲ್ಲ ಎಂಬುದನ್ನು ಈ ಕೃತಿ ಸೂಚಿಸುತ್ತಾ ಸಾಗಿಬಂದಿರುವ ದೂರ ಹೆಚ್ಚೇನಲ್ಲ, ಸಾಗಬೇಕಾದ ದಾರಿ ದೂರ ಎಂಬುದನ್ನು ತೆರೆದು ತೋರುತ್ತಿದೆ.



ಮೂಲತಃ ಮೂಡಬಿದರೆ ಸಮೀಪದ ಮೂಡು ಮಾರ್ನಾಡು ಗ್ರಾಮದವರು. ಹೊಳೆನರಸೀಪುರದ ಮಹಿಳಾ ಸರ್ಕಾರಿ ಗೃಹವಿಜ್ಞಾನ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕಿಯಾಗಿದ್ದಾರೆ. ‘ನಿಲ್ಲಿಸಬೇಡ ಕಾಯುವುದನ್ನು’ (ಕಾವ್ಯ), ‘ಪಿಯರ್ ಬೋರ್ದು ವಿಚಾರಗಳು’ ‘ಮಹಿಳೆ ಮತ್ತು ದೇಹರಾಜಕಾರಣ’ ಪ್ರಕಟಿತ ಕೃತಿಗಳು. ಸಾಹಿತ್ಯದ ಸೂಕ್ಷ್ಮ ಓದು, ವಿಮರ್ಶೆಯಲ್ಲಿ ತೊಡಗಿಸಿಕೊಂಡಿರುವ ಭಾರತಿಯವರು ಸಾಹಿತ್ಯಿಕ ಚರ್ಚೆ ಸಂವಾದಗಳ ಸಂವೇದನಾಶೀಲ ‘ನಾವುನಮ್ಮಲ್ಲಿ’ ಬಳಗದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

**ಡಾ.ಭಾರತೀದೇವಿ ಪಿ**
**Email: bharathipolali@gmail.com**


**ಅಂಬೇಡ್ಕರ್ ವಿಶೇಷಾಂಕ**

**ಸಾಕಾರವಾಗದ ಕನಸುಗಳು:**

ದಮನಿತ ಸಮುದಾಯಗಳ ಮುಂಚಲನೆ ಕುರಿತಂತೆ ಸ್ವಾತಂತ್ರ್ಯ ಸಿಕ್ಕ ಸಂದರ್ಭದಲ್ಲಿ, ದಮನಿತರ ಚಳುವಳಿಗಳು ಏರುಗತಿ ಪಡೆದ 70ರ ದಶಕದಲ್ಲಿ ಹಾಗೂ ಜಾಗತೀಕರಣ ಕಾಲಿಟ್ಟ ತೊಂಬತ್ತರ ದಶಕಗಳಲ್ಲಿ ಅನೇಕ ಕಲ್ಪನೆ, ಕನಸುಗಳನ್ನು ಕಟ್ಟಿಕೊಂಡಿದ್ದೆವು. ಶಿಕ್ಷಣ ಹಾಗೂ ಆರ್ಥಿಕ ಭದ್ರತೆ ಒದಗಿಸುವ ಉದ್ಯೋಗ ದೊರೆತಲ್ಲಿ ನಿಧಾನವಾಗಿ ಜಾತಿ ಬದಿಗೆ ಸರಿಯಬಹುದು ಎಂಬುದು ಅವುಗಳಲ್ಲಿ ಒಂದು. ಸೂರಜ್ ಯೆಂಗ್ಡೆ, ಪ್ರಗತಿ ಸಾಧಿಸಬೇಕಾದ ದಾರಿ ಕುರಿತು ಕಟ್ಟಿಕೊಂಡಿದ್ದ ಈ ಬಗೆಯ ಚಿಂತನೆ 21ನೇ ಶತಮಾನದ ಈ ಹೊಸ್ತಿಲಲ್ಲಿ ವಾಸ್ತವದಲ್ಲಿ ಯಾವ ಬಗೆಯಲ್ಲಿ ಒಡಮೂಡಿದೆ ಎಂಬುದನ್ನು ಶೋಧಿಸುವ ಕೆಲಸ ಮಾಡುತ್ತಾರೆ. ದಲಿತ ಬಂಡವಾಳವಾದ, ದಲಿತ

ಮಧ್ಯಮವರ್ಗದ ಉದಯ, ಶಿಕ್ಷಣ ಇವು ನಿಜಕ್ಕೂ ಸಾಮುದಾಯಿಕ ಬಿಡುಗಡೆಯ ಹಾದಿಗಳಾಗಿ ಮೈ ಪಡೆದಿವೆಯೇ? ಜನರ ಹಕ್ಕುಗಳನ್ನು ಕಾಯುತ್ತದೆ ಎಂದುಕೊಂಡ ಸಂವಿಧಾನ ಸಮುದಾಯಗಳಿಗೆ ರಕ್ಷೆಯಾಗಿದೆಯೇ? ಎಂಬ ಪ್ರಶ್ನೆಗಳನ್ನು ಹಾಕಿಕೊಂಡಾಗ ಇವೂ ಬ್ರಾಹ್ಮಣ್ಯದ ತೆಕ್ಕೆಯಲ್ಲೇ ಇನ್ನೂ ಇರುವುದು, ಶ್ರೇಣೀಕರಣದ ನೆರಳಲ್ಲೇ ವಿನ್ಯಾಸಗೊಂಡಿರುವುದು, ನಿಲುಕದ ಕನ್ನಡಿಯಾಗಿರುವುದು ಅರಿವಿಗೆ ಬರುತ್ತಾ ಹೋಗುತ್ತದೆ.

ಶಿಕ್ಷಣ ಪಡೆದ ಸಮುದಾಯಗಳು ಪಡೆದ ಬಿಡುಗಡೆಯ ಸ್ವರೂಪ ಯಾವುದು? ಶಿಕ್ಷಣ, ಉದ್ಯೋಗ ದೊರೆತರೂ ಇವರು ಜಾತಿಯ ಕರಿನೆರಳಿನಿಂದ ಮುಕ್ತರಾಗಿದ್ದಾರೆಯೇ ಎಂಬ ಪ್ರಶ್ನೆಗೆ ಮುಖಾಮುಖಿಯಾಗಬೇಕಾಗುತ್ತದೆ. ಇದಕ್ಕೆ ಮುಕ್ತರಾಗಿಲ್ಲ ಎಂಬ ಉತ್ತರ ದೊರೆತರೂ ಅದಕ್ಕೆ ಕಾರಣಗಳನ್ನು ಶೋಧಿಸುವ ಕೆಲಸ ಸುಲಭದ್ದಲ್ಲ. ಸಮಾನತೆ ಎಂಬುದು ಸಮಾಜದ ಎಲ್ಲರೂ ಜೊತೆಗೂಡಿ ಸಾಧಿಸಬೇಕಾದ ಗುರಿಯಾದ್ದರಿಂದ ಕೇವಲ ದಲಿತರಲ್ಲಿ ಚಲನೆ ನಡೆದರಷ್ಟೆ ಸಾಲದು, ಸುತ್ತಲಿನ ಇತರ ಸಮುದಾಯಗಳೂ ಎಚ್ಚೆತ್ತುಕೊಳ್ಳದ ಹೊರತು ನೋಡುವ ದೃಷ್ಟಿಕೋನ ಬದಲಾಗದು. ಎರಡನೆಯದಾಗಿ, ಶಿಕ್ಷಿತ, ಮಧ್ಯಮವರ್ಗಕ್ಕೆ ಸೇರಿದ ದಲಿತ ಸಮುದಾಯಗಳ ಜೀವನ ಮಟ್ಟ ಉತ್ತಮಗೊಂಡಿದ್ದರೂ ಇನ್ನೂ ಬ್ರಾಹ್ಮಣ್ಯ ಸಿಲುಕಿಸಿದ ಸುಳಿಯಿಂದ ಹೊರಬರಲು ಅವರಿಗೆ ಸಾಧ್ಯವಾಗಿಲ್ಲ. ಸಾಮಾಜಿಕ ರಂಗದಲ್ಲಿ ಪರಿವರ್ತನೆಯಾಗದ ಹೊರತು, ಕಾನೂನು ನೀಡುವ ಪರಿಹಾರಗಳಿಂದ ಹೆಚ್ಚಿನ ಬದಲಾವಣೆ ಸಾಧ್ಯವಿಲ್ಲ. ಹೀಗಾಗಿಯೇ ಸಂವಿಧಾನ ಎಂಬುದು ಎಲ್ಲರ ಹಿತ ಕಾಯುವ ಪರಮ ಗ್ರಂಥವಾಗಿದ್ದರೂ ಕೇವಲ ಸಂವಿಧಾನವನ್ನಷ್ಟೆ ನೆಚ್ಚಿಕೊಂಡಿದ್ದರೆ ಸಾಲದು, ಸಾಮಾಜಿಕ ಹೋರಾಟವೂ ಜೊತೆಗೇ ಸಾಗಬೇಕಾಗುತ್ತದೆ ಎಂದು ಯೆಂಗ್ಡೆ ಅಭಿಪ್ರಾಯಪಡುತ್ತಾ ಅಂಬೆಡ್ಕರ್ ಸಾಮಾಜಿಕ ಬದಲಾವಣೆಯ ಅಗತ್ಯದ ಕುರಿತು ಹೇಳಿದ ಮಾತುಗಳನ್ನು ಪುನರುಚ್ಚರಿಸುತ್ತಾರೆ.




ಜೊತೆಗೆ, ಜಾಗತೀಕರಣದ ಸಂದರ್ಭದಲ್ಲಿ ದಲಿತ ಉದ್ಯಮಶೀಲತೆ ಮುನ್ನಡೆಸಬಲ್ಲದು ಎಂದು ನಮ್ಮ ನಡುವಣ ಅನೇಕ ಚಿಂತಕರು ಅಭಿಪ್ರಾಯಪಟ್ಟಿದ್ದರು. ಆದರೆ ನವ ಉದಾರವಾದೀ ವ್ಯವಸ್ಥೆ ಸಾಂಪ್ರದಾಯಿಕ ಮೌಲ್ಯಗಳನ್ನು ಬಲಪಡಿಸುವ ಬಗೆಯಲ್ಲಿ ವಿನ್ಯಾಸಗೊಂಡಿದೆ. ಇದು ಸಾಮಾಜಿಕ, ಆರ್ಥಿಕ, ಧಾರ್ಮಿಕ ತಾರತಮ್ಯಗಳನ್ನು ಒಳಗುಮಾಡಿಕೊಳ್ಳುತ್ತದೆ. ನಮ್ಮ ದೇಶದಲ್ಲಿ ಈ ಹಿಂದೆಯೂ ಬಂಡವಾಳ ಎಂಬುದು ಮೇಲುಜಾತಿಗಳ ಹಿಡಿತದಲ್ಲೇ ಇರುವುದು ತಿಳಿದ ವಿಚಾರ. ಈಗಲೂ ದಲಿತರು ತೊಡಗಿಕೊಂಡಿರುವ ಉದ್ಯಮಗಳಾದ ಚರ್ಮದ ಉದ್ಯಮ, ವ್ಯವಸಾಯ, ಉತ್ಪನ್ನಗಳ ನಿರ್ವಹಣೆ ಇತ್ಯಾದಿಗಳನ್ನು ನೋಡಿದಾಗ ಅಲ್ಲೂ ಬಹಳ ಸ್ಪಷ್ಟವಾದ ತಾರತಮ್ಯ ಗೋಚರವಾಗುತ್ತದೆ. ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲೂ ದಲಿತರಿಗೆ ಕರ್ತೃತ್ವಶಕ್ತಿ ಇಲ್ಲದಂತೆ ಆಗಿದೆ. ಯಾವುದೋ ವಿಷವರ್ತುಲದ ಕೊಂಡಿಗಳಂತೆ ಕೆಲಸ ನಿರ್ವಹಿಸುವ ಬಗೆ ಬಿಡುಗಡೆಯನ್ನು ತರಲಾರದು. ಮನುಷ್ಯನ ಸ್ವಾತಂತ್ರ್ಯ ಮತ್ತು ಘನತೆಯ ಕಡೆಗೆ ಗಮನವೇ ಇಲ್ಲದ ಭೌತಿಕ ಗಳಿಕೆಯಲ್ಲಿ ಯಾವುದೇ ಅರ್ಥವಿಲ್ಲ ಎಂದು ಅಮೆರಿಕದ ಕಪ್ಪುಜನರ ಪರವಾಗಿ ದನಿ ಎತ್ತಿದ ದು ಬೋಸ್ ಅವರ ಮಾತುಗಳನ್ನು ಉದ್ಧರಿಸುವ ಯೆಂಗ್ಡೆ ಅವರು ಕೇವಲ ಆರ್ಥಿಕ, ರಾಜಕೀಯ ವಿಮೋಚನೆಯಷ್ಟೆ ಸಾಲದು, ಅಸ್ಮಿತೆ, ಬದುಕಿಗೆ ಅರ್ಥ ಹಾಗೂ ಸ್ವ-ಪ್ರಾಮುಖ್ಯತೆ ಇರುವ ಪರಿಸರ ಸೃಷ್ಟಿಯಾಗಬೇಕು ಎಂಬುದನ್ನು ಒತ್ತಿ ಹೇಳುತ್ತಾರೆ. ಇದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾಧ್ಯವಾಗುವುದಿಲ್ಲ. ಆದ್ದರಿಂದ, ದಲಿತ ಬಂಡವಾಳಶಾಹಿಯ ಹೊಸ ಚಿತ್ರ, ದಲಿತ ಪ್ರತಿರೋಧದ ಸಾಧ್ಯತೆಯನ್ನು ಅಡಗಿಸಲು ಪ್ರಬಲ ವರ್ಗ ಸೃಷ್ಟಿಸಿದ ಹುನ್ನಾರವೇ ಆಗಿದೆ ಎಂದು ಸೂರಜ್ ಯೆಂಗ್ಡೆ ಬಹಳ ಸ್ಪಷ್ಟವಾಗಿ ಹೇಳುತ್ತಾರೆ.


21ನೇ ಶತಮಾನದ ಕಾಲು ಭಾಗ ಪೂರೈಸಿರುವ ಈ ಹೊತ್ತಲ್ಲಿ ಅಸಮಾನ ಭಾರತ ಸಮಾನತೆಯ ಹಾದಿಯಲ್ಲಿ ಕ್ರಮಿಸಿರುವ ದೂರ ಎಷ್ಟು ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ಹೀಗೆ ನೋಡಿದಾಗ ಹಳೆಯವು ಅನಿಸಿದರೂ ಮತ್ತವೇ ಮಾತುಗಳನ್ನು ಆಡಬೇಕಾಗಿರುವುದು ವ್ಯವಸ್ಥೆಯ ದುರಂತವೇ ಆಗಿದೆಯೇನೋ. ಬದುಕಿನ ವಾಸ್ತವ, ನೋವಿನ ಸ್ವರೂಪ ಎಲ್ಲವೂ ಮತ್ತೆ ಮತ್ತೆ ಅದೇ ರೂಪದಲ್ಲಿ ಕಣ್ಣಿಗೆ ರಾಚುತ್ತಿರುವುದು ತಲ್ಲಣ ಉಂಟುಮಾಡುತ್ತದೆ. ಅಂಬೆಡ್ಕರ್ ಶಿಕ್ಷಿತರಾಗಿ, ದಮನಿತರ ಹಕ್ಕುಗಳಿಗಾಗಿ ಹೋರಾಟ ಮಾಡಿ ಶತಮಾನ ಕಳೆದ ಬಳಿಕವೂ ಅದೇ ಬಗೆಯ ಹಿನ್ನೆಲೆಯ ಸೂರಜ್ ಯೆಂಗ್ಡೆ ಅವೇ ಮಾತುಗಳನ್ನು ಆಡಬೇಕಾಗಿ ಬಂದಿರುವುದು ಒಟ್ಟು ಸಮಾಜವನ್ನು ನಾಚಿಕೆಗೆ ತಳ್ಳಬೇಕಾದ, ತಲ್ಲಣಕ್ಕೆ ಈಡುಮಾಡಬೇಕಾದ ಸಂಗತಿಯಾಗಿದೆ.

**ಒಳವಿಮರ್ಶೆ:**

ಜಾತಿಯನ್ನು ಚಾರಿತ್ರಿಕವಾಗಿ ನೋಡುವುದರೊಂದಿಗೆ ಈ ಕೃತಿ ವಾಸ್ತವದಲ್ಲಿ ಅದರ ವಿಷಮ ಬಾಹುಗಳು ಚಾಚಿಕೊಂಡಿರುವ ವಿಸ್ತಾರವನ್ನು ನಮ್ಮ ಮುಂದಿಡುತ್ತದೆ. ಜಾತಿ ಕುರಿತು ಎಷ್ಟೆಲ್ಲ ಚರ್ಚೆಗಳು ನಡೆದರೂ ಮತ್ತೆ ಇನ್ನೂ ಮೂಲಭೂತ ಸಂಗತಿಗಳನ್ನೇ ಚರ್ಚಿಸಬೇಕಾದ ಸ್ಥಿತಿಯಲ್ಲಿ ನಾವಿದ್ದೇವೆ ಎನ್ನುವುದು ದುರಂತ. ಇದರಿಂದಾಗಿ ಸಹಜ ಮಾನವ ಸಂಬಂಧವೂ ಸಾಧ್ಯವಾಗದ ಸ್ಥಿತಿ ಉಂಟಾಗಿದೆ. ಹಾಗಾದರೆ ಕಳೆದ ದಶಕಗಳ ಜಾತಿ ನಿರ್ಮೂಲನೆ ಕುರಿತಾದ ಹೋರಾಟ, ರಾಜಕೀಯ ಮತ್ತು ಚಳುವಳಿಗಳ ನಾಯಕರ ನಡೆ ಹಾಗೂ ಆಗಲೇ ಶಿಕ್ಷಿತರಾಗಿ ಮುಂಚಲನೆ ಹೊಂದಿದ ಸಮುದಾಯಗಳ ಸ್ಥಿತಿಗತಿಗಳ ಅವಲೋಕನ ಮಾಡಬೇಕಾಗುತ್ತದೆ. ಈ ಬಗೆಯ ಆತ್ಮವಿಮರ್ಶೆಗೆ ಇಡೀ ಸಮಾಜವನ್ನು ತಳ್ಳುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಜಾತಿ ವಿನಾಶದ ಬಗೆಗಿನ ಹೋರಾಟ ಕೇವಲ ದಲಿತರು ಅಥವಾ ತಳಸಮುದಾಯದವರು ನಡೆಸಬೇಕಾದ ಹೋರಾಟವಲ್ಲ. ಇದು ಸಮಾಜದ ಎಲ್ಲರ ಜವಾಬ್ದಾರಿ. ಜ್ಯೋತಿಬಾ ಫುಲೆ ಹಾಗೂ ಅಂಬೇಡ್ಕರ್ ಅವರು ಹೋರಾಟದಲ್ಲಿ ತೊಡಗಿದ ಕಾಲದಲ್ಲಿ ಅವರ ಆಶಯಗಳಿಗೆ ಕೈಜೋಡಿಸಿದ ಅನೇಕ ಬ್ರಾಹ್ಮಣ ಮತ್ತು ಮೇಲುವರ್ಗದ ವ್ಯಕ್ತಿತ್ವಗಳನ್ನು ಸೂರಜ್ ಯೆಂಗ್ಡೆ ಹೆಸರಿಸುತ್ತಾರೆ. ಇಂದು ಆತ್ಮನಿರೀಕ್ಷಣೆ ಹೊಂದದೇ ಇರುವುದು, ಆನುವಂಶಿಕವಾಗಿ ಬಂದ ವಿಶೇಷ ಸೌಲಭ್ಯದ ಅರಿವಿಲ್ಲದಿರುವುದು, ಚರಿತ್ರೆಯಲ್ಲಿ ನಡೆದ ಸಂಗತಿಗಳಿಗೆ ಉತ್ತರದಾಯಿತ್ವ ಹೊಂದಿಲ್ಲದಿರುವುದು ಸ್ವಯಂ ಘೋಷಿತ ರಾಷ್ಟ್ರೀಯವಾದಿಗಳನ್ನು, ಧಾರ್ಮಿಕವಾದಿಗಳನ್ನು, ಶ್ರೇಷ್ಠತ್ವವಾದಿಗಳನ್ನು ಸೃಷ್ಟಿಸಿದೆ. ಇವರು ಭಾರತೀಯ ಸಮಾಜದ ಬಗೆಗೆ ಸತ್ಯದೂರವಾದ ಚಿತ್ರಣ ನೀಡುತ್ತಿದ್ದಾರೆ ಎಂದು ಅವರು ಹೇಳುತ್ತಾರೆ. ಇಂತಹ ವರ್ಗಗಳಿಗೆ ಮಹಾರಾಷ್ಟ್ರದ ಪ್ರಮುಖ ಸಾಂಸ್ಕೃತಿಕ ವ್ಯಕ್ತಿತ್ವ

ಎಂದೇ ಪರಿಗಣಿತವಾದ ಬಾಲಗಂಗಾಧರ ತಿಲಕ್ ಅವರ ಮಗ ಶ್ರೀಧರ ಬಲವಂತ ತಿಲಕ್, ಫುಲೆಯವರ ಸಹವರ್ತಿಗಳಾದ ಸದಾಶಿವ ಬಲ್ಲಾಳ ಗೋವಂಡೆ, ಮೋರೋ ವಿಠ್ಠಲ ವಾಳ್ವೇಕರ್, ವಿಷ್ಣು ಮೋರೇಶ್ವರ್ ಭಿಡೆ, ಅಣ್ಣಾಸಾಹೇಬ್ ಚಿಪ್ಲೂಣ್‌ಕರ್ ಮುಂತಾದವರ ವ್ಯಕ್ತಿತ್ವಗಳನ್ನು ಎತ್ತಿ ತೋರಿಸಬೇಕಾಗಿದೆ. ಸಾಮಾಜಿಕ ಶ್ರೇಣೀಕರಣದ ಪ್ರಬಲ ಪ್ರತಿಪಾದಕರಾಗಿದ್ದ ಬಾಲಗಂಗಾಧರ ತಿಲಕರ ಮಗ ಶ್ರೀಧರ ತಿಲಕರು ಅಂಬೇಡ್ಕರ್ ಅವರ ಸಾಮಾಜಿಕ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು. ತಮ್ಮ ಮನೆಯನ್ನು ಎಲ್ಲರಿಗೂ ಮುಕ್ತವಾಗಿರಿಸಿದ ಇವರು ಸಹಪಂಕ್ತಿ ಭೋಜನ ಆಯೋಜಿಸುತ್ತಿದ್ದರು. ತಮ್ಮ ಮನೆಯಲ್ಲಿ 'ಚಾತುರ್ವಣ್ಯ ವಿಧ್ವಂಸಕ ಸಮಿತಿ' ಎಂಬ ನಾಮಫಲಕವನ್ನೂ ಹಾಕಿಕೊಂಡಿದ್ದರು. ಆದರೆ ಕರ್ಮಠ ಬ್ರಾಹ್ಮಣರ ಕಿರುಕುಳ ತಡೆಯಲಾಗದ ಶ್ರೀಧರ ಪಂತರು 25ಮೇ 1928ರಂದು ಚಲಿಸುವ ಮುಂಬೈ–ಪುಣೆ ರೈಲಿಗೆ ತಲೆಯೊಡ್ಡಿ ಪ್ರಾಣ ಕಳೆದುಕೊಳ್ಳುತ್ತಾರೆ. ಅವರು ಸಾಯುವ ಮುನ್ನ ಅಂಬೆಡ್ಕರ್ ಅವರಿಗೆ ಬರೆದ ಪತ್ರದಲ್ಲಿ 'ಸಮಾಜ ಸಮತಾ ಸಂಘ'ದ ಕಾರ್ಯ ಮುನ್ನಡೆಯಬೇಕಾದಲ್ಲಿ ಸಮಾಜ ಸುಧಾರಣೆಯ ಕಡೆಗೆ ಆಸಕ್ತರಾದ ಯುವಕರನ್ನು ಸೆಳೆಯುವ ಅಗತ್ಯವಿದೆ ಎಂದು ಬರೆಯುತ್ತಾರೆ. ಚರಿತ್ರೆಯಲ್ಲಿ ಮರೆಯಾದ ಈ ಬಗೆಯ ಸಂಗತಿಗಳನ್ನು ಈ ಕೃತಿ ಹೆಕ್ಕಿ ತೆಗೆಯುವ ಕೆಲಸ ಮಾಡಿದೆ. ಬ್ರಾಹ್ಮಣರು ಜಾತಿವಿನಾಶದ ದೃಷ್ಟಿಯಿಂದ ಸಾಂಸ್ಕೃತಿಕವಾಗಿ ಆತ್ಮಹತ್ಯಾ ಬಾಂಬರ್‌ಗಳಂತೆ ಕೆಲಸ ಮಾಡಬೇಕು ಎಂದು ರೂಪಕಾತ್ಮಕವಾಗಿ ಯೆಂಗ್ಡೆ ಹೇಳುತ್ತಾರೆ. ಪ್ರಗತಿಪರ ಸಂಘಟನೆಗಳಲ್ಲಿ ಪಾಲ್ಗೊಳ್ಳುವುದರ ಜೊತೆ ತಮ್ಮ ಸಮುದಾಯಗಳಲ್ಲೂ ಸ್ಥಾಪಿತ ನಂಬಿಕೆಗಳನ್ನು ಒಡೆಯುವ ನಿಟ್ಟಿನಲ್ಲಿ ಸವರ್ಣೀಯರು ಕೆಲಸ ಮಾಡುವ ಅಗತ್ಯವನ್ನು ಅವರು ಮನಗಾಣುತ್ತಾರೆ.




ಸಮಾನತೆಗಾಗಿನ ದಶಕಗಳ ನಿರಂತರ ಹೋರಾಟ ಮ ುಂದುವರೆಯುತ್ತಿರುವಂತೆಯೇ ಇಂದು ದಲಿತ ಸಮುದಾಯ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಅವರು ಗುರುತಿಸುವಾಗ ಅನೇಕ ವಿಭಾಗಗಳನ್ನು ಮಾಡಿಕೊಳ್ಳುತ್ತಾರೆ. ಕೇವಲ ಪ್ರಾತಿನಿಧ್ಯದ ದೃಷ್ಟಿಯಿಂದ ಅವಕಾಶ ಪಡೆದು ದಲಿತರ ಪರವಾಗಿ ಕೆಲಸ ಮಾಡದೇ ಮೇಲುವರ್ಗದವರನ್ನು ಓಲೈಸುವ, ಸಂಪ್ರದಾಯವಾದಿಗಳಾದ ಟೋಕನ್ ದಲಿತರು, ಶಿಕ್ಷಿತರಾಗಿ, ಉತ್ತಮ ಉದ್ಯೋಗದಲ್ಲಿದ್ದುಕೊಂಡು ತಮ್ಮ ಹಿನ್ನೆಲೆಯನ್ನು ಮತ್ತು ಸಾಮುದಾಯಿಕ ಹೊಣೆಗಾರಿಕೆಯನ್ನು ಮರೆತವರು, ತಮ್ಮೊಳಗೇ ಮುಳುಗಿ ಸುತ್ತಲಿನ ಸಂಗತಿಗಳನ್ನು ವಿಶಾಲ ನೆಲೆಯಲ್ಲಿ ನೋಡಲಾರದವರು, ಸಮಾನತೆಯನ್ನು ಸಾಕಾರವಾಗಿಸುವ ನಿಟ್ಟಿನಲ್ಲಿ ಪಣತೊಟ್ಟು ದುಡಿಯುತ್ತಿರುವವರು ಹೀಗೆ ವಿವಿಧ ಬಗೆಯಲ್ಲಿ ಅವರು ಕಾಣುತ್ತಾರೆ. ಈ ರೀತಿ ಚೌಕಟ್ಟಿನಲ್ಲಿಟ್ಟು ನೋಡುವ ಬಗೆ ಜೊತೆಗಿದ್ದು ಪಕ್ಕದಲ್ಲಿರುವವರನ್ನು ನೋಡುವುದಕ್ಕಿಂತ ಎಲ್ಲೋ ಮೇಲೆ ನಿಂತು ಕೆಳಗಿರುವುದನ್ನು ವಿಶ್ಲೇಷಿಸುವ ಬಗೆಯಾಗಿ ಕಾಣುತ್ತದೆ. ಹೀಗೆ ಹೇಳುವಾಗಲೇ ಸೂರಜ್ ಯೆಂಗ್ಡೆ, ದಲಿತ ವ್ಯಕ್ತಿ ಮಾಡಿದ ತಪ್ಪು ಇಡೀ ಸಮುದಾಯದ ತಪ್ಪಿನಂತೆ ಬಿಂಬಿತವಾಗುತ್ತದೆ, ಅದೇ ಬ್ರಾಹ್ಮಣ ವ್ಯಕ್ತಿಯ ತಪ್ಪು ಕೇವಲ ಅವನ ವೈಯಕ್ತಿಕ ತಪ್ಪಾಗಿ ಕಾಣುತ್ತದೆ ಎಂಬ ಸೂಕ್ಷ್ಮವನ್ನೂ ಗುರುತಿಸುತ್ತಾರೆ. ಅಧೀನತೆಯಲ್ಲಿ ಸಿಲುಕಿದ ಸಮುದಾಯಗಳು ಪಡೆದ ತುಸು ಬಿಡುಗಡೆಯೂ ಅವರಲ್ಲಿ ಉಂಟುಮಾಡುವ ವಿಚಿತ್ರ ಸಂತೋಷ, ದುಡುಕು, ತಲ್ಲಣ ಎಲ್ಲವನ್ನೂ ಒಟ್ಟಾಗಿ ನೋಡಬೇಕಾಗುತ್ತದೆ. ಅವರ ಸಣ್ಣ ತಪ್ಪು ನಡೆಯೂ ಸಮಾಜದ ಭೂತಗನ್ನಡಿಯಲ್ಲಿ ದೊಡ್ಡದಾಗಿ ಪೂರ್ವಾಗ್ರಹಗಳಿಗೆ ಇಂಬು ಕೊಡುತ್ತದೆ. ರಾಜಕೀಯ ಜಾತಿವಾದದ ಹೊಸ ಭಾಷೆ ಭ್ರಷ್ಟಾಚಾರ ಎಂದು ಅವರು ಹೇಳುವ ಮಾತು ಭ್ರಷ್ಟಾಚಾರ ವಿರೋಧಿ ಹೋರಾಟದ ಮೂಲಕ ಮುಂಚೂಣಿಗೆ ಬಂದ ಹೋರಾಟಗಾರರನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಈ ಬಗೆಯಲ್ಲಿ ಸೂರಜ್ ಅವರ ವಿಶ್ಲೇಷಣೆ ಹಲವು ನಿಟ್ಟಿನಲ್ಲಿ ವಿಮರ್ಶೆ ನಡೆಸಲು ನಮ್ಮನ್ನು ಪ್ರೇರೇಪಿಸುತ್ತದೆ.



ಇನ್ನು ಇದುವರೆಗೆ ನಮ್ಮ ದೇಶ ನಡೆಸಿಕೊಂಡು ಬಂದ ಉದಾರವಾದಿ ರಾಜಕಾರಣದ ಸೋಲು ಈ ದೃಷ್ಟಿಯಿಂದ ಗಂಭೀರವಾಗಿ ಅವಲೋಕಿಸಬೇಕಾದ ಇನ್ನೊಂದು ಸಂಗತಿ. ಉದಾರವಾದಿ ರಾಜಕಾರಣ ಎಲ್ಲರನ್ನೂ ಒಳಗುಮಾಡಿಕೊಳ್ಳಬ ೇಕೆನ್ನುತ್ತಲೇ ಶ್ರೇಣೀಕರಣಕ್ಕೆ ಭಂಗ ತಂದಿಲ್ಲ. ಇಲ್ಲಿ ರೂಪುಗೊಂಡ ನಾಯಕತ್ವ ಮತ್ತೆ ಓಲೈಸುವ ರಾಜಕಾರಣಕ್ಕೆ, ವಂಶಾನುಗತ ರಾಜಕಾರಣಕ್ಕೆ ಮಣೆಹಾಕಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಕಾನ್ಶಿರಾಂ ಅವರಂತಹ ನಾಯಕರು ಕಟ್ಟಿದ ರಾಜಕೀಯ ಚಳುವಳಿ ಪ್ರಸ್ತುತ ಪಡೆದ ರೂಪ, ಕಾರ್ಮಿಕ ಹೋರಾಟಗಳು ಕಾರ್ಮಿಕರ ನಡುವೆಯೇ ಮನೆ ಮಾಡಿರುವ ಜಾತಿ ಪದ್ಧತಿಯ ಕಬಂಧ ಬಾಹುವನ್ನು ಗಣನೆಗೆ ತೆಗೆದುಕೊಳ್ಳದೇ ಇದ್ದದ್ದು, ನಮ್ಮ ಚಳುವಳಿಗಳು ಸಾಗಿದ ದಿಕ್ಕು ಹೀಗೆ ವಿವಿಧ ನೆಲೆಗಳಲ್ಲಿ ಆತ್ಮಾವಲೋಕನಕ್ಕೆ ಈ ಕೃತಿ ನಮ್ಮನ್ನು ಒಯ್ಯುತ್ತದೆ.

**ಬದಲಾಗಬೇಕಾದ ಲೋಕದೃಷ್ಟಿ:**

**ಜಾತಿ ಆಧಾರಿತ ದೇಶದ ಸುತ್ತ ಕಟ್ಟಿಕೊಂಡ ದೇಶಭಕ್ತಿಯ ಪರಿಕಲ್ಪನೆ ವಿಶ್ವಾಸಘಾತುಕವಾದ ಪರಿಕಲ್ಪನೆಯಾಗಿದೆ ಎನ್ನುವ ಯೆಂಗ್ಡೆ, ಇದು ದಮನಿತ ಸಮುದಾಯಗಳ ಅಧೀನ ಸ್ಥಿತಿಯನ್ನು ಮುಂದುವರೆಸುವ ಬಗೆಯದ್ದಾಗಿದೆ ಎನ್ನುತ್ತಾರೆ. ನಮಗೆ ಬೇಕಾಗಿರುವ ದೇಶಭಕ್ತಿ ಎಂದರೆ ಜಾತಿ ವಿನಾಶದ ಕಡೆಗೆ ಸಾಂಘಿಕವಾಗಿ ಕೆಲಸ ಮಾಡುವ ಬಗೆಯದ್ದಾಗಿದೆ. ಹಾಗೆಯೇ ಇಂದು ನಮ್ಮ ನಡುವೆ ಪ್ರಚಲಿತದಲ್ಲಿರುವ ಹಿಂದುತ್ವ ಹುಟ್ಟುಹಾಕಿದ ರಾಷ್ಟ್ರೀಯತೆಯ ಪರಿಕಲ್ಪನೆ ದೇಶವಾಸಿಗಳ ನಡುವೆ ಒಡಕು ಮೂಡಿಸುವ ಬಗೆಯದ್ದಾಗಿದೆ. ಇದಕ್ಕೆ ಬದಲಾಗಿ ಸೂರಜ್ ಯೆಂಗ್ಡೆ ಪ್ರತಿಪಾದಿಸುವ ದಲಿತ ರಾಷ್ಟ್ರೀಯತೆಯ ಪರಿಕಲ್ಪನೆ ಎಲ್ಲರನ್ನೂ ಒಳಗೊಳ್ಳುವ ಬಗೆಯದ್ದಾಗಿದೆ.**

ನಮ್ಮ ರಾಜಕೀಯ, ಸಾಂಸ್ಕೃತಿಕ ಜಗತ್ತಿನಲ್ಲಿ ನಾವು ಕಟ್ಟಿಕೊಂಡಿರುವ ಪರಿಕಲ್ಪನೆಗಳು ಮತ್ತು ಪರಿಭಾಷೆಗಳು ಪ್ರತಿಯೊಂದು ಹಂತದಲ್ಲೂ ನಾವು ಮತ್ತು ಅವರು ಎಂಬ ಸ್ಪಷ್ಟ ವಿಭಾಗವನ್ನು ಮಾಡುವ ಬಗೆಯಲ್ಲಿರುತ್ತವೆ. ಇಂದು ನಮ್ಮಲ್ಲಿ ದೊಡ್ಡ ಗಂಟಲಲ್ಲಿ ಪ್ರತಿಪಾದಿಸಲಾಗುತ್ತಿರುವ ರಾಷ್ಟ್ರೀಯತೆ, ದೇಶಪ್ರೇಮದ ಚಿಂತನೆಯೂ ನಾವು ಮತ್ತು ಅನ್ಯ ಎಂಬುದನ್ನು ಬಹಳ ಎದ್ದು ಕಾಣುವಂತೆ ಬೇರ್ಪಡಿಸುತ್ತದೆ. ಇದು ದೇಶವನ್ನು ಛಿದ್ರಗೊಳಿಸುವ ಚಿಂತನೆಯಾಗಿದೆ. ಇದಕ್ಕೆ ಪರ್ಯಾಯವಾಗಿ ಸೂರಜ್ ಯೆಂಗ್ಡೆ ಮಂಡಿಸುವ ಪರಿಕಲ್ಪನೆ ಮತ್ತು ಅದಕ್ಕೆ ಬಳಸುವ ಪರಿಭಾಷೆ ಎಲ್ಲರನ್ನೂ ಒಳಗೊಳ್ಳುವ ಬಗೆಯದ್ದಾಗಿದೆ. ಇವು ದಲಿತ ಲೋಕದೃಷ್ಟಿಯಿಂದ ಹೊರಹೊಮ್ಮಿವೆ. ಇದರ ಗುರಿ, ಸಿಟ್ಟು ಮತ್ತು ಹಿಂಸೆಯ ಜಗತ್ತಲ್ಲಿ ಕಳೆದು ಹೋದ ಪ್ರೀತಿಯ ಮೇಲೆ ಮತ್ತೆ ಹಿಡಿತ ಸಾಧಿಸುವುದು. ಈಗಾಗಲೇ ನಾವು ಪ್ರೀತಿ, ಮದುವೆ, ದೇಶಪ್ರೇಮ, ರಾಷ್ಟ್ರೀಯತೆ, ಸಾರ್ವತ್ರಿಕತೆ ಕುರಿತು ಕಟ್ಟಿಕೊಂಡಿರುವ ಶ್ರೇಣೀಕೃತ ಸಮಾಜಕ್ಕೆ ಅಪೇಕ್ಷಣೀಯವಾದ ಕಟ್ಟೋಣವನ್ನೇ ಇವು ಪ್ರಶ್ನಿಸುತ್ತವೆ. ದಲಿತ ಪ್ರೀತಿ ಎಂಬುದು ತನ್ನನ್ನು ತುಳಿಯುವವರನ್ನೂ ಒಳಗೊಂಡಂತೆ ಮನದಲ್ಲಿ ಯಾವುದೇ ಕಹಿ ಇಟ್ಟುಕೊಳ್ಳದಂತೆ ಎಲ್ಲರನ್ನೂ ಆತುಕೊಳ್ಳುವ ಬಗೆ. ಈ ಬಗೆಯ ಪ್ರೀತಿಸುವ ನಡೆಯೇ ಅದರ ಒಡಲಲ್ಲಿ ಕ್ರಾಂತಿಕಾರಿಯಾಗಿರುತ್ತದೆ. ಪ್ರೀತಿಸುವುದು ಮತ್ತು ಪ್ರೀತಿಸುತ್ತಲೇ ಪರಸ್ಪರ ಬೆಳೆಯುವುದೂ ಒಂದು ಬಗೆಯ ಪ್ರತಿರೋಧ ಎಂದು ಸೂರಜ್ ಯೆಂಗ್ಡೆ ಹೇಳುತ್ತಾರೆ. ಸಂಸ್ಕೃತಿ, ಜೀವಂತಿಕೆ, ಬೂದಿಯಿಂದಲೂ ಪುಟಿದೇಳಬಲ್ಲ ಚೈತನ್ಯ ಇವು ಇಲ್ಲದಿದ್ದಲ್ಲಿ ಸಾವಿರಾರು ವರ್ಷಗಳಿಂದಲೂ ನೊಂದ ಜನ ಬದುಕುವುದು ಸಾಧ್ಯವಾಗುತ್ತಿರಲಿಲ್ಲ. ಇದು ದಲಿತ ಪ್ರೀತಿ, ಚೈತನ್ಯದ ಒಡಲೊಳಗಿನ ಶಕ್ತಿಯಾಗಿದೆ.

ಜಾತಿ ಆಧಾರಿತ ದೇಶದ ಸುತ್ತ ಕಟ್ಟಿಕೊಂಡ ದೇಶಭಕ್ತಿಯ ಪರಿಕಲ್ಪನೆ ವಿಶ್ವಾಸಘಾತುಕವಾದ ಪರಿಕಲ್ಪನೆಯಾಗಿದೆ ಎನ್ನುವ ಯೆಂಗ್ಡೆ, ಇದು ದಮನಿತ ಸಮುದಾಯಗಳ ಅಧೀನ ಸ್ಥಿತಿಯನ್ನು ಮುಂದುವರೆಸುವ ಬಗೆಯದ್ದಾಗಿದೆ ಎನ್ನುತ್ತಾರೆ. ನಮಗೆ ಬೇಕಾಗಿರುವ ದೇಶಭಕ್ತಿ ಎಂದರೆ ಜಾತಿ ವಿನಾಶದ ಕಡೆಗೆ ಸಾಂಘಿಕವಾಗಿ ಕೆಲಸ ಮಾಡುವ ಬಗೆಯದ್ದಾಗಿದೆ. ಹಾಗೆಯೇ ಇಂದು ನಮ್ಮ ನಡುವೆ ಪ್ರಚಲಿತದಲ್ಲಿರುವ ಹಿಂದುತ್ವ ಹುಟ್ಟುಹಾಕಿದ ರಾಷ್ಟ್ರೀಯತೆಯ ಪರಿಕಲ್ಪನೆ ದೇಶವಾಸಿಗಳ ನಡುವೆ ಒಡಕು ಮೂಡಿಸುವ ಬಗೆಯದ್ದಾಗಿದೆ. ಇದಕ್ಕೆ ಬದಲಾಗಿ ಸೂರಜ್ ಯೆಂಗ್ಡೆ ಪ್ರತಿಪಾದಿಸುವ ದಲಿತ ರಾಷ್ಟ್ರೀಯತೆಯ ಪರಿಕಲ್ಪನೆ ಎಲ್ಲರನ್ನೂ ಒಳಗೊಳ್ಳುವ ಬಗೆಯದ್ದಾಗಿದೆ. ಇವರು ಹೇಳುವ ದಲಿತ ವಿಶ್ವಾತ್ಮಕತೆ ಜಾತಿ ಶ್ರೇಣೀಕರಣದ ಸಂಪೂರ್ಣ ವಿನಾಶವನ್ನು ಅಪೇಕ್ಷಿಸುತ್ತದೆ. ಇವರು ಕೃತಿಯುದ್ದಕ್ಕೂ ಪ್ರಯೋಗಿಸಿರುವ ವಿಶಿಷ್ಟ ಪರಿಭಾಷೆ ಸಂಜ್ಞಾಶಾಸ್ತ್ರೀಯ ನೆಲೆಯಿಂದಲೂ ಅಧ್ಯಯನ ಯೋಗ್ಯವಾಗಿದೆ. ಏಕೆಂದರೆ ಹೊಸ ಚಿಂತನೆ ಹೊಸ ಬಗೆಯ ಭಾಷೆಯ ಸೃಷ್ಟಿಯನ್ನೂ ಬಯಸುತ್ತದೆ.

ನಮ್ಮ ಮಾಧ್ಯಮಗಳಲ್ಲಿ ದಲಿತರ ಬಗೆಗಿನ ಸುದ್ದಿ ಎಂದರೆ ಬಹುಪಾಲು ದೌರ್ಜನ್ಯದ ಸುದ್ದಿಯೇ ಆಗಿರುತ್ತದೆ, ಇದಕ್ಕೆ ಬದಲಾಗಿ ಧನಾತ್ಮಕ ಸಂಗತಿಗಳು ಅಲ್ಲಿ ಕಾಣಿಸಿಕೊಳ್ಳುವುದೂ ಕಡಿಮೆ ಎಂದು ಸೂರಜ್ ಯೆಂಗ್ಡೆ ವಿಶಾದದಿಂದ ಹೇಳುತ್ತಾರೆ. ಇಂದು ಜಾತಿ, ಸಿನೆಮಾ, ಬೌದ್ಧಿಕ ವಲಯ, ರಂಗಭೂಮಿ, ವ್ಯಾಪಾರ, ಧರ್ಮ, ಆಡಳಿತ ವರ್ಗ ಹೀಗೆ ಎಲ್ಲ ವಲಯವೂ ತಳಸಮುದಾಯದವರ ಮೇಲೆ ಪ್ರಹಾರ ಮಾಡುತ್ತಿದೆ. ಇಂದು ಪ್ರತಿಪಾದಿತವಾಗುತ್ತಿರುವ ರಾಷ್ಟ್ರೀಯತೆಯ ಉನ್ಮಾದ, ಜಾತಿಯ ಹಿಡಿತವನ್ನು ಮತ್ತೆ ಬಿಗಿಗೊಳಿಸುತ್ತಿರುವ ಈ ಹೊತ್ತಲ್ಲಿ ಈ ಪುಸ್ತಕ ಎತ್ತುವ ಸಂಗತಿಗಳು ಮಹತ್ವದ್ದಾಗಿವೆ. ಜಾತಿಯ ಹಿಡಿತ ಎನ್ನುವುದು ಪ್ರತಿಯೊಂದು ಜಾತಿಯನ್ನೂ ಒಂದಲ್ಲ ಒಂದು ಬಗೆಯಲ್ಲಿ ಆವರಿಸಿದೆ; ಇದರ ತೀವ್ರತೆಯಲ್ಲಿ ವ್ಯತ್ಯಾಸವಿರಬಹುದು. ಬ್ರಾಹ್ಮಣರಲ್ಲೂ ಮತ್ತೆ ಒಳಜಾತಿಗಳಿದ್ದು ಅವರೂ ಪರಸ್ಪರ ತಾರತಮ್ಯವನ್ನು ಅನುಭವಿಸುತ್ತಿರುತ್ತಾರೆ. ಆದರೆ ತಮಗೆ ದೊರೆತ ಅನುಕೂಲಗಳಿಂದಾಗಿ ಅದರ ವಿರುದ್ಧ ಹೋರಾಡುವಷ್ಟು ಅವರು ಬಾಧಿತರಾಗದೇ ಇರಬಹುದು. ಆದರೆ ಜಾತಿವ್ಯವಸ್ಥೆ ಮನುಷ್ಯ ಹಿತವನ್ನೇ ನಾಶ ಮಾಡುವ, ಮನುಷ್ಯತ್ವವನ್ನೇ ಇಲ್ಲವಾಗಿಸುವ ಕ್ರೂರ ವ್ಯವಸ್ಥೆಯಾಗಿದೆ. ಕೆಲವರಿಗೆ ಮಾತ್ರ ಅನುಕೂಲಕರವಾಗಿರುವ ವ್ಯವಸ್ಥೆ ಆಳದಲ್ಲೇ ಅನೈತಿಕವಾಗಿರುವುದರಿಂದ ಅದರ ಕೆಡುಕಿನ ಬೀಜಗಳು ಅದರೊಳಗೇ ಹುದುಗಿರುತ್ತವೆ. ಹೀಗಾಗಿ, ಮನುಕುಲಕ್ಕೆ ಕಳಂಕದಂತಿರುವ ಇದರ ವಿರುದ್ಧ ಹೋರಾಡುವುದು ಕೇವಲ ದಲಿತರದ್ದಷ್ಟೇ ಅಲ್ಲ, ಎಲ್ಲರ ಜವಾಬ್ದಾರಿಯಾಗಿದೆ ಎಂದು ಯೆಂಗ್ಡೆ ಹೇಳುತ್ತಾರೆ. ದಲಿತರ ಬಿಡುಗಡೆ ಎಂಬುದು ಎಲ್ಲ ಅಧಿಕಾರ ಸಂಬಂಧಗಳನ್ನು ಸಮವಾಗಿಸುವ ರಾಜಕಾರಣವೂ ಹೌದು. ದಲಿತರು ತಮ್ಮ ವಿಮೋಚನೆಯ ಹೋರಾಟವನ್ನು ಏಕಾಂಗಿಯಾಗಿ ಮಾಡುವುದು ಸಾಧ್ಯವಿಲ್ಲ, ಮಾಡಲೂ ಬಾರದು ಎನ್ನುವ ಯೆಂಗ್ಡೆ, ಈ ಹೋರಾಟದಲ್ಲಿ ಇತರರು ಕೇವಲ ಜೊತೆಗಿರದೆ ಸಂಗಾತಿಗಳಾಗಿ ಕೆಲಸ ಮಾಡಬೇಕು ಎಂದು ಆಶಿಸುತ್ತಾರೆ.




ಭಾರತದಲ್ಲಿ ದಮನಿತ ವರ್ಗಗಳ ಹೋರಾಟಕ್ಕೆ ಸುದೀರ್ಘ ಚರಿತ್ರೆ ಇದೆ. ಫುಲೆ, ಅಂಬೇಡ್ಕರ್ ಅವರಿಂದ ಆರಂಭಿಸಿ ಗೈಲ್ ಓಂವೆಡ್ಟ್, ಆನಂದ್ ತೇಲ್ತುಂಬ್ಡೆ, ಶರಣ ಕುಮಾರ್ ಲಿಂಬಾಳೆ, ಕಲ್ಪನಾ ಕಣ್ಣಬಿರಾನ್, ಶರ್ಮಿಲಾ ರೇಗೆ, ಕಂಚ ಐಲಯ್ಯ ಶೆಫರ್ಡ್, ಕನ್ನಡದಲ್ಲಿ ದೇವನೂರ ಮಹಾದೇವ ಹೀಗೆ ಅನೇಕರು ಜಾತಿ ಪ್ರಶ್ನೆಯನ್ನು ಗಂಭೀರವಾಗಿ ಎದುರಾಗಿ ಹೋರಾಟ ಮತ್ತು ವಾಗ್ವಾದಗಳಿಗೆ ತಾತ್ವಿಕ ನೆಲೆಗಟ್ಟು ಹಾಕಿಕೊಟ್ಟಿದ್ದಾರೆ. ಇದೇ ಹಾದಿಯಲ್ಲಿ ಸಾಗಿ ಸ್ವಾನುಭವ, ಹಿರಿಯ ಜೀವಗಳು ತೋರಿದ ದಾರಿ, ಓದು ದೊರಕಿಸಿದ ಕಣ್ನೋಟಗಳ ಮೂಲಕ ಇಂದು ಹೊಸ ತಲೆಮಾರು ಇಂದಿನ ಸಾಮಾಜಿಕ ಸನ್ನಿವೇಶವನ್ನು ಹೇಗೆ ಅರ್ಥಮಾಡಿಕೊಳ್ಳುತ್ತಿದೆ, ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತಿದೆ ಎಂಬುದನ್ನು ಅಧ್ಯಯನ ಮಾಡುವ ಅಗತ್ಯವಿದೆ. ಇದನ್ನು ಅನೇಕ ಮಂದಿ ಭಿನ್ನ ಭಿನ್ನ ಮಾಧ್ಯಮಗಳ ಮೂಲಕ ಅಭಿವ್ಯಕ್ತಿಸುತ್ತಿದ್ದಾರೆ. ಸಿನೆಮಾ, ಕಾವ್ಯ, ಸಂಗೀತ, ರಂಗಭೂಮಿ, ಚಿತ್ರಕಲೆ ಹೀಗೆ ಭಿನ್ನ ಮಾಧ್ಯಮಗಳ ಮೂಲಕ ಇದು ಒಡಮೂಡುತ್ತಿದೆ. ಈ ಹಿನ್ನೆಲೆಯಲ್ಲಿ ಸೂರಜ್ ಯೆಂಗ್ಡೆ ಅವರ 'ಕ್ಯಾಸ್ಟ್ ಮ್ಯಾಟರ್ಸ್' ವರ್ತಮಾನದಲ್ಲಿ ನಿಂತು ಚರಿತ್ರೆಯನ್ನು ಅವಲೋಕಿಸುತ್ತಾ ಮುಂದಿನ ದಾರಿಯನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲರನ್ನೂ ಆಹ್ವಾನಿಸುವ ಬಗೆಯದ್ದಾಗಿದೆ. ಭಾಷೆಯ ಪ್ರಶ್ನೆ, ದಲಿತ ಮಹಿಳೆಯರ ಪ್ರಶ್ನೆಯ ಜೊತೆಗೆ ಹೆಣೆದುಕೊಂಡಿರುವ ಪಿತೃಪ್ರಾಧಾನ್ಯ, ರಾಜಕಾರಣ ಮುಂತಾದ ವಿಚಾರಗಳ ಬಗ್ಗೆ ಇನ್ನಷ್ಟು ಗಂಭೀರವಾದ ವಿಶ್ಲೇಷಣೆಯನ್ನು ನಾವು ಸೂರಜ್ ಯೆಂಗ್ಡೆ ಅವರಿಂದ ನಿರೀಕ್ಷಿಸುವ ಹೊತ್ತಲ್ಲೇ ಇಂತಹ ಸಶಕ್ತ ದನಿಯೊಂದು ಮೂಡಿಬರುತ್ತಿರುವುದು ಮತ್ತು ಇದಕ್ಕೆ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆ ಎಲ್ಲ ಸಂಕಷ್ಟಗಳ ನಡುವೆಯೂ ಬೆಳಕಿಂಡಿಯಂತೆ ತೋರುತ್ತದೆ. □



ಜಾಗತಿಕ ಚಿಂತನೆಗಳ ಕಣ್ಣೋಟದಲ್ಲಿ ಕನ್ನಡದ ತಿಳಿವನ್ನು ವಿಶ್ಲೇಷಿಸಬಲ್ಲ ಹೊಸ ತಲೆಮಾರಿನ ಶಶಿಕುಮಾರ್ ಹುಟ್ಟಿದ್ದು-ಬೆಳೆದಿದ್ದು, ತಿರುಮಕೂಡಲು ನರಸೀಪುರದಲ್ಲಿ. ಸದ್ಯ ಕೆನಡಾದ ಎಡ್ಮಂಟನ್ ನಗರದಲ್ಲಿರುವ ಆಲ್ಬರ್ಟಾ ವಿಶ್ವವಿದ್ಯಾಲಯದ ಇಂಗ್ಲಿಶ್ ಹಾಗೂ ಫಿಲ್ಮ್ ಸ್ಟಡೀಸ್ ವಿಭಾಗದಲ್ಲಿ ಸಂಶೋಧಕರಾಗಿದ್ದಾರೆ. ಇವರು ಈ ಹಿಂದೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನಲ್ಲಿ ಸಂಪಾದಕರಾಗಿದ್ದರು. ಸದ್ಯ ಪ್ರತಿಷ್ಠಿತ ರೂಟ್ಲೆಜ್ ಪ್ರಕಾಶನ ಸಂಸ್ಥೆಗೆಂದು**Critical Discourse in Kannada** ಕೃತಿಯ ಸಂಪಾದನೆ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಅನುವಾದ ಅಧ್ಯಯನ ಹಾಗೂ ಕನ್ನಡ ಸಾಹಿತ್ಯ ಸಂಸ್ಕೃತಿ ಇವರ ಪ್ರಮುಖ ಆಸಕ್ತಿಯ ಸಂಶೋಧನಾ ಕ್ಷೇತ್ರಗಳು.

**ಶಶಿಕುಮಾರ್**

**shashimysooru@gmail.com**


# ಅಂಬೇಡ್ಕರ್ ವಿಶೇಷಾಂಕ

ನಿಮ್ಮನ್ನು ನೀವು ಶಿಕ್ಷಿತರಾಗಿಸಿಕೊಳ್ಳಿ. ಏಕೆಂದರೆ, ನಮಗೆ ನಿಮ್ಮ ಬುದ್ಧಿವಂತಿಕೆಯ ಅಗತ್ಯವಿದೆ. ನಿಮ್ಮನ್ನು ನೀವು ಎಚ್ಚರಿಸಿಕೊಳ್ಳಿ, ನಮಗೆ ನಿಮ್ಮ ಉತ್ಸಾಹದ ಅಗತ್ಯವಿದೆ. ನಿಮ್ಮನ್ನು ನೀವು ಸಂಘಟಿತರಾಗಿಸಿಕೊಳ್ಳಿ, ಏಕೆಂದರೆ, ನಮಗೆ ನಿಮ್ಮ ಬಲದ ಅಗತ್ಯವಿದೆ.

ಅರ್ಥಮಾಡಿಕೊಳ್ಳದೆ ತಿಳಿದುಕೊಳ್ಳುವುದು ಸಾಧ್ಯ–ಅದರಲ್ಲೂ ಯಾವುದನ್ನೂ ಭಾವಿಸದೆ, ಯಾವುದರ ಬಗ್ಗೆಯೂ ಗಾಢಾನುರಕ್ತನಾಗಿರದ–ಎಂಬ ನಂಬಿಕೆಯಲ್ಲಿಯೇ ಚಿಂತಕನ ದೋಷವಡಗಿದೆ., ಅಂದರೆ, ಜನ–ರಾಷ್ಟ್ರ ಅಂದರೆ, ಒಂದು ಚಾರಿತ್ರಿಕ ಸಂದರ್ಭದೊಳಗೆ ಜನರ ಸರಳ ರೂಪದ ಭಾವನೆಗಳನ್ನು ಹಂಚಿಕೊಳ್ಳದೆ, ಅರ್ಥಮಾಡಿಕೊಳ್ಳದೆ, ಹಾಗೆಯೇ ಅವನ್ನು ವಿವರಿಸದೆ, ಸಮರ್ಥಿಸಿಕೊಳ್ಳದೆ ಚರಿತ್ರೆಯ ನಿಯಮಗಳಿಗೆ ತಾತ್ವಿಕವಾಗಿ ಜೋಡಿಸುವುದು... ಈ ಗಾಢಾನುರಕ್ತತೆಯಿಲ್ಲದೆ––ಚಿಂತಕರು ಹಾಗೂ ಜನ–ರಾಷ್ಟ್ರ–ರಾಜಕೀಯ–ನಡುವೆ ಭಾವನಾತ್ಮಕ ಬೆಸುಗೆ ಇಲ್ಲದೆ ಚರಿತ್ರೆ ನಿರ್ಮಿಸಲು ಸಾಧ್ಯವಿಲ್ಲ.

–ಅಂತೋನಿಯೊ ಗ್ರಾಮ್‌ಶಿ

**ಶಿಕ್ಷಿತರಾಗಿ, ಸಂಘಟಿತರಾಗಿ, ಹೋರಾಡಿ**

ಹಿಂದೂ ದೇವಾಲಯಗಳಿಗೆ ಪ್ರವೇಶ ಮಾಡುವುದರಿಂದ ನಿಮ್ಮೆಲ್ಲ ಸಮಸ್ಯೆಗಳು ಬಗೆಹರಿಯಬಹುದು ಎಂಬುದು ಸರಿಯೇನಲ್ಲ. ನಮ್ಮ ಸಮಸ್ಯೆ ತುಂಬ ದೊಡ್ಡದು. ಅದು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಸ್ಥರಗಳಿಗೆ ವಿಸ್ತರಿಸಿಕೊಂಡಿದೆ. ಇಂದಿನ ಸತ್ಯಾಗ್ರಹ ಹಿಂದೂ ಮನಸ್ಸಿಗೊಂದು ಸವಾಲು. ಈ ನಿಜ ಸತ್ಯಾಗ್ರಹದಿಂದ ಹಿಂದೂ ಸಮಾಜವು ನಮ್ಮನ್ನು ಮಾನವ ಜೀವಿಗಳನ್ನಾಗಿ ಕಾಣಲು ತಯಾರಾಗಿದೆಯೇ ಎಂದು ನೋಡಬಹುದು.


ಸಮಾನ ನ್ಯಾಯ ತತ್ವವು ಸ್ಥಾಪಿತ ವ್ಯವಸ್ಥೆಗೆ ದೊಡ್ಡ ಹೊಡೆತವನ್ನು ಕೊಡಬಲ್ಲದು ಎಂದು ಯೋಚಿಸಿರಬಹುದು. ವಾಸ್ತವವಾಗಿ, ಸ್ಥಾಪಿತ ವ್ಯವಸ್ಥೆಯು ಯಾವುದೇ ನಷ್ಟವನ್ನು ಅನುಭವಿಸದೇ ತನ್ನ ಕಾರ್ಯವನ್ನು ಮುಂದುವರೆಸಿದೆ. ಸಮಾನ ನ್ಯಾಯ ತತ್ವವು ಪರಿಣಾಮ ಬೀರುವಲ್ಲಿ ಸೋತಿದ್ದೇಕೆ ಎಂದು ಕೇಳಬಹುದು. ಇದಕ್ಕೆ ಉತ್ತರ ಸರಳ. ನ್ಯಾಯ ತತ್ವವನ್ನು ಸಾರಿ ಹೇಳುವುದು ಒಂದು ವಿಷಯವಾದರೆ, ಅದನ್ನು ಪರಿಣಾಮಕಾರಿಯಾಗಿಸುವುದು ಮತ್ತೊಂದು...

–ಭೀಮರಾವ್ ರಾಮ್‌ಜಿ ಅಂಬೇಡ್ಕರ್

ಜುಲೈ 23–25, 2017. ಅಂಬೇಡ್ಕರ್ ಅವರ 126ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಕರ್ನಾಟಕ ಸರಕಾರವು ವಿಶ್ವ ಕಂಡ ಬೃಹತ್ ಅಂಬೇಡ್ಕರ್ ಸಮಾವೇಶವೊಂದನ್ನು ಆಯೋಜಿಸಿತ್ತು. ಅಂಬೇಡ್ಕರ್ ಚಿಂತನೆಯನ್ನು ಹಲವು ನೆಲೆಗಳಲ್ಲಿ ವಿಸ್ತರಿಸುತ್ತಿರುವ ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ಪ್ರಾದೇಶಿಕ ಮಟ್ಟದ ಸುಮಾರು 250 ವಿದ್ವಾಂಸರು ಸೇರಿದಂತೆ, ಸುಮಾರು 2000 ಮಂದಿ ಭಾಗವಹಿಸಿದ್ದರು. ಅವರಲ್ಲಿ ಒಬ್ಬರು ಕೊಸಿಮೊ ಜೀನ್. ಇವರು ಲಂಡನ್ ವಿಶ್ವವಿದ್ಯಾಲಯದ **School of Oriental and African Studies(SOAS)** ನಲ್ಲಿ ಪ್ರಾಧ್ಯಾಪಕರು. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಹಾಗೂ ಇಟಾಲಿಯನ್ ಮಾರ್ಕ್ಸ್‌ವಾದಿ ಚಿಂತಕ ಅಂತೋನಿಯೊ ಗ್ರಾಮ್‌ಶಿ ಅವರ ರಾಜಕೀಯ ತತ್ವಜ್ಞಾನ ಕುರಿತು **The Political Philosophies of Antonio Gramsci and B. R. Ambedkar: Itineraries of Dalits and Subalterns (2017)** ಪುಸ್ತಕ ಸಂಪಾದಿಸಿದ ವಿಶ್ವದ ಮೊದಲ ವಿದ್ವಾಂಸ ಎಂದು ಕರೆದರೆ ತಪ್ಪಾಗಲಾರದೇನೋ. ಈ ಪುಸ್ತಕದಲ್ಲಿ 'ಸಬಾಲ್ಟ್ರನ್'(ಈ ಪದ ಹಲವು ಅರ್ಥಗಳನ್ನು ಹೊಮ್ಮಿಸುವುದರಿಂದ ಕನ್ನಡದಲ್ಲಿ ಸಾಮಾನ್ಯವಾಗಿ'ಕೆಳಸ್ತರದ ಜನರು', 'ನಿರ್ಲಕ್ಷಿತ ಸಮುದಾಯಗಳು' 'ಕಾಲಾಳುಗಳು' ಎಂದು ಸಂದರ್ಭಕ್ಕನುಗುಣವಾಗಿ ಬಳಸಿದ್ದಾರೆ) ಹಾಗೂ 'ದಲಿತರು' ಕುರಿತಂತೆ ಗ್ರಾಮ್‌ಶಿ ಹಾಗೂ ಅಂಬೇಡ್ಕರರ ತಾತ್ವಿಕ ಹಾಗೂ ಪ್ರಾಪಂಚಿಕ ಬದ್ಧತೆಯ ಕುರಿತು ಹದಿನಾಲ್ಕು ವಿದ್ವಾಂಸರು ಬರೆದಿರುವ ಲೇಖನಗಳಿವೆ. ಇವುಗಳನ್ನು ಸಬಾಲ್ಟ್ರನ್/ ದಲಿತ ಚಾರಿತ್ರಿಕ ಆಂತರಿಕತೆ ಹಾಗೂ ಚಾರಿತ್ರಿಕ ಮಧ್ಯಸ್ತಿಕೆಯ ಉದಯ, ಚಿಂತಕರ ಕೆಲಸ, ಕೆಳಸ್ತರತೆ ಹಾಗೂ ಸಾಮಾನ್ಯ ಪ್ರಜ್ಞೆ, ದಲಿತ ಸಾಹಿತ್ಯ, ಕೆಳಸ್ತರತೆ ಹಾಗೂ ಪ್ರಜ್ಞೆ, ಹಾಗೂ ಸಬಾಲ್ಟ್ರನ್ ಗಳು/ದಲಿತರ ಧರ್ಮ ಎಂಬ ಐದು ವಿಷಯಗಳಡಿ ಸೇರಿಸಲಾಗಿದೆ. ಇವುಗಳ ಜೊತೆಗೆ ಸಂಪಾದಕರು ಬರೆದಿರುವ ಮೊದಲ ನುಡಿ ಹಾಗೂ ಕಡೆ ನುಡಿ ಇದೆ.

**ದೇಶ, ಕಾಲ, ಸಮುದಾಯಗಳ ಗೆರೆ ಅಳಿಸಿ ಬೆಳೆದ ಅಂಬೇಡ್ಕರ್ ಚಿಂತನೆ**

ಕೊಸಿಮೊ ಜೀನ್ ಅವರ ಪುಸ್ತಕದ ಪರಿಚಯ ಮಾಡಿಕೊಡುವುದಷ್ಟೇ ಈ ಬರೆಹದ ಮುಖ್ಯ ಉದ್ದೇಶವಲ್ಲ. ಬದಲಿಗೆ, ಈ ಪುಸ್ತಕದ ಹಿನ್ನೆಲೆಯಲ್ಲಿ ಅಂಬೇಡ್ಕರ್ ಹಾಗೂ ಗ್ರಾಮ್‌ಶಿ ಕಾಲರೇಖೆ ಎಲ್ಲಿ ಸಂಧಿಸಿತ್ತು, ಅವರ ಸಾಮಾನ್ಯ ಆಸಕ್ತಿಗಳೇನಾಗಿದ್ದವು, ಇಬ್ಬರೂ ತಮ್ಮ ದೇಶಗಳಲ್ಲಿನ ವರ್ತಮಾನದ ತಲ್ಲಣಗಳಿಗೆ ಹೇಗೆ ಸ್ಪಂದಿಸಿದ್ದರು ಎಂಬುದರ ಜೊತೆಗೆ ಇಂದಿನ



**‘ಕೊಸಿಮೊ ಜೇನ್, ತಮ್ಮ ಸ್ವಂತ ಸಂಶೋಧನೆಯಲ್ಲಿ ಕಂಡುಕೊಂಡ ಸತ್ಯವೇನೆಂದರೆ, Subaltern Studies Group, ಗ್ರಾಮ್‌ಶಿ ಚಿಂತನೆಯನ್ನು ಅನ್ವಯಿಸಿಕೊಳ್ಳುವಲ್ಲಿ ಎಷ್ಟೇ ಸ್ಫೂರ್ತಿದಾಯಕವಾದ ಕೆಲಸವನ್ನು ಮಾಡಿದ್ದರೂ, ಆಳವಾಗಿ ಬೇರೂರಿರುವಂತಹ ಕೆಳಸ್ತರತೆಯಾದ ಅಸ್ಪೃಶ್ಯತೆ ಹಾಗೂ ಜಾತಿ–ವರ್ಗ ಸಂಘರ್ಷವನ್ನು ನೇರವಾಗಿ ಎದುರಿಸದೇ ಹೋಯಿತೆನ್ನುವುದು. Subaltern Studies, ಜಾತಿ(ಅಥವಾ ಲಿಂಗಭೇದ)ವನ್ನು ನೋಡದ ಕಾರಣದಿಂದಾಗಿಯೇ ಗ್ರಾಮ್‌ಶಿ ಚಿಂತನೆಯೊಂದಿಗೆ ಅಂಬೇಡ್ಕರ್ ಚಿಂತನೆಯನ್ನು ಬೆರೆಸಬೇಕು ಎಂಬ ತೀರ್ಮಾನಕ್ಕೆ ಅವರು ಬರುತ್ತಾರೆ. ಅವರ ಪ್ರಕಾರ, ಕೆಳಸ್ತರತೆಯ ಸಮಾಜೋ–ಸಾಂಸ್ಕೃತಿಕ ವಿಮರ್ಶೆಯು ಒಂದು ಪರಿಪೂರ್ಣ ವಿಧಾನವಾಗಿ, ಕೆಳಸ್ತರದ ತುದಿಯೆಂದರೆ, ಅಸ್ಪೃಶ್ಯರು ಎಂಬೆಡೆಗೆ ಬೆರಳು ಮಾಡಿ ತೋರಿಸುತ್ತದೆ. ಅದರಲ್ಲೂ ಸ್ವಮರುಕದಿಂದ ಸ್ವಪ್ರಜ್ಞೆ ಕಡೆಗಿನ ಚಲನೆ ಅಥವಾ ಪಯಣವು ದಲಿತ ಮಹಿಳೆಯ ಅನುಭವದಲ್ಲಿ ಪ್ರಭಾವಶಾಲಿಯಾಗಿ ಹೊರಹೊಮ್ಮಿದೆ’**

# ಅಂಬೇಡ್ಕರ್–ಗ್ರಾಮ್‌ಶಿಯ ದಲಿತ/ಸಬಾಲ್ಟರ್ನ್ ಚಿಂತನೆ ಮುಖಾಮುಖಿ

ಸಂದರ್ಭಕ್ಕೆ ಅವರ ಚಿಂತನೆ ಏಕೆ ಮುಖ್ಯ ಎಂಬುದರ ಬಗ್ಗೆ ಕೆಲವು ವಿಷಯಗಳನ್ನು ಮಂಡಿಸುವುದಾಗಿದೆ. ಅದಕ್ಕೆ ಕಾರಣವೂ ಇದೆ. ಡಿ. ಆರ್. ನಾಗರಾಜ್, ತಮ್ಮ ‘ಉರಿ ಚಮ್ಮಾಳಿಗೆ’(ಈ ಕೃತಿಯನ್ನು ಡಿ.ಆರ್.ನಾಗರಾಜ್ **The Flaming Feet: The Dalit Movement inIndia (1993)** ಎಂಬ ಹೆಸರಿನಲ್ಲಿ ಮೊದಲು ಇಂಗ್ಲಿಶ್‌ನಲ್ಲಿ ಪ್ರಕಟಿಸಿದ್ದರು. ಎಂ.ಎಸ್.ಆಶಾದೇವಿಯವರ ಕನ್ನಡಾನುವಾದ ಬಂದಿದ್ದು 2002ರಲ್ಲಿ.) ಕೃತಿಯಲ್ಲಿ ಅಂಬೇಡ್ಕರ್ ಹಾಗೂ ಗಾಂಧಿಯನ್ನು ಮುಖಾಮುಖಿಯಾಗಿಸಿ ದಲಿತ ಚಳವಳಿಯನ್ನು ವಿಶ್ಲೇಷಿಸಿದ್ದನ್ನು ಇಂದು ದಲಿತ ಅಧ್ಯಯನದಲ್ಲಿ ಬಹುಮುಖ್ಯ ತಾತ್ವಿಕ ಪ್ರವೇಶ ಎಂದು ನೋಡಲಾಗುತ್ತದೆ. ಇದಾದ ನಂತರ, ಹೊಸ ಸಹಸ್ರಮಾನದಲ್ಲಿ, ಅಂಬೇಡ್ಕರ್ ಚಿಂತನೆ ಇಡೀ ಜಗತ್ತಿನ ಗಮನ ಸೆಳೆಯಲಾರಂಭಿಸಿತು. ಅದರಲ್ಲೂ ವಿಶೇಷವಾಗಿ ಅವರು ಉನ್ನತ ವ್ಯಾಸಂಗ ಮಾಡಿದ ಇಂಗ್ಲೆಂಡ್ ಹಾಗೂ ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಕೋರ್ಸ್‌ಗಳು ಆರಂಭವಾದವು, ಡಾಕ್ಟೋರಲ್ ಥೀಸಿಸ್‌ಗಳು ಬಂದವು. ಹಾಗೆಯೇ, ಅನೇಕ ಪುಸ್ತಕಗಳು ಕೂಡ. ರಾಜಕೀಯ ವಿಚಾರಧಾರೆಗೆ ಬಂದಾಗ, **Transnational History** ಅಡಿಯಲ್ಲಿ ತುಲನಾತ್ಮಕ ಅಧ್ಯಯನಗಳು ಹೆಚ್ಚು ಕಂಡು ಬರುತ್ತವೆ. ಅಂಬೇಡ್ಕರ್‌ರನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಾಯಕರೊಂದಿಗೆ, ತತ್ವಜ್ಞಾನಿಗಳೊಂದಿಗೆ ಹೋಲಿಸಿ, ಪುಸ್ತಕಗಳನ್ನು ರಚಿಸಲಾಯಿತು. ಸ್ವತಃ ಅಂಬೇಡ್ಕರ್ ಅವರೇ ರಾಷ್ಟ್ರನಾಯಕರ ಚಿಂತನೆಯನ್ನು ತುಲನೆ ಮಾಡಿ **Ranade Gandhi And Jinnah** (1943) ಎಂಬ ಪುಸ್ತಕ ಪ್ರಕಟಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ, ಮುಂದೊಂದು ದಿನ ಅವರ ಚಿಂತನೆಯೊಂದಿಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ರಾಜಕೀಯ ನಾಯಕರ ಚಿಂತನೆಯನ್ನು ತುಲನೆ ಮಾಡಿ ಪುಸ್ತಕಗಳು ಬರಬಹುದೆಂದು ಅವರು ನಿರೀಕ್ಷೆ ಕೂಡ ಮಾಡಿರಲಾರರು.. ಅಂತಹ ಪ್ರಯತ್ನಗಳಲ್ಲಿ ಐಶ್ವರಿ ಕುಮಾರ್ ಅವರ **Radical Equality: Ambedkar, Gandhi and the Risk of Demoracy (2015)** ಹಾಗೂ ರಾಜ ಸೇಕರ್ ವುಂದ್ರು ಅವರ **Ambedkar, Gandhi and Patel: The Making of India’s Electoral System** (2017)ಪುಸ್ತಕಗಳನ್ನು ಹೆಸರಿಸಬಹುದು. ಇದು ಚಿಂತನೆಯ ವಿಷಯವಾಯಿತು. ಆಕ್ಟಿವಿಸಮ್ ವಿಷಯಕ್ಕೆ ಬಂದಾಗಲೂ, ಸ್ವತಃ ದಲಿತ ಆಕ್ಟಿವಿಸ್ಟ್ ಆಗಿದ್ದ ಅಂಬೇಡ್ಕರ್, ಇಂದು ದಲಿತರಿಂದಾಚೆಗೂ ತನ್ನ ಪ್ರಭಾವ, ಪ್ರೇರಣೆಯನ್ನು ವಿಸ್ತರಿಸುತ್ತಿರುವುದು ಗಮನಾರ್ಹ ಸಂಗತಿ.

ಸದ್ಯದ ಸಂದರ್ಭದಲ್ಲಿಯೇ ಗಮನಿಸುವುದಾದರೆ, ಕೇಂದ್ರ ಸರಕಾರ ಜಾರಿಗೆ ತಂದ ಪೌರತ್ವ (ತಿದ್ದುಪಡಿ) ಮಸೂದೆ 2019 ವಿರುದ್ಧ ನಡೆದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರತಿಭಟನೆಗಳಲ್ಲಿ ಮುಸ್ಲಿಂ ಸಮುದಾಯ ಮೊದಲುಗೊಂಡು, ಇತರ ಸಮುದಾಯಗಳಿಗೆಲ್ಲ ಅಂಬೇಡ್ಕರ್ ಐಕಾನ್ ಆಗಿ ಹೊರಹೊಮ್ಮಿದ್ದು ಅಂಬೇಡ್ಕರ್ ಮಹತ್ವವನ್ನು ಹಿಂದೆಂದೂ ಇಲ್ಲದಂತೆ ಸಾಬೀತುಪಡಿಸಿದೆ. ಅದಕ್ಕೆ ಸಂವಿಧಾನದಿಂದ ಹೊರತಾದ ಚಾರಿತ್ರಿಕ ಕಾರಣವೂ ಇದೆ. ಕಳೆದ ಡಿಸೆಂಬರ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆದ ಸಿಎಎ ಹಾಗೂ ಎನ್‌ಆರ್‌ಸಿ ವಿರುದ್ಧದ ಪ್ರತಿಭಟನೆಯಲ್ಲಿ ಹೈದರಾಬಾದ್ ಸಂಸದ ಹಾಗೂ ಮುಸ್ಲಿಂ ನಾಯಕ ಅಸದುದ್ದೀನ್ ಒವಾಯಿಸಿ ನೇತೃತ್ವದಲ್ಲಿ ಮುಸ್ಲಿಂ ಸಮುದಾಯವು ಸಂವಿಧಾನದ ಪ್ರಸ್ತಾವನೆಯನ್ನು ಉರ್ದುವಿನಲ್ಲಿ ಓದಿದ್ದು ಹೇಗೆ ಚಾರಿತ್ರಿಕ ಹಾಗೂ ಅಂಬೇಡ್ಕರ್‌ಗೆ ಸಲ್ಲಿಸಿದ ಗೌರವ ಎಂಬುದನ್ನು ಮುಂದೆ ಓದುವಿರಿ. ಅದಕ್ಕೆ ಕಾರಣ, ಅಂಬೇಡ್ಕರ್ ಸಂವಿಧಾನ ರಚನೆಕಾರರು ಎಂಬುದು ಮಾತ್ರವಲ್ಲ, ಇಂದು ದಮನಿತ ಸಮುದಾಯಗಳೆಲ್ಲ ಅವರನ್ನು ತಮ್ಮ ದನಿಯಾಗಿ ಸ್ವೀಕರಿಸಿರುವುದು ಕಾರಣವಾಗಿದೆ. ಜಾಗತಿಕ ಸಂದರ್ಭದಲ್ಲಿ ಗ್ರಾಮ್‌ಶಿ ಮುಖ್ಯವಾಗುವುದು ಕೂಡ ಅಂತಹ ಕಾರಣಗಳಿಂದಾಗಿಯೇ.


**ಅಂಬೇಡ್ಕರ್ ಹಾಗೂ ಗ್ರಾಮ್‌ಶಿಯ ಕಾಲರೇಖೆ**

ಅಂಬೇಡ್ಕರ್ ಹಾಗೂ ಗ್ರಾಮ್‌ಶಿಯ ದಲಿತ/ಸಬಾಲ್ಟರ್ನ್ ತಾತ್ವಿಕತೆಯನ್ನು ಚರ್ಚಿಸುವ ಮುನ್ನ, ಅವರ ಕಾಲರೇಖೆಯನ್ನೊಮ್ಮೆ ಗಮನಿಸುವುದು ಉಪಯುಕ್ತ. ಏಕೆಂದರೆ, ಅವರನ್ನು, ಅವರ ತಾತ್ವಿಕತೆಯನ್ನು ರೂಪಿಸಿದ್ದು ಅವರ ಕಾಲ. ಆ ಕಾಲದ ತುರ್ತು.

ಅಂಬೇಡ್ಕರ್ ಹಾಗೂ ಗ್ರಾಮ್‌ಶಿ ಇಬ್ಬರೂ ಹುಟ್ಟಿದ್ದು 1891ರಲ್ಲಿ. ಅಂಬೇಡ್ಕರ್, ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಹುಟ್ಟಿದರೆ, ಗ್ರಾಮ್‌ಶಿ ಹುಟ್ಟಿದ್ದು ಫ್ಯಾಶಿಸ್ಟ್‌ಪೂರ್ವ ಹೊಸ ರಾಷ್ಟ್ರವಾದ ಇಟಲಿಯಲ್ಲಿ. ಇಬ್ಬರೂ ಮಹಾನ್ ರಾಷ್ಟ್ರೀಯತಾವಾದಿಗಳಾದರೂ, ಅಂಬೇಡ್ಕರ್ ತುಸು ಭಿನ್ನ ಎಂಬುದನ್ನಿಲ್ಲಿ ವಿಶೇಷವಾಗಿ ಹೇಳಬೇಕಾಗಿಲ್ಲ. ಇಬ್ಬರ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಹಾಗೂ ರಾಜಕೀಯ ಪರಿಸರ ಬೇರೆ. ಚಿಂತನೆ ಮಾತ್ರ ಒಂದೇ–ಅದು ಸಮಾಜಮುಖಿ. ಹಾಗಾಗಿಯೇ, 1789–90ರ ಫ್ರೆಂಚ್ ಕ್ರಾಂತಿ ಹಾಗೂ 1917ರ ರಶ್ಯಾ ಕ್ರಾಂತಿ ಇಬ್ಬರಿಗೂ ಸ್ಫೂರ್ತಿ. ಅಂಬೇಡ್ಕರ್, ಈ ಎರಡೂ ಕ್ರಾಂತಿಗಳನ್ನು ಮಹಾರಾಷ್ಟ್ರದ ಜನಪ್ರಿಯ ಸಿಹಿತಿಂಡಿ ಪೂರಣ್‌ಪೋಳಿ(ಕನ್ನಡದ ಹೋಳಿಗೆ)ಗೆ ಹೋಲಿಸಿದ್ದರು. ಹೊರ ಪದರವನ್ನು ಫ್ರೆಂಚ್ ಕ್ರಾಂತಿ ಎಂದೂ, ಒಳಗಿನ ತಿರುಳನ್ನು ರಶ್ಯಾ ಕ್ರಾಂತಿ ಎಂದೂ ಕರೆದಿದ್ದರು. ಇವೆರಡೂ ಒಂದಿಲ್ಲದೆ ಮತ್ತೊಂದು ಪೂರ್ಣವಾಗಲಾರದು ಎಂಬುದು ಅಂಬೇಡ್ಕರ್ ವ್ಯಾಖ್ಯಾನವಾಗಿತ್ತು. ಮಾರ್ಕ್ಸ್‌ವಾದದ ಪ್ರಭಾವ, ಪ್ರೇರಣೆಯನ್ನು ಗ್ರಾಮ್‌ಶಿ ಹಾಗೂ ಅಂಬೇಡ್ಕರ್ ಚಿಂತನೆಯಲ್ಲಿ ಗುರುತಿಸಬಹುದು. ಆದರೆ, ಮಾರ್ಕ್ಸ್‌ವಾದ ಗ್ರಾಮ್‌ಶಿಯ ಒಟ್ಟು ಚಿಂತನೆಯನ್ನು ರೂಪಿಸಿದ ಹಾಗೆ ಅಂಬೇಡ್ಕರ್ ಚಿಂತನೆಯನ್ನು ರೂಪಿಸಲಿಲ್ಲ. ಅದಕ್ಕೆ ಕಾರಣಗಳು ಸ್ಪಷ್ಟ––ಭಾರತೀಯ ಜಾತಿ ವ್ಯವಸ್ಥೆ ಕುರಿತ ಅವರ ನಿಲುವು ಹಾಗೂ ಅವರ ಬದುಕಿನ ಕೊನೆಯ ದಶಕಗಳಲ್ಲಿ ಎದ್ದು ಕಾಣುವಂತಹ ಬೌದ್ಧಧರ್ಮದ ಪ್ರಭಾವ. ಅಂಬೇಡ್ಕರ್‌ಗೆ ವರ್ಗ ಸಂಘರ್ಷಕ್ಕಿಂತಲೂ ಜಾತಿಸಂಘರ್ಷ ಮುಖ್ಯವಾಗಿತ್ತು. ಹಾಗಾಗಿಯೇ, ಭಾರತೀಯ ಸಂದರ್ಭಕ್ಕೆ ವಿಶಿಷ್ಟವಾಗಿದ್ದ ಜಾತಿ ಸಂಘರ್ಷವನ್ನು

ಮರೆತು, ವರ್ಗಸಂಘರ್ಷವನ್ನು ಮುಖ್ಯ ಎಂದು ಭಾವಿಸಿದ ಕಮ್ಯುನಿಸ್ಟ್‌ಗಳ ಮೇಲೆ ಅವರಿಗೆ ಅಸಮಾಧಾನವಿತ್ತು. ಆ ಕಾರಣಕ್ಕೆ ಅಂಬೇಡ್ಕರ್ ಬಹುಶಃ ಕಮ್ಯುನಿಸಮ್ ಅನ್ನು ವಿಮರ್ಶಾತ್ಮಕವಾಗಿ ನೋಡಿದ ಮೊದಲ ಭಾರತೀಯ ಚಿಂತಕ ಕೂಡ ಹೌದು. ಅಂಬೇಡ್ಕರ್ ಕೊನೆಯ ಕೃತಿಗಳಾದ **Buddha and Karl Marx** (1956) ಹಾಗೂ **The Buddha and His Dhamma (1957)** ಅದನ್ನು ಸಾರಿಹೇಳುತ್ತವೆ. ಆದರೂ, ಅಂಬೇಡ್ಕರ್ ಹಾಗೂ ಗ್ರಾಮ್‌ಶಿ, 1917ರ ರಶ್ಯಾ ಕ್ರಾಂತಿ ಸಂದರ್ಭದಲ್ಲಿ ವಿದ್ಯಾರ್ಥಿಗಳಾಗಿದ್ದದ್ದು ಅವರ ಮುಂದಿನ ಹೋರಾಟದ ಬದುಕನ್ನು ರೂಪಿಸಿತು ಎಂದು ಹೇಳಬಹುದು. ಅಂಬೇಡ್ಕರ್ ಹಾಗೂ ಗ್ರಾಮ್‌ಶಿ ನಡುವೆ ಸಮಾನವಾಗಿದ್ದದ್ದು ಸಮಾಜಮುಖಿ ಚಿಂತನೆ ಮಾತ್ರವಲ್ಲ, ಅದನ್ನು ಹರಡಲು ಪತ್ರಿಕೋದ್ಯಮ ಸಮರ್ಥ ಮಾಧ್ಯಮ ಎಂಬ ಅರಿವು ಕೂಡ.

ಅಂಬೇಡ್ಕರ್, 1913ರಲ್ಲಿ ಉನ್ನತ ವ್ಯಾಸಂಗ ಮಾಡಲು ಬರೋಡ ರಾಜ್ಯ ವಿದ್ಯಾರ್ಥಿವೇತನ ಪಡೆದು ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಚರಿತ್ರೆ, ತತ್ವಶಾಸ್ತ್ರಗಳನ್ನು ಅಧ್ಯಯನ ಮಾಡಿ ಎಂ.ಎ. ಪದವಿ ಪಡೆದರು. ಅಲ್ಲಿಯೇ ಅ**astes in India: Their Mechanism, Genesis and Development** ಪ್ರಬಂಧ ಮಂಡಿಸಿದ್ದು ಉಲ್ಲೇಖಾರ್ಹ. ನಂತರದ ಹತ್ತು ವರ್ಷಗಳಲ್ಲಿ ಅವರು ಇಂಗ್ಲೆಂಡ್‌ನ ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನಲ್ಲಿ ಪಿಎಚ್‌ಡಿ ಹಾಗೂ ಕೊಲಂಬಿಯಾ ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌ಡಿ ಪದವಿಗಳನ್ನು ಪಡೆದುಕೊಂಡಿದ್ದು ಬೇರೆ ಮಾತು. ಇದರ ನಡುವೆಯೇ ಅವರು ಜನವರಿ 31, 1920 ರಂದು 'ಮೂಕನಾಯಕ' ಮರಾಠಿ ಪಾಕ್ಷಿಕ ಪತ್ರಿಕೆ ಆರಂಭಿಸಿದ್ದರೆಂಬುದು ಗಮನಾರ್ಹ. ಅದರ ಕಚೇರಿ ಇದ್ದದ್ದು ಕೂಲಿಕಾರ್ಮಿಕರ ಸ್ಥಳವಾಗಿದ್ದ ಪರೇಲ್‌ನಲ್ಲಿ. ಅಂಬೇಡ್ಕರ್ ಅವರು ಎರಡನೆಯ ಪತ್ರಿಕೆ 'ಬಹಿಷ್ಕೃತ ಭಾರತ'ವನ್ನು ಮಹಾಡ್ ಸತ್ಯಾಗ್ರಹದ ಹೊತ್ತಿನಲ್ಲಿ, ಅಂದರೆ, ಏಪ್ರಿಲ್ 3, 1927ರಲ್ಲಿ ಆರಂಭಿಸಿದ್ದರು. 1927, ಮತ್ತೊಂದು ಕಾರಣಕ್ಕೆ ಚಾರಿತ್ರಿಕ. ಆಗ ಮಹಾರಾಷ್ಟ್ರದ ಪ್ರಮುಖ ವಿದ್ವಾಂಸ ಹಾಗೂ ಸಮಾಜ ಸುಧಾರಕ ಆರ್.ಜಿ. ಭಂಡಾರ್ಕರ್ ಅವರ ಮೊಮ್ಮಗಳು, ಮುಸ್ಲಿಂ ವ್ಯಕ್ತಿಯನ್ನು ವರಿಸಿದ್ದು ವಿವಾದವನ್ನು ಸೃಷ್ಟಿಸಿತ್ತು. ಮರಾಠಿ ದಿನಪತ್ರಿಕೆಗಳು ಇದನ್ನು ಕಟುವಾಗಿ ಟೀಕಿಸಿ ಬರೆದಿದ್ದವು. ಈ ಮಡಿವಂತಿಕೆಯನ್ನು ವಿರೋಧಿಸಿ, ಅಂತರಧರ್ಮೀಯ ವಿವಾಹವನ್ನು ಬೆಂಬಲಿಸಿ ಬಹಿಷ್ಕೃತ ಭಾರತ ಪತ್ರಿಕೆಯಲ್ಲಿ ಸಂಪಾದಕೀಯ ಬರೆದ ಅಂಬೇಡ್ಕರ್, ಹಿಂದೂ–ಮುಸ್ಲಿಂ ಸಮುದಾಯಗಳ ನಡುವಿನ ವೈವಾಹಿಕ ಸಂಬಂಧ ಎರಡೂ ಸಮುದಾಯಗಳ ನಡುವಿನ ಸಂಬಂಧವನ್ನು ಗಟ್ಟಿಗೊಳಿಸುತ್ತದೆ ಎಂದು ವಾದಿಸಿದ್ದರು. 1932 ರಲ್ಲಿ ಬ್ರಿಟಿಶರು **Depressed Classes** (ದಲಿತರಿಗೆ ಅಂದಿನ ಬ್ರಿಟಿಶ್ ಆಡಳಿತ ಬಳಸುತ್ತಿದ್ದ ಅಧಿಕೃತ ಪದ)ಗಳಿಗೆ ಪ್ರತ್ಯೇಕ ಚುನಾವಣಾ ಹಕ್ಕನ್ನು ಕಲ್ಪಿಸಿಕೊಡುವ ಸಲುವಾಗಿ ಜಾರಿಗೆ ತರಲಿದ್ದ 'ಕಮ್ಯುನಲ್ ಅವಾರ್ಡ್'ಗೆ ಗಾಂಧಿ ವಿರೋಧದ ಕಾರಣ ಪೂನಾ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ತೆರೆ ಎಳೆದಿದ್ದರು. ಇಂದು ಭಾರತೀಯ ರಾಜಕೀಯ ಚಿಂತನೆಯಲ್ಲಿ ಪ್ರಮುಖ ಕೃತಿ ಎಂದು ಕರೆಯಲ್ಪಡುವ **Annihilation of Caste**(ಜಾತಿ ನಿರ್ಮೂಲನೆ) ಭಾಷಣವನ್ನು 1936ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದರು.




ಗ್ರಾಮ್‌ಶಿ, 1911ರಲ್ಲಿ ಟ್ಯೂರಿನ್ ವಿಶ್ವವಿದ್ಯಾಲಯದಲ್ಲಿ ಆಧುನಿಕ ತತ್ವಶಾಸ್ತ್ರ ವ್ಯಾಸಂಗ ಮಾಡಲು ವಿದ್ಯಾರ್ಥಿವೇತನ ಪಡೆದುಕೊಂಡಿದ್ದರು. 1914ರ ವೇಳೆಗಾಗಲೇ ಸೋಶಿಯಲಿಸ್ಟ್ ಪಾರ್ಟಿಯ ಸದಸ್ಯರಾಗಿ, 'ಇಲ್ ಗ್ರಿಡೊ ಡೆಲ್ ಪೊಪಲೊ' ಹೆಸರಿನ ಸಮಾಜವಾದಿ ಪತ್ರಿಕೆಗೆ ಬರೆಯಲಾರಂಭಿಸಿದ್ದರು. ವಿಶ್ವವಿದ್ಯಾಲಯ ಸೇರುವ ಮುನ್ನ ಅಂತಾರಾಷ್ಟ್ರೀಯ ಸಮಾಜವಾದ ಹಾಗೂ ಸರ್ದಿನಿಯ(ಗ್ರಾಮ್‌ಶಿ ಹುಟ್ಟಿದ್ದು ಸರ್ದಿನೀಯ ಪ್ರಾಂತ್ಯದಲ್ಲಿ) ಪ್ರತ್ಯೇಕತಾವಾದದ ದ್ವಂದ್ವದಲ್ಲಿದ್ದರು. ಆದರೆ, 1915ರಲ್ಲಿ ಅನಾರೋಗ್ಯದ ಕಾರಣ ಪದವಿ ತೊರೆಯುವ ವೇಳೆಗಾಗಲೇ ಸಮಾಜವಾದ ಅವರನ್ನು ಸಂಪೂರ್ಣವಾಗಿ ಆಕರ್ಷಿಸಿಬಿಟ್ಟಿತ್ತು. 1911–1915ರ ನಡುವೆ ವಿಶ್ವವಿದ್ಯಾಲಯದಲ್ಲಿ ಕಳೆದ ವರ್ಷಗಳು ಅವರ ಬೌದ್ಧಿಕ ವಿಕಾಸದ ಕಾಲವಾಗಿತ್ತು. 1916ರ ವೇಳೆಗಾಗಲೇ ಇಟಾಲಿಯನ್ ಸೋಶಿಯಲಿಸ್ಟ್ ಪಾರ್ಟಿಯ ಅಧಿಕೃತ ಧ್ವನಿಯಾಗಿದ್ದ ಅತಿಚಿಟಣು! (ಅಂದರೆ, 'ಎಚ್ಚರ') ಪತ್ರಿಕೆಯ ಪೀಡ್‌ಮೊಂಟ್ ಆವೃತ್ತಿಗೆ ಸಹಸಂಪಾದಕರಾಗಿದ್ದರು. ಈ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಅಂಕಣಕ್ಕೆ ಅಪಾರ ಓದುಗ ವರ್ಗವಿತ್ತು. ಅವರ ಬರೆಹಗಳು ಅಪಾರ ಸಂಚಲನವನ್ನುಂಟು ಮಾಡಿದ್ದವು. ಅವರು ಇಟಲಿಯ ಬಹುದೊಡ್ಡ ಕ್ರಾಂತಿಕಾರಿ ಧ್ವನಿಯಾಗಿ ಬೆಳೆಯಲು ಕೂಡ ಅದೇ ಕಾರಣವಾಯಿತು. 1919ರಲ್ಲಿ ತಮ್ಮ ಕಾಮ್ರೇಡ್‌ಗಳೊಂದಿಗೆ ಸೇರಿ ಖಿಜ ಓಜಿತಿ ಔಡಿಜಜಡಿ ಎಂಬ ಸಮಾಜವಾದಿ ಸಂಸ್ಕೃತಿ ಕುರಿತ ವಾರಪತ್ರಿಕೆಯನ್ನು ಆರಂಭಿಸಿದ್ದರು. ಗ್ರಾಮ್‌ಶಿ, ಈ ಪತ್ರಿಕೆಯನ್ನು ಕ್ರಾಂತಿಯ ದನಿಯಾಗಿ ಬಳಸಿಕೊಂಡಿದ್ದನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕು. ಒಂದು ವರ್ಷಕ್ಕೆ 6000 ಓದುಗರನ್ನು ಹೊಂದಿದ್ದ ಪತ್ರಿಕೆ, ಕೇವಲ ಒಂದೂವರೆ ವರ್ಷಗಳ ಅಂತರದಲ್ಲಿ ದಿನಪತ್ರಿಕೆಯಾಗಿ ಬೆಳೆಯಿತು. ಸೋಶಿಯಲಿಸ್ಟ್ ಪಾರ್ಟಿಯಿಂದ ಹೊರಬಂದ ಅವರು 1921ರಲ್ಲಿ ಸ್ಥಾಪಿಸಿದ ಪಕ್ಷವೇ ಇಟಾಲಿಯನ್ ಕಮ್ಯುನಿಸ್ಟ್ ಪಾರ್ಟಿ. ಅಲ್ಲಿಂದ ಎರಡು ವರ್ಷಗಳ ಕಾಲ ಸೋವಿಯತ್ ಯೂನಿಯನ್‌ನಲ್ಲಿ ಕಳೆದವರು. 1924ರಲ್ಲಿ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದವರು, ಬೆನಿಟೊ ಮುಸೊಲಿನಿಯ ಫ್ಯಾಶಿಸ್ಟ್ ಸರಕಾರದಿಂದ ಶಾಸನಭ್ರಷ್ಟನಾಗಿ 1926ರಲ್ಲಿ ಜೈಲಿಗೆ ದೂಡಲ್ಪಟ್ಟ ಗ್ರಾಮ್‌ಶಿ, 1929–1932ರ ನಡುವೆ 30 ನೋಟ್‌ಬುಕ್‌ಗಳಲ್ಲಿ 3000 ಪುಟಗಳನ್ನೂ ಮೀರುವ ಚರಿತ್ರೆ, ತತ್ವಶಾಸ್ತ್ರ ಹಾಗೂ ಅರ್ಥಶಾಸ್ತ್ರ ಕುರಿತ ಕ್ರಾಂತಿಕಾರಿ ಒಳನೋಟಗಳನ್ನೊಳಗೊಂಡ **Prison Notes** ರಚಿಸಿದರು. ಇದು ಜಗತ್ತಿನ 20ನೇ ಶತಮಾನದ ರಾಜಕೀಯ ತತ್ವಜ್ಞಾನದಲ್ಲಿ ಪ್ರಮುಖ ಪಠ್ಯವೆಂದು ಪರಿಗಣಿಸಲ್ಪಟ್ಟಿದೆ. ಒಟ್ಟಾರೆಯಾಗಿ, ಗ್ರಾಮ್‌ಶಿಯ ರಾಜಕೀಯ ಹಾಗೂ ಸಾಮಾಜಿಕ ಬರೆಹಗಳನ್ನು ಎರಡು ಅವಧಿಗಳಲ್ಲಿ ಗುರುತಿಸಲಾಗುತ್ತದೆ. ಅವರು ಜೈಲಿಗೆ ಹೋಗುವ ಮುನ್ನ (1910–1926) ಬರೆದ ಬರೆಹಗಳು, ಹಾಗೂ ಜೈಲಿನಲ್ಲಿ ಬರೆದ(1929–35) ಬರೆಹಗಳು. ಮೊದಲನೆಯ ಅವಧಿಯ ಬರೆಹಗಳು ರಾಜಕೀಯವಾಗಿ ನಿರ್ದಿಷ್ಟ ಎನ್ನುವಂತಹ ಕ್ರಾಂತಿಕಾರಿ ಚಿಂತನೆಯನ್ನು ಹೊಂದಿದ್ದರೆ, ಎರಡನೆಯ ಅವಧಿಯ ಬರೆಹಗಳು, ಚಾರಿತ್ರಿಕ ಹಾಗೂ ತಾತ್ವಿಕ. ಜೈಲಿನಲ್ಲಿ ಬಹಳ ವರ್ಷಗಳ ಕಾಲ ಅನಾರೋಗ್ಯದಿಂದ ನರಳಿದ ಗ್ರಾಮ್‌ಶಿ, 1937ರಲ್ಲಾಗಲೇ ತಮ್ಮ 46ನೇ ವಯಸ್ಸಿನಲ್ಲಿ ಅಸುನೀಗಿದ್ದರು.

ಅಂಬೇಡ್ಕರ್ ಹಾಗೂ ಗ್ರಾಮ್‌ಶಿ, ತಮ್ಮ ಯೂನಿವರ್ಸಿಟಿ ಬದುಕಿನಲ್ಲಿ ಬೌದ್ಧಿಕವಾಗಿ ಮಾರ್ಕ್ಸ್‌ನನ್ನು ಹೊರತುಪಡಿಸಿ ಕ್ರಮವಾಗಿ ಅಮೆರಿಕಾದ ತತ್ವಜ್ಞಾನಿ ಜಾನ್ ಡ್ಯೂಯಿ ಹಾಗೂ ಇಟಾಲಿಯನ್ ತತ್ವಜ್ಞಾನಿ ಬೆನೆಡಿಟ್ಟೊ ಕ್ರೋಚೆಯಿಂದ ಪ್ರಭಾವಿತರಾಗಿದ್ದರೆಂಬುದನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಲೇಬೇಕು.

**ಅಂಬೇಡ್ಕರ್ ಹಾಗೂ ಗ್ರಾಮ್‌ಶಿಯ ದಲಿತ/ಸಬಾಲ್ಟ್ರನ್**

ಗ್ರಾಮ್‌ಶಿಯ **"philosophy of praxis"**(ಆಚರಣಾ ತತ್ವಜ್ಞಾನ?)ಅನ್ನು ರೂಪಿಸಿದ್ದು ಮೂರು ಮುಖ್ಯ ಪರಿಕಲ್ಪನೆಗಳು: ಗ್ರಾಮ್‌ಶಿಯ ಮಾರ್ಕ್ಸ್‌ವಾದದಲ್ಲಿ ಐಡಿಯಾಲಜಿ(ಇದನ್ನು ಕನ್ನಡದಲ್ಲಿ ಸಿದ್ಧಾಂತ, ತತ್ವವಾದ, ಚಿಂತನಾಮಾರ್ಗ, ವಿಚಾರ ಪರಂಪರೆ ಎಂದು ಭಾಷಾಂತರಿಸಿಕೊಳ್ಳುತ್ತಾರೆ. ನಾನು 'ಸಿದ್ಧಾಂತ' ಎಂಬ ಅರ್ಥವನ್ನು ಉಳಿಸಿಕೊಂಡಿದ್ದೇನೆ) ಪರಿಕಲ್ಪನೆ, ಯಜಮಾನಿಕೆಯ ಪರಿಕಲ್ಪನೆ ಹಾಗೂ ಸಾವಯವ ಚಿಂತಕನ ಪರಿಕಲ್ಪನೆ.

ಗ್ರಾಮ್‌ಶಿ, **Prison Note**ನಲ್ಲಿ ನೀಡಿದ **cultural hegemony** ('ಸಾಂಸ್ಕೃತಿಕ ಯಜಮಾನಿಕೆ'ಎಂಬ ಕನ್ನಡಭಾಷಾಂತರ ಚಾಲ್ತಿಯಲ್ಲಿದೆ). ಈ ಪರಿಕಲ್ಪನೆ ಮುಂದೆ ಜಗತ್ತಿನೆಲ್ಲೆಡೆ ಬಂಡವಾಳಶಾಹಿ ಪ್ರಭುತ್ವವನ್ನು ಟೀಕಿಸಲು ಕ್ರಾಂತಿಕಾರಿ ಬೌದ್ಧಿಕ ಅಸ್ತ್ರವಾಗಿದ್ದು ಈಗ ಚಾರಿತ್ರಿಕ. ಈ ಪರಿಕಲ್ಪನೆಯಿಂದ ಹೊರಹೊಮ್ಮಿದ್ದೇ 'ಸಬಾಲ್ಟ್ರನ್.'ಗ್ರಾಮ್‌ಶಿ ಈ ಪದವನ್ನು ಕೈಗಾರಿಕ ಬಂಡವಾಳಶಾಹಿ ವ್ಯವಸ್ಥೆಗೊಳಪಟ್ಟ ರೈತರಿಗೆ ಉಪಯೋಗಿಸಿದ್ದರು. ಆದರೆ, ಇಂದು ಕೆಳಸ್ತರದ ಯಾವುದೇ ವ್ಯಕ್ತಿ, ಗುಂಪು ಅಥವಾ ಜನಾಂಗ, ಲಿಂಗ, ಧರ್ಮ, ಇತ್ಯಾದಿಗಳಿಗೆ ಬಳಸಬಹುದಾಗಿದೆ. ಮಾರ್ಕ್ಸ್‌ವಾದಿ ತತ್ವಜ್ಞಾನದಲ್ಲಿ 'ಸಾಂಸ್ಕೃತಿಕ ಯಜಮಾನಿಕೆ'ಎಂದರೆ, ಸಾಂಸ್ಕೃತಿಕವಾಗಿ ಬಹುತ್ವವನ್ನು ಹೊಂದಿರುವಂತಹ ಸಮಾಜದಲ್ಲಿ ಆಳುವ ವರ್ಗ ತನ್ನ ಪ್ರಾಬಲ್ಯ

ಮರೆಯುತ್ತ ಸಮಾಜ ಸಂಸ್ಕೃತಿಯನ್ನು ತಿರುಚುತ್ತ, ಆಳುವ ವರ್ಗದ ಲೋಕದೃಷ್ಟಿಯೇ ಒಪ್ಪಿತ ಸಾಂಸ್ಕೃತಿಕ ನಡವಳಿಕೆಯಾಗಿಬಿಡುವುದು.

ಗ್ರಾಮ್‌ಶಿಯ ವ್ಯಾಖ್ಯಾನದಂತೆ, ಚಿಂತಕರು (**'intellectual'**ಗೆ 'ಬುದ್ಧಿಜೀವಿ' ಎಂಬ ಪದದ ಬದಲು ಇದನ್ನೇ ಉಳಿಸಿಕೊಂಡಿದ್ದೇನೆ) ಎಂದರೆ, ಕೇವಲ ವಿದ್ವಾಂಸರು ಹಾಗೂ ಕಲಾವಿದರು, ಮಾತ್ರವಲ್ಲ. ಅಥವಾ ಅವರು ಕರೆಯುವಂತೆ "ಸಂಸ್ಕೃತಿಯ ವ್ಯವಸ್ಥಾಪಕರು" ಮಾತ್ರವಲ್ಲ. ಸಮಾಜದ ಮೇಲೆ "ತಾಂತ್ರಿಕ" ಅಥವಾ "ತಿಳಿವಳಿಕೆ" ಸಾಮರ್ಥ್ಯವನ್ನು ಚಲಾಯಿಸುವ ಕಾರ್ಯನಿರ್ವಾಹಕರೂ ಇದ್ದಾರೆ. ಅದರಲ್ಲಿ ಆಡಳಿತಗಾರರು, ಅಧಿಕಾರಿವರ್ಗ, ಕೈಗಾರಿಕಾ ನಿರ್ವಾಹಕರು, ರಾಜಕಾರಣಿಗಳು, ಹಾಗೂ ಈ ಮೊದಲೇ ಹೇಳಿದ " "ಸಂಸ್ಕೃತಿಯ ವ್ಯವಸ್ಥಾಪಕರು" ಸೇರಿದ್ದಾರೆ. ಇದನ್ನು ಮತ್ತಷ್ಟು ವಿಸ್ತರಿಸಿ ಸಮತಲ ಹಾಗೂ ಲಂಬ ಚಿಂತಕರು ಎಂದು ವಿಂಗಡಿಸುತ್ತಾನೆ. ಅಲ್ಲಿಗೆ ಹೋಗದೆ, ಕೇವಲ ಸಾವಯವ ಚಿಂತಕ ಯಾರು ಎಂಬುದನ್ನು ಪಾರಂಪರಿಕ ಚಿಂತಕನಿಗೆ ಎದುರಾಗಿ ವಿವರಿಸಿಕೊಂಡು ಮುಂದೆ ಹೋಗಬಹುದು. ಪಾರಂಪರಿಕ ಚಿಂತಕರೆಂದರೆ, ತಮ್ಮ ಪರಂಪರೆ ಹಾಗೂ ಹಿಂದಿನ ಚಿಂತಕರೊಂದಿಗೆ ನಂಟುಳ್ಳವರು, ಹಾಗೂ ಆರ್ಥಿಕ ಸಂರಚನೆಯೊಂದಿಗೆ ನೇರವಾಗಿ ನಂಟಿಲ್ಲದಿರುವವರು. ಯಾವುದೇ ಸಾಮಾಜಿಕ ವರ್ಣ, ವರ್ಗ ಸಂಕಥನ ಹಾಗೂ ರಾಜಕೀಯ ಸಂಕಥನದ ತಳಹದಿ ಇಲ್ಲದವರು. ಸಾವಯವ ಚಿಂತಕರು, ನೇರವಾಗಿ ಆರ್ಥಿಕ ಸಂರಚನೆಯೊಂದಿಗೆ ನಂಟುಳ್ಳವರು, ಹಾಗಾಗಿಯೇ, "ಆರ್ಥಿಕ ಉತ್ಪಾದನೆಯ ಅತ್ಯಾವಶ್ಯಕ ಕಾರ್ಯವನ್ನು ಪೂರೈಸುವ ಪ್ರತಿಯೊಂದು ಸಾಮಾಜಿಕ ಗುಂಪು" ಸಾವಯವ ಚಿಂತಕನನ್ನು ಸೃಷ್ಟಿಸುತ್ತದೆ. ಸಾವಯವ ಚಿಂತಕನೊಬ್ಬ "ತನ್ನ ವರ್ಗ ಏಕರೂಪತೆ ಹಾಗೂ ಅದರ ಕಾರ್ಯದ ಅರಿವನ್ನು ಆರ್ಥಿಕ ಕ್ಷೇತ್ರದಲ್ಲಿ ಹಾಗೂ ಸಾಮಾಜಿಕ ಹಾಗೂ ರಾಜಕೀಯ ಮಟ್ಟಗಳಲ್ಲಿ ನೀಡುತ್ತಾನೆ."ಗೋಪಾಲ ಗುರು ಅವರು ಗುರುತಿಸುವ ಹಾಗೆ, ಅಂಬೇಡ್ಕರ್ "ಬ್ರಾಹ್ಮಣ ಯಜಮಾನಿಕೆ" ಹಾಗೂ "ವಸಾಹತುಶಾಹಿ ಆಧುನಿಕತೆ" ನಡುವೆ ಸಿಕ್ಕಿಹಾಕಿಕೊಂಡಿದ್ದರಿಂದಾಗಿ, ಸಾವಯವ ಚಿಂತಕನಾಗಿ ಬೆಳೆಯುವುದು ಅಸಾಧ್ಯದ ಮಾತಾಗಿತ್ತು. ಅಂಬೇಡ್ಕರ್ ಸಾಧನೆಯನ್ನು ಮೇಲ್ಜಾತಿಗಳೆಂದು ಕರೆದುಕೊಳ್ಳುವವರು 'ನಿರಾಕರಣ'ದ ಮೂಲಕವೇ ಗುರುತಿಸಿದ್ದರಿಂದಾಗಿ 'ಸಾವಯವ ಚಿಂತಕ'ನಾಗಲು ಸಾಧ್ಯವಾಗದಿದ್ದರೂ, ಅಂಬೇಡ್ಕರ್, 'ದೇವಾಲಯ ಪ್ರವೇಶದ ಹಕ್ಕು' ಮುಂತಾದವುಗಳ ಮೂಲಕ ಜಾತಿವ್ಯವಸ್ಥೆಗೆ ದಲಿತರ ಒಮ್ಮತಾಭಿಪ್ರಾಯವನ್ನು ಬುಡಮೇಲು ಮಾಡುವಲ್ಲಿ ಯಶಸ್ವಿಯಾಗಿದ್ದರು.



ಅಸ್ಪೃಶ್ಯರಿಗೆ 'ದಲಿತ' ಎಂಬ ಪದವನ್ನು ಸಮಾಜ ಸುಧಾರಕ ಜ್ಯೋತಿಬಾ ಫುಲೆ ಅವರು ಮೊದಲು ಬಳಸಿದ್ದರಾದರೂ, ಅದಕ್ಕೆ ದೊಡ್ಡ ತಾತ್ವಿಕ ತಳಹದಿ ಹಾಗೂ ರಾಜಕೀಯ ಗುರುತನ್ನು ನೀಡಿದವರು ಅಂಬೇಡ್ಕರ್ ಎಂಬುದು ಇಂದು ನಿರ್ವಿವಾದ. ಅದನ್ನು ಅವರು ಮಾಡಿದ್ದು ಕಾಂಗ್ರೆಸ್, ಮುಸ್ಲಿಂ ಲೀಗ್ ಹಾಗೂ ಆರ್‌ಎಸ್‌ಎಸ್ ಪ್ರತಿಪಾದಿಸುತ್ತಿದ್ದ ರಾಷ್ಟ್ರೀಯತಾವಾದದಕ್ಕೆ ವಿರುದ್ಧವಾದ ಸಿದ್ಧಾಂತದ ಪ್ರತಿಪಾದನೆಯ ಮೂಲಕ. ಅದೆಂದರೆ, ಜಾತಿ ಹಾಗೂ ಅಸ್ಪೃಶ್ಯತೆ ನಿರ್ಮೂಲನೆ ಮೂಲಕ ತರಬಹುದಾದ ಸಮಾಜೋ–ಆರ್ಥಿಕ ಹಾಗೂ ರಾಜಕೀಯ ಪರಿವರ್ತನೆ. ಇದರ ವಿಸ್ತೃತ ಚರ್ಚೆಯನ್ನು ಅವರ **Annihilation of Caste** ಕೃತಿಯಲ್ಲಿ ಕಾಣಬಹುದು. 1936ರಲ್ಲೇ **Independent Labour Party** ಯ ಸ್ಥಾಪನೆ ಮೂಲಕ ದಲಿತರು ಹಾಗೂ ಬಹುಜನ ಸಮುದಾಯಗಳನ್ನು ಒಗ್ಗೂಡಿಸುವ ಅವರ ಪ್ರಯತ್ನ ವಿಫಲವಾಗಿತ್ತು. ಆದರೆ, ದಲಿತರು ಹಾಗೂ ಇತರ ಕೆಳಸ್ತರಗಳ ಸಮಸ್ಯೆಗಳಿಗೆ ನಿಜ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುವುದು ಮೈತ್ರಿ ಹಾಗೂ ಬಲವನ್ನು ಒಗ್ಗೂಡಿಸುವ ಮೂಲಕ ಎಂಬ ಅರಿವು ಅವರಲ್ಲಿದ್ದದ್ದೇ ಅವರನ್ನು ಒಬ್ಬ ಸಮಗ್ರ ಚರಿತ್ರೆಕಾರನಾಗಿಸಿತು ಎಂದು ಕೊಸಿಮೊ ಜೀನ್ ಹೇಳುತ್ತಾರೆ.

ಯಾರೇ ಆದರೂ ಕೇಳಬಹುದಾದ ಮೊದಲ ಪ್ರಶ್ನೆ, 'ಕೆಳಸ್ತರತೆಯ ಬಗ್ಗೆ ಗ್ರಾಮ್‌ಶಿ ಹಾಗೂ ಅಂಬೇಡ್ಕರರನ್ನು ಒಟ್ಟಾಗಿ ಏಕೆ ಚರ್ಚಿಸಬೇಕು'ಎಂಬುದು. ಈ ಸಾಮಾನ್ಯ ಪ್ರಶ್ನೆಯನ್ನೆತ್ತಿಕೊಂಡೇ ಕೊಸಿಮೊ ಜೀನ್ ತಮ್ಮ ಪುಸ್ತಕದ ಆರಂಭದಲ್ಲಿ ಹೀಗೆ ಉತ್ತರಿಸುತ್ತಾ ಹೋಗುತ್ತಾರೆ. ಅವರಿಗೆ ಮೊದಲು ಸಿಗುವ ಉತ್ತರ, ಚರಿತ್ರೆಗೆ ಸಂಬಂಧಿಸಿದ್ದು. ಗ್ರಾಮ್‌ಶಿಯ **integral history** (ಸಮಗ್ರ ಅಥವಾ ಅಖಂಡ ಚರಿತ್ರೆ)ಯನ್ನು ದಕ್ಷಿಣ ಏಶಿಯಾ ಸಂದರ್ಭಕ್ಕೆ ಅನ್ವಯಿಸುವುದಾದರೆ, ಅಂಬೇಡ್ಕರ್ ಹಾಗೂ ದಲಿತರು ಅವರಿಗೆ ಹೆಚ್ಚು ಪ್ರಸ್ತುತವೆನಿಸುತ್ತಾರೆ. ಅಂಬೇಡ್ಕರ್ ಹಾಗೂ ಗ್ರಾಮ್‌ಶಿ ಚಿಂತನೆ ನಡುವಿನ ಸಾಮ್ಯತೆಯನ್ನು ಅವರು ಗುರುತಿಸುವುದು ಹೀಗೆ:

1. ಕೆಳಸ್ತರತೆಯ ಚಾರಿತ್ರಿಕ ಹಾಗೂ ರಾಜಕೀಯ ಆಯಾಮಗಳು, ನಾಯಕರು ಹಾಗೂ ಚಿಂತಕರ ಪಾತ್ರ ಇಬ್ಬರಿಗೂ ಮಹತ್ವದ್ದಾಗಿತ್ತು.
2. ದಕ್ಷಿಣ ಏಶಿಯಾದ ಸಮಾಜಗಳಲ್ಲಿ ಅಸ್ಪೃಶ್ಯರು/ದಲಿತರ ಸ್ಥಾನಮಾನವು ಗ್ರಾಮ್‌ಶಿ ವಿವರಿಸಿದ್ದ ಸಬಾಲ್ಟ್ರನ್‌ಗಳ ಚಾರಿತ್ರಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಲಕ್ಷಣಗಳನ್ನ ಬಹುತೇಕ ಹೊಂದಿರುವುದು.
3. ಅಂಬೇಡ್ಕರ್ ಅವರ ಅಸ್ಪೃಶ್ಯತೆಯ ಅನುಭವದ ಚರಿತ್ರೆಯ ಓದು, ಸಬಾಲ್ಟ್ರನ್‌ಗಳು ಚರಿತ್ರೆಯಲ್ಲಿ ಬಿಟ್ಟಿರುವ ಚಿಂತನೆಗಳಿಗೆ ಸ್ಪಷ್ಟ ಉದಾಹರಣೆಯನ್ನು ಒದಗಿಸುವುದಲ್ಲದೆ, ಗ್ರಾಮ್‌ಶಿಯ ಸಮಗ್ರ ಚರಿತ್ರೆಕಾರನಿಗೆ ಅತ್ಯಾವಶ್ಯಕವಾಗಿಬೇಕಾಗಿದೆ.
4. ದಕ್ಷಿಣ ಏಶಿಯಾದಲ್ಲಿ ಗ್ರಾಮ್‌ಶಿ ಚಿಂತನೆಯು **Subaltern Studies** ಯೋಜನೆಗೆ ಸ್ಫೂರ್ತಿ ನೀಡಿತಾದರೂ, ಅಂಬೇಡ್ಕರ್ ಹಾಗೂ ಇತರೆ ದಲಿತ ನಾಯಕರು ಒದಗಿಸಿದ್ದ ಸ್ಥಳೀಯ ಚಿಂತನೆಯನ್ನು ಹೊಂದಿರದ ಕಾರಣ, ಸಂಪೂರ್ಣ ಸಾಮರ್ಥ್ಯವನ್ನು ವಿನಿಯೋಗಿಸಿಕೊಳ್ಳಲಾಗಲಿಲ್ಲ. (ಮಾರ್ಕ್ಸ್‌ವಾದಿ ಚರಿತ್ರೆಕಾರರಾದ ರಣಜಿತ್ ಗುಹಾ ರೂಪಿಸಿದ ಈ **Subaltern Studies Group,** ಚರಿತ್ರೆಯನ್ನು ಕೆಳಗಿನಿಂದ ಕಟ್ಟುವ ಮಹತ್ವಾಕಾಂಕ್ಷೆಯನ್ನು ಹೊಂದಿತ್ತು. ಅದಕ್ಕಾಗಿ ವಸಾಹತೋತ್ತರ ಹಾಗೂ ಸಾಮ್ರಾಜ್ಯಶಾಹಿಯೋತ್ತರ ಸಮಾಜಗಳಲ್ಲಿನ ಸಾಮಾಜಿಕ ಚಳವಳಿಗಳಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿತ್ತು. ದೀಪೇಶ್ ಚಕ್ರವರ್ತಿ, ಗ್ಯಾನೇಂದ್ರ ಪಾಂಡೆ, ಪಾರ್ಥ ಚಟರ್ಜಿ, ಗಾಯತ್ರಿ ಚಕ್ರವರ್ತಿ ಸ್ಪಿವ್ಯಾಕ್, ಮುಂತಾದವರು ಈ ಗುಂಪಿನ ಪ್ರಮುಖ ಸದಸ್ಯರಾಗಿದ್ದರು.ಈ ಗುಂಪಿನ ಚಿಂತನೆ ಎಷ್ಟೇ ಉದಾತ್ತವಾಗಿದ್ದರೂ, ಬಹುತೇಕರುಬ್ರಾಹ್ಮಣರು. ಅದರಲ್ಲೂ ವಿಶೇಷವಾಗಿ ಬೆಂಗಾಲಿ ಬ್ರಾಹ್ಮಣರು ಎಂಬುದನ್ನು ಗಮನಿಸಬೇಕು.)
5. ಗ್ರಾಮ್‌ಶಿ ಮತ್ತು ಅಂಬೇಡ್ಕರ್, ಸಮಕಾಲೀನರಾಗಿದ್ದ ಕಾರಣ, ತಮ್ಮ ರಾಜಕೀಯ ಚಿಂತನೆಯನ್ನು ಅಂತಾರಾಷ್ಟ್ರೀಯ, ನಿರ್ಣಾಯಕ ಸಂದರ್ಭಗಳಲ್ಲಿ ಬೆಳೆಸಿಕೊಂಡರು, ಹಾಗೂ ತಾವು ಪರಿಹಾರ ಸೂಚಿಸುವಾಗ ದೊಡ್ಡ ಪರಿಪ್ರೇಕ್ಷ್ಯವನ್ನು(ಅಂತಾರಾಷ್ಟ್ರೀಯ ಕಾನೂನು ಹಾಗೂ ಜನಾಶ್ವಿಕೆ) ಗಮನದಲ್ಲಿಟ್ಟುಕೊಂಡಿದ್ದರು
6. ಗ್ರಾಮ್‌ಶಿ ಹಾಗೂ ಅಂಬೇಡ್ಕರ್, ಕೆಳಸ್ತರತೆ/ಅಸ್ಪೃಶ್ಯತೆಗೆ ತಾತ್ವಿಕ ಚಿಂತನೆ ಹಾಗೂ ಪ್ರಾಪಂಚಿಕ, ರಾಜಕೀಯ ಬದ್ಧತೆಯನ್ನೊಳಗೊಂಡ ಸಂಪೂರ್ಣ ಪ್ರತಿಸ್ಪಂದನೆಯನ್ನು ಅಪೇಕ್ಷಿಸಿದ್ದರು.
7. ಅಂತಾರಾಷ್ಟ್ರೀಯ ಪರಿಕಲ್ಪನೆಗಳಾದ ಸಮಾನತೆ, ನಾಗರಿಕತೆ, ಕಟ್ಟಲೆ, ಜನಾಶ್ವಿಕೆ, ಕಾನೂನು, ಇತ್ಯಾದಿಗಳನ್ನು ರೂಪಿಸಿಕೊಳ್ಳುವ ಹಂತದಲ್ಲಿ ಬಂದೊದಗುವ ಬಿಕ್ಕಟ್ಟುಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕೆಂದರೆ, ಕೆಳಸ್ತರದವರು/ದಲಿತರು ಬಿಕ್ಕಟ್ಟಿನ ಕೇಂದ್ರಕ್ಕೆ ಬರಬೇಕು, ಏಕೆಂದರೆ, ಅವರನ್ನು ಹೊರಗಿಟ್ಟಿರುವುದೇ ಬಿಕ್ಕಟ್ಟನ್ನು ಹೊರಗೆಡುವುತ್ತದೆ ಎಂದು ಬಲವಾಗಿ ನಂಬಿದ್ದರು.
8. ಅಂಬೇಡ್ಕರ್ ಮತ್ತು ಗ್ರಾಮ್‌ಶಿಗೆ, ಧರ್ಮವು ರಾಜಕೀಯದ ಬಹುಮುಖ್ಯ ಆಯಾಮವಾಗಿತ್ತಲ್ಲದೆ, ಸಬಾಲ್ಟ್ರನ್‌ಗಳ ಸ್ವವಿಮೋಚನೆಗೆ ನಿರ್ಣಾಯಕ ಅಂಶವಾಗಿತ್ತು. ಅದಕ್ಕಿಂತಲೂ, ಅವರ ಕಾಲದ ಮಾರ್ಕ್ಸ್‌ವಾದಿ ಹಾಗೂ ಲಿಬರಲ್ ಎರಡೂ ಪ್ರಗತಿಪರ ಚಿಂತನೆಗಳಿಗೆ ಹೋಲಿಸಿದಾಗ, ರಾಷ್ಟ್ರೀಯ ಆಯಾಮವು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆಯೇ ಹೊರತು, ಸಬಾಲ್ಟನ್‌ಗಳ ಸ್ವಾತಂತ್ರ್ಯದ ಸಾರ್ವತ್ರಿಕ ಪರಿಪ್ರೇಕ್ಷೆಗೆ ವಿರುದ್ಧವಾಗಲ್ಲ.


ಕೊಸಿಮೊ ಜೀನ್, ತಮ್ಮ ಸ್ವಂತ ಸಂಶೋಧನೆಯಲ್ಲಿ ಕಂಡುಕೊಂಡ ಸತ್ಯವೇನೆಂದರೆ, **Subaltern Studies Group,** ಗ್ರಾಮ್‌ಶಿ ಚಿಂತನೆಯನ್ನು ಅನ್ವಯಿಸಿಕೊಳ್ಳುವಲ್ಲಿ ಎಷ್ಟೇ ಸ್ಫೂರ್ತಿದಾಯಕವಾದ ಕೆಲಸವನ್ನು ಮಾಡಿದ್ದರೂ, ಆಳವಾಗಿ ಬೇರೂರಿರುವಂತಹ ಕೆಳಸ್ತರತೆಯಾದ ಅಸ್ಪೃಶ್ಯತೆ ಹಾಗೂ ಜಾತಿ–ವರ್ಗ ಸಂಘರ್ಷವನ್ನು ನೇರವಾಗಿ ಎದುರಿಸದೇ ಹೋಯಿತೆನ್ನುವುದು. **Subaltern Studies,** ಜಾತಿ(ಅಥವಾ ಲಿಂಗಭೇದ)ವನ್ನು ನೋಡದ ಕಾರಣದಿಂದಾಗಿಯೇ

(48ನೇ ಪುಟಕ್ಕೆ)



ನವದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕರು, ಒಬ್ಬ ಮುಖ್ಯವಾದ ರಾಜಕೀಯ ವಿಜ್ಞಾನಿಗಳು. ಅವರೊಬ್ಬ ಕವಿ ಕೂಡ 'ಗಾಲಿಬ್ಸ್ ಥಂಬ್ ಅಂಡ್ ಅದರ್ ಪೋಯಮ್ಸ್' ಕವಿತಾ ಸಂಕಲನವನ್ನು ದ ಲಂಡನ್ ಮ್ಯಾಗಜೈನ್ ನವರು 2013ರಲ್ಲಿ ಪ್ರಕಟಿಸಿದ್ದಾರೆ. ಅವರ ಕೃತಿ 'ಲುಕಿಂಗ್ ಫಾರ್ ದ ನೇಷನ್– ಟುವರ್ಡ್ಸ್ ಅನದರ್ ಐಡಿಯಾ ಆಫ್ ಇಂಡಿಯಾ' ಈ ಹೊತ್ತಿನ 'ಹೊಸ ರಾಷ್ಟ್ರ'ದ ಕಲ್ಪನೆಯನ್ನು ಅದ್ಭುತವಾಗಿ ವಿಮರ್ಶಿಸುತ್ತದೆ.

## ಮನಶ್ ಫಿರಾಕ್ ಭಟ್ಟಾಚಾರ್ಜಿ



ಬೆಂಗಳೂರಿನ ಮಹಾರಾಣಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಇತಿಹಾಸ ಸ್ನಾತಕೋತ್ತರ ಹಾಗೂ ಸಂಶೋಧನಾ ಕೇಂದ್ರದ ಸಹಪ್ರಾಧ್ಯಾಪಕರು, 'ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳ ಪಾತ್ರ' ಎನ್ನುವ ವಿಷಯವಾಗಿ ಸಂಶೋಧನೆ ಮಾಡಿದ್ದಾರೆ. ಕರ್ನಾಟಕದ ಇತಿಹಾಸ ಮತ್ತು ಜಾತಿಯ ಸಂಕಥನಗಳು ಇವರ ಆಸಕ್ತಿಯ ಕ್ಷೇತ್ರ.

## ಡಾ. ವೈ ರಮೇಶ್

Email: lt.dr.y.ramesh@gmail.com

ಈ ಲೇಖನವು ಫ್ರಾನ್ಜ್ ಫ್ಯನಾನ್, ಬಿ.ಆರ್. ಅಂಬೇಡ್ಕರ್ ಮತ್ತು ಗಾಂಧಿಯ ಕಲ್ಪನೆಯಲ್ಲಿ 'ಸತ್ಯ' ಮತ್ತು 'ಹಿಂಸೆ'ಯ ಬಗ್ಗೆ ರೂಪುಗೊಳ್ಳುವ ಚಿಂತನೆಗಳನ್ನು ಅರಿಯುವ ಮತ್ತು ಈ ಮೂರು ನೆಲೆಗಳಲ್ಲಿರುವ ಭಿನ್ನತೆ ಮತ್ತು ಸಾಮ್ಯತೆಗಳನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತದೆ. ಈ ಮೂರೂ ಜನ ಚಿಂತಕರು ವಸಾಹತುಶಾಹಿ ಆಳ್ವಿಕೆಯ ವಿರುದ್ಧದ ಸಂಘರ್ಷದ ಹಿನ್ನಲೆಯಲ್ಲಿ ಬರೆದವರು.

ಅಂಬೇಡ್ಕರ್ ಮತ್ತು ಗಾಂಧಿ ಸತ್ಯ ಮತ್ತು ಹಿಂಸೆಯ ನಡುವಿನ ಸಂಬಂಧವನ್ನು 'ಅಹಿಂಸೆ'ಯ ಜೊತೆಗಿನ ಸಂಬಂಧದಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಪ್ರಾಂಜ್ ಫ್ಯನಾನ್‌ಗೆ ಈ ಪ್ರಶ್ನೆ ಎನ್ನುವುದು ಎರಡು ಅಲುಗಿನ ಕತ್ತಿಯ ಹಾಗೆ; ಏಕೆಂದರೆ, ವಸಾಹತುಶಾಹಿ ಎನ್ನುವುದು ಜನಾಂಗೀಯ ದ್ವೇಷದ ದಟ್ಟವಾದ ನೆರಳಿನ ಜೊತೆಯಲ್ಲೇ ರೂಪುಗೊಳ್ಳುತ್ತದೆ. ಮತ್ತೆ ಅಂಬೇಡ್ಕರ್‌ಗೆ, ಅದೊಂದು ಛಿದ್ರವಾಗಿ ಹೋಗಿರುವ ಯುದ್ಧ; ಏಕೆಂದರೆ, ಬಿಳಿಯರ ವಿರುದ್ಧ ನಡೆಯುತ್ತಿದ್ದ ಸಂಘಟಿತ ರಾಷ್ಟ್ರೀಯ ಸಂಘರ್ಷದ ಆಚೆಗೆ, ಜಾತೀಯ ತಾರತಮ್ಯದ ಪ್ರಶ್ನೆಯನ್ನು ವಸಾಹತುಶಾಹಿಗಳ ವಿರುದ್ಧ ಹೋರಾಡುತ್ತಿದ್ದ ತಮ್ಮದೇ ಸಮಾಜದ ಮುಂದೆ ಇಡಬೇಕಾಗಿತ್ತು... ಒಳಗಿನ ಶತ್ರುಗಳು ಮತ್ತು ಹೊರಗಿನ ಶತ್ರುಗಳು. ಎಲ್ಲಾ ರೀತಿಯ ಸರ್ವಾಧಿಕಾರದ ವಿರುದ್ಧ, ಗಾಂಧಿ, 'ಸತ್ಯಾಗ್ರಹಿ'ಯ ಕಲ್ಪನೆಯನ್ನು ಇಡುತ್ತಾರೆ. ಅವರ ಪ್ರಕಾರ, "ಸತ್ಯಾಗ್ರಹಿಯು ಯಾರ ವಿರುದ್ಧ ಹೋರಾಡುತ್ತಿದ್ದಾನೋ, ಆ ವಿರೋಧಿ ಸತ್ಯಾಗ್ರಹಿಯ ದೇಹ ಮತ್ತು ಭೌತಿಕ ಆಸ್ತಿಯ ಮೇಲೆ ಅಧಿಕಾರ ಸಾಧಿಸಬಹುದು, ಆದರೆ ಅವರಿಗೆ ಸತ್ಯಾಗ್ರಹಿಯ ಆತ್ಮದ ಮೇಲೆ ಯಾವ ರೀತಿಯ ಅಧಿಕಾರವನ್ನೂ ಸಾಧಿಸುವುದಕ್ಕೆ ಸಾಧ್ಯವಿಲ್ಲ." ಆದ್ದರಿಂದ ಗಾಂಧಿಯ ಸತ್ಯಾಗ್ರಹಿಯು ಸರ್ವಾಧಿಕಾರದ ಹಿಂಸಾತ್ಮಕ ಅಧಿಕಾರದ ಎದುರು ಆತ್ಮದ ಶಕ್ತಿ ಮತ್ತು ಸತ್ಯದ ಶಕ್ತಿಯನ್ನು ರಾಜಕೀಯ ಅಸ್ತ್ರವಾಗಿ ಬಳಸುತ್ತಾನೆ. ಇದಕ್ಕೆ ವಿರುದ್ಧವಾಗಿ, ಫ್ಯನಾನ್, ಸತ್ಯ ಮತ್ತು ರಾಷ್ಟ್ರೀಯತೆಯ ನಡುವಿನ ಸಂಬಂಧವನ್ನು ಮೊದಲು ಸ್ಪಷ್ಟಪಡಿಸಿಕೊಂಡು, ನಂತರ, ಹಿಂಸೆಯ ಪ್ರಶ್ನೆಯನ್ನು ಬಗೆಹರಿಸಿಕೊಳ್ಳುವುದರ ಕಡೆಗೆ ನೋಡುತ್ತಾರೆ: "ಸತ್ಯದ ಪ್ರಶ್ನೆಯನ್ನು ಕೂಡ ನಾವು ಪರಿಗಣಿಸಬೇಕು; ಪ್ರತಿಯೊಂದು ಕಾಲಘಟ್ಟದಲ್ಲೂ, ಜನ ಸಾಮಾನ್ಯರ ಮನಸ್ಸಿನಲ್ಲಿ, ಸತ್ಯ ಎನ್ನುವುದು ರಾಷ್ಟ್ರೀಯ ವಿಷಯಕ್ಕೆ ಸಂಬಂಧಿಸಿ ಬಹಳ ಮುಖ್ಯವಾದ ಆಸ್ತಿಯಾಗಿದೆ. ಯಾವ ಆತ್ಯಂತಿಕ ಚಿಂತನೆಗಳೂ, ಯಾವ ಪಾವಿತ್ರ್ಯದ ಪ್ರಶ್ನೆಗಳೂ ಕೂಡ ಈ ಸತ್ಯದ ಸ್ಥಾನವನ್ನು ಅಲುಗಾಡಿಸಲಾರವು. ಆದರೆ, ವಸಾಹತುಶಾಹಿ ಆಳ್ವಿಕೆಯಲ್ಲಿ ಸತ್ಯ ಎನ್ನುವುದು ಸದಾ ಅವಸರದಲ್ಲಿರುವ ಸಂಗತಿಯಾಗಿರುತ್ತದೆ. ಇದು ಸ್ಥಳೀಯರನ್ನು ರಕ್ಷಿಸುವುದರ ಜೊತೆಗೆ, ವಸಾಹತುಶಾಹಿಗಳನ್ನು ನಾಶಮಾಡುತ್ತದೆ. ಈ ವಸಾಹತುಶಾಹಿ ಆಳ್ವಿಕೆಯಲ್ಲಿ ಸತ್ಯದ ವರ್ತನೆಗಳೇ ಇಲ್ಲ."


ಫ್ಯನಾನ್‌ಗೆ ವಸಾಹತುಶಾಹಿ ಆಳ್ವಿಕೆಯಲ್ಲಿ ಯಾವುದೇ ರೀತಿಯ ಸತ್ಯದ ವರ್ತನೆಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ವಸಾಹತುಶಾಹಿ ಆಳ್ವಿಕೆಯ ಜೊತೆಗೆ ಎಲ್ಲಾ ರೀತಿಯ ಸಂಬಂಧವನ್ನು ಕಡಿದುಕೊಳ್ಳಬೇಕಾದದ್ದೇ ಸತ್ಯವಾಗಿದ್ದು, ಅಂಥ ಸತ್ಯವೇ ಈಗ ಆತಂಕದಲ್ಲಿದೆ. ಸತ್ಯ ಎನ್ನುವುದು ಫ್ಯನಾನ್‌ಗೆ ಸ್ಥಳೀಯರ ಮಟ್ಟಿಗೆ ಘನತೆಯ ಸಂಗತಿಯೂ ಹೌದು, ವಸಾಹತುಶಾಹಿಗಳ ಜೊತೆಗಿನ ಭಿನ್ನತೆಯ ಸಂಗತಿಯೂ ಹೌದು. ಗಾಂಧಿ ಕೂಡ ಇದೇ ದೃಷ್ಟಿಕೋನವನ್ನು ಹೊಂದಿದ್ದರೂ ಕೂಡ ಫ್ಯನಾನ್‌ಗಿಂತ ಸ್ವಲ್ಪ ಭಿನ್ನವಾಗುತ್ತಾರೆ. ಫ್ಯನಾನ್‌ಗೆ ಸತ್ಯ ಎನ್ನುವುದು ಅತ್ಯಂತ ಆಳವಾಗಿ ರಾಷ್ಟ್ರೀಯತೆಯ ಜೊತೆಗೆ ತಳುಕು ಹಾಕಿಕೊಂಡಿರುತ್ತದೆ. ಆದರೆ, ಗಾಂಧಿಗೆ, ಅದು ರಾಷ್ಟ್ರೀಯತೆಯ ವಿಮರ್ಶೆಯೂ ಹೌದು. ಫ್ಯನಾನ್‌ನ ದೃಷ್ಟಿಯಲ್ಲಿ, ಸತ್ಯ–ಕ್ಕೆ ಒದಗಿದ ಬಿಕ್ಕಟ್ಟಿನಿಂದಾಗಿ ರಾಜಕಾರಣ ಎನ್ನುವುದು ಧಕ್ಕೆಗೆ ಒಳಗಾದರೆ, ಗಾಂಧಿಗೆ ಅದರ ವಿರುದ್ಧವಾದ ಎಂದರೆ, ರಾಜ–ಕಾರಣಕ್ಕೆ ಒದಗಿದ ಬಿಕ್ಕಟ್ಟಿನಿಂದಾಗಿ ಸತ್ಯ–ಕ್ಕೆ ಧಕ್ಕೆ ಒದಗುತ್ತದೆ. ಆದ್ದರಿಂದ ಗಾಂಧಿಗೆ, ಸತ್ಯ ಎನ್ನುವುದು ರಾಜಕಾರಣದ ಮೂಲಕ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ, ವ್ಯಾಖ್ಯಾನಿಸುವುದಕ್ಕೆ ಸಾಧ್ಯವಾಗದ ಸಂಗತಿಯಾಗುವುದರೊಂದಿಗೇ, ಅದು ರಾಜಕಾರಣದೊಳಗಿನ ನೈತಿಕವಾದ ಕ್ರಿಯೆಯೂ ಆಗುತ್ತದೆ. ವಸಾಹತುಶಾಹಿ ಪರಿಣಾಮಗಳನ್ನು ಕುರಿತು ಮಾತನಾಡುವಾಗ, ಗಾಂಧಿಯಂತೆ ಆತ್ಮ ಮತ್ತು ದೇಹದ ಭಿನ್ನತೆಗಳನ್ನು ಫ್ಯನಾನ್ ಪ್ರತಿಪಾದಿಸುವುದಿಲ್ಲ. ಫ್ಯನಾನ್‌ಗೆ, ಸ್ಥಳೀಯರು ತಮ್ಮ ಸಂಪೂರ್ಣ ಅಸ್ತಿತ್ವವನ್ನು, ಎಂದರೆ ಅವರ ಆಸ್ತಿಯನ್ನು ವಸಾಹತುಶಾಹಿ ವ್ಯವಸ್ಥೆಗೆ ಅಡ ಇಟ್ಟಿರುತ್ತಾರೆ. ಗಾಂಧಿಯ ಆಧ್ಯಾತ್ಮಿಕವಾದ ಆತ್ಮ ಮತ್ತು ದೇಹದ ಭಿನ್ನತೆಯ ಆಚೆಗೆ, ಫ್ಯನಾನ್, ವಸಾಹತೀಕರಣಕ್ಕೆ ಒಳಗಾದ ವ್ಯಕ್ತಿಯ ಸ್ಥಿತಿಯನ್ನು ವಿವರಿಸಲು, ಒಂದು ಅಸ್ತಿತ್ವವಾದಿ ಅರ್ಥವನ್ನು ರೂಪಿಸುತ್ತಾರೆ. ವಿವರಿಸಿ ಹೇಳುವುದಾದರೆ, ವ್ಯಕ್ತಿಯ ಆಸ್ತಿ ಮತ್ತು ದೇಹ, ವ್ಯಕ್ತಿಯ ಅರಿವಿಗೆ ಬರುವುದಕ್ಕೂ ಮೊದಲೇ ವಸಾಹತುಶಾಹಿತ್ವದ ವ್ಯಾಪ್ತಿಗೆ ಒಳಗಾಗಿ ಬಿಡುತ್ತದೆ. ಆದರೆ ಗಾಂಧಿಗೆ,



**‘ಗಾಂಧಿ ಮತ್ತು ಫ್ಯನಾನ್‌ಗಿಂತ ಭಿನ್ನವಾದ ಮತ್ತು ರೋಮಾಂಚಕವಾದ ಚಿಂತನೆಗಳನ್ನು ಅಂಬೇಡ್ಕರ್ ಮಂಡಿಸುತ್ತಾರೆ. ಅವರು ಫ್ಯನಾನ್‌ರಂತೆ ಸತ್ಯ ಮತ್ತು ರಾಷ್ಟ್ರೀಯತೆಯ ನಡುವಿನ ಸಂಬಂಧದ ಪ್ರಶ್ನೆಗೆ ಅವರ ಚಿಂತನೆಯ ಆರಂಭಿಕ ಹಂತದಲ್ಲೇ ಮುಖಾಮುಖಿಯಾಗುತ್ತಾರೆ. ಅಂಬೇಡ್ಕರ್‌ಗೆ, ಸತ್ಯ ಎಂದರೆ, ಅದು ಬ್ರಾಹ್ಮಣೀಯ ಯಾಜಮಾನ್ಯದ ಶಕ್ತಿ; ಹಾಗೂ ರಾಷ್ಟ್ರ ಎಂದರೆ, ಜಾತಿವ್ಯವಸ್ಥೆಯಿಂದ ರಚಿತವಾದದ್ದು. ಎರಡರ ತಳಪಾಯವನ್ನೂ ಮೊದಲು ನಾಶ ಪಡಿಸಬೇಕು ಎನ್ನುವುದು ಅಂಬೇಡ್ಕರ್ ಅವರ ವಾದ’.**

ವಸಾಹತುಶಾಹಿತ್ವದ ಅಧೀನತೆಗೆ ಮತ್ತು ಪ್ರಭಾವಕ್ಕೆ ಒಳಗಾಗದೆ ಪ್ರತಿರೋಧವನ್ನು ಒಡ್ಡಬಲ್ಲ ದೊಡ್ಡ ಆಸ್ತಿ ಎಂದರೆ, ವ್ಯಕ್ತಿಯ ಆತ್ಮ.

ಗಾಂಧಿ ಮತ್ತು ಫ್ಯನಾನ್‌ಗಿಂತ ಭಿನ್ನವಾದ ಮತ್ತು ರೋಮಾಂಚಕವಾದ ಚಿಂತನೆಗಳನ್ನು ಅಂಬೇಡ್ಕರ್ ಮಂಡಿಸುತ್ತಾರೆ. ಅವರು ಫ್ಯನಾನ್‌ರಂತೆ ಸತ್ಯ ಮತ್ತು ರಾಷ್ಟ್ರೀಯತೆಯ ನಡುವಿನ ಸಂಬಂಧದ ಪ್ರಶ್ನೆಗೆ ಅವರ ಚಿಂತನೆಯ ಆರಂಭಿಕ ಹಂತದಲ್ಲೇ ಮುಖಾಮುಖಿಯಾಗುತ್ತಾರೆ. ಅಂಬೇಡ್ಕರ್‌ಗೆ, ಸತ್ಯ ಎಂದರೆ, ಅದು ಬ್ರಾಹ್ಮಣೀಯ ಯಾಜಮಾನ್ಯದ ಶಕ್ತಿ; ಹಾಗೂ ರಾಷ್ಟ್ರ ಎಂದರೆ, ಜಾತಿವ್ಯವಸ್ಥೆಯಿಂದ ರಚಿತವಾದದ್ದು. ಎರಡರ ತಳಪಾಯವನ್ನೂ ಮೊದಲು ನಾಶ ಪಡಿಸಬೇಕು ಎನ್ನುವುದು ಅಂಬೇಡ್ಕರ್ ಅವರ ವಾದ. ಜಾತಿವ್ಯವಸ್ಥೆಯಲ್ಲೇ ಇರುವ ಮಲಿನತೆ ಮತ್ತು ಕಳಂಕದ ಕಾರಣದಿಂದ ಮೇಲುಜಾತಿಗಳು ಸತ್ಯದಿಂದ ವರ್ತಿಸುವುದಕ್ಕೆ ಸಾಧ್ಯವಾಗುವುದಿಲ್ಲ; ಇನ್ನೂ ಆತಂಕಕಾರಿಯಾದ ಸಂಗತಿ ಏನೆಂದರೆ, ಯಾವ



ರಾಜಕೀಯದಲ್ಲಿನ ಅವರ ಈ ಸ್ಥಾನಕ್ಕೆ ಧಕ್ಕೆ ಒದಗುತ್ತದೆ” ಎಂದು ಹೇಳುತ್ತಾರೆ. ಅಂಬೇಡ್ಕರ್ ಅವರ ಗಮನಿಸಿದಂತೆ, ಆರಂಭಿಕ ಹಂತದಲ್ಲಿ ಜಾತಿ ವ್ಯವಸ್ಥೆಯನ್ನು ವಿರೋಧಿಸದ ಗಾಂಧಿ, ಸ್ವತಃ ಅವರೇ ಕಟ್ಟುತ್ತಿರುವ ಸತ್ಯದ ಬಗೆಗಿನ ಸಂಕಥನಗಳನ್ನು ಅಪೂರ್ಣವಾಗಿರಿಸುತ್ತಾರೆ. ಅಂಬೇಡ್ಕರ್ ಅವರ ವಾದ ಏನೆಂದರೆ, ವಸಾಹತುಶಾಹಿಗಳ ಆಳ್ವಿಕೆಯ ಹಿಂದಿರುವ ಸತ್ಯ ಮತ್ತು ಅಸತ್ಯವನ್ನು ಕುರಿತು ಅವರಿಗೆ ಮನವರಿಕೆ ಮಾಡಿಕೊಡಲು ಅವರ ವಿರುದ್ಧ ಅತ್ಯಂತ ಉಗ್ರವಾದ ಯುದ್ಧವನ್ನು ಹೂಡಿರುವ ಗಾಂಧಿ ಅಷ್ಟೇ ತೀವ್ರವಾದ ಯುದ್ಧವನ್ನು ಹಿಂದೂ ಜಾತಿವ್ಯವಸ್ಥೆಯ ಬುನಾದಿಗಳ ವಿರುದ್ಧ ಹೂಡಿಲ್ಲ ಎನ್ನುವುದು ಹಾಗೂ ಅವರಿಗೆ ಇದರ ಬಗ್ಗೆ ಒಲವು ಕೂಡ ಇಲ್ಲ ಎನ್ನುವುದು. ಇದು ಅಂಬೇಡ್ಕರ್‌ಗೆ ಒಂದು ದೊಡ್ಡ ದ್ವಂದ್ವವಾಗಿ ಕಾಣುತ್ತದೆ ‘ಅವರು, ಗಾಂಧಿ ನಿರ್ವಹಿಸುತ್ತಿರುವ ಎರಡು ಪಾತ್ರಗಳು ಏನಿವೆ– ಅದು, ಒಬ್ಬ ಸಂತ ಮತ್ತೊಬ್ಬ

# ಸತ್ಯ ಮತ್ತು ಅಹಿಂಸೆಯ ಬಗ್ಗೆ ಅಂಬೇಡ್ಕರ್, ಫ್ಯನಾನ್, ಗಾಂಧಿ

ಸಮುದಾಯಗಳನ್ನು ಅವು ದಮನ ಮಾಡುತ್ತವೆಯೋ, ಅವುಗಳಿಂದಲೂ ಅವರು ಸತ್ಯದ ವರ್ತನೆಯನ್ನು ಅಪೇಕ್ಷಿಸುವುದಿಲ್ಲ. ಅಂಬೇಡ್ಕರ್ ಮಂಡಿಸಲಾರದೇ ಹೋದ ‘ಜಾತಿ ವಿನಾಶ’ ಎಂಬ ಉಪನ್ಯಾಸದಲ್ಲಿ, ಅವರು ಈ ವ್ಯವಸ್ಥೆಯ ಬಗ್ಗೆ ಗಾಂಧಿಯ ಸಮರ್ಥನೆ ಮತ್ತು ಪ್ರತಿಕ್ರಿಯೆಗಳಿಗೆ ಅವರು ಉತ್ತರಿಸುತ್ತಾರೆ. “ಮಹಾತ್ಮರಾಗಿ, ಅವರು ರಾಜಕಾರಣವನ್ನು ಆಧ್ಯಾತ್ಮೀಕರಿಸುವ ಪ್ರಯತ್ನವನ್ನು ಮಾಡುತ್ತಿರಬಹುದು. ಅದರಲ್ಲಿ ಅವರು ಸಫಲರಾಗಿದ್ದಾರೋ ಇಲ್ಲವೋ ಗೊತ್ತಿಲ್ಲ, ಆದರೆ, ಈ ಹೊತ್ತಿನ ರಾಜಕೀಯವಂತೂ ನಿಸ್ಸಂಶಯವಾಗಿ ಅವರನ್ನು ಜನಪ್ರಿಯವಾಗಿಸಿದೆ. ಪೂರ್ಣ ಸತ್ಯವನ್ನು ಸಮಾಜ ಎಂದಿಗೂ ಸಹಿಸಿಕೊಳ್ಳುವುದಿಲ್ಲ ಎಂಬ ಸಂಗತಿ ಒಬ್ಬ ರಾಜಕಾರಣಿಯಾದವನಿಗೆ ತಿಳಿದಿರಬೇಕು; ಆದ್ದರಿಂದ ರಾಜಕಾರಣಿ ಪೂರ್ಣ ಸತ್ಯವನ್ನು ಮಾತನಾಡಬಾರದು, ಅವನು ಹಾಗೇನಾದರೂ ಮಾತನಾಡಿದರೆ, ಅದು ಅವನ ರಾಜಕಾರಣಕ್ಕೇ ಮುಳುವಾಗುತ್ತದೆ.” ಎಂದು ಗಾಂಧಿಯ ವಿರುದ್ಧ ಅಂಬೇಡ್ಕರ್ ವಾಗ್ದಾಳಿಯನ್ನು ಮಾಡುತ್ತಾರೆ. ಅವರ ವಿರೋಧಿ ನೀಡಿದ ‘ಜಾತಿ ವಿನಾಶ’ದ ಕರೆಯನ್ನು ನಿರೋಧಿಸುವುದಕ್ಕೆ ಗಾಂಧಿ ಮುಚ್ಚಿಡುತ್ತಿರುವ “ಪೂರ್ಣ ಸತ್ಯ”ವಾದರೂ ಯಾವುದು? ಅಂಬೇಡ್ಕರ್ ಇದನ್ನೂ ಸ್ಪಷ್ಟಪಡಿಸುತ್ತಾರೆ. “ಜಾತಿ ಮತ್ತು ವರ್ಣವ್ಯವಸ್ಥೆಯನ್ನು ಮಹಾತ್ಮ ಯಾಕೆ ಯಾವಾಗಲೂ ಬೆಂಬಲಿಸುತ್ತಾರೆ ಎಂದರೆ, ಅದನ್ನೇನಾದರೂ ವಿರೋಧಿಸಿದರೆ,

**ಅಂಬೇಡ್ಕರ್ ವಿಶೇಷಾಂಕ**

ರಾಜಕಾರಣಿ’ ಈ ಎರಡೂ ಪಾತ್ರಗಳಲ್ಲಿರುವ ದ್ವಂದ್ವ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಗಾಂಧಿಯ ಒಳಗಿನ ರಾಜಕಾರಣಿ, ಅವರ ಒಳಗಿನ ಸಂತನನ್ನು ಸತ್ಯವಾಗಿ ನಡೆದುಕೊಳ್ಳಲು ಬಿಡುತ್ತಿಲ್ಲ; ಗಾಂಧಿಯ ರಾಜಕಾರಣವು, ‘ಸತ್ಯವನ್ನು ಮಾತ್ರ ನುಡಿಯುತ್ತೇನೆ’ ಎಂದು ಘೋಷಿಸಿಕೊಂಡಿರುವ ಸಂತ ಗಾಂಧಿಯ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಬಿಡುತ್ತಿಲ್ಲ. ಇನ್ನೂ ಮುಂದುವರೆದು, ವಿಡಂಬನಾತ್ಮಕವಾಗಿ ಅಂಬೇಡ್ಕರ್, ಹಿಂದೂತ್ವದ ಚೌಕಟ್ಟಿನಲ್ಲಿ ನಿಂತು ಮಾತನಾಡಿದ ಎಷ್ಟೋ ಸಂತರು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಪ್ರಚಾರ ಮಾಡಿಲ್ಲ ಎಂದೂ ಹೇಳುತ್ತಾರೆ. ಇಷ್ಟೆಲ್ಲಾ ಹೇಳಿದ ನಂತರ, “ಸಂತರನ್ನು ಅವಲಂಬಿಸುವುದು ನಮ್ಮನ್ನು ಸತ್ಯದ ತಿಳಿವಿನತ್ತ ಕೊಂಡೊಯ್ಯುವುದಿಲ್ಲ” ಎಂದು ಹೇಳುತ್ತಾರೆ.

ಅಂಬೇಡ್ಕರ್ ಮತ್ತು ಫ್ಯನಾನ್ ಇಬ್ಬರಿಗೂ ಸತ್ಯ ಎನ್ನುವುದು ಕೇವಲ ಅಧಿಕಾರದ ಎಲ್ಲಾ ನೆಲೆಗಳನ್ನು ಸಂಪೂರ್ಣವಾಗಿ ವಿರೋಧಿಸುವ ಮೂಲಕ ಮಾತ್ರವೇ ನಮ್ಮ ಗ್ರಹಿಕೆಗೆ ದಕ್ಕುವಂಥದ್ದು. ಅದು ಜನಾಂಗೀಯ ದ್ವೇಷವನ್ನು ಪ್ರತಿಪಾದಿಸುವ ವಸಾಹತುಶಾಹಿ ಆಳ್ವಿಕೆ ಮತ್ತು ಪ್ರತ್ಯೇಕತೆಯನ್ನು ಪ್ರತಿಪಾದಿಸುವ ಬ್ರಾಹ್ಮಣೀಯ ನೀತಿಯಗಳನ್ನು ನಿರ್ನಾಮ ಮಾಡುವುದರಿಂದ ಮಾತ್ರ ಸಾಕಾರವಾಗುವಂಥದ್ದು. ಆಗ, ಆತ್ಮದ ಪರಿಕಲ್ಪನೆ ಹಿಂಸೆಯನ್ನು ಅನುಭವಿಸುತ್ತಿರುವ ದೇಹದ ಪರಿಕಲ್ಪನೆಗೆ ಪೂರಕವಾಗಿ ಕೆಲಸ ಮಾಡುತ್ತದೆ. ಗಾಂಧಿ ಚಿಂತನೆಯು ವ್ಯಕ್ತಿಯ ಆತ್ಮದ ಪರಿಕಲ್ಪನೆಯೊಂದಿಗೆ

ಪ್ರಾರಂಭವಾದರೆ, ಅಂಬೇಡ್ಕರ್ ಮತ್ತು ಫ್ಯನಾನ್ ಇಬ್ಬರೂ ಸಮುದಾಯದ ಆತ್ಮದ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಒಂದು ಸಮುದಾಯದ ಚಿಂತನೆಗಳ ಮೂಲಕ ಇನ್ನೊಂದು ಸಮುದಾಯದ ದೇಹ ಮತ್ತು ಆತ್ಮ ಎರಡೂ ಹಿಂಸೆಗೆ ಒಳಗಾಗುವ, ದಮನಕಾರಿ ಚಿಂತನೆಗಳನ್ನು ಮುಂದಿಡುವ ಯಾಜಮಾನೀಯ ಸಮುದಾಯದ ಕಲುಷಿತ ಆತ್ಮದ ಕಲ್ಪನೆ ಅವರಿಗೆ ಮುಖ್ಯವಾಗುತ್ತದೆ. ಈ ಕಲ್ಪನೆಯನ್ನು ಮುಂದಿಡುವುದರ ಜೊತೆಗೇ, ಹಿಂಸೆಗೊಳಗಾದ ದೇಹ ಮತ್ತು ಆತ್ಮಗಳ ವಿಮೋಚನೆಯ ಬೇಡಿಕೆಯನ್ನು ಮುಂದಿಡುತ್ತಾರೆ. ಕೆಲವು ಸಮುದಾಯಗಳ ದೇಹ ಮತ್ತು ಆತ್ಮಗಳು ಹಿಂಸೆಗೆ ಒಳಗಾಗುತ್ತಿವೆ ಎಂದು ಗುರುತಿಸುವುದು ಮತ್ತು ಅದ–ರಿಂದ ಅವುಗಳನ್ನು ವಿಮುಕ್ತಗೊಳಿಸುವುದು ಅಂಬೇಡ್ಕರ್ ಮತ್ತು ಫ್ಯನಾನ್‌ಗೆ ಅತ್ಯಂತ ಮುಖ್ಯವಾದ 'ಸತ್ಯ'. ಇದನ್ನು ಗುರುತಿಸದ, ಗುರುತಿಸಲು ನಿರಾಕರಿಸುವ, ವಿಮುಕ್ತಗೊಳಿಸಲು ಹೋರಾಡದ ಎಲ್ಲವೂ ಅಂಬೇಡ್ಕರ್ ಮತ್ತು ಫ್ಯನಾನ್‌ಗೆ ಪೂರ್ಣವಾದ ಸತ್ಯಗಳಲ್ಲ.




**ಹಿಂಸೆಯ ಆಚೆಗೆ: ಅಹಿಂಸೆಯ ಎರಡು ಚಿಂತನೆಗಳು**

ಈ ಮೂರೂ ಜನ ಚಿಂತಕರು ಸತ್ಯದ ಬಗ್ಗೆ ಮಂಡಿಸಿದ ಚಿಂತನೆಗಳನ್ನು ಅಹಿಂಸೆಯ ಜೊತೆಗೆ ಜೋಡಿಸಿಕೊಂಡರೆ, ಅಷ್ಟೇ ಆಸಕ್ತಿದಾಯಕವಾದ ಮತ್ತೊಂದು ಚಿತ್ರ ಕಂಡುಬರುತ್ತದೆ. ಗಾಂಧಿಗೆ, 'ಸತ್ಯಾಗ್ರಹ'ದ ಕಲ್ಪನೆಯು 'ಅಹಿಂಸೆ'ಯ ತತ್ವದ ಮೇಲೆ ರೂಪುಗೊಳ್ಳುತ್ತದೆ ಹಾಗೂ ಇದು ಒಂದು ಹೊಸ ರಾಜಕಾರಣದ ವಿಧಾನವೂ ಆಗುತ್ತದೆ. ಗಾಂಧಿ ಸತ್ಯಾಗ್ರಹವನ್ನು 'ಸಹಿಷ್ಣತೆಯ ಮೂಲಕ ವಿರೋಧ' ಎಂದು ವ್ಯಾಖ್ಯಾನಿಸುತ್ತಾರೆ. "ವೈಯಕ್ತಿಕವಾಗಿ ಹಿಂಸೆಯನ್ನು ಅನುಭವಿಸುವ ಮೂಲಕ ನಮ್ಮ ಹಕ್ಕುಗಳನ್ನು ಗಳಿಸಿಕೊಳ್ಳುವ ವಿಧಾನ" ಎಂದು ಹೇಳುತ್ತಾ, "ಸ್ವ ಎಂಬುದರ ತ್ಯಾಗ" ಎನ್ನುತ್ತಾರೆ. ಇಲ್ಲಿ ಕೂಡ, ನಾವು ಗಾಂಧಿಯ ಕಲ್ಪನೆಯ ಅಹಿಂಸೆ ಮತ್ತು ಅದರ ಪ್ರಕ್ರಿಯೆಯಲ್ಲಿ ವ್ಯಕ್ತಿ ಅನುಭವಿಸಬೇಕಾದ ಹಿಂಸೆಯ ಉಲ್ಲೇಖಗಳನ್ನು ನೋಡಬಹುದು. ಅಹಿಂಸೆ ಎನ್ನುವುದು, ಗಾಢವಾಗಿ ವೈಯಕ್ತಿಕವಾದದ್ದು ಮತ್ತು ರಾಜಕೀಯದ ವಿಶಾಲವಾದ ವ್ಯಾಪ್ತಿಗೆ ಪ್ರವೇಶಿಸುವ ಮುನ್ನವೇ, ವೈಯಕ್ತಿಕ ಸ್ವಯಂ ನೈತಿಕತೆಯನ್ನು ಕಟ್ಟಿಕೊಳ್ಳುವಂಥದ್ದು.

ಫ್ಯನಾನ್ ಈ ಸಮಸ್ಯೆಯನ್ನು ಇನ್ನೊಂದು ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಸ್ಥಳೀಯರ ದೇಹದ ಮೇಲೆ ಗುರುತನ್ನು ಮೂಡಿಸುವ ಜನಾಂಗೀಯ ಚಿಂತನೆಗಳು ಹಿಂಸೆಯ ಸಂಕಥನಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವುದರಿಂದ, "ವಸಾಹತುಶಾಹಿ ಆಳ್ವಿಕೆಯ ಹಿಂಸೆ ಮತ್ತು ಸ್ಥಳೀಯರ ಪ್ರತಿ–ಹಿಂಸೆ ಎರಡೂ ಪರಸ್ಪರರಿಗೆ ಪ್ರತಿಕ್ರಿಯಿಸುತ್ತಾ ಒಂದು ರೀತಿಯ ಅಸಮಾನ್ಯವಾದ ಸಾಮ್ಯತೆಯನ್ನೂ ಪಡೆದುಕೊಂಡು ಬಿಡುತ್ತವೆ. ಹಿಂಸೆಯ ಈ ಆಳ್ವಿಕೆಯ ಸ್ವರೂಪವು ಅಧೀನಕ್ಕೊಳಗಾದ ದೇಶದ ಗಾತ್ರ, ಪ್ರತಿರೋಧದ ತೀವ್ರತೆಯನ್ನಾಧರಿಸಿ ಭಯಂಕರತೆಯ ಸ್ಥಿತಿಯೂ ಬದಲಾಗುತ್ತಾ ಹೋಗುತ್ತದೆ. ವಸಾಹತು ಆಳ್ವಿಕೆಯು ಹೇರುವ ಹಿಂಸೆಗೆ ಸಮಾನವಾಗಿಯೇ ವಸಾಹತುಗಳಿಗೆ ಅಧೀನವಾದ ಜನರೂ ಸೃಷ್ಟಿಸುತ್ತಾ ಹೋಗುತ್ತಾರೆ. ಜನಾಂಗೀಯವಾದ ವಸಾಹತು ಆಳ್ವಿಕೆಯ ಹಿಂಸೆಯಿಂದ ವಿಮೋಚನೆಗೆ ಸಾಧ್ಯವಾಗುವ ವಿಧಾನಗಳು ಫ್ಯನಾನ್‌ನ ಚಿಂತನೆಗಳಲ್ಲಿ ಕಂಡು ಬರುವುದಿಲ್ಲವಾದ್ದರಿಂದ, ಹಿಂಸೆಯನ್ನು ಸಮತೋಲನಗೊಳಿಸುವ ರೀತಿಗೆ ಅವರು ಸೀಮಿತಗೊಳ್ಳುತ್ತಾರೆ. ಫ್ಯನಾನ್‌ಗೆ ಪ್ರತಿರೋಧದ ಹಿಂಸೆ ಎನ್ನುವುದು ವಸಾಹತುಗಳು ಸ್ಥಳೀಯರ ಮನಸ್ಸಿನೊಳಗೆ ಹುಟ್ಟು ಹಾಕಿದ ಸಂಗತಿಗಳು ಮಾತ್ರವಾಗಿದೆ. ಇನ್ನೂ ಸೂಕ್ಷ್ಮವಾಗಿ ಗಮನಿಸಿದರೆ, ಫ್ಯನಾನ್‌ನ ವಾದವು ಹಿಂಸೆ ಸಹಜ ಎನ್ನುವಂಥ ಸ್ಥಿತಿಯನ್ನು ಜನಾಂಗೀಯ ವಸಾಹತುಶಾಹಿತ್ವ ಸೃಷ್ಟಿಸಿಬಿಡುತ್ತದೆ. ಅದು, ಹಿಂಸೆ ಸಹಜವಾದ ಒಂದು ಪರಿಸರವನ್ನು ಹುಟ್ಟು ಹಾಕುತ್ತದೆ, ಈ ಸಹಜ ತರ್ಕದ ಒಳಗೆ ಸ್ಥಳೀಯರು ಸಿಲುಕಿಕೊಂಡು ಬಿಟ್ಟಿದ್ದು, ಅವರಲ್ಲಿನ ಹಿಂಸಾತ್ಮಕ ಮನೋಭಾವವನ್ನೂ ಅದು ಸಹಜ ಎಂಬಂತೆಯೇ ನೋಡುತ್ತದೆ. ಫ್ಯನಾನ್‌ನಲ್ಲಿ ಹಿಂಸೆಯ ಈ ವರ್ತುಲದಿಂದ ನಿರ್ಗಮಿಸುವ ದಾರಿಗಳಿಲ್ಲ.

ಮೇಲುನೋಟಕ್ಕೆ, ಅಂಬೇಡ್ಕರ್ ಕೂಡ ಫ್ಯನಾನ್ ಅವರಂತೆಯೇ ಬ್ರಾಹ್ಮಣೀಯ ವ್ಯವಸ್ಥೆ, ವಸಾಹತುಶಾಹಿ ವ್ಯವಸ್ಥೆಯಂತೆಯೇ, ಅದು ದಮನಕ್ಕೀಡು ಮಾಡುವ ಸಮುದಾಯಗಳಲ್ಲಿ ಹಿಂಸೆಯನ್ನು ಹುಟ್ಟು ಹಾಕುತ್ತದೆ ಎಂದು ಮಾತನಾಡುತ್ತಿದ್ದಾರೆ ಎಂದು ಅನ್ನಿಸುತ್ತದೆ. ಆದರೆ, ಅಂಬೇಡ್ಕರ್ ಅವರಿಗೆ ಬೌದ್ಧ ಚಿಂತನೆಗಳ ಒಂದು ಹಿನ್ನೆಲೆಯಿದೆ. ಬೌದ್ಧರ ಅಹಿಂಸೆಯ ಕಲ್ಪನೆಯ ಪರಿಚಯ ಇದೆ. ಇದರಿಂದ, 'ಕೊಲ್ಲುವ ಇಚ್ಛೆ' ಮತ್ತು 'ಕೊಲ್ಲುವ ಅಗತ್ಯ'ದ ನಡುವಿನ ವ್ಯತ್ಯಾಸ ಅಂಬೇಡ್ಕರ್‌ಗೆ ಇದೆ. ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯನ್ನು ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ, ಈ ವ್ಯವಸ್ಥೆಯ ಒಳಗಿನ ಅಮಾನುಷವಾದ ದಮನಕಾರಿ ನೀತಿಯು ಕೊಲ್ಲುವ ಇಚ್ಛೆಗೆ ಸಮಾನವಾದದ್ದು ಎಂದು ಮನೋಭಾವನೆಯು ವ್ಯಕ್ತವಾಗುತ್ತದೆ. ಶಾಶ್ವತವಾಗಿ ಎಲ್ಲದರ ಮೇಲೆ ಅಧಿಕಾರವನ್ನು ಉಳಿಸಿಕೊಳ್ಳುವ ಪ್ರಬಲವಾದ ಇಚ್ಛೆಯು ಇತರರ ಮೇಲೆ ಹಿಂಸೆಯನ್ನು ಎಸಗುವಂತೆ ಪ್ರೇರೇಪಿಸುತ್ತದೆ. ಅಂಬೇಡ್ಕರ್ ಅಧಿಕಾರ ಮತ್ತು ಹಿಂಸೆಯ ಬಗ್ಗೆ ತಳೆಯುವ ನಿಲುವಿಗೆ ಫ್ಯನಾನ್ ನಿಸ್ಸಂದೇಹವಾಗಿ ಸಮ್ಮತಿಸುತ್ತಾರೆ. ಜೊತೆಗೆ ಫ್ಯನಾನ್‌ಗೆ ಇವೆರಡರ ನಡುವಿನ ಸಂಬಂಧ ಎನ್ನುವುದು ಇನ್ನೂ ಆಳವಾದ ಸಂಗತಿ. "ಹಿಂಸೆ ಎನ್ನುವುದು ಸರಳವಾದ ಸಂಗತಿಯಲ್ಲ; ಅದು ಅತ್ಯಂತ ಸಂಕೀರ್ಣವಾದುದು ಮತ್ತು ವಿಮೋಚನೆಯ ದಾರಿಗಳು ಕೂಡ ಸುಲಭವಾಗಿ ಕಾಣುವಂಥದ್ದಲ್ಲ". ಹಿಂಸೆ ಸಾಕಾರವಾಗುವುದಕ್ಕೂ ಒಂದು ಮೂಲಭೂತವಾದ ಸ್ಥಿತಿ ಇರುತ್ತದೆ. ಈ ಮೂಲಭೂತ ಸ್ಥಿತಿ, ಯಾವುದೇ ಕಾಲಕ್ಕೂ ಮೂಲಭೂತವಾಗಿಯೇ ಉಳಿಯುವಂತೆ ಅಧಿಕಾರ ನೋಡಿಕೊಳ್ಳುತ್ತಿರುತ್ತದೆ. ಫ್ಯನಾನ್ ಗುರುತಿಸುವ ಕೊನೆಯ ಈ ವಿಷಯಕ್ಕೆ ಅಂಬೇಡ್ಕರ್ ಅವರ ಸಹಮತ ಇದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಜಾತಿವ್ಯವಸ್ಥೆಯನ್ನು ಚಿರಸ್ಥಾಯಿಯಾಗಿಸಲು ಅಳವಡಿಸಿಕೊಂಡಿರುವ ಸಾಮಾಜಿಕ ನೀತಿಗಳ ಬಗ್ಗೆ ಅವರು ಬರೆದ 'ಭಾರತದಲ್ಲಿ ಜಾತಿಗಳು' ಎನ್ನುವ ಪ್ರಬಂಧ ಮತ್ತು 'ಮನುಸ್ಮೃತಿ'ಯನ್ನು ಅವರು ವಿಶ್ಲೇಷಿಸಿದ ರೀತಿ ಎರಡೂ ಈ ವಿಷಯವನ್ನು ಸ್ಪಷ್ಟಪಡಿಸುತ್ತವೆ. ಅಂಬೇಡ್ಕರ್‌ಗೆ "ಇಚ್ಛೆ" ಮತ್ತು "ಅಗತ್ಯ"ದ ನಡುವಿನ ವ್ಯತ್ಯಾಸವು ಸಕ್ರಿಯವಾದ ಹಿಂಸೆ ಮತ್ತು ಸ್ವಯಂ ರಕ್ಷಣೆಯ ನಡುವಿನ ವ್ಯತ್ಯಾಸವನ್ನೂ ಸೂಚಿಸುತ್ತದೆ,

ಅಹಿಂಸೆಯ ಬಗ್ಗೆ ಅಂಬೇಡ್ಕರ್ ಗಮನಿಸುವ ಮತ್ತೊಂದು ಮುಖ್ಯವಾದ ವಿಷಯ ಎಂದರೆ, ಅಹಿಂಸೆ ಎನ್ನುವುದು ಒಂದು ಮೂಲಭೂತವಾದ ತತ್ವವಾಗುವ ಮತ್ತು ನಿಯಮವಾಗುವ ಬುದ್ಧನ ಬೋಧನೆಗಳು. ಅಂಬೇಡ್ಕರ್ ಅವರ ಪ್ರಕಾರ, ಬುದ್ಧ, ಅಹಿಂಸೆಯನ್ನು ಒಂದು ನಿಯಮವಾಗಿ ಮಾಡಲಿಲ್ಲ, ಬದಲಿಗೆ ಒಂದು ತತ್ವವಾಗಿ ಮುಂದಿಟ್ಟರು. "ತತ್ವವು ನಮಗೆ ಸ್ವಾತಂತ್ರ್ಯವನ್ನು ನೀಡುತ್ತದೆ, ನಿಯಮವು ಹಾಗೆ ಮಾಡುವುದಿಲ್ಲ. ನಿಯಮವು ನಿಮ್ಮನ್ನು ಮುರಿಯುತ್ತದೆ ಅಥವ ನೀವು ನಿಯಮವನ್ನು ಮುರಿಯುತ್ತೀರಿ". ಇದು ಗಾಂಧಿಯ ಅಹಿಂಸೆಯ ಕಲ್ಪನೆಗಿಂತ ಸ್ವಲ್ಪ ಭಿನ್ನವಾದುದು. ಗಾಂಧಿಗೆ ಅಹಿಂಸೆ ಎನ್ನುವುದು ಒಂದು ಪರಿಕಲ್ಪನೆ ಮತ್ತು ನಡತೆ; ತತ್ವವೇ ನಿಯಮವಾಗಿ ಬದಲಾಗುವ ಸಂಗತಿ. ಅಂಬೇಡ್ಕರ್ 'ಪರಿಪೂರ್ಣವಾದ ಅಹಿಂಸೆ'ಯಲ್ಲಿ ನಂಬಿಕೆ ಇಟ್ಟಿದ್ದರು, ಅದು, ಕೇವಲ ವೈಯಕ್ತಿಕ ಮಟ್ಟದ ಹಿಂಸೆಯಲ್ಲದೆ, ಸಾಮಾಜಿಕ ಹಿಂಸೆಯ ಬಹಳ ದೊಡ್ಡ ಪ್ರಶ್ನೆಗೆ ಮುಖಾಮುಖಿಯಾಗುತ್ತಿದ್ದರಿಂದ, ಅವರಿಗೆ ಗಾಂಧಿಯ 'ಅಹಿಂಸೆಯ' ಕಲ್ಪನೆಯ ಗ್ರಹಿಕೆ ಮತ್ತು ವ್ಯಾಖ್ಯಾನದಲ್ಲಿ ಒಂದು ಸಾಮಾಜಿಕ ನೈತಿಕತೆಯ ಆಯಾಮ ಕಳೆದುಹೋದಂತೆ ಕಾಣಿಸುತ್ತದೆ; ಆದ್ದರಿಂದ, ಸಾಪೇಕ್ಷ ಹಿಂಸೆಯ ಪ್ರಶ್ನೆಯನ್ನು ಗಾಂಧಿ ಪರಿಣಾಮಕಾರಿಯಾಗಿ ವಿವರಿಸಲಿಲ್ಲ ಎನ್ನುವುದು ಅಂಬೇಡ್ಕರ್ ಅವರ ವಾದ ಮತ್ತು ವಿಷಾದ. □



ಕಾವ್ಯ

# ನವಭಾರತ ನಿರ್ಮಾತೃ

ನವಭಾರತ ಕಟ್ಟಿದ ಬಾಬಾ ಸಾಹೇಬ
ಭವಿಷ್ಯಕ್ಕೆ ಮುನ್ನುಡಿ ಬರೆದಿರುವೆ
ಕಟ್ಟಕಡೆಯ ಆ ದೆವ್ವ ದರಿದ್ರರ
ಜುಟ್ಟಿಗೆ ಮಲ್ಲಿಗೆ ಮುಡಿಸಿರುವೆ

ಅಸಮಾನತೆಯ ವಿಷಸಾಗರವ
ಮಥಿಸಿ ಮಂಥನ ಮಾಡಿರುವೆ
ವಿಷಕಂಠನಾಗಿ ದಶದಿಕ್ಕುಗಳಲು
ಜ್ಞಾನದ ಬಲೆಯನು ಬೀಸಿರುವೆ

ಶುದ್ಧ ಮನಸಿನ ಬುದ್ಧ ಭಕ್ತನೆ
ಅಹಿಂಸೆ ಅಸ್ತ್ರವ ಹಿಡಿದಿರುವೆ
ಕ್ರಾಂತಿ ಕಹಳೆಯ ಮೊಳಗಿಸುತ್ತಲೆ
ಶಾಂತ ಸಮುದ್ರಕೆ ಇಳಿದಿರುವೆ

ಅಬ್ಬರದಲೆಗಳ ಉಬ್ಬರವಿದ್ದರೂ
ಈಜಿದ ದಣಿವನು ಮರೆತಿರುವೆ
ಮನೆಮನೆಗಳಲ್ಲಿ ಕಿಡಿಬೆಂಕಿಹಚ್ಚಿ
ಜ್ವಾಲಾಮುಖಿಯಲ್ಲಿ ಬೆಂದಿರುವೆ
ಕತ್ತಲು ಬಿತ್ತಿ ಬೆಳಕನು ಬೆಳೆದು
ಬಯಲು ಆಲಯದಿ ನಿಂದಿರುವೆ

**ಡಾ. ಎಲ್.ಹನುಮಂತಯ್ಯ**

# ‘ಸ್ವಾತಂತ್ರ್ಯ’ವನ್ನು ಬಂಧಿಸಿರುವ ಸರಪಳಿಗಳು



ಮೂಲ ಬಳ್ಳಾರಿ ಜಿಲ್ಲೆಯವರು; ಕಳೆದ 31 ವರ್ಷಗಳಿಂದ ಕರಾವಳಿಯ ಉಡುಪಿಯಲ್ಲಿ ವಾಸಿಸುತ್ತಿದ್ದಾರೆ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿ, ಮಣಿಪಾಲದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ 40 ವರ್ಷಗಳಿಂದ ಎಡಪಂಥೀಯ–ದಲಿತ–ಮಾನವ ಹಕ್ಕು ಚಳುವಳಿಗಳ ಜೊತೆ ತೊಡಗಿಕೊಂಡಿದ್ದಾರೆ; ಸಿನೆಮಾದಲ್ಲಿ ಆಸಕ್ತಿ ಹೊಂದಿದ್ದು ಕಳೆದ 14 ವರ್ಷಗಳಿಂದ ಉಡುಪಿ ಚಿತ್ರಸಮಾಜದ ಸಂಚಾಲಕರಾಗಿ ನಡೆಸಿಕೊಂಡು ಬರುತ್ತಿದ್ದಾರೆ.

**ಕೆ ಫಣಿರಾಜ್**

**Email: phanikottur@gmail.com**

ಅಂಬೇಡ್ಕರರ ಬರಹ–ಭಾಷಣಗಳಲ್ಲಿ ‘ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ’ ಗಳ ವಿಷಯವು ಜಾತಿವ್ಯವಸ್ಥೆ, ರಾಜಕೀಯ ಪ್ರಜಾಪ್ರಭುತ್ವ, ಸಾಮಾಜಿಕ ಪ್ರಜಾಪ್ರಭುತ್ವ, ಸಂವಿಧಾನದ ರೂಪರೇಖೆ, ಪ್ರಜೆಗಳ ಹಕ್ಕಿನ ಸಂರಕ್ಷಣೆ– ಹೀಗೆ ವಿವಿಧ ಸಂದರ್ಭಗಳ ಚರ್ಚೆಯಲ್ಲಿ ಪ್ರಕಟವಾಗಿರುವುದನ್ನು ಕಾಣುತ್ತೇವೆ. ಈ ಪದಗಳ ಅರ್ಥ ಸರಳವಾಗಿದ್ದು, ಹೆಚ್ಚಿನ ವಿವರಣೆ–ಟೀಕೂಗಳ ಅವಶ್ಯಕತೆ ಇಲ್ಲವೆನಿಸುತ್ತದೆ. ಆದರೆ, ಸರಳ ಅರ್ಥಕ್ಕೂ ಹೆಚ್ಚಿನದಾದ ಏನಾದರೂ ಈ ಪದಗಳಲ್ಲಿ ಅಡಗಿದೆಯೇ? ಭಿನ್ನ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಬೇಕಾದ ಸೂತ್ರಧಾರಿ ತತ್ವವನ್ನು ಅಡಕವಾದ ದನಿಯಾಗಿ ಇಟ್ಟುಕೊಂಡಿದಿಯೇ? ಈ ಪ್ರಶ್ನೆಗಳನ್ನು ಪಾಂಡಿತ್ಯಕ್ಕಾಗಿ ಅಲ್ಲದೆ, ಅಂಬೇಡ್ಕರರ ವೈಚಾರಿಕತೆಯ ತಾತ್ವಿಕ ಹರವನ್ನು ಅರಿಯಲಿಕ್ಕಾಗಿ ಕೇಳಿಕೊಳ್ಳಬಹುದು; ಅದರಿಂದ ನಮ್ಮ ಸಾಮಾಜಿಕ ಚಳುವಳಿಯ ಅರಿವನ್ನು ಹಿಗ್ಗಿಸಿಕೊಳ್ಳಬಹುದು ಎಂಬ ನಮ್ರತೆಯಲ್ಲಿ ’ಸ್ವಾತಂತ್ರ್ಯ’ ಎಂಬ ಪದದ ಅರ್ಥ ವಿಸ್ತಾರವನ್ನು ಅಂಬೇಡ್ಕರರ ಬದುಕು ಬರಹಗಳ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳುವ ಪ್ರಯತ್ನ ಮಾಡುವೆ.

ಅಂಬೇಡ್ಕರ್ ’ಸ್ಟೇಟ್ಸ್ ಅಂಡ್ ಮೈನಾರಿಟಿಸ್’ [ಇದು ಅಂಬೇಡ್ಕರರ ಕ್ರಾಂತಿಕಾರಿ ಸಂವಿಧಾನದ ರೂಪ ರೇಖೆ ಇರುವ] ಕೃತಿಯಲ್ಲಿ, ರಾಜಕೀಯ ಪ್ರಜಾಪ್ರಭುತ್ವವನ್ನು ಕಟ್ಟಲು ಇರಲೇಬೇಕಾದ ನಾಲ್ಕು ಗುಣಗಳನ್ನು ಹೀಗೆ ಪಟ್ಟಿಮಾಡಿದ್ದಾರೆ:

(1) ತನ್ನ ಬಾಳ್ವೆ ಹೇಗಿರಬೇಕು ಎಂದು ತೀರ್ಮಾನಿಸುವ ಹಕ್ಕು ಆಯಾ ವ್ಯಕ್ತಿಗೆ ಮಾತ್ರ ಇರಬೇಕು

(2) ಯಾವ ಕಾರಣಕ್ಕೂ ಕಿತ್ತುಕೊಳ್ಳಲಾಗದ ಕೆಲವು ಹಕ್ಕುಗಳನ್ನು ಸಂವಿಧಾನವು ವ್ಯಕ್ತಿಗೆ ಬೇಷರತ್ತಾಗಿ ನೀಡಬೇಕು

(3) ಮತ್ತಿನ್ನ್ಯಾವುದೇ ಸವಲತ್ತು ಪಡೆಯುವುದಕ್ಕೆ ವ್ಯಕ್ತಿಯು ತನ್ನ ಸಾಂವಿಧಾನಿಕ ಹಕ್ಕನ್ನು ಬಿಟ್ಟು





**‘ತಮ್ಮ ಅನುಭವ ಕಥನ ಗುಚ್ಛವಾದ ’ವೇಟಿಂಗ್ ಫಾರ್ ವೀಸಾದಲ್ಲಿ’ ಅಂಬೇಡ್ಕರ್, ಆ ಅಸಹಾಯಕತೆಯಿಂದಾಗಿ ತಾನು ’ಬಿಕ್ಕಿ ಬಿಕ್ಕಿ ಅತ್ತೆ’ ಎಂದು ಹೇಳಿಕೊಳ್ಳುತ್ತಾರೆ. ಇಲ್ಲಿ ’ಬಿಕ್ಕಿ ಬಿಕ್ಕಿ ಅತ್ತೆ’ ಎಂಬುದು ಅತಿನಾಟಕೀಯ ಗದ್ಯವಲ್ಲ, ವಿವರಿಸಲು ಯಾವ ಭಾಷೆಯೂ ಇರದೆ ನೊಂದವನನೊಬ್ಬನ ಆಳವಾದ ನೋವಿನ ಸಂವೇದನೆ ಎನ್ನುವುದು ಅಂಬೇಡ್ಕರರ ಬರವಣಿಗೆಯ ನಿಖರತೆ ಗೊತ್ತಿರುವವರಿಗೆಲ್ಲವೂ ಅರಿವಾಗುವಂತಹುದು. ಆ ಕಥನಾ ಗುಚ್ಛವೇ ವಿಶಿಷ್ಟವಾದದ್ದು–ಅಲ್ಲಿರುವ ಎಲ್ಲಾ ಆರು ಘಟನಾ ನಿರೂಪಣೆಗಳೂ ಕೈಯಲ್ಲಿ ಕಾಸಿದ್ದು ಸಾರ್ವಜನಿಕ ಸೌಲಭ್ಯ ಪಡೆಯಲಾಗದ, ನೌಕರಿ ಇದ್ದು ಗೌರವಯುತವಾಗಿ ಕೆಲಸ ಮಾಡಲಾಗದ, ಗೆಳೆಯರ ಜೊತೆ ವಿಹರಿಸುವ ಯೌವನೋತ್ಸಾಹವಿದ್ದೂ ವಿಹರಿಸಲಾಗದ, ಸೌಲಭ್ಯವಿದ್ದು ವೈದ್ಯಕೀಯ ಶುಶ್ರೂಷೆ ಪಡೆಯಲಾಗದ– ’ದಲಿತರ’ ಬದುಕಿನ ಅಸಹಾಯಕತೆಯ ಸಂವೇದನೆಯ ಗದ್ಯ ಭಾಷೆಯ ನಿರೂಪಣೆಗಳು’**

ಕೊಡಬೇಕು ಎಂಬ ಪೂರ್ವ ಷರತ್ತು ಹೇರಕೂಡದು
(4) ಪ್ರಭುತ್ವವು ಖಾಸಗಿ ಸಂಘ ಸಂಸ್ಥೆಗಳಿಗೆ ವ್ಯಕ್ತಿಯ ಹಕ್ಕುಗಳನ್ನು ನಿಯಂತ್ರಿಸುವ ಅಧಿಕಾರ ನೀಡಕೂಡದು.


**(Dr. B.R.Ambedkar: Speeches and writings, Volume1, p 409, GOM Publication)**

ಅಂಬೇಡ್ಕರ್ ವಿಶೇಷಾಂಕ

ಇವು ಸ್ಪಷ್ಟವಾಗಿ ರಾಜಕೀಯ ಪ್ರಜಾಪ್ರಭುತ್ವವು ವ್ಯಕ್ತಿಯ ಸ್ವಾತಂತ್ರ್ಯವನ್ನು ಗುರುತಿಸಿ ರಕ್ಷಿಸುವ ಹೊಣೆಯನ್ನು ತಿಳಿಸುತ್ತದೆ. ಅಂಬೇಡ್ಕರ್ ತಮ್ಮ ಎಲ್ಲ ಬರಹಗಳಲ್ಲೂ, ಸಾಮಾಜಿಕ ಸ್ವಾತಂತ್ರ್ಯ ಇರದೆ, ಯಾವ ರಾಜಕೀಯ ಸ್ವಾತಂತ್ರ್ಯವೂ ಅರ್ಥಹೀನ ಎಂಬ ನಿಖರ ನಿಲುವು ತಳೆದವರು. ಹಾಗಾಗಿ ಅವರು, ಈ ರಾಜಕೀಯ ಸ್ವಾತಂತ್ರ್ಯ ಸಫಲವಾಗಲು ಪ್ರಜಾಪ್ರಭುತ್ವದಲ್ಲಿ ಕೈಗೊಳ್ಳಬೇಕಾದ ಮತ್ತಷ್ಟೂ ನಿಚ್ಚಳವಾದ ಸಾಮಾಜಿಕ ಕ್ರಮಗಳನ್ನು ವಿವರಿಸುತ್ತಾರೆ. ಇದೇ ಕೃತಿಯಲ್ಲಿ ಅವರು ಸಮಾಜದ ಆರ್ಥಿಕ ವ್ಯವಹಾರಗಳನ್ನು ಪ್ರಭುತ್ವವು ಖಾಸಗಿ ಸಂಸ್ಥೆಗಳಿಗೆ ವಹಿಸುವುದು ಸಮಾಜದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಹಿಗ್ಗಿಸುತ್ತದೆ ಎಂಬ ಬಂಡವಾಳಶಾಹಿ ವಾದವನ್ನು ಹೀಗೆ ಪ್ರಶ್ನಿಸುತ್ತಾರೆ:

ಸ್ವಂತದ ಲಾಭಾಸಕ್ತಿಯ ಖಾಸಗಿ ಉದ್ಯಮಗಳ ಹಿಡಿತದಲ್ಲಿರುವ ಸಾಮಾಜಿಕ ಅರ್ಥ ವ್ಯವಸ್ಥೆಯ ಕಾರ್ಯ ವಿಧಾನವನ್ನು ಅಧ್ಯಯನ ಮಾಡುವ ಯಾರಿಗಾದರೂ, ಅದು ಪ್ರಜಾಪ್ರಭುತ್ವದ ಮೂಲ ನೆಲೆಯನ್ನು ಹೇಗೆ ಅಸ್ಥಿರಗೊಳಿಸುತ್ತದೆ ಎಂಬುದು ಅರ್ಥವಾಗದೇ ಇರದು. ತಾವು ಬದುಕಿ ಉಳಿಯುವ ಸಲುವಾಗಿ ಎಷ್ಟು ಜನ ತಮ್ಮ ಸಾಂವಿಧಾನಿಕ ಹಕ್ಕುಗಳನ್ನು ತ್ಯಾಗ ಮಾಡಬೇಕು? ಎಷ್ಟು ಜನ ಖಾಸಗಿ ಉದ್ಯೋಗದಾತರ ಹಂಗಿನ ತೊತ್ತುಗಳಾಗಬೇಕು? ಯಾವುದೇ ನಿರುದ್ಯೋಗಿಗೆ, ನಿನ್ನ ಪ್ರಕಾರ ಮೂಲಭೂತ ಹಕ್ಕುಗಳ ಮೌಲ್ಯವೆಷ್ಟು ಎಂದು ಕೇಳಿ ನೋಡಿ. ನಿರುದ್ಯೋಗಿಯೊಬ್ಬನಿಗೆ ಅಷ್ಟೋ ಇಷ್ಟೋ ಸಂಬಳ, ಅನಿರ್ದಿಷ್ಟಾವಧಿ ದುಡಿಮೆ, ಕಾರ್ಮಿಕ ಸಂಘ ಸೇರುವ ನಿರ್ಬಂಧಗಳಿರುವ ಉದ್ಯೋಗ ಹಾಗು ಅಭಿವ್ಯಕ್ತಿ–ಸಂಘ ರಚನೆ–ಮತಾಚರಣೆಗಳೇ ಮುಂತಾದ ಸ್ವಾತಂತ್ರ್ಯಗಳ ನಡುವೆ ಒಂದನ್ನು ಆಯ್ದುಕೊಳ್ಳಲು ಹೇಳಿದರೆ, ಆತ ಯಾವುದನ್ನು ಆಯ್ದುಕೊಳ್ಳುವನು ಎಂಬುದನ್ನು ಊಹಿಸುವುದು ಕಷ್ಟವಲ್ಲ. ಹಸಿವಿಂದ ಸಾಯುವ ಭಯ, ಸೂರಿಲ್ಲದೆ ಬೀದಿಗೆ ಬೀಳುವ ಭಯ, ಅಷ್ಟೋ ಇಷ್ಟೋ ಮಾಡಿಕೊಂಡಿರುವ ಉಳಿತಾಯವೂ ಕರಗಿ ಹೋಗುವ ಭಯ, ಮಕ್ಕಳನ್ನು ಶಾಲೆ ಬಿಡಿಸಬೇಕಾಗುವ ಭಯ, ದಾನಧರ್ಮಗಳಿಗೆ ಕೈಯೊಡ್ಡುವ ಭಯ, ಅನಾಥ ಶವವಾಗುವ ಭಯಗಳಡಿ ನಲುಗುವವನು ಎದೆ ಎತ್ತಿ ಮೂಲಭೂತ ಹಕ್ಕುಗಳ ಪರವಾಗಿ ನಿಲ್ಲಲು ಹೇಗೆ ಸಾಧ್ಯ? ನಿರುದ್ಯೋಗಿಯು ಹೊಟ್ಟೆಪಾಡಿನ ತೊತ್ತಿನ ಕೆಲಸಕ್ಕಾಗಿ ಹಕ್ಕುಗಳನ್ನು ಬಿಟ್ಟುಕೊಡುವ ಒತ್ತಾಯಕ್ಕೀಡಾಗುತ್ತಾನೆ.

**(Dr. B.R.Ambedkar: Speeches and writings, Volume1, p 410, GOM Publication)**



ಒಂದು ಬಗೆಯ ಸ್ವಾತಂತ್ರ್ಯವು–ಖಾಸಗಿ ಉದ್ಯಮ ವ್ಯವಹಾರದ ಸ್ವಾತಂತ್ರ್ಯವು–ಸಮಾಜದಲ್ಲಿ ಕನಿಷ್ಠ ಬದುಕುಳಿಯುವುದಕ್ಕಾಗಿ, ಜನರನ್ನು ಬೇರೆಲ್ಲ ಸ್ವಾತಂತ್ರ್ಯಗಳನ್ನು ಅಡುವಿಡುವ ಸ್ಥಿತಿಗೆ ನೂಕಿದಲ್ಲಿ ಅದು ಹೇಗೆ ಸ್ವತಂತ್ರ ಮನುಷ್ಯ ಸಮಾಜವಾದೀತು? ಅಂಬೇಡ್ಕರ್ ಈ ಕಾರಣಕ್ಕೆ 'ಕಾರ್ಮಿಕ ಹಕ್ಕುಗಳ ರಕ್ಷಣೆ ಕಾಯ್ದೆ'ಗಾಗಿ ಶ್ರಮಿಸಿದರು. ಆದರೆ, ಭಾರತದ ಜಾತಿ ವ್ಯವಸ್ಥೆಯ ಸಮಾಜದಲ್ಲಿ ಅಷ್ಟು ಮಾತ್ರವೇ ಸಾಲದು ಎಂಬ ಕಹಿ ಸತ್ಯವನ್ನೂ ಅವರು ಅನುಭವಿಸಬೇಕಾಯಿತು.

ಅಂಬೇಡ್ಕರ್ ತಮ್ಮ 'ಅನಿಹಿಲೇಷನ್ ಆಫ್ ಕ್ಯಾಸ್ಟ್' ಕೃತಿಯಲ್ಲಿ' ಹಿಂದುಗಳ ನೈತಿಕ ನಡುವಳಿಕೆಗಳ ಮೇಲೆ ಜಾತಿ ಬೀರುವ ಪ್ರಭಾವವು ಅಸಹ್ಯವಾಗಿದೆ. ಜಾತಿಯು ಸಾರ್ವಜನಿಕ ಸ್ಫೂರ್ತಿಯನ್ನು ಕೊಂದಿದೆ' (ಮೇಲಿನ ಗ್ರಂಥ, ಪುಟ 56). ಈ ಮಾತಲ್ಲಿ ಒಂದು ವಾಸ್ತವಿಕ ಉದಾಹರಣೆಯನ್ನು ಅರ್ಥ ಮಾಡಿಕೊಳ್ಳಬಹುದು. 1940ರ ದಶಕದಲ್ಲಿ ಮುಂಬೈಯಲ್ಲಿ ಬಟ್ಟೆ ಗಿರಣಿಗಳು ಉತ್ಪಾದನೆಯ ಉಚ್ಛ್ರಾಯದಲ್ಲಿದ್ದವು. ಮಾಲಿಕರ ಅಧಿಕಾರದಡಿ ಕಾರ್ಮಿಕರ ಹಕ್ಕುಗಳು ದಮನವಾಗದಂತೆ ಸಾಂಘಿಕವಾಗಿ ಕಾಪಾಡುವ ಕಾರ್ಮಿಕ ಸಂಘಗಳು ಪ್ರಬಲವಾಗಿದ್ದವು. 'ಕಾರ್ಮಿಕ' ಎಂಬ ಗುರುತು, ಮಾಲಿಕರ ಸ್ವತಂತ್ರ ಹರಣದ ಅಧಿಕಾರದ ಎದಿರು ಒಂದು ಆಧುನಿಕ ಸಾಮಾಜಿಕ ಸಮುದಾಯದ ಸಂಕೇತವೆಂಬ ಕಲ್ಪನೆ

**ಹೈದ್ರಾಬಾದಿನಲ್ಲಿ ಒಬ್ಬ ವೈಶ್ಯರ ಹುಡುಗಿ ಒಬ್ಬ ದಲಿತ ಹುಡುಗನನ್ನು ಪ್ರೀತಿಸಿ, ಮನೆಯವರನ್ನು ಧಿಕ್ಕರಿಸಿ ಮದುವೆಯಾಗಿದ್ದಳು. ವರ್ಷದ ನಂತರ ಅವಳಿಗೆ ಮಗುವಾದಾಗ ತಂದೆ, ಪುನಃರ್ಮಿಲನದ ನಾಟಕವಾಡಿಸಿ, ಆಕೆಯ ಗಂಡನನ್ನು ಕೊಲೆ ಮಾಡಿಸಿದರು; ಆ ಹುಡುಗಿ ಕುಸಿದೂ ಹೋದರು ಕೋರ್ಟಲ್ಲಿ ತಂದೆಯ ವಿರುದ್ಧ ಕೊಲೆಯ ಕೇಸಿಗೆ ಸಾಕ್ಷಿ ಹೇಳಿದಳು; ಒಂಟಿಯಾಗಿ ಮಗುವನ್ನು ಸಾಕಿಕೊಂಡು ಬದುಕಿದಳು. ಮೊನ್ನೆ, ಆಕೆಯ ತಂದೆ 'ಕ್ಷಮಿಸು. ಮನೆಗೆ ಮರಳು' ಎಂದು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ವರದಿ ಬಂದಿದೆ. ಹೈದ್ರಾಬಾದಿನ ಪತ್ರಿಕೆಗಳೆಲ್ಲಾ, ತಂದೆಯ ಮರಣಕ್ಕೆ ಆಕೆಯ ಹಟವೇ ಕಾರಣವೆಂದು ಬರೆಯುತ್ತಿವೆ.**

ಇತ್ತು. ಆದರೆ, ಬಟ್ಟೆ ಗಿರಣಿಗಳಲ್ಲಿ ಸೂಜಿಗೆ ದಾರ ಸೇರಿಸುವ ಕೆಲಸಗಳನ್ನು 'ಅಸ್ಪೃಶ್ಯಜಾತಿ'ಯ ಕಾರ್ಮಿಕ ಜಾತಿಗಳವರಿಗೆ ಕೊಡ ಕೂಡದು ಎಂದು ಮೇಲ್ಜಾತಿಯ ಕಾರ್ಮಿಕರು ತಕರಾರು ತೆಗೆದರು! ಯಾಕೆಂದರೆ, ಸೂಜಿಗೆ ದಾರ ಸೇರಿಸುವಾಗ, ದಾರವನ್ನು ಅವರು ಎಂಜಲು ಮಾಡುತ್ತಾರೆ, ಆ ಎಂಜಲು ತಮಗೆ ಮೈಲಿಗೆ ಎಂಬುದು ಈ ಕಾರ್ಮಿಕರ ವಾದವಾಗಿತ್ತು! 'ಕಾರ್ಮಿಕ' ಎಂಬ ಗುರುತು ಮಾಲಿಕರ ಅಧಿಕಾರದ ಅಡಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಗುರುತಾಗಿದ್ದ ಹಾಗೇ, ಮೇಲ್ಜಾತಿಯ ಕಾರ್ಮಿಕರು ಕೆಳ ಜಾತಿಯ ಕಾರ್ಮಿಕರ ಕಾಯಕ ಸ್ವಾತಂತ್ರ್ಯವನ್ನು ಕಸಿಯುವ ಗುರುತೂ ಆಗಿ ಹೋಯಿತು! ಅಲ್ಲಿ ಒಂದು ವರ್ಗದ ಕಾರ್ಮಿಕರಿಗೆ ಸ್ವಾತಂತ್ರ್ಯವೆಂಬುದು ಭ್ರಮೆ ಮಾತ್ರವಾಗಿ ಹೋಯಿತು. ಒಂದು ಸಂಘ ವ್ಯವಸ್ಥೆಯಲ್ಲಿ ಒಂದು ಜಾತಿಯಾಚರಣೆಯ ಸ್ವಾತಂತ್ರ್ಯವು ಮತ್ತೊಂದು ಜಾತಿಯ ಸ್ವಾತಂತ್ರ್ಯವನ್ನು ಕಸಿಯುವುದಾದರೆ ಅದೆಂಥ ಸಂಘ ವ್ಯವಸ್ಥೆ!



ಮೇಲೆ ಉದ್ಧರಣೆ ಮಾಡಿರುವ ವಾಕ್ಯದ ಮುಂದುವರಿಕೆಯಾಗಿ ಅಂಬೇಡ್ಕರ್ '[ಹಿಂದುಗಳ] ಉದಾತ್ತ ಗುಣವೂ, ನೈತಿಕತೆಯೂ ಜಾತಿಯ ಕಟ್ಟಿನಲ್ಲಿ ಬಂಧಿಯಾಗಿದೆ' ಎನ್ನುತ್ತಾರೆ. ಈ ಮಾತುಗಳ ಹಿಂದೆ ಅಸಹನೀಯ ವಾಸ್ತವದ ಅರಿವು ಇದೆ. ಅಂಬೇಡ್ಕರ್ ಅಮೇರಿಕೆಯ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವಾಗ, ಖ್ಯಾತ ಸಮಾಜಶಾಸ್ತ್ರಜ್ಞ ಹಾಗು ಶಿಕ್ಷಣತಜ್ಞ ಜಾನ್ ಡೇವಿ ಅವರ ಗುರುಗಳಾಗಿದ್ದರು. ನಾಗರಿಕ ಮೌಲ್ಯಗಳನ್ನುಳ್ಳ ಆಧುನಿಕ ಶಿಕ್ಷಣವು ಪ್ರಜ್ಞಾವಂತ ನಾಗರಿಕರನ್ನು ರೂಪಿಸುತ್ತದೆ; ಪ್ರಜ್ಞಾವಂತ ನಾಗರಿಕರ ಸಮೂಹವಾದ ನಾಗರಿಕ ಸಮಾಜವು ಪ್ರಜಾಪ್ರಭುತ್ವದಲ್ಲಿ ಪ್ರಭುತ್ವವು ಸ್ವಾತಂತ್ರ್ಯಹರಣ ಮಾಡದ ಹಾಗೆ ಸಮತೂಗಿಸುವ ಪ್ರಜಾ ಸಮೂಹವಾಗಿರುತ್ತದೆ ಎಂಬ ಡೇವಿಯವರ ವಿಚಾರಗಳಿಂದ ಅಂಬೇಡ್ಕರ್ ಪ್ರಭಾವಿತರಾಗಿದ್ದರು. ಆ ವಿಶ್ವಾಸದಲ್ಲಿ, ಅತ್ಯುನ್ನತ ಶಿಕ್ಷಣ ಪಡೆದು, ಬರೋಡ ಮಹರಾಜರ ಆಹ್ವಾನದ ಮೇರೆಗೆ, ಅವರ ಸಂಸ್ಥಾನದಲ್ಲಿ ಉನ್ನತ ಅಧಿಕಾರದ ಹುದ್ದೆ ವಹಿಸಿಕೊಳ್ಳಲು ಬರೋಡಕ್ಕೆ ಬಂದ ಅಂಬೇಡ್ಕರ್‌ಗೆ ಬಹು ದೊಡ್ಡ ಆಘಾತ ಕಾದಿತ್ತು. ಅತ್ಯುನ್ನತ ಶಿಕ್ಷಣ, ಅಧಿಕಾರದ ಹುದ್ದೆ ಹೊಂದಿದ್ದೂ, ಜಾತಿಯ ಕಾರಣವಾಗಿ ಬರೋಡದ ನಾಗರಿಕ ವಲಯದಲ್ಲಿ ಅವರಿಗೆ ವಾಸಕ್ಕೆ ಒಂದು ಕೊಠಡಿ ಸಿಗಲಿಲ್ಲ; ಸಿಕ್ಕ ಒಂದು ವಸತಿಯಿಂದಲೂ ಅವಮಾನಕರವಾಗಿ ಹೊರದೂಡಲ್ಪಟ್ಟರು. ತಮ್ಮ ಅನುಭವ ಕಥನ ಗುಚ್ಛವಾದ 'ವೇಟಿಂಗ್ ಫಾರ್ ವೀಸಾದಲ್ಲಿ' ಅಂಬೇಡ್ಕರ್, ಆ ಅಸಹಾಯಕತೆಯಿಂದಾಗಿ ತಾನು 'ಬಿಕ್ಕಿ ಬಿಕ್ಕಿ ಅತ್ತೆ' ಎಂದು ಹೇಳಿಕೊಳ್ಳುತ್ತಾರೆ. ಇಲ್ಲಿ 'ಬಿಕ್ಕಿ ಬಿಕ್ಕಿ ಅತ್ತೆ' ಎಂಬುದು ಅತಿನಾಟಕೀಯ ಗದ್ಯವಲ್ಲ, ವಿವರಿಸಲು ಯಾವ ಭಾಷೆಯೂ ಇರದೆ ನೊಂದವನೊಬ್ಬನ ಆಳವಾದ ನೋವಿನ ಸಂವೇದನೆ ಎನ್ನುವುದು ಅಂಬೇಡ್ಕರರ ಬರವಣಿಗೆಯ ನಿಖರತೆ ಗೊತ್ತಿರುವವರಿಗೆಲ್ಲವೂ ಅರಿವಾಗುವಂತಹುದು. ಆ ಕಥನಾ ಗುಚ್ಛವೇ ವಿಶಿಷ್ಟವಾದದ್ದು–ಅಲ್ಲಿರುವ ಎಲ್ಲಾ ಆರು ಘಟನಾ ನಿರೂಪಣೆಗಳೂ ಕೈಯಲ್ಲಿ ಕಾಸಿದ್ದು ಸಾರ್ವಜನಿಕ ಸೌಲಭ್ಯ ಪಡೆಯಲಾಗದ, ನೌಕರಿ ಇದ್ದು ಗೌರವಯುತವಾಗಿ ಕೆಲಸ ಮಾಡಲಾಗದ, ಗೆಳೆಯರ ಜೊತೆ ವಿಹರಿಸುವ ಯೌವನೋತ್ಸಾಹವಿದ್ದೂ ವಿಹರಿಸಲಾಗದ, ಸೌಲಭ್ಯವಿದ್ದು ವೈದ್ಯಕೀಯ ಶುಶ್ರೂಷೆ ಪಡೆಯಲಾಗದ– 'ದಲಿತರ' ಬದುಕಿನ ಅಸಹಾಯಕತೆಯ ಸಂವೇದನೆಯ ಗದ್ಯ ಭಾಷೆಯ ನಿರೂಪಣೆಗಳು. ಶಿಕ್ಷಣ, ಉದ್ಯೋಗ, ಸಾರ್ವಜನಿಕ ಸೌಲಭ್ಯಗಳೆಲ್ಲವು ವ್ಯಕ್ತಿಯೊಬ್ಬ ಸಮಾಜದಲ್ಲಿ ಪಡೆದು ಅನುಭವಿಸಬಹುದಾದ ಸ್ವಾತಂತ್ರ್ಯಕ್ಕೆ ಅವಕಾಶಗಳು–ನಾಮಕಾವಸ್ಥೆಗೆ ಆ ಸ್ವಾತಂತ್ರ್ಯವು ಎಲ್ಲರಿಗೂ ಲಭ್ಯ! ಆದರೆ, ಜಾತಿಯ ಕಾರಣಕ್ಕೆ 'ದಲಿತ ಜಾತಿ'ಗಳ ಜನರಿಗೆ ಆ ಸ್ವಾತಂತ್ರ್ಯಗಳು ಅಲಭ್ಯವಾದರೆ, ಜಾತಿ ಸಮಾಜದಲ್ಲಿ ಅವು ಯಾವು ಸ್ವಾತಂತ್ರ್ಯದ ತಾಣಗಳಲ್ಲ. 'ತನ್ನ ಬಾಳ್ವೆ ಹೇಗಿರಬೇಕು ಎಂದು ತೀರ್ಮಾನಿಸುವ ಹಕ್ಕು ಆಯಾ ವ್ಯಕ್ತಿಗೆ ಮಾತ್ರ ಇರಬೇಕು'– ಯಾವುದೇ ಸ್ವಾತಂತ್ರ್ಯವೂ ಈ ಹಕ್ಕನ್ನು ಯಾವುದೇ ಕಾರಣಕ್ಕೆ ಕಸಿದುಕೊಳ್ಳುವುದಾದರೆ, ಅದು ಸ್ವಾತಂತ್ರ್ಯವಲ್ಲ. ಅಂಬೇಡ್ಕರ್ 'ಅನಿಹಿಲೇಷನ್ ಆಫ್ ಕ್ಯಾಸ್ಟ್'ನಲ್ಲಿ ತಾವು ಓದಿದ ಪತ್ರಿಕಾ ವರದಿಗಳನ್ನು ಉದ್ಧರಣೆ ಮಾಡುತ್ತಾ "ದಲಿತರು ತಮ್ಮ ಪಾಡಿಗೆ ತಾವು ಔತಣಕೂಟ ಏರ್ಪಡಿಸಿ ತುಪ್ಪ ತಿಂದದ್ದಕ್ಕಾಗಿ, ದಲಿತ ಹೆಂಗಸರು ಹಿತ್ತಾಳೆ ಕೊಡಗಳಲ್ಲಿ ನೀರು ತುಂಬಿದಕ್ಕಾಗಿ, ದಲಿತ ಮಕ್ಕಳನ್ನು ಶಾಲೆ ಸೇರಿಸಿದ್ದಕ್ಕಾಗಿ..ಸವರ್ಣಿಯರಿಂದ ದೈಹಿಕ ಹಲ್ಲೆಗೆ ತುತ್ತಾಗಬೇಕಿದೆ, ಅದೂ 1936ರಲ್ಲಿ!.." ಎನ್ನುತ್ತಾರೆ; ನಾವು 2020ರಲ್ಲೂ ಎಂದು ಸೇರಿಸಬಹುದಷ್ಟೇ! ಇದು 'ಸ್ವಾತಂತ್ರ್ಯ'ದಲ್ಲಿ ಅಡಕವಾಗಿರುವ ತತ್ವವನ್ನು ಮತ್ತೇ ಒಡೆದು ಹೇಳಲು ಮುಂದುವರೆಯ ಬೇಕು.

ಹೈದ್ರಾಬಾದಿನಲ್ಲಿ ಒಬ್ಬ ವೈಶ್ಯರ ಹುಡುಗಿ ಒಬ್ಬ ದಲಿತ ಹುಡುಗನನ್ನು ಪ್ರೀತಿಸಿ, ಮನೆಯವರನ್ನು ಧಿಕ್ಕರಿಸಿ ಮದುವೆಯಾಗಿದ್ದಳು. ವರ್ಷದ ನಂತರ ಅವಳಿಗೆ ಮಗುವಾದಾಗ ತಂದೆ, ಪುನಃರ್ಮಿಲನದ ನಾಟಕವಾಡಿಸಿ, ಆಕೆಯ ಗಂಡನನ್ನು ಕೊಲೆ ಮಾಡಿಸಿದರು; ಆ ಹುಡುಗಿ ಕುಸಿದೂ ಹೋದರು ಕೋರ್ಟಲ್ಲಿ ತಂದೆಯ ವಿರುದ್ಧ ಕೊಲೆಯ ಕೇಸಿಗೆ ಸಾಕ್ಷಿ ಹೇಳಿದಳು; ಒಂಟಿಯಾಗಿ ಮಗುವನ್ನು ಸಾಕಿಕೊಂಡು ಬದುಕಿದಳು. ಮೊನ್ನೆ, ಆಕೆಯ ತಂದೆ 'ಕ್ಷಮಿಸು. ಮನೆಗೆ ಮರಳು' ಎಂದು ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ವರದಿ ಬಂದಿದೆ. ಹೈದ್ರಾಬಾದಿನ ಪತ್ರಿಕೆಗಳೆಲ್ಲಾ, ತಂದೆಯ ಮರಣಕ್ಕೆ ಆಕೆಯ ಹಟವೇ ಕಾರಣವೆಂದು ಬರೆಯುತ್ತಿವೆ ಎಂದು ಪತ್ರಕರ್ತ ಮಿತ್ರರೊಬ್ಬರು ತಿಳಿಸಿದರು. ಸಂಸಾರದ ಭಾವಬಂಧಗಳು ಸಂಸಾರಸ್ಥರಿಗೆ ಗೊತ್ತಿರುವಂತಹವೇ. ಇಲ್ಲಿ ಈ ಇಡಿ ದುರಂತ ಘಟನಾವಳಿಯಲ್ಲಿ ಮೂರನೇಯವರಾದ ಸಮಾಜದ ಜನಕ್ಕೆ ಹುಡುಗಿ 'ಜಾತಿಯ' ಕಾರಣಕ್ಕೆ ಹಂತ ಹಂತವಾಗಿ 'ತನ್ನ ಬಾಳ್ವೆ ಹೇಗಿರಬೇಕು ಎಂದು ತೀರ್ಮಾನಿಸುವ ಹಕ್ಕು ಆಯಾ ವ್ಯಕ್ತಿಗೆ ಮಾತ್ರ ಇರಬೇಕು' ಎಂಬ 'ಸ್ವಾತಂತ್ರ್ಯ'ದ ಅರ್ಥವನ್ನು ಕಚ್ಚಿಹಿಡಿದಳು ಎಂದು ಅರ್ಥವಾಗುವುದು ದುಸ್ತರವಾಗಿದೆ; ಅವಳು, ತನ್ನ ಬಾಳ್ವೆಯ ಹಾದಿ

(27ನೇ ಪುಟಕ್ಕೆ)



ಪಿ.ಲಂಕೇಶ್ ಅವರು 'ನಮ್ಮ ಜಿ.ರಾಜಶೇಖರ ಎಷ್ಟು ಒಳ್ಳೆಯ ವಿಚಾರವಂತ. ನಿಷ್ಠುರತೆ ಮತ್ತು ಬದುಕಿನ ಬಗ್ಗೆ ಪ್ರೀತಿಯನ್ನು ಇಟ್ಟುಕೊಂಡ ಶ್ರೇಷ್ಠ ಚಿಂತನಕಾರ ಎನ್ನುವುದು ನನಗೆ ಹೆಮ್ಮೆಯನ್ನುಂಟುಮಾಡಿದೆ ಎನ್ನುತ್ತಾರೆ' ಈಚಿನ ಬಹುಚರ್ಚಿತ 'ಬಹುವಚನ ಭಾರತ' ಕೃತಿಯನ್ನು ಒಳಗೊಂಡಂತೆ 6 ಮೌಲಿಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ, ಸಮಾಜ, ರಾಜ–ಕಾರಣ, ಕೋಮುವಾದವೂ ಸೇರಿದಂತೆ ಸಮಕಾಲೀನ ತುರ್ತಿಗೆ ಪ್ರಖರವಾಗಿ ಪ್ರತಿಕ್ರಿಯಿಸುವ ಕೆಲವೇ ಕೆಲವು ಲೇಖಕರಲ್ಲಿ ಜಿ.ರಾಜಶೇಖರ ಪ್ರಮುಖರು. ಸದ್ಯ ನಿವೃತ್ತರಾಗಿ ಉಡುಪಿಯಲ್ಲಿ ನೆಲೆಸಿದ್ದಾರೆ.

**ಜಿ ರಾಜಶೇಖರ**

**Email: grskksv@gmail.com**

**"ಅಂಬೇಡ್ಕರ್ ಕೂಡ ತಮ್ಮವರು ಎಂದು ಹೇಳಿಕೊಳ್ಳುತ್ತಿರುವ ಸಂಘ ಪರಿವಾರದ ಮುಂಚೂಣಿಯಲ್ಲಿರುವ ಆರ್‌ಎಸ್‌ಎಸ್ ಸಂವಿಧಾನ ರೂಪುಗೊಂಡ ಮೊದಲ ದಿನಗಳಲ್ಲಿ ಅದರ ವಿರುದ್ಧ ದೇಶದಾದ್ಯಂತ ಅದರಲ್ಲೂ ವಿಶೇಷವಾಗಿ ರಾಜಧಾನಿ ದೆಹಲಿಯಲ್ಲಿ ಭಾರೀ ಪ್ರತಿಭಟನೆಗಳನ್ನು ಸಂಘಟಿಸಿತ್ತು. ಸಂವಿಧಾನ ಭಾರತೀಯ ಸಂಸ್ಕೃತಿಗೆ ಅಪಚಾರವೆಸಗಿದೆ ಎಂಬುದು ಇವರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇ ಬೇಕು. ಹಿಂದುತ್ವವಾದಿಗಳು ಸಂವಿಧಾನದ ಆಶಯಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರು. ಆದರೆ ಅವರ ಪ್ರತಿಭಟನೆ ಮಾತ್ರ ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ ಅನೈತಿಕವೂ ಆಗಿತ್ತು"**


## ಅಂಬೇಡ್ಕರ್ ವಿಶೇಷಾಂಕ

# ಎಲ್ಲ ಕಾಲಕ್ಕೂ ಪ್ರಸ್ತುತರಾದ ಬಾಬಾ ಸಾಹೇಬರು

ಭಾರತ ಸಂವಿಧಾನ ಶಿಲ್ಪಿ ಡಾ॥ ಬಿ .ಆರ್. ಅಂಬೇಡ್ಕರ್ ಸಮಸ್ತ ಭಾರತೀಯರ ಕೃತಜ್ಞತೆಗೆ ಸದಾ ಪಾತ್ರರು. ಈ ವಾಸ್ತವ ನಮ್ಮನ್ನು ಆಳುತ್ತಿರುವ ಹಾಲೀ ಸರಕಾರಕ್ಕೂ ಗೊತ್ತಿದೆ. ಆ ಕಾರಣಕ್ಕೇನೆ, ಸರಕಾರವನ್ನು ನಿಯಂತ್ರಿಸುತ್ತಿರುವ ಆರ್.ಎಸ್.ಎಸ್.ನ ಪರಿವಾರ ಅಂಬೇಡ್ಕರ್‌ರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿದೆ. ಸಂಘ ಪರಿವಾರಕ್ಕೆ ಸಾವಿರಾರು ವರ್ಷಗಳ ಚರಿತ್ರೆ ಇರುವ ಹಿಂದೂ ಪರಂಪರೆಯ ಬಗ್ಗೆ ದುರಭಿಮಾನ ಎನ್ನಿಸುವಷ್ಟು ಒಲವು! ಆದರೆ ನಮ್ಮೀ ಭವ್ಯ ಭಾರತದ ಚರಿತ್ರೆಯಲ್ಲಿ ಜಾತಿ, ಮತ ಭೇದವಿಲ್ಲದೆ ಪಂಚಮರು ಎಂದು ತಿರಸ್ಕಾರಕ್ಕೆ ಒಳಗಾದ ಅಸ್ಪೃಶ್ಯರನ್ನೂ ಒಳಗೊಂಡು, ಗಂಡು ಹೆಣ್ಣು ಎಂಬ ಲಿಂಗಭೇದವನ್ನು ಬದಿಗೆ ತಳ್ಳಿ ದೇಶದ ಎಲ್ಲ ಪ್ರಜೆಗಳೂ ಸ್ವತಂತ್ರರು. ಸಮಾನರು ಮತ್ತು ಸ್ವಾಯುತ್ತ ಸಾರ್ವಭೌಮರು ಎಂದು ಮೊತ್ತ ಮೊದಲ ಭಾರಿಗೆ ಘೋಷಿಸಿದ್ದು ಭಾರತದ ಸಂವಿಧಾನ. ಹಲವು ವರ್ಷಗಳ ಅವಿರತ ಶ್ರಮ ಹಾಗೂ ಜಗತ್ತಿನ ಹಲವು ಪ್ರಜಾಪ್ರಭುತ್ವದ ದೇಶಗಳ ಸಂವಿಧಾನದ ನಿರಂತರ ಅಭ್ಯಾಸಗಳ ಫಲವಾಗಿ ಬಾಬಾ ಸಾಹೇಬರು ಭಾರತ ಸಂವಿಧಾನವನ್ನು ರೂಪಿಸಿದರು. ಈಗ ಅಂಬೇಡ್ಕರ್ ಕೂಡ ತಮ್ಮವರು ಎಂದು ಹೇಳಿಕೊಳ್ಳುತ್ತಿರುವ ಸಂಘ ಪರಿವಾರದ ಮುಂಚೂಣಿಯಲ್ಲಿರುವ ಆರ್.ಎಸ್. ಎಸ್ ಸಂವಿಧಾನ ರೂಪುಗೊಂಡ ಮೊದಲ ದಿನಗಳಲ್ಲಿ ಅದರ ವಿರುದ್ಧ ದೇಶದಾದ್ಯಂತ ಅದರಲ್ಲೂ ವಿಶೇಷವಾಗಿ ರಾಜಧಾನಿ ದೆಹಲಿಯಲ್ಲಿ ಭಾರೀ ಪ್ರತಿಭಟನೆಗಳನ್ನು ಸಂಘಟಿಸಿತ್ತು. ಭಾರತ ಸಂವಿಧಾನ ಭಾರತೀಯ ಸಂಸ್ಕೃತಿಗೆ ಅಪಚಾರವೆಸಗಿದೆ ಎಂಬುದು ಇವರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇ ಬೇಕು. ಹಿಂದುತ್ವವಾದಿಗಳು ಸಂವಿಧಾನದ ಆಶಯಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರು. ಆದರೆ ಅವರ ಪ್ರತಿಭಟನೆ ಮಾತ್ರ ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ ಅನೈತಿಕವೂ ಆಗಿತ್ತು.



ಸದ್ಯಕ್ಕೆ ಭಾರತ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ದಿನ ಬಳಕೆಯ ಎಲ್ಲ ವಸ್ತುಗಳ ಬೆಲೆ ಏರುತ್ತಿದೆ. ನಿರುದ್ಯೋಗವೂ ದೇಶದ ರಾಜಕೀಯ ಶರೀರದಲ್ಲಿ **(Body politic)** ವಿಷದಂತೆ ಏರುತ್ತಿದೆ. ಕೇಂದ್ರ ಸರಕಾರಕ್ಕೆ ಜನತೆಯ ಆಕ್ರೋಶದ ಬಿಸಿ ತಟ್ಟಿದೆ. ಹಾಗಾಗಿ ಅದು ದಿನಕ್ಕೊಂದು ಸುಳ್ಳು ಹೇಳಿ ಪ್ರಜಾಸತ್ತೆಯ ಛದ್ಮವೇಷದಲ್ಲಿರುವ ಹಿಂದುತ್ವದ ಸರ್ವಾಧಿಕಾರವನ್ನು ಜನರಿಂದ ಮರೆಮಾಚುತ್ತಿದೆ. ಈ ನಿಟ್ಟಿನಲ್ಲಿ ಅದು ಕಂಡುಕೊಂಡ ಉಪಾಯವೆಂದರೆ ಪೌರತ್ವ ತಿದ್ದುಪಡಿ ಕಾಯ್ದೆ **C.A.A,** ರಾಷ್ಟ್ರೀಯ ಪೌರತ್ವ ನೋಂದಣಿ– **NRC** ಮತ್ತು ರಾಷ್ಟೀಯ ಜನಸಂಖ್ಯಾ ದಾಖಲೆ **NPR** ಇವುಗಳಲ್ಲಿ ಮೊದಲನೆಯದ್ದು ಈಗಾಗಲೇ ಕಾನೂನಾಗಿ ಅಂಗೀಕಾರಗೊಂಡಿದೆ; ಅದು ಜಾರಿಗೆ ಬರುವುದು ಮಾತ್ರ ಬಾಕಿ. ಉಳಿದ ಎರಡು ಸಮೀಕ್ಷೆಗಳು, ಅವು ಕೂಡ ಸದ್ಯಕ್ಕೆ ಪ್ರಸ್ತಾಪದ ಮಟ್ಟದಲ್ಲೇ ಇವೆ. ದೇಶದಾದ್ಯಂತ ಈ ಸಂವಿಧಾನ ವಿರೋಧಿ ಕ್ರಮಗಳ ವಿರುದ್ಧ ಕಂಡು ಬಂದ ಪ್ರತಿಭಟನೆ, ಆಕ್ರೋಶಗಳ ಕಾರಣಕ್ಕೆ ಸದ್ಯಕ್ಕೆ ಈ ಕಾಯ್ದೆ ಹಾಗೂ ಸಮೀಕ್ಷೆಗಳು ಕಾರ್ಯರೂಪಕ್ಕೆ ಬರುವುದು ಸಂದೇಹಾಸ್ಪದವಾಗಿದೆ.




ಈ ಪ್ರತಿಭಟನೆ, ಆಕ್ರೋಶಗಳಿಗೆ ಇರುವ ಮುಖ್ಯ ಕಾರಣವೆಂದರೆ ಅವು ದೇಶಕ್ಕೆ ಬಾಬಾ ಸಾಹೇಬರ ಕೊಡುಗೆಯಾದ ಭಾರತ ಸಂವಿಧಾನವನ್ನು ಕಸಕ್ಕಿಂತ ಕಡೆಯಾಗಿ ಕಂಡಿದೆ ಎಂಬುದು. ಮೋದಿ ಸರಕಾರ, ತಾನು ಧರ್ಮ ಆಧಾರದಲ್ಲಿ ತಾರತಮ್ಯ ಮಾಡುವುದಿಲ್ಲ ಎಂದು ಪದೇ ಪದೇ ಘೋಷಿಸಿಕೊಳ್ಳುತ್ತಿದೆ. ಆದರೆ ಸಂವಿಧಾನದ ಈ ಮೌಲ್ಯದಲ್ಲಿ ಹಾಲೀ ಸರಕಾರಕ್ಕೆ ಕಿಂಚಿತ್ತೂ ನಂಬಿಕೆ ಇಲ್ಲ; ಗೌರವವೂ ಇಲ್ಲ. ಭಾರತದ ಮುಸ್ಲಿಮ್ ಪ್ರಜೆಗಳನ್ನು 'ಅನ್ಯರು' ಎಂಬಂತೆ ದ್ವೇಷಿಸುವ ಹಿಂದುತ್ವವಾದಿಗಳಿಗೆ ತಮ್ಮ ಧೋರಣೆ ಸಂವಿಧಾನ ವಿರೋಧಿ ಎಂದು ಗೊತ್ತಿದೆಯೋ ಇಲ್ಲವೋ ಅವರು ಆ ನಿಲುವಿಗೆ ಗಟ್ಟಿಯಾಗಿ ಅತುಕೊಂಡಿದ್ದಾರೆ. ಹಾಗಾಗಿ ಆರ್. ಎಸ್.ಎಸ್. ನಮಗೆ ಆದರ್ಶವಲ್ಲ; ಮಾದರಿಯಂತೂ ಅಲ್ಲವೇ ಅಲ್ಲ. ಆರ್.ಎಸ್.ಎಸ್ ನಮ್ಮ ನಂಬಿಕೆ, ವಿಶ್ವಾಸಗಳಿಗೆ ಅರ್ಹವೂ ಅಲ್ಲ. □



ಬಾಬಾ ಸಾಹೇಬರ ಅರಿವಿನ ಜತೆ ನಿರಂತರ ಒಡನಾಡುತ್ತಾ, ಲೋಕಕ್ಕೂ ಭೀಮವಿವೇಕವನ್ನು ವಿಸ್ತರಿಸಲು ಶ್ರಮಿಸುವ ಹೊಸತಲೆಮಾರಿನ ರಘೋತ್ತಮ ಹೊಬ, ಇದೀಗ ಮೈಸೂರಿನಲ್ಲಿ ನೆಲೆಸಿದ್ದಾರೆ. 'ಗಾಂಧಿ ಹೋರಾಟ ಯಾರ ವಿರುದ್ಧ?' 'ಅಂಬೇಡ್ಕರ್ ಎಂಬ ಕರಗದ ಬಂಡೆ' 'ಎದೆಗೆ ಬಿದ್ದ ಗಾಂಧಿ' 'ಅಂಬೇಡ್ಕರ್ ದರ್ಶನಂ' 'ಬಾಬಾ ಸಾಹೇಬರ ಬೆಳಕಿನಲ್ಲಿ' ಕೃತಿಗಳನ್ನು ಪ್ರಕಟಿಸಿದ್ದಾರೆ. ನಿರಂತರವಾಗಿ ಬರೆಯುತ್ತಿರುವ ಹೊಬ ಹೊಸ ತಲೆಮಾರಿನ ಗಮನಾರ್ಹ ಚಿಂತಕ.

**ರಘೋತ್ತಮ ಹೋಬ**

**Email: raghothama16hb@gmail.com**

# ಅಂಬೇಡ್ಕರ್‌ರವರ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಕೃತಿ:

## ಒಂದು ವಸ್ತುನಿಷ್ಠ ವಿಶ್ಲೇಷಣೆ

'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಹತ್ವದ ಮಹೋನ್ನತ ಕೃತಿ. ಪಾಕಿಸ್ತಾನ ಹೇಗೆ ಸೃಷ್ಟಿಯಾಯಿತು, ಕಾರಣಗಳು, ಅದಕ್ಕಿದ್ದ ಪರ್ಯಾಯ ಮಾರ್ಗಗಳು ಹೀಗೆ ಸಂಪೂರ್ಣ ವಿಶ್ಲೇಷಣೆಯನ್ನು ಈ ಕೃತಿ ಒಳಗೊಂಡಿದೆ. ಅಂಬೇಡ್ಕರರು ಈ ಕೃತಿ ಬರೆದದ್ದು 1940 ರಲ್ಲಿ. ಅಂದರೆ 80 ವರ್ಷಗಳ ಹಿಂದೆ. ಆಗಿನ್ನೂ ಪಾಕಿಸ್ತಾನ ಸೃಷ್ಟಿಯಾಗಿರಲಿಲ್ಲ. ಬರೀ ಮಾತುಕತೆಯ ಹಂತದಲ್ಲಿತ್ತಷ್ಟೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನ ಕುರಿತ ಕುತೂಹಲ ಹೊಂದಿರುವ ಯಾರೇ ಆಗಲಿ ಅಂಬೇಡ್ಕರರ ಈ ಕೃತಿಯನ್ನು ಓದಲೇಬೇಕು. ಪ್ರಸ್ತುತಕ್ಕಂತು ಈ ಕೃತಿ ಬಹಳ ಮಹತ್ವ ಪಡೆಯುತ್ತದೆ.

ಹಾಗಿದ್ದರೆ ಈ ಕೃತಿ ಪಾಕಿಸ್ತಾನ ಕುರಿತ ಅಂಬೇಡ್ಕರರ ಅಭಿಪ್ರಾಯವೇ? ಅಥವಾ ಪಾಕಿಸ್ತಾನ ಪರ ಅಥವಾ ವಿರುದ್ಧದ ಅವರ ಒಲವು–ನಿಲುವು ಹೇಳುತ್ತದೆಯೇ? ಇದನ್ನು ಆರಂಭದಲ್ಲಿಯೇ ಸ್ಪಷ್ಟಪಡಿಸುವ ಅಗತ್ಯವಿದೆ. ಇಲ್ಲದಿದ್ದರೆ ತಪ್ಪು ಅಭಿಪ್ರಾಯ ಉಂಟಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸ್ವತಃ ಅಂಬೇಡ್ಕರರೇ ಇದನ್ನು ಸ್ಪಷ್ಟಪಡಿಸುತ್ತಾರೆ. ಅವರೇ ಹೇಳುವ ಹಾಗೆ "ಈ ಕೃತಿ ಯಾವುದೇ ಪಕ್ಷಪಾತದ್ದಲ್ಲ. ಹಾಗೆಯೇ ತಾನು ಪಾಕಿಸ್ತಾನದ ಪರ ವಕಾಲತ್ತು ವಹಿಸುತ್ತಿಲ್ಲ. ಬದಲಿಗೆ ಈ ಕೃತಿ ಪಾಕಿಸ್ತಾನ ಸೃಷ್ಟಿಯ ಇಡೀ ಯೋಜನೆಯನ್ನು ಎಲ್ಲಾ ದೃಷ್ಟಿಕೋನದಿಂದಲು ವಿವರಿಸುವ ಗುರಿ ಹೊಂದಿದೆಯೇ ಹೊರತು ಮತ್ತೇನನನ್ನೂ ಅಲ್ಲ. ಹಾಗೆಯೇ ನಾನು ಓದುಗನ ಮೇಲೆ ನನ್ನ ನಿಲುವನ್ನು ಹೇರಲು ಹೋಗಿಲ್ಲ. ಬದಲಿಗೆ ಎರಡೂ ಕಡೆಯ ವಾದಗಳನ್ನು ಅವನ ಮುಂದಿಟ್ಟಿದ್ದೇನೆ ಮತ್ತು ತನ್ನ ಸ್ವಂತ ಅಭಿಪ್ರಾಯ ರೂಪಿಸಿಕೊಳ್ಳಲು ನಾನು ಆತನಿಗೆ ಅವಕಾಶ ಕೊಟ್ಟಿದ್ದೇನೆ" ಎನ್ನುತ್ತಾರೆ. **(Pakistan or The Partition of India, Pp.18).**

ಕೃತಿಯ ಭಾಗ ಒಂದರಲ್ಲಿ ಅಂಬೇಡ್ಕರರು ಹಾಕಿಕೊಳ್ಳುವ ಮೊದಲನೆಯ ಪ್ರಶ್ನೆ ಮುಸ್ಲಿಮರು ಪಾಕಿಸ್ತಾನವನ್ನು ಏಕೆ ಬಯಸುತ್ತಾರೆ? ಇದಕ್ಕೆ ಅಂಬೇಡ್ಕರರು ಕೊಡುವ ಉತ್ತರ ಅಥವಾ ಪ್ರಸ್ತಾಪಿಸುವ ಮುಸ್ಲಿಮರ ದೃಷ್ಟಿಕೋನ "ಅನುಭವಗಳ ಪ್ರಕಾರ ಹಿಂದೂಗಳು ತಮ್ಮ ಬಹುಮತದ ಕಾರಣಕ್ಕಾಗಿ ತಮ್ಮನ್ನು ಅಂದರೆ ಮುಸ್ಲಿಮರನ್ನು ತಮ್ಮದಲ್ಲದ ಪರಕೀಯ ರಾಜ್ಯವೊಂದರಲ್ಲಿ ತಮ್ಮನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ನೋಡುತ್ತಾರೆ" ಎಂಬುದು.

ಹಾಗಿದ್ದರೆ ಪಾಕಿಸ್ತಾನ ಸೃಷ್ಟಿಗೆ ವಿರುದ್ಧವಾಗಿ ಹಿಂದೂಗಳು ಕೊಡುವ ಕಾರಣ? ಅಂಬೇಡ್ಕರರು ಇವುಗಳನ್ನೂ ಪಟ್ಟಿ ಮಾಡುತ್ತಾರೆ. ಅವುಗಳೆಂದರೆ ಒಂದು: ಇದರಿಂದ ದೇಶದ ಒಗ್ಗಟ್ಟು ಒಡೆಯುತ್ತದೆ. ಎರಡು: ಭಾರತದ ರಕ್ಷಣಾ ವ್ಯವಸ್ಥೆಯನ್ನು ಇದು ದುರ್ಬಲಗೊಳಿಸುತ್ತದೆ. ಮೂರು: ಕೋಮು ಸಮಸ್ಯೆಯನ್ನು ಪರಿಹರಿಸಲು ಇದು ವಿಫಲವಾಗುತ್ತದೆ, ಹೀಗೆ ಈ ಹಿನ್ನೆಲೆಯಲ್ಲಿ ಐಕ್ಯತೆಗೆ ಧಕ್ಕೆ ಆಗುತ್ತದೆ ಎಂಬ ಹಿಂದೂಗಳ ಆತಂಕವನ್ನು ಚರ್ಚಿಸುವ ಅಂಬೇಡ್ಕರ್‌ರವರು "ಪಾಕಿಸ್ತಾನವಲ್ಲದೆ ಆಫ್ಘನಿಸ್ತಾನ ಕೂಡ ಹಿಂದೆ ಭಾರತದ ಭಾಗವಾಗಿತ್ತು ಮತ್ತು ಆ ಪ್ರದೇಶಗಳ ಜನರು ಮುಸ್ಲಿಂ ಆಕ್ರಮಣಕ್ಕಿಂತ ಮೊದಲು ಬೌದ್ಧರಾಗಿದ್ದರು ಅಥವಾ ಹಿಂದೂಗಳಾಗಿದ್ದರು. ಆದರೆ ಕ್ರಿ.ಶ. 1017 ರಿಂದ ಆರಂಭಗೊಂಡು ಮುಸ್ಲಿಮರ ನಿರಂತರ 762 ವರ್ಷಗಳ ಧಾಳಿಯಿಂದ ಆ ಎರಡೂ ಪ್ರದೇಶಗಳು ಭಾರತದಿಂದ ಸ್ವಾಭಾವಿಕವಾಗಿಯೇ ದೂರವಾದವು". (ಅದೇ ಕೃತಿ, ಪುಟ.63). ಈ ನಿಟ್ಟಿನಲ್ಲಿ ಮಹಮ್ಮದ್ ಘಜ್ನಿ, ಮಹಮ್ಮದ್ ಘೋರಿ, ಮಹಮ್ಮದ್ ಬಿನ್ ಖಾಸಿಂ ಹೀಗೆ ಧಾಳಿಕೋರರು ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನ ಇರುವ ಭಾಗಗಳನ್ನು ಒಮ್ಮೆ ಭಾರತಕ್ಕೆ ಸೇರಿಸುವುದು ಮತ್ತೊಮ್ಮೆ ಭಾರತದಿಂದ ದೂರ ಇಡುವುದು ಹೀಗೆ ಮಾಡುತ್ತಲೇ ಬರುವುದನ್ನು ಅಂಬೇಡ್ಕರರು ಉಲ್ಲೇಖಿಸುತ್ತಾರೆ. ಅಂತಿಮವಾಗಿ ಅಕ್ಬರನ ಸಹೋದರ ಹಕೀಂ ಕಾಬುಲ್ ಮತ್ತು ಕಂದಹಾರ್‌ಗಳನ್ನು ಉತ್ತರಭಾರತದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿದ್ದು ಮತ್ತು ಅಕ್ಬರ್ ಮತ್ತೆ ಅವುಗಳನ್ನು ಭಾರತಕ್ಕೆ ಸೇರಿಸಿದ್ದು, ಕೊನೆಯಲ್ಲಿ ಕ್ರಿ.ಶ.1738 ರಲ್ಲಿ ನಾದಿರ್ ಶಾ ಸಂಪೂರ್ಣವಾಗಿ ಆಫ್ಘನಿಸ್ತಾನವನ್ನು ಪ್ರತ್ಯೇಕಿಸಿದ್ದನ್ನು ಅಂಬೇಡ್ಕರ್ ದಾಖಲಿಸುತ್ತಾರೆ. ಒಟ್ಟಾರೆ ಇಂತಹ ದಾಳಿಗಳ ಹಿನ್ನೆಲೆಯಲ್ಲಿ ಅಂಬೇಡ್ಕರರು ಹೇಳುವುದು ಇಂತಹ ನಿರಂತರ ದಾಳಿಗಳ ಕಾರಣಕ್ಕಾಗಿ ಅಫ್ಘನಿಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಒಗ್ಗಟ್ಟೇ ಇರಲಿಲ್ಲ ಅಥವಾ ಒಗ್ಗಟ್ಟು ಮೂಡುವುದಕ್ಕೆ ಈ ದಾಳಿಗಳು ಅವಕಾಶ ಕೊಡಲಿಲ್ಲ. ಆದ್ದರಿಂದ ಒಗ್ಗಟ್ಟೇ ಇಲ್ಲ ಎಂದ ಮೇಲೆ ಪಾಕಿಸ್ತಾನ ಸೃಷ್ಟಿಯಿಂದ ಅಲ್ಲಿ ಅದಕ್ಕೆ ಧಕ್ಕೆಯಾದರೂ ಹೇಗಾಗುತ್ತದೆ? ಏಕತೆಯೇ ಇಲ್ಲ ಎಂದ ಮೇಲೆ ಅದಕ್ಕೆ ಧಕ್ಕೆಯಾಗುವ ಪ್ರಶ್ನೆಯಾದರೂ ಎಲ್ಲಿ? ಎಂದು ಪ್ರಶ್ನಿಸುತ್ತಾರೆ.

ಇನ್ನು ಹಿಂದೂಗಳು ವ್ಯಕ್ತಪಡಿಸುವ ಎರಡನೇ ಅನುಮಾನ ಭಾರತದ ವಿಭಜನೆಯಿಂದ ಅಥವಾ ಪಾಕಿಸ್ತಾನ ಸೃಷ್ಟಿಯಿಂದ ಭಾರತದ ರಕ್ಷಣಾ ವ್ಯವಸ್ಥೆ ದುರ್ಬಲಗೊಳ್ಳಲಿದೆ ಎಂಬುದು. ಇದಕ್ಕೆ ಅಂಬೇಡ್ಕರರು ಕೊಡುವ ವಿವರಣೆ, ಭವಿಷ್ಯದಲ್ಲಿ ಉಂಟಾಗಬಹುದಾದ ಮುಸ್ಲಿಂ ಧಾಳಿಗಳಲ್ಲಿ, ವಿಶೇಷವಾಗಿ ಅಫ್ಘಾನಿಸ್ತಾನದ ಕಡೆಯಿಂದ ಪಾಕಿಸ್ತಾನದ ಗಡಿಯಲ್ಲಿ ಉಂಟಾಗಬಹುದಾದ ಧಾಳಿಗಳನ್ನು ಆ ಗಡಿಯಲ್ಲಿ ಇರಬಹುದಾದ ಪಾಕಿಸ್ತಾನದ ಸೈನಿಕರು ನಿಷ್ಪಕ್ಷಪಾತವಾಗಿ ಎದುರಿಸುತ್ತಾರೆ ಎನ್ನುವುದು ಅನುಮಾನ. ಆದ್ದರಿಂದ ಆಫ್ಘಾನಿಸ್ತಾನ ಗಡಿಯಲ್ಲಿ ಉದ್ದೇಶಿತ ಪಾಕಿಸ್ತಾನದ ಸೈನಿಕರನ್ನು ಅಥವಾ ಗೇಟ್‌ಕೀಪರ್‌ಗಳನ್ನು ನಂಬಿಕೊಂಡು ಭಾರತ ತನ್ನ ಸ್ವಾತಂತ್ರ್ಯವನ್ನು ಮತ್ತು ಜನರನ್ನು ರಕ್ಷಿಸಿಕೊಳ್ಳಲು ಹೇಗೆ ಸಾಧ್ಯ? ಆದ್ದರಿಂದ ಮುಸ್ಲಿಮರು ಭಾರತದ ಒಳಗಿದ್ದು ನಮ್ಮ ವಿರೋಧಿಗಳಾಗಿ ಇರುವುದಕ್ಕಿಂತ ಭಾರತದ ಹೊರಗಿದ್ದು ಅಥವಾ ಪ್ರತ್ಯೇಕಗೊಂಡು ನಮ್ಮ ವಿರೋಧಿಗಳಾಗಿ ಇರುವುದೇ ಸರಿ ಎಂದು ಅಂಬೇಡ್ಕರರು ಹೇಳುತ್ತಾರೆ. (ಪು.99) ಈ ನಿಟ್ಟಿನಲ್ಲಿ ಪಾಕಿಸ್ತಾನ ಸೃಷ್ಟಿಯಾದರೆ ಉದ್ದೇಶಿತ ಪಾಕಿಸ್ತಾನದ ಮುಸ್ಲಿಂ ಸೈನಿಕರು ಭಾರತದ ಸೇನೆಯಿಂದ ಪ್ರತ್ಯೇಕಗೊಳ್ಳುವುದರಿಂದ ಭಾರತದ ಸೈನ್ಯ ಮತ್ತಷ್ಟು ಬಲಗೊಳ್ಳುತ್ತದೆಯೇ ಹೊರತು ದುರ್ಬಲವಾಗುವುದಿಲ್ಲ. ಆದ್ದರಿಂದ

**'ಅಂಬೇಡ್ಕರರು 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಈ ಕೃತಿ ಬರೆದದ್ದು 1940 ರಲ್ಲಿ. 80 ವರ್ಷಗಳ ಹಿಂದೆ. ಆಗಿನ್ನೂ ಪಾಕಿಸ್ತಾನ ಸೃಷ್ಟಿಯಾಗಿರಲಿಲ್ಲ. ಈ ಹೊತ್ತಿನ ಪಾಕಿಸ್ತಾನ ಸೃಷ್ಟಿಯ ಸಂಪೂರ್ಣ ವಿಶ್ಲೇಷಣೆಯನ್ನು ಈ ಕೃತಿ ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾನ ಕುರಿತ ಕುತೂಹಲ ಹೊಂದಿರುವ ಯಾರೇ ಆಗಲಿ ಅಂಬೇಡ್ಕರರ ಈ ಕೃತಿಯನ್ನು ಓದಲೇಬೇಕು. ಪ್ರಸ್ತುತಕ್ಕಂತು ಈ ಕೃತಿ ಬಹಳ ಮಹತ್ವ ಪಡೆಯುತ್ತದೆ'**

ಭಾರತ ವಿಭಜನೆಯಿಂದ ಅಥವಾ ಪಾಕಿಸ್ತಾನ ಸೃಷ್ಟಿಯಿಂದ ಭಾರತದ ಸೈನ್ಯ ದುರ್ಬಲಗೊಳ್ಳಲಿದೆ ಎಂಬ ಹಿಂದುಗಳ ವಾದ ಸರಿಯಲ್ಲ ಎಂದು ಅಂಬೇಡ್ಕರರು ಹೇಳುತ್ತಾರೆ. ಅಲ್ಲದೆ ಈ ಅಂಶಕ್ಕೆ ಪೂರಕವಾಗಿ ಆರ್ಥಿಕ ದೃಷ್ಟಿಕೋನವನ್ನೂ ಸೇರಿಸುವ ಅಂಬೇಡ್ಕರ್‌ರವರು "ಉದ್ದೇಶಿತ ಪಾಕಿಸ್ತಾನದ ಪ್ರಾಂತ್ಯಗಳಿಂದ ಭಾರತದ ಕೇಂದ್ರ ಸರ್ಕಾರ ನಡೆಸಲು ಕೇವಲ 7,13,76,594 ರೂಪಾಯಿ ಮಾತ್ರ ಬರುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಹಿಂದುಸ್ಥಾನದ ಪ್ರಾಂತ್ಯಗಳಿಂದ 51,91,27,729 ರೂಪಾಯಿ ಬರುತ್ತದೆ. ಈ ನಿಟ್ಟಿನಲ್ಲಿ ಆರ್ಥಿಕ ದೃಷ್ಟಿಯಿಂದಲು ಕೂಡ ಪಾಕಿಸ್ತಾನದಿಂದ ಭಾರತದ ಕೇಂದ್ರ ಸರ್ಕಾರಕ್ಕೆ ಅಂತಹ ಆದಾಯವಿಲ್ಲ. ನಿಜ ಹೇಳಬೇಕೆಂದರೆ, ಹಿಂದೂಸ್ತಾನದ ಪ್ರಾಂತ್ಯಗಳಿಂದ ಬಂದ ಹಣದಿಂದ ಉದ್ದೇಶಿತ ಪಾಕಿಸ್ತಾನವನ್ನು ನಿಭಾಯಿಸಬೇಕು, ನಿಭಾಯಿಸಲಾಗುತ್ತಿದೆ. ಆದ್ದರಿಂದ ಪಾಕಿಸ್ತಾನ ಭಾರತದ ಆರ್ಥಿಕತೆಗೆ ಹೊರೆಯೇ ಹೊರತು ಅಷ್ಟೇನು ಸಹಾಯಕ ಅಲ್ಲ" ಎಂದು ಅಂಬೇಡ್ಕರ್ ಹೇಳುತ್ತಾರೆ. (ಪುಟ.101)

**ಕೋಮು ಶಾಂತಿ:** ಹಿಂದೂಗಳು ವ್ಯಕ್ತಪಡಿಸುವ ಮತ್ತೊಂದು ಆತಂಕ ಪಾಕಿಸ್ತಾನ ವಿಭಜನೆಯಾದರೆ ಕೋಮು ಶಾಂತಿಯನ್ನು ಸ್ಥಾಪಿಸುವಲ್ಲಿ ಪಾಕಿಸ್ತಾನದ ಈ ಯೋಜನೆ ಯಶಸ್ಸು ಕಾಣುವುದಿಲ್ಲ ಎಂದು. ಇದಕ್ಕೆ ಅಂಬೇಡ್ಕರರು ಹೇಳುವುದು ಎಲ್ಲಿಯವರೆಗೆ ಸದಾ ಹಗೆ ಸಾಧಿಸುವ ಒಂದು ಬಹುಸಂಖ್ಯಾತ ಸಮುದಾಯವನ್ನು ಸದಾ ಹಗೆ ಸಾಧಿಸುವ ಒಂದು ಅಲ್ಪಸಂಖ್ಯಾತ ಸಮುದಾಯದ ಎದುರು ಬದುರು ನಿಲ್ಲಿಸಲಾಗುತ್ತದೆಯೋ ಅಲ್ಲಿಯವರೆಗೂ ಕೋಮು ವೈಮನಸ್ಯ ಮತ್ತು ಗಲಭೆ ಇದ್ದೇ ಇರುತ್ತದೆ. ಆದ್ದರಿಂದ ಇದಕ್ಕಿರುವ ಅತ್ಯುತ್ತಮ ಪರಿಹಾರವೆಂದರೆ ಅವರಿಬ್ಬರನ್ನು ಪರಸ್ಪರ ಎದುರು ಬದುರು ಇಡದಿರುವುದೇ ಆಗಿದೆ. ಈ ಕಾರಣಕ್ಕಾಗಿ ಇವರಿಬ್ಬರೂ ಪರಸ್ಪರ ಎದುರು ಬದುರಾಗುವುದನ್ನು ತಪ್ಪಿಸಲು ಅಂಬೇಡ್ಕರರು ಪಾಕಿಸ್ತಾನ ಸೃಷ್ಟಿಯಾಗಬೇಕಾದರೆ ಪಾಕಿಸ್ತಾನದಲ್ಲಿರುವ ಹಿಂದೂಗಳನ್ನು ಸಂಪೂರ್ಣವಾಗಿ ಭಾರತಕ್ಕೆ ವರ್ಗಾಯಿಸಬೇಕು ಹಾಗೆಯೇ ಭಾರತದಲ್ಲಿರುವ ಮುಸ್ಲಿಮರನ್ನು ಸಂಪೂರ್ಣವಾಗಿ ಪಾಕಿಸ್ತಾನಕ್ಕೆ ವರ್ಗಾಯಿಸಬೇಕು. ಆಗ ಕೋಮುಗಲಭೆ ಕೊನೆಗೊಳ್ಳುತ್ತದೆ ಎಂಬ ಸಲಹೆ ನೀಡುತ್ತಾರೆ.(ಪು.116). ಮುಂದುವರೆದು ಅಂಬೇಡ್ಕರ್‌ರವರು ಹೀಗಿದ್ದರೂ ಪಾಕಿಸ್ತಾನ ಸೃಷ್ಟಿ ಎಂಬ ಈ ಅಂಶ ಕೋಮು ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸದಿದ್ದರೂ ಇದು ಪ್ರಬಲ ಪಾಲುದಾರ ಮುಸ್ಲಿಮರ ಪ್ರಕ್ಷುಬ್ಧತೆಯಿಂದ ಹಿಂದುಗಳನ್ನು ಮುಕ್ತಗೊಳಿಸಲಿದೆ. ಆದ್ದರಿಂದ ಪಾಕಿಸ್ತಾನ ಸೃಷ್ಟಿಯ ಈ ಯೋಜನೆಯನ್ನು ಹಿಂದೂಗಳು ಏಕೆ ತಿರಸ್ಕರಿಸಬೇಕು ಎಂದು ತಮಗೆ ತಾವೇ ಪ್ರಶ್ನಿಸಿಕೊಳ್ಳಬೇಕಿದೆ ಎನ್ನುತ್ತಾರೆ.

**ಪಾಕಿಸ್ತಾನಕ್ಕೆ ಹಿಂದೂಗಳು ಸೂಚಿಸಿದ್ದ ಪರ್ಯಾಯ:** ಮುಸ್ಲಿಮರು ಪಾಕಿಸ್ತಾನ ಬಯಸಿದ್ದರು. ಅದರಲ್ಲಿ ಎರಡು ಮಾತಿಲ್ಲ. ಆದರೆ ಈ ಸಂದರ್ಭದಲ್ಲಿ ಈ ಸಮಸ್ಯೆಗೆ ಹಿಂದೂಗಳು ಸೂಚಿಸಿದ್ದ ಪರ್ಯಾಯ ಪರಿಹಾರ ಏನಿತ್ತು? ಈ ಬಗ್ಗೆ ಅಂಬೇಡ್ಕರರು ಮುಖ್ಯವಾಗಿ ಹಿಂದೂ ಮಹಾಸಭಾದ ಅಂದಿನ ಅಧ್ಯಕ್ಷರಾದ ಶ್ರೀ ವಿ.ಡಿ.ಸಾವರ್ಕರ್ ಅವರ ವಿಚಾರವನ್ನು ಸುಮಾರು ಹತ್ತು ಪುಟಗಳಷ್ಟು ಪ್ರಸ್ತಾಪಿಸುತ್ತಾರೆ. ಅಂದಹಾಗೆ ಸಾವರ್ಕರ್‌ರವರ ವಿಚಾರವೇನೆಂದರೆ "ಇಂಡಿಯಾದಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಮಸ್ಯೆಗಳಿವೆ. ಹಾಗಂತ ಈ ಸಮಸ್ಯೆಯನ್ನು ಉದಾಸೀನ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ. ಬದಲಿಗೆ ದಿಟ್ಟತನದಿಂದ ಎದುರಿಸಲೇಬೇಕಾಗುತ್ತದೆ. ಹಾಗೆಯೇ ಮುಸ್ಲಿಮರನ್ನು ಹತ್ತಿಕ್ಕುವುದು ಕೂಡ ಥರವಲ್ಲ. ಈ ನಿಟ್ಟಿನಲ್ಲಿ ಈ ಸಂದರ್ಭದಲ್ಲಿ ಭಾರತವನ್ನು ಏಕರೂಪತೆಯ ದೇಶ ಎಂದು ಹೇಳಲು ಕೂಡ ಸಾಧ್ಯವಿಲ್ಲ. ವೈರುಧ್ಯವೆಂದರೆ ಭಾರತ ಎಂಬ ಆ ದೇಶದಲ್ಲಿ ಮುಸ್ಲಿಮರು ಮತ್ತು ಹಿಂದೂಗಳು ಎಂಬ ಎರಡು ರಾಷ್ಟ್ರಗಳಿವೆ ಎಂಬುದನ್ನು ನಾವು ಒಪ್ಪಲೇಬೇಕಾಗುತ್ತದೆ".(ಪು.146). ಹಾಗೆಯೇ ಹೀಗೆ ಹೇಳುವ ಸಾವರ್ಕರ್‌ರವರು "ಹಾಗಿದ್ದರೂ ಭಾರತದೊಳಗೆ ಎರಡು ರಾಷ್ಟ್ರಗಳಿವೆ ಎಂದರೂ ಭಾರತವನ್ನು ಹಿಂದೂಗಳಿಗೊಂದು ಮತ್ತು ಮುಸ್ಲಿಮರಿಗೊಂದು ಎಂದು ಎರಡು ಭಾಗಗಳಾಗಿ ವಿಭಜಿಸಬಾರದು. ಬದಲಿಗೆ ಎರಡು ರಾಷ್ಟ್ರಗಳು ಒಂದೇ ದೇಶದೊಳಗೆ ವಾಸಿಸಬೇಕು, ಒಂದೇ ಸಂವಿಧಾನದ ಅಡಿಯಲ್ಲಿ ಬದುಕಬೇಕು. ಹಾಗೆಯೇ ಆ ಸಂವಿಧಾನ ಹೇಗಿರಬೇಕೆಂದರೆ ಹಿಂದೂ ರಾಷ್ಟ್ರ ಯಜಮಾನನ ಸ್ಥಾನ ಪಡೆದರೆ ಮುಸ್ಲಿಮರ ರಾಷ್ಟ್ರ ಅಧೀನ ಸ್ಥಾನ ಪಡೆದು ಹಿಂದೂರಾಷ್ಟ್ರದೊಡನೆ ಸಹಕಾರದಿಂದ ಬದುಕಬೇಕು" ಎನ್ನುತ್ತಾರೆ.


ಕಾಂಗ್ರೆಸ್‌ನವರಿಗೆ ಹೋಲಿಸಿದರೆ ಸಾವರ್ಕರ್‌ರವರ ನಿಲುವು ಸ್ಪಷ್ಟವಾದದ್ದು ನೇರವಾದದ್ದು, ಮುಚ್ಚುಮರೆಯಿಲ್ಲದ್ದು ಮತ್ತು ಗೊಂದಲರಹಿತವಾದದ್ದು ಎನ್ನುವ ಅಂಬೇಡ್ಕರ್‌ರವರು "ಹೀಗಿದ್ದರೂ ಸಾವರ್ಕರ್ ಮುಸ್ಲಿಮರು ಪ್ರತ್ಯೇಕ ರಾಷ್ಟ್ರ ಎಂಬುದನ್ನು ಒಪ್ಪಿಕೊಳ್ಳುತ್ತಾರೆ, ಅವರು ಪ್ರತ್ಯೇಕ ಧ್ವಜ ಪಡೆಯುವುದು ಸರಿ ಎನ್ನುತ್ತಾರೆ, ಆದರೆ ಹಿಂದೂಗಳು ಸ್ವಂತ ಭೂಮಿ ಪಡೆಯಬಹುದು ಮತ್ತು ಹಿಂದೂಗಳ ಆ ನಿಲುವನ್ನು ಸಾವರ್ಕರ್ ಬೆಂಬಲಿಸುತ್ತಾರೆ. ಆದರೆ ಅದೇ ಸಮಯಕ್ಕೆ ಸಾವರ್ಕರ್ ಮುಸ್ಲಿಮರಿಗೆ ಅದನ್ನು ಅಂದರೆ ಅವರಿಗೆ ಸ್ವಂತ ಭೂಮಿಯನ್ನು ನಿರಾಕರಿಸುತ್ತಾರೆ. ಆದ್ದರಿಂದ ಸಾವರ್ಕರ್‌ರವರ ಈ ನಿಲುವು ವಿಲಕ್ಷಣ ಅಲ್ಲದಿದ್ದರೂ ತರ್ಕಬದ್ಧವಲ್ಲದ್ದಂತು ಖಂಡಿತ ಹೌದು" ಎನ್ನುತ್ತಾರೆ. ಹಾಗೆಯೇ ಸಾವರ್ಕರ್‌ರ ಈ ಯೋಜನೆ ದೇಶದ ಭದ್ರತೆ ಮತ್ತು ಸುರಕ್ಷತೆಗೆ ಧಕ್ಕೆ ತರಲಿದೆ ಎನ್ನುವ ಅಂಬೇಡ್ಕರ್‌ರವರು "ಒಂದು ದೇಶದೊಳಗೆ ಎರಡು ರಾಷ್ಟ್ರಗಳು ಬದುಕಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅಕ್ಷರಶಃ ಕಷ್ಟ ಮತ್ತು ತಮ್ಮ ಯೋಜನೆ ಸರಿಯೇ ಎಂಬುದನ್ನು ಸ್ವತಃ ಸಾವರ್ಕರ್‌ರವರೇ ಪರಿಶೀಲಿಸಿಕೊಳ್ಳಬೇಕು" ಎನ್ನುತ್ತಾರೆ.



ಇನ್ನು ಪಾಕಿಸ್ತಾನ ಕುರಿತ ಹಿಂದೂಗಳ ಅಭಿಪ್ರಾಯದಲ್ಲಿ ಬರುವ ಮತ್ತೊಂದು ಪ್ರಮುಖ ಪಾತ್ರ ಅಥವಾ ವ್ಯಕ್ತಿ ಅದು ಮಹಾತ್ಮ ಗಾಂಧಿಯವರು.

ಗಾಂಧಿಯವರ ನಿಲುವೆಂದರೆ ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಸೌಹಾರ್ದತೆಯಿಂದ ಬದುಕಬೇಕು ಒಂದೇ ದೇಶ ಮತ್ತು ಒಂದೇ ರಾಷ್ಟ್ರದೊಳಗೆ ಎಂಬುದು. ಇದರ ಬಗ್ಗೆ ಅಂಬೇಡ್ಕರ್‌ರವರು ಹೇಳುವುದು "ಹಿಂದೂ–ಮುಸ್ಲಿಂ ಐಕ್ಯತೆಯನ್ನು ಸಾಧಿಸಲು ಗಾಂಧೀಜಿಯವರ ಇಂತಹ ಭಾವೋನ್ನತ್ತ ಪ್ರಯತ್ನದ ನಡುವೆಯೂ ಒಟ್ಟಾರೆ ಅವರ ಪ್ರಯತ್ನದ ಅವಧಿಯ ಅಂದರೆ 1920 ರಿಂದ 1940 ನಡುವಿನ ಕತೆ ಓದುಗನ ಹೃದಯ ಹಿಂಡುವಂತಹದ್ದು, ತೀವ್ರಥರದ ನೋವು ಉಂಟು ಮಾಡುವಂತಹದ್ದು. ಈ ನಿಟ್ಟಿನಲ್ಲಿ 20 ವರ್ಷಗಳ ಈ ಒಟ್ಟಾರೆ ಅವಧಿ ಹಿಂದು ಮತ್ತು ಮುಸ್ಲಿಮರ ನಡುವೆ ನಡೆದ ಭೀಕರ ನಾಗರಿಕ ಯುದ್ಧದ ದಾಖಲೆಯಾಗಿ ಉಳಿಯುತ್ತದೆ ಎಂದರೆ ಅದು ಅತಿಶಯೋಕ್ತಿಯೆನಿಸದು". (ಪುಟ.184).

ಈ ದಿಸೆಯಲ್ಲಿ ಪಾಕಿಸ್ತಾನಕ್ಕೆ ಪರ್ಯಾಯ ಏನು ಎಂಬ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರು ಹೇಳುವುದು "ಪಾಕಿಸ್ತಾನ ಕುರಿತ ಹಿಂದೂ ಮಹಾಸಭಾದ ಯೋಜನೆ ದೇಶದ ಐಕ್ಯತೆಗೆ ಹಾದಿ ತೆರೆಯುವುದಿಲ್ಲ, ವ್ಯತಿರಿಕ್ತವಾಗಿ ದೇಶದ ಅಭಿವೃದ್ಧಿಗೆ ಅದು ತಡೆಗೋಡೆಯಾಗಲಿದೆ. ಹಾಗೆಯೇ ಹಿಂದುಸ್ತಾನ ಹಿಂದೂಗಳಿಗಾಗಿ ಎಂಬ ಹಿಂದೂ ಮಹಾಸಭಾದ ಅಧ್ಯಕ್ಷರ ಘೋಷಣೆ ಅಕ್ಷರಶಃ ಅಹಂಕಾರದ್ದಷ್ಟೆ ಅಲ್ಲದೆ ಮತಿಗೇಡಿತನದ್ದು ಆಗಿದೆ" ಎಂದು. ಹಾಗೆಯೇ ಮುಸ್ಲಿಮರನ್ನು ತುಷ್ಟೀಕರಿಸುವ ಕಾಂಗ್ರೆಸ್‌ನ ನಿಲುವಿನ ಬಗ್ಗೆ ಅವರು ಹೇಳುವುದು "ತುಷ್ಟೀಕರಣವೆನ್ನುವುದು ಆಕ್ರಮಣಕಾರನನ್ನು ಆತ ಮಾಡುವ ಕೊಲೆಗಳು, ಲೂಟಿ, ದಹನ ಇತ್ಯಾದಿಗಳ ಹೊರತಾಗಿಯೂ ಆತನನ್ನು ಕೊಂಡುಕೊಳ್ಳುವುದೇ ಆಗಿದೆ. ಈ ತುಷ್ಟೀಕರಣಕ್ಕೆ ಕೊನೆ ಎಂಬುದೇ ಇರುವುದಿಲ್ಲ ಮತ್ತು ಇದಕ್ಕೆ ಪರಿಹಾರವೆಂದರೆ ಆತನೊಡನೆ ಒಂದು ಒಪ್ಪಂದಕ್ಕೆ ಬರುವುದೇ ಆಗಿದೆ. ಆ ಒಪ್ಪಂದವೆಂದರೆ ಅದು ಪಾಕಿಸ್ತಾನವಾಗಿದೆ". (ಪುಟ.370).




ಅಂದಹಾಗೆ 1939 ರವರೆಗೂ ಭಾರತದಲ್ಲಿ ಮುಸ್ಲಿಮರು ತಮಗೆ ಪ್ರತ್ಯೇಕ ದೇಶ ಬೇಕು ಎಂಬ ತಮ್ಮ ಆ ಬೇಡಿಕೆಯನ್ನು ಅಷ್ಟು ತೀವ್ರ ಥರಕ್ಕೆ ಕೊಂಡೊಯ್ದಿರಲೇ ಇಲ್ಲ. ಯಾಕೆಂದರೆ ಮುಸ್ಲಿಮರ ಅಂದಿನ ಪ್ರಶ್ನಾತೀತ ನಾಯಕ ಮಹಮ್ಮದ್ ಅಲಿ ಜಿನ್ನಾ ಭಾರತದಲ್ಲಿ ಹಿಂದೂಗಳೊಡನೆ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಿದ್ದರು. ಆದರೆ 1939ರಲ್ಲಿ ಅವರು ತಮ್ಮ ಈ ನಿಲುವಿನಿಂದ ಸಂಪೂರ್ಣ ಉಲ್ಟಾ ಹೊಡೆದರು. ಇದಕ್ಕೆ ಕಾರಣ? ಹಿಂದೂ ಆಡಳಿತದ ಭಯ. ಹೌದು, 1937ರಲ್ಲಿ ಚುನಾವಣೆಗಳು ನಡೆದು ಭಾರತದ ಅದರಲ್ಲೂ ಹಿಂದೂಗಳ ಪ್ರಾಬಲ್ಯದ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಿತು. 2 ವರ್ಷ 3 ತಿಂಗಳು ಅಧಿಕಾರ ನಡೆಸಿತು. 2 ವರ್ಷ 3 ತಿಂಗಳು, ಏಕೆಂದರೆ 1939ರಲ್ಲಿ ಎರಡನೇ ಮಹಾಯುದ್ಧದ ಹಿನ್ನೆಲೆಯಲ್ಲಿ ಅಂತಹ ಆಯ್ಕೆಗೊಂಡ ಸರ್ಕಾರವನ್ನು ರದ್ದುಗೊಳಿಸಲಾಯಿತು. ಈ ಸಮಯದಲ್ಲಿ ಕಾಂಗ್ರೆಸ್ ಅರ್ಥಾತ್ ಹಿಂದೂಗಳು ಅಡಳಿತ ನಡೆಸಿದ ಪ್ರಾಂತ್ಯಗಳಲ್ಲಿ ಆಗ ಒಂದಷ್ಟು ಕೋಮುಗಲಭೆಗಳು ನಡೆದವು. ಆ ಸಂದರ್ಭದಲ್ಲಿ ಉಂಟಾದ ಸಾವು ನೋವುಗಳು, ಕಾಂಗ್ರೆಸ್ ಸರ್ಕಾರಗಳು ಅದಕ್ಕೆ ಸ್ಪಂಧಿಸಿದ ರೀತಿ, ಅಲ್ಲದೆ 1939 ರಷ್ಟೊತ್ತಿಗೆ ಬೆಳವಣಿಗೆ ಕಂಡ ಹಿಂದೂ ಮಹಾಸಭಾ ಮತ್ತು ಮಹಾಸಭಾದವರ ಹಿಂದೂ ಸಾಮ್ರಾಜ್ಯ, ಹಿಂದೂ ಆಡಳಿತ ಕೂಗು ಮುಸ್ಲಿಮರನ್ನು ಕಂಗೆಡಿಸಿತು. ಒಟ್ಟಾರೆ ಈ ಬೆಳವಣಿಗೆಗಳು ಮಹಮ್ಮದ್ ಆಲಿ ಜಿನ್ನಾರವರಿಗೆ ಭಾರತದ ಬಗೆಗಿನ ತಮ್ಮ ನಿಲುವಿನಲ್ಲಿ ಇದ್ದಕ್ಕಿದ್ದಂತೆ ಸಂಪೂರ್ಣ ಉಲ್ಟಾ ಹೊಡೆಯಲು ಕಾರಣವಾಯಿತು.

ಈ ಸಂದರ್ಭದಲ್ಲಿ ಹಿಂದೂ ಆಡಳಿತದ ಬಗ್ಗೆ ಅಂಬೇಡ್ಕರ್ ತಮ್ಮ ಅಭಿಪ್ರಾಯ ಹೇಳುತ್ತಾರೆ. ಅದನ್ನು ದಾಖಲಿಸುವ ಅಗತ್ಯವಿದೆ. ಅಂಬೇಡ್ಕರರು ಹೇಳುತ್ತಾರೆ, "ಹಿಂದೂ ಆಡಳಿತವೆಂಬುದು ನಿಜವಾದರೆ ಅನುಮಾನವೇ ಬೇಡ ಈ ದೇಶಕ್ಕೆ ಅದು ಭಾರಿ ವಿಪತ್ತು ತಂದೊಡ್ಡಲಿದೆ. ಈ ವಿಷಯದ ಬಗ್ಗೆ ಹಿಂದೂಗಳು ಏನು ಹೇಳುತ್ತಾರೋ ಗೊತ್ತಿಲ್ಲ. ಆದರೆ ಜನಸಾಮಾನ್ಯರ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಗೆ ಹಿಂದುತ್ವವೆಂಬುದು ಶಾಪವಾಗಿದೆ. ಈ ಹಿನ್ನೆಲೆಯಲ್ಲಿ ಅದು ಪ್ರಜಾಪ್ರಭುತ್ವಕ್ಕೆ ಹೊಂದಿಕೊಳ್ಳದಂತಹದ್ದಾಗಿದೆ. ಆ ಕಾರಣದಿಂದ ಯಾವುದೇ ಬೆಲೆ ತೆತ್ತಾದರೂ ಸರಿ ಅದನ್ನು ತಡೆಯಬೇಕಿದೆ". ಇದನ್ನು ತಡೆಯಲು ಅಂಬೇಡ್ಕರ್‌ರವರು ಜಿನ್ನಾರವರಿಗೆ ನೀಡುವ ಸಲಹೆ "ಬಹುಸಂಖ್ಯೆಯ ಮುಸ್ಲಿಮರ ಆಶಯದ ರೀತಿಯಲ್ಲಿಯೇ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಗತ್ಯತೆಗಳನ್ನು ಹೊಂದಿರುವ ಅನೇಕ ವರ್ಗಗಳು ಹಿಂದೂ ಸಮಾಜದಲ್ಲಿವೆ. ಮೇಲ್ಜಾತಿ ಹಿಂದೂಗಳಿಂದ ಶತಶತಮಾನಗಳಿಂದ ಮಾನವ ಹಕ್ಕುಗಳನ್ನು ನಿರಾಕರಿಸಲ್ಪಟ್ಟಿರುವ ಆ ವರ್ಗಗಳು ಒಂದು ಮುಖ್ಯ ಗುರಿಯನ್ನು ತಲುಪಲು ಮುಸ್ಲಿಮರೊಡನೆ ಹೊಂದಾಣಿಕೆಗೆ ಸಿದ್ಧರಿದ್ದಾರೆ. ಖಂಡಿತವಾಗಿ ಜಿನ್ನಾರವರು ಈ ಅವಕಾಶ ಬಳಸಿಕೊಳ್ಳಬಹುದು, ಒಂದು ಸಂಯುಕ್ತ ಕೋಮುವಾರು ಅಜೆಂಡಾದಿಂದ ಹೊರತಾದ ಪಕ್ಷವಾಗಿ ಹೊರಹೊಮ್ಮಿ ಜಿನ್ನಾ ಯಶಸ್ಸು ಕಾಣಬಹುದು". ಜಿನ್ನಾರವರು ಅಂಬೇಡ್ಕರರ ಈ ಸಲಹೆಗೆ ಗಮನಕೊಟ್ಟ ಹಾಗೆ ಕಾಣುವುದಿಲ್ಲ. ಬದಲಿಗೆ ಪ್ರತ್ಯೇಕ ಪಾಕಿಸ್ತಾನದ ಪರ ಮಹಮದ್ ಅಲಿ ಜಿನ್ನಾ ತಮ್ಮ ಬಿಗಿ ನಿಲುವು ತಳೆಯುತ್ತಾರೆ. ಆ ಮೂಲಕ ಪಾಕಿಸ್ತಾನವೆಂಬ ಅನಿವಾರ್ಯತೆ ಸೃಷ್ಟಿಯಾಗುತ್ತದೆ.

ದುರಂತವೆಂದರೆ ಆ ಸಮಯದಲ್ಲಿ ಅಂದರೆ 1939ರ ಆ ಸಂದರ್ಭದಲ್ಲಿ ಮುಸ್ಲಿಮೇತರರಿಗೆ ಎರಡು ಆಯ್ಕೆಗಳು ಉಳಿಯುತ್ತವೆ. ಒಂದು: ಭಾರತದ ಸ್ವಾತಂತ್ರ್ಯ ಎರಡು: ಭಾರತದ ಏಕತೆ. ಅಕ್ಷರಶಃ ಅಂಬೇಡ್ಕರ್ ರವರು ಓರ್ವ ಸ್ವಾತಂತ್ರ್ಯಪ್ರೇಮಿಯಾಗಿ ದೇಶಪ್ರೇಮಿಯಾಗಿ ಮೊದಲನೇ ಆಯ್ಕೆಯನ್ನು ಅಂದರೆ ದೇಶದ ಸ್ವಾತಂತ್ರ್ಯವನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಈ ಸಂದರ್ಭದ ಅವರ ಹೇಳಿಕೆ ಉಲ್ಲೇಖಿಸುವುದಾದರೆ "ಮೊದಲಿಗೆ ನಾನು ಭಾರತದ ಏಕತೆಗೆ ಹೋಲಿಸಿದರೆ ತತಕ್ಷಣಕ್ಕೆ ಭಾರತದ ಸ್ವಾತಂತ್ರ್ಯಕ್ಕೆ ಆದ್ಯತೆ ಕೊಡುತ್ತೇನೆ". (ಪುಟ.367). ಏಕೆಂದರೆ ಆ ಸಂದರ್ಭ ಹೇಗಿತ್ತೆಂದರೆ ಏನಾದರೂ ಭಾರತದ ಏಕತೆಯೇ ಮುಖ್ಯ, ದೇಶವು ಯಾವುದೇ ಕಾರಣಕ್ಕೂ ಹಿಂದೂ ಮತ್ತು ಮುಸ್ಲಿಮರ ನಡುವೆ ವಿಭಜನೆಯಾಗಬಾರದು, ಐಕ್ಯವಾಗಿರಬೇಕು ಎಂದು ಕುಳಿತಿದ್ದರೆ ಭಾರತದಲ್ಲಿ ಬ್ರಿಟೀಷರ ಆಡಳಿತ ಅಬಾಧಿತವಾಗಿ ಮುಂದುವರೆದಿರುತ್ತಿತ್ತು. ಭಾರತ ಸ್ವಾತಂತ್ರ್ಯದ ತನ್ನ ಕನಸನ್ನು ಅಕ್ಷರಶಃ ಕಳೆದುಕೊಳ್ಳುವ ಅಪಾಯ ಎದುರಿಗಿತ್ತು. ಬ್ರಿಟೀಷರು ಇದನ್ನು ಬಯಸಿದ್ದರು ಕೂಡ! ಈ ನಿಟ್ಟಿನಲ್ಲಿ ಈ ಅಪಾಯವನ್ನು ಉಲ್ಲೇಖಿಸಿ ಅಂಬೇಡ್ಕರ್ ಅವರು ಹೇಳುವುದು "ಒಂದಂತು ನಿಜ, ದೇಶವಿಭಜನೆಯ ಈ ಸಮಸ್ಯೆ ಬಗೆಹರಿಯದಿದ್ದರೆ ಭಾರತದ ಸ್ವಾತಂತ್ರ್ಯ ಶೈತ್ಯಾಗಾರ ಸೇರಲಿದೆ. ಅಂದಹಾಗೆ ಹೀಗೆ ಭಾರತದ ಸ್ವಾತಂತ್ರ್ಯ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಡುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವ ಅನೇಕ ಭಾರತೀಯರು ನಮ್ಮ ನಡುವೆ ಇದ್ದಾರೆ. ನಿಜ ಹೇಳುತ್ತೇನೆ ನಾನು ಅಂತಹವರಲ್ಲಿ ಒಬ್ಬ".(ಪುಟ.385). "ಈ ನಿಟ್ಟಿನಲ್ಲಿ ನನ್ನ ನಿಲುವೇನೆಂದರೆ ಭಾರತವನ್ನು ಮುಸ್ಲಿಂ ಭಾರತ ಮತ್ತು ಮುಸ್ಲಿಮೇತರ ಭಾರತ ಎಂದು ಎರಡು ಭಾಗವಾಗಿ ವಿಭಜಿಸುವುದು. ಸದ್ಯದ ಪರಿಸ್ಥಿತಿಯಲ್ಲಿ ಈ ಎರಡು ದೇಶಗಳ ರಕ್ಷಣೆಯ ದೃಷ್ಟಿಯಲ್ಲಿ ಇದೇ ಅತ್ಯಂತ ಸುರಕ್ಷಿತ ಮತ್ತು ನಿಖರ ನಿರ್ಧಾರವಾಗಿದೆ".

ಕೊನೆಯದಾಗಿ, ಅಂಬೇಡ್ಕರರು ತಮ್ಮ ಈ ಕೃತಿಯ ಪ್ರಥಮ ಆವೃತ್ತಿಯ ಮುಖಪುಟದಲ್ಲಿ ಬಳಸಿಕೊಂಡಿರುವ ಒಂದು ಸಾಲು ಹೀಗಿದೆ, "ಹೆಚ್ಚು ಬುದ್ಧಿ ಕೊಡು, ಓ ದೇವರೇ, ಹೆಚ್ಚು ಬುದ್ಧಿ ಕೊಡು. ಇಲ್ಲದಿದ್ದರೆ ನಾವು ಗೆಲ್ಲಬಹುದಾದ ಈ ಸುಂದರ ಹೂದೋಟವನ್ನು ನಾವು ಬಹಳ ಕೆಟ್ಟದಾಗಿ ಹಾಳುಮಾಡಿಬಿಡುತ್ತೇವೆ". ಹೌದು, ಅಂಬೇಡ್ಕರರ ಆತಂಕದಿಂದ ಒಡಮೂಡಿರುವ ಈ ಸಾಲು ಖಂಡಿತ ಅವರ ಇಡೀ ಕೃತಿಯ ಸಾರವನ್ನು, ಆತಂಕವನ್ನು ಓದುಗನಿಗೆ ವಿಶೇಷವಾಗಿ ಪ್ರತಿಯೊಬ್ಬ ದೇಶಪ್ರೇಮಿಗೆ ಒಂದೇ ಸಾಲಿನಲ್ಲಿ ದಾಟಿಸುತ್ತದೆ. □

(22ನೇ ಪುಟದಿಂದ)

# ...ಬಂಧಿಸಿರುವ ಸರಪಳಿಗಳು

ಕಂಡುಕೊಂಡೂ, ತಂದೆ–ತಾಯಿಯರ ಜೊತೆ ಭಾವಸಂಬಂಧದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ 'ಜಾತಿ' ಅಡ್ಡಿಯಾಯಿತು; '[ಹಿಂದುಗಳ] ಉದಾತ್ತ ಗುಣವೂ, ನೈತಿಕತೆಯೂ ಜಾತಿಯ ಕಟ್ಟಿನಲ್ಲಿ ಬಂಧಿಯಾಗಿದೆ' ಎಂಬ ಕಾರಣಕ್ಕೆ ಆ ಹುಡುಗಿ, ಅವಳ ತಾಯಿ ಅನುಭವಿಸುತ್ತಿರಬಹುದಾದ ನೋವುಗಳನ್ನು ಅರ್ಥ ಮಾಡಿಕೊಳ್ಳುವ 'ಸ್ವತಂತ್ರ ಸಂವೇದನೆ'ಯನ್ನು ನಾವು ಕಳೆದುಕೊಂಡಿದ್ದೇವೆ; ತಂದೆಯ ಸೇಡು–ಆತ್ಮಹತ್ಯೆಗಳನ್ನು ಹಿಡಿದು ಕಟ್ಟಿದ 'ಜಾತಿ ಕಟ್ಟಿ'ನ ಅಪರಾಧವನ್ನು ಕಾಣುವ ಪ್ರಜ್ಞೆಯ ಸ್ವಾತಂತ್ರ್ಯವನ್ನು ನಾವು ಕಳೆದುಕೊಂಡಿದ್ದೇವೆ. 'ಜಾತಿಯು ಸಾರ್ವಜನಿಕ ಸ್ಫೂರ್ತಿಯನ್ನು ಕೊಂದಿದೆ' ಎಂಬ ಅಂಬೇಡ್ಕರರ ಮಾತಿನ ಸಂವೇದನೆ ಇದು. 'ಸ್ವಾತಂತ್ರ್ಯ'ದ ನಿರೂಪಣೆಯನ್ನು ಈ ದುರಂತವೂ ನಮಗೆ ಮನನ ಮಾಡಬೇಕು–ಸರಿ. ಕಿಲ್ವಾನ್‌ಮಣಿ–ಖೈರಲಾಂಜಿಯ ಹಿಂಸೆಗಳಲ್ಲಿ ನಾವು 'ಸ್ವಾತಂತ್ರ್ಯದ ಕಗ್ಗೊಲೆ'ಯನ್ನು ಅನುಭವಿಸದಷ್ಟು ಸಂವೇದನೆಯ ಸ್ವಾತಂತ್ರ್ಯ ಕಳೆದುಕೊಂಡಿರುವುದರಿಂದ, ಈ ಘಟನೆಗೆ, ಇಂತಹ ಸಾವಿರಾರು ಘಟನೆಗಳಿಗೆ ನಾವೂ ಹೊಣೆ ಎಂದು ಪಶ್ಚಾತಾಪ ಪಡುವ ಸ್ವಾತಂತ್ರ್ಯವನ್ನೂ ನಾವು ಕಳೆದುಕೊಂಡಿದ್ದೇವೆ.

**ಅಂಬೇಡ್ಕರ್ ಹೇಳ್ತಾರೆ:**

"ಮನುಷ್ಯ ತನ್ನ ಗುಂಪಿನ ಜೊತೆ ಹೊಂದಿಕೊಳ್ಳುವುದು ಕಷ್ಟ ಎಂಬುದು ನಿಜ. ಆದರೆ, ಅವರನ್ನು ಬಿಟ್ಟು ಬದುಕಲಾರ ಎಂಬುದೂ ನಿಜ. ತನ್ನಿಚ್ಛೆಯಂತೆ ತಾನಿದ್ದೂ ತನ್ನ ಗುಂಪಿನ ಜೊತೆ ಬದುಕಲು ಆತ ಇಚ್ಚಿಸುತ್ತಾನೆ... ಆದರೆ ಈಗಿರುವ ಕಾನೂನು ಕೂಡ ಪ್ರತಿ ಜಾತಿಗೂ ತನ್ನ ಜಾತಿಯ ಸದಸ್ಯರನ್ನು ಹದ್ದುಬಸ್ತಿನಲ್ಲಿಡುವ ಹಾಗು ಹದ್ದು ಮೀರಿದವರನ್ನು ಶಿಕ್ಷಿಸುವ ಸ್ವಾಯತ್ತತೆಯನ್ನು ನೀಡುತ್ತಿದೆ. ಸಂಪ್ರದಾಯಸ್ಥರ ಸುಪರ್ದಿನಲ್ಲಿರುವ ಜಾತಿ ವ್ಯವಸ್ಥೆಯು ಸುಧಾರಕರನ್ನು ಹಿಂಸಿಸುವ ಮತ್ತು ಸುಧಾರಣೆಯನ್ನು ಕೊಲ್ಲುವ ಅಸ್ತ್ರವಾಗಿದೆ" (ಮೇಲಿನದ್ದೇ, ಪುಟ 56)

ಅಂಬೇಡ್ಕರರನ್ನು 'ದಲಿತ ವಿಮೋಚಕ' ಎಂದು ಮಾತ್ರ ಕಾಣುವ ಕಣ್ಣುಪಟ್ಟಿಯೂ, ನಮಗೆ ನಮ್ಮ 'ಸಂವೇದನೆಯ ಸ್ವಾತಂತ್ರ್ಯ' ಇಲ್ಲದಿರುವುದರಿಂದಲೇ ಬಂದಿರಬೇಕು. ಅಂಬೇಡ್ಕರ್ ಮೇಲ್ಜಾತಿಯ ಜನ ತಮ್ಮನ್ನು ಬಂಧಿಸಿರುವ ಜಾತಿ ಸಂಕೋಲೆಗಳಿಂದ ಬಿಡಿಸಿಕೊಂಡು, ಅವರು ತಮ್ಮ 'ಉದಾತ್ತ ಗುಣ ಹಾಗು ನೈತಿಕತೆ'ಯ ಸ್ವಾತಂತ್ರ್ಯ ಪಡೆಯಲೆಂದು ಹಂಬಲಿಸುತ್ತಿದ್ದರು. ಅವರ 'ಅನಿಹಿಲೇಷನ್ ಆಫ್ ಕ್ಯಾಸ್ಟ್' ಹಿಂದು ಮೇಲ್ಜಾತಿಯ ಜನಗಳಿಗೆ ತಮ್ಮನ್ನು ಬಂಧಿಸಿರುವ ಸರಪಳಿಗಳನ್ನು ತೋರಿಸುವ ಕೃತಿಯಾಗಿ ಓದಿಕೊಳ್ಳಬಹುದು. ಅಂಬೇಡ್ಕರ್ ಪ್ರಾಯೋಗಿಕವಾಗಿ ಇನ್ನೂ ಎರಡು ಹೆಜ್ಜೆ ಮುಂದಿಟ್ಟರು. ಅವರು ತಯಾರಿಸಿ ಮಂಡಿಸಿದ 'ಹಿಂದು ಕೋಡ್ ಬಿಲ್' ತನ್ನ ಗುಂಪಿಗೆ ಹೊಂದಿಕೊಳ್ಳಲಾಗದ ಮೇಲ್ಜಾತಿಯ ಜನರಿಗೆ ತಮ್ಮ ಸ್ವಾತಂತ್ರ್ಯವನ್ನು ಕಾನೂನುಬದ್ಧವಾಗಿ ಪಡೆಯುವ ಅವಕಾಶವನ್ನು ಕೊಡುವಂತಹದಾಗಿತ್ತು. ಆ ಮಸೂದೆಯ ಮೇಲೆ ಸಂಸತ್ತಿನಲ್ಲಿ ನಡೆದ ಚರ್ಚೆಗೆ ಉತ್ತರಿಸುವಾಗ ಅಂಬೇಡ್ಕರ್ ಮಾತುಗಳನ್ನು ನೋಡಿ: 'ಇದು ಹಿಂದುಗಳಲ್ಲಿ ಈಗಾಗಲೇ ಇರುವ ಅನೇಕ ನ್ಯಾಯ ಸಂಹಿತೆಗಳಲ್ಲಿ ಉತ್ತಮವಾದದನ್ನು ಸಾರ್ವತ್ರಿಕಗೊಳಿಸುವ ಸುಧಾರಣ ಕ್ರಮ ಮಾತ್ರವಾಗಿದೆ'; 'ಹಿಂದುಗಳು ತಮ್ಮ ಜಾತಿಗಳೊಳಗೆ ಮದುವೆ ಸಂಬಂಧ ಏರ್ಪಡಿಸಿಕೊಳ್ಳುವುದನ್ನು ಈ ಸಂಹಿತೆಯು ನಿಷೇಧಿಸುವುದಿಲ್ಲ. ಆದರೆ ಯಾರಾದರೂ ಸ್ವ ಇಚ್ಛೆಯಿಂದ ಜಾತಿಯ ಆಚೆಗೆ ವಿವಾಹ ಸಂಬಂಧವನ್ನು ಬೆಳೆಸುವುದನ್ನು ಕಾನೂನುಬದ್ಧವಾಗಿಸುತ್ತದೆಯಷ್ಟೇ..'; 'ಒಬ್ಬ ಬ್ರಾಹ್ಮಣನು ತನ್ನ ಜಾತಿಯವನೊಬ್ಬನನ್ನು ದತ್ತು ತೆಗೆದುಕೊಳ್ಳುವುದನ್ನು ಈ ಸಂಹಿತೆಯು ನಿಷೇಧಿಸುವುದಿಲ್ಲ. ಆದರೆ, ಯಾರಾದರೂ ಸಜ್ಜನ ಬ್ರಾಹ್ಮಣನು ಅನ್ಯಜಾತಿಯವನೊಬ್ಬನನ್ನು ದತ್ತು ತೆಗೆದುಕೊಳ್ಳಲು ಇಚ್ಛಿಸಿದರೆ, ಅದನ್ನು ಈ ಸಂಹಿತೆಯು ಕಾನೂನುಬದ್ಧಗೊಳಿಸುತ್ತದೆ'. (ಬಿ.ಆರ್.ಅಂಬೇಡ್ಕರ್ ಅವರ ಆಯ್ದ ಬರಹಗಳು, ಅಕ್ಷರ ಪ್ರಕಾಶನ, ಪುಟ 91–107). 'ಸ್ವಾತಂತ್ರ್ಯ' ಎಂಬ ಪದದಲ್ಲಿ ಅಡಕವಾಗಿರುವ ತತ್ವವೂ ಅಂಬೇಡ್ಕರರ ಮಾತು–ಬರಹಗಳಲ್ಲಿ ಒಂದು ನಿರಂತರ ಸೂತ್ರದ ಎಳೆಯ ಹಾಗೆ ನೇಯ್ದುಕೊಂಡಿದೆ.




**"ಮನುಷ್ಯ ತನ್ನ ಗುಂಪಿನ ಜೊತೆ ಹೊಂದಿಕೊಳ್ಳುವುದು ಕಷ್ಟ ಎಂಬುದು ನಿಜ. ಆದರೆ, ಅವರನ್ನು ಬಿಟ್ಟು ಬದುಕಲಾರ ಎಂಬುದೂ ನಿಜ. ತನ್ನಿಚ್ಛೆಯಂತೆ ತಾನಿದ್ದೂ ತನ್ನ ಗುಂಪಿನ ಜೊತೆ ಬದುಕಲು ಆತ ಇಚ್ಚಿಸುತ್ತಾನೆ.....ಆದರೆ ಈಗಿರುವ ಕಾನೂನು ಕೂಡ ಪ್ರತಿ ಜಾತಿಗೂ ತನ್ನ ಜಾತಿಯ ಸದಸ್ಯರನ್ನು ಹದ್ದುಬಸ್ತಿನಲ್ಲಿಡುವ ಹಾಗು ಹದ್ದು ಮೀರಿದವರನ್ನು ಶಿಕ್ಷಿಸುವ ಸ್ವಾಯತ್ತತೆಯನ್ನು ನೀಡುತ್ತಿದೆ. ಸಂಪ್ರದಾಯಸ್ಥರ ಸುಪರ್ದಿರುವ ಜಾತಿ ವ್ಯವಸ್ಥೆಯು ಸುಧಾರಕರನ್ನು ಹಿಂಸಿಸುವ ಮತ್ತು ಸುಧಾರಣೆಯನ್ನು ಕೊಲ್ಲುವ ಅಸ್ತ್ರವಾಗಿದೆ"**

ರೋಹಿತ್ ವೇಮುಲನ ಸಾವನ್ನು ನಾವು 'ಆತ್ಮ ಹತ್ಯೆಯಲ್ಲ, ವ್ಯವಸ್ಥೆ ನಡೆಸಿದ ಕೊಲೆ' ಎನ್ನುತ್ತೇವೆ; ಸಾಮಾಜಿಕ–ರಾಜಕೀಯ ವಾಸ್ತವಗಳನ್ನು ಮುಂದಿಟ್ಟು ಹಾಗೆ ಹೇಳುವುದು ಸರಿಯಾಗಿಯೇ ಇದೆ. ಆ ಸಾವನ್ನು ಮತ್ತೊಂದು ಕಣ್ಣೋಟದಿಂದಲೂ ನೋಡಬಹುದು. ರೋಹಿತ್ ತಾನು ಒಬ್ಬ ದಲಿತ ಎಂಬ ಗುರುತನ್ನು ಸ್ವಾಭಿಮಾನದಿಂದ ತೋರಿಸಲು ಇಚ್ಛಿಸುತ್ತಿದ್ದ; ದಲಿತರ ಮೇಲಾಗುವ ಅನ್ಯಾಯಗಳ ವಿರುದ್ಧ ಸಂಘಟಿತ ಹೋರಾಟದ ನೇತೃತ್ವ ನೀಡಲು ಬಯಸಿದ್ದ; ದಲಿತ–ಅಲ್ಪಸಂಖ್ಯಾತರ ಐಕ್ಯತೆಗಾಗಿ ಹೊಸ ವೇದಿಕೆ ಸಂಘಟಿಸುವ ಹುಮ್ಮಸ್ಸಿನಲ್ಲಿದ್ದ–ಇವೆಲ್ಲವೂ ಹೈದ್ರಾಬಾದ್ ವಿಶ್ವವಿದ್ಯಾಲಯದ ಅಧಿಕಾರಸ್ಥರಿಗೂ, ಬಲಪಂಥೀಯ ರಾಜಕೀಯಕ್ಕೂ ಅಪಥ್ಯವಾಗಿತ್ತು. ಅದೇ ಹೊತ್ತಲ್ಲಿ ಆತ ಒಬ್ಬ ಅಧ್ಯಯನಾಸಕ್ತ ವಿದ್ಯಾರ್ಥಿಯಾಗಿದ್ದ; ಭೌತ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಖಭೌತ ವಿಜ್ಞಾನದಲ್ಲಿ ಸಂಶೋಧನೆ ನಡೆಸುತ್ತಿದ್ದ; ಜನರಿಗೆ ಖಭೌತ ವಿಜ್ಞಾನದ ಸೋಜಿಗಗಳನ್ನು ನಿರೂಪಿಸುವ ಲೇಖಕನಾಗಬೇಕು ಎಂದೂ ಇದ್ದ. ಅಧಿಕಾರಸ್ಥರು ಆತ ಒಂದೋ ಅಧಿಕಾರ ವಿರೋಧಿ ಹೋರಾಟಗಾರನಾಗಿ ವಿಶ್ವವಿದ್ಯಾಲಯದಿಂದ ಹೊರ ಹೋಗಲಿ; ಇಲ್ಲವೆ ಅಧಿಕಾರ ವ್ಯವಸ್ಥೆಯ ಎಲ್ಲ ಆಟಾಟೋಪಗಳನ್ನು ತಲೆ ಬಾಗಿ ಸಹಿಸಿಕೊಂಡು, ಶರಣಾಗಿ ಸಂಶೋಧನಾ ಪದವಿ ಪಡೆಯಲಿ ಎಂಬ ಪ್ರಬಲ ಒತ್ತಡ ಹೇರಿದರು. ರೋಹಿತ್, ಅಂಬೇಡ್ಕರ್ ನೈಜವಾದ ಪ್ರಜಾಪ್ರಭುತ್ವವು ಯಾವ ನಾಲ್ಕು ಹಕ್ಕುಗಳನ್ನು ಸಂವಿಧಾನಬದ್ಧಗೊಳಿಸುವ ಮೂಲಕ ನೈಜ ಸ್ವಾತಂತ್ರ್ಯವನ್ನು ವ್ಯಕ್ತಿಯು ಪಡೆಯುವ ನಕ್ಷೆ ತೋರಿದ್ದರೋ, ಆ ನಕ್ಷೆಯನ್ನು ಇಡಿಯಾಗಿ ಅನುಭವಿಸುವ ಹಕ್ಕು ಬೇಡುತ್ತಿದ್ದ; ಸಂಕೋಲೆಗಳಿಂದ ಬಂಧಿತವಾದ ಭ್ರಮಾತ್ಮಕ ಸ್ವಾತಂತ್ರ್ಯದ ಆಸರೆಯಲ್ಲಿ ಬದುಕಲು ಆತ ಇಚ್ಛಿಸಲಿಲ್ಲ. ಸಂಕೋಲೆ ಇರದ ನೈಜ ಸ್ವಾತಂತ್ರ್ಯದ ಆಶಯವೇನು ಎಂಬುದನ್ನು ಆತ ಸಾವಿನ ಮೂಲಕ ನಮಗೆ ತೋರಿಸಿಕೊಟ್ಟಿರುವನು. ನಾವು ಅದನ್ನೂ ಕಂಡುಕೊಳ್ಳ ಬೇಕು. □



ರಾಯಚೂರಿನ ಅಸ್ಕಿಹಾಳಿನ ದಲಿತ ಕೇರಿಯಲ್ಲಿ ಹುಟ್ಟಿ, ದೇಶದ ರಾಜಧಾನಿಯ ದೆಹಲಿ ವಿಶ್ವವಿದ್ಯಾಲಯದ ಕಮಲ ನೆಹರೂ ಕಾಲೇಜಿನಲ್ಲಿ ಪತ್ರಿಕೋದ್ಯಮ ಕಲಿಸುವ ಸಹಾಯಕ ಪ್ರಾಧ್ಯಾಪಕರಾಗಿ ರಮೇಶ್ ಅರೋಲಿ ಕೆಲಸ ಮಾಡುತ್ತಿರುವುದೇ ಸಂವಿಧಾನದ ಬ್ಯೂಟಿ. ಇಂತದ್ಧ–ಕ್ಕೆ ಅಂಬೇಡ್ಕರ್ ಖುಷಿಗೊಳ್ಳುವುದು. ರಮೇಶ್ ಈ ತನಕ 'ಎಳೆಯ ಪಾಪದ ಹೆಸರು', 'ಜುಲುಮೆ' (ಕವಿತಾ ಸಂಕಲನ), 'ಮೈದಾನ' (ಅನುವಾದ ಕೃತಿ), 'ಬಂಡಾಯದ ಬೋಳಬಂಡೆಪ್ಪ' (ಜೀವನ ಕಥನ), 'ಟ್ಯಾಬ್ಲಾಯ್ಡ್ ಪತ್ರಿಕೋದ್ಯಮ' (ವಾಚಿಕೆ), 'ತೀನ್ ಕಂದೀಲ್' (ನಾಟಕ) ಕೃತಿಗಳನ್ನು ಪ್ರಕಟಿಸಿ ಭರವಸೆಯ ಹೊಸ ತಲೆಮಾರಿನ ಚಿಂತಕರಾಗಿದ್ದಾರೆ.

**ರಮೇಶ ಅರೋಲಿ**
Email: aroliramesh@gmail.com

**'ಈ ನೆಲವನ್ನು 'ಭಾರತಮಾತೆ' ಎಂದು ಹಾಡಿ ಹೊಗಳಿ, ಜನರನ್ನು ಪಶುಗಳಂತೆ ಹಲವು ಜಾತಿಗಳಾಗಿ ವಿಂಗಡಿಸಿ ಅದರ ಲಾಭ ಪಡೆಯುತ್ತಿದ್ದ ಚಾತುರ್ವರ್ಣ ವ್ಯವಸ್ಥೆಯ ಬ್ರಾಹ್ಮಣರ ಒಳಸಂಚನ್ನು ಧಿಕ್ಕರಿಸಿದಷ್ಟೇ ದಿಟ್ಟವಾಗಿ 'ಪುಣ್ಯಭೂಮಿ' 'ಪವಿತ್ರ ನದಿ' ಗಳ ನೆಲ ಅಂದವರಿಗೆ ರಪ್ಪನೆ ಕೆನ್ನೆಗೆ ಬಾರಿಸುವಂತೆ ಇಲ್ಲೊಂದು ಹೊರಹಾಕಲ್ಪಟ್ಟ, ಬಹಿಷ್ಕರಿಸಲ್ಪಟ್ಟ ಭಾರತ ಇರುವುದನ್ನು ತಮ್ಮ ಸಂಪಾದಕೀಯಗಳಲ್ಲಿ ವಿವರವಾಗಿ ಬರೆಯುತ್ತಿದ್ದರು. ಇಂಗ್ಲಿಷ್ ನಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರೂ, ಓದಿ ಬರೆಯಬಲ್ಲವರಾಗಿದ್ದರೂ, ಅಂಬೇಡ್ಕರರು ಮರಾಠಿ, ಹಿಂದಿಯಲ್ಲೇ ಪತ್ರಿಕೆ ಹೊರಡಿಸಿದ ಕಾರಣ ಹೆಚ್ಚಿನ ಜನರಿಗೆ ತಮ್ಮ ವಿಚಾರಗಳು ತಲುಪಲಿ ಎಂಬ ಉದ್ದೇಶವಿತ್ತು'**

# ಅಂಬೇಡ್ಕರ್ ಪತ್ರಿಕೆಗಳು: ಮೂಕ ಭಾರತದ ಮಾತುಗಳು

2016 ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಷಯದ ಪಠ್ಯ ಪರಿಷ್ಕರಣೆ ಮಾಡಲು ಕೋರಲಾಗಿತ್ತು. ಆ ಹಿಂದಿನ ಪಠ್ಯದಲ್ಲಿ 'ಹಿಸ್ಟರಿ ಆಫ್ ಮೀಡಿಯಾ' ಪತ್ರಿಕೆಯಲ್ಲಿ ಮುದ್ರಣ ಮಾಧ್ಯಮದ ಇತಿಹಾಸ ಸೇರಿದಂತೆ ಟೆಲಿಗ್ರಾಫ್, ಗ್ರಾಮಫೋನ್, ಟಿಲಿವಿಷನ್ ಮತ್ತಿತರೆ ಸಂವಹನ ಮಾಧ್ಯಮಗಳ ಅವಿಷ್ಕಾರದ ಜೊತೆಗೆ ಭಾರತದಲ್ಲಿ ಪತ್ರಿಕೆಗಳ ಇತಿಹಾಸವೂ ಸೇರಿತ್ತು. ಇದರಲ್ಲಿ ಭಾರತದ ಆರಂಭಿಕ ಪತ್ರಿಕೆಗಳು, ಸ್ವಾತಂತ್ರ್ಯಪೂರ್ವ–ಪತ್ರಿಕೆಗಳು ಮತ್ತು ಸ್ವಾತಂತ್ರ್ಯೋತ್ತರ–ಪತ್ರಿಕೆಗಳ ಇತಿಹಾಸದ ಜೊತೆಗೆ ಅವುಗಳನ್ನು ಸಂಪಾದಿಸಿದವರ ಕುರಿತು ಬೋಧಿಸುವ ಅಗತ್ಯವಿತ್ತು. ಇದರಲ್ಲಿ ಟಿಳಕರಿಂದ ಹಿಡಿದು ಗಾಂಧೀವರೆಗೂ ಅವರು ಸಂಪಾದಿಸಿದ ಪತ್ರಿಕೆಗಳು ಮತ್ತು ಆ ಪತ್ರಿಕೆಗಳ ಮೂಲಕ ಅವರು ಜನಸಮೂಹವನ್ನು ತಲುಪಲು ಮಾಡಿದ ಪ್ರಯೋಗ ಇತ್ಯಾದಿಗಳ ಚರ್ಚೆ ಇತ್ತು. ಪಠ್ಯ ಪುಸ್ತಕ ಪರಿಷ್ಕರಣೆ ಸಮಯದಲ್ಲಿ ನಾವೊಂದಿಬ್ಬರು ಸದಸ್ಯರು ಅಂಬೇಡ್ಕರರ ಪತ್ರಿಕಾ ಪ್ರಯೋಗದ ಕುರಿತು ಪಠ್ಯದಲ್ಲಿ ಸೇರಿಸಬೇಕೆಂದು ಒತ್ತಾಯ ತಂದೆವು. ಆ ಸಮಿತಿಯಲ್ಲಿ ಇದ್ದ ಇನ್ನಿತರೆ ಸದಸ್ಯರ ಮೊದಲ ಪ್ರತಿಕ್ರಿಯೆ "ಅಂಬೇಡ್ಕರ್‌ರು ಅಂಥಾ ಪತ್ರಿಕೆಗಳನ್ನೇನು ಸಂಪಾದಿಸಿಲ್ಲ. ಮತ್ತು ಅದರ ಬಗ್ಗೆ ಮಾಹಿತಿಯು ಎಲ್ಲೂ ಲಭ್ಯವಿಲ್ಲ" ಎಂಬುದಾಗಿತ್ತು. "ಸಂಬಂಧಪಟ್ಟ ಮಾಹಿತಿ ನಾವು ಕೊಡುತೀವಿ, ಮೊದಲು ನೀವು ಸೇರಿಸಿ" ಅಂತ ಒತ್ತಾಯ ತಂದ ಮೇಲೆ ಸೇರಿಸಲಾಯಿತು. ಚರಿತ್ರೆ ಪುಟಗಳ ಉದ್ದಕ್ಕೂ ಬಾಬಾ ಸಾಹೇಬ್ ಅಂಬೇಡ್ಕರರನ್ನು ಗುಮಾನಿಯಿಂದ ನೋಡುವಂತೆ ಮಾಡಿದ ಇತಿಹಾಸಕಾರರು, ಅವರ ಅಕ್ಷರ ಪ್ರೀತಿಯ ಬಗ್ಗೆ, ಅದರ ಪ್ರಾಮುಖ್ಯತೆ ಕುರಿತು ವಿವರವಾಗಿ ದಾಖಲಿಸಿದ ಉದಾಹರಣೆ ಕಡಿಮೆ.

ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಜ್ಯೋತಿ ಬಾ ಫುಲೆ ದಂಪತಿಗಳು 'ಸತ್ಯಶೋಧಕ್ ಸಮಾಜ್'ದೊಂದಿಗೆ ಮರಾಠಿಯಲ್ಲಿ ಒಂದು 'ದೀನಬಂಧು' ಎಂಬ ಪತ್ರಿಕೆಯನ್ನು ಸಹ ಆರಂಭಿಸಿದರು. ಫುಲೆಯವರಿಂದ ಪ್ರೇರಿತರಾದ ಮಾಜಿ ಮಹರ್ ಸೈನಿಕರಾದ ಗೋಪಾಲ ಬಾಬಾ ವಾಲಗಾಂಕರ್ 1888ರಲ್ಲಿ 'ವಿಠಲ್ ವಿಧ್ವಂಸಕ್' ಪತ್ರಿಕೆ ಶುರು ಮಾಡಿದರು. ಇದೊಂದು ಜಾತಿ ವ್ಯವಸ್ಥೆ ವಿರೋಧಿ ದನಿಯಂತೆ ಮೂಡಿತು. ಈ ಪತ್ರಿಕೆಗಳು ಭಾರತದಲ್ಲಿ ತಳಸಮುದಾಯಗಳ ಸಮಸ್ಯೆಗಳಿಗೆ ಮೀಸಲಾದ ಮೊಟ್ಟ ಮೊದಲ ಪತ್ರಿಕೆಗಳು ಎಂಬ ಹೆಗ್ಗಳಿಕೆಗೆ ಪಾತ್ರವಾದವು. ನಂತರ ಹಿಂದಿ ಭಾಷೆಯಲ್ಲಿ 1905 ರ ಹೊತ್ತಿಗೆ ಸ್ವಾಮಿ ಅಚೂತಾನಂದರು 'ಅಚೂತ್‌ಔರ್ ಆದಿ ಹಿಂದೂ' ಪತ್ರಿಕೆ ಆರಂಭಿಸುತ್ತಾರೆ. ಅಪಾರ ಓದಿನ ಹಸಿವು ಇದ್ದ ಅಂಬೇಡ್ಕರರು ಈ ಸುಧಾರಕರ ಪತ್ರಿಕೆಗಳಿಂದ ಪ್ರಭಾವಿತರಾಗಿ ಅಲ್ಲದೆ ಅಸ್ಪೃಶ್ಯರ ಸಮಸ್ಯೆ ಕುರಿತು ಚರ್ಚಿಸಲು, ತಮ್ಮ ವಿಚಾರಗಳನ್ನು ಜನ ಸಮೂಹಕ್ಕೆ ತಲುಪಿಸಲು ಬೇಕಾದ ಪತ್ರಿಕೆಗಳ ಅನಿವಾರ್ಯತೆಯ ಮನಗಂಡು 1920, ಜನವರಿ



ತಿಂಗಳಲ್ಲಿ 'ಮೂಕನಾಯಕ', 1927 ಏಪ್ರಿಲ್‌ನಲ್ಲಿ 'ಬಹಿಷ್ಕೃತ ಭಾರತ', 1928 ರ ಜೂನ್ ತಿಂಗಳಲ್ಲಿ 'ಸಮತಾ' ಪತ್ರಿಕೆ ಮತ್ತು 1930ರಲ್ಲಿ 'ಜನತಾ' ಎಂಬ ಪತ್ರಿಕೆಗಳನ್ನು ಆರಂಭಿಸಿ ಕೆಲ ಕಾಲವಾದರು ಅವುಗಳನ್ನು ಸಂಪಾದಿಸಿದ್ದಾರೆ. ಸ್ವಾತಂತ್ರ್ಯ ಚಳವಳಿಯ ಕೊನೆಯ ದಿನಗಳಲ್ಲಿ ಬ್ರಿಟಿಷ್ ಸ್ವಾಮ್ಯದ ಪತ್ರಿಕೆಗಳನ್ನು ಒಳಗೊಂಡು ಎಲ್ಲರೂ ರಾಜಕೀಯ ಅಧಿಕಾರ ಹಸ್ತಾಂತರದ ಬಗ್ಗೆ, ರಾಷ್ಟ್ರವಾದದ ಚರ್ಚೆಯಲ್ಲಿ ತೊಡಗಿದ್ದರೆ ಅಂಬೇಡ್ಕರರು ತಮ್ಮ ಸಮುದಾಯಗಳಿಗೆ ಆ ಅಧಿಕಾರ ಹಸ್ತಾಂತರದಿಂದ ಏನು ಪ್ರಯೋಜನವಿಲ್ಲ ಎಂದು ನಂಬಿದ್ದರು. ಭಾರತೀಯ ಸಮಾಜದಲ್ಲಿ ಸಾಮಾಜಿಕ ಸ್ವಾತಂತ್ರ್ಯ, ಸ್ವಾಭಿಮಾನದ ಬದುಕು ಎಲ್ಲರಿಗೂ ದಕ್ಕಬೇಕು ಎಂದು ಬಲವಾಗಿ ವಾದಿಸುತ್ತಿದ್ದರು. ಈ ಮೇಲಿನ ಪತ್ರಿಕೆಗಳು ದೀರ್ಘಕಾಲ ಚಾಲ್ತಿಯಲ್ಲಿ ಇರಲಿಲ್ಲವಾದರು, ಒಂದು ಭಿನ್ನ ರಾಜಕೀಯ ಆಲೋಚನೆಯನ್ನು, ಸಮಾಜಿಕ ವಾಸ್ತವವನ್ನು ಆ ಕಾಲದಲ್ಲಿ ದಾಖಲಿಸುವ ಅಗತ್ಯ ಮುಖವಾಣಿಗಳಂತೆ ಅಂಬೇಡ್ಕರ್‌ರು ಇವುಗಳನ್ನು ಹೊರ ತಂದರು. ಪತ್ರಿಕೆಯೆಂಬುದೇ ಒಂದು ಬಂಡವಾಳದ ಸರಕು ಆದುದರಿಂದ ಅದಕ್ಕೆ ಬೇಕಾದ ಆರ್ಥಿಕ ನೆರವು ಹಿತೈಶಿಗಳಿಂದ ಪಡೆದು ಪತ್ರಿಕೆ ನಡೆಸಿದರು.



मूकनायक

काय करूं आतां धरूनियां भीड । निःशंक हे तोंड वाजविलें ।।
नव्हे जगीं कोणी मुकियांचा जाण । सार्थक लाजून नव्हे हित ।।

मुंबई, शनिवार ता. ३१ जानेवारी १९२०

मूकनायक.

मनोगत

ಈ ಮೇಲಿನ ನಾಲ್ಕು ಪತ್ರಿಕೆಗಳಲ್ಲಿ ಹೆಚ್ಚು ಓದುಗರ, ಸಂಶೋಧಕರ ಗಮನ ಸೆಳೆದದ್ದು 'ಮೂಕ ನಾಯಕ' ಪಾಕ್ಷಿಕ ಮತ್ತು 'ಬಹಿಷ್ಕೃತ ಭಾರತ'. ಶತಮಾನಗಳಿಂದ ಮಾತು ಇದ್ದು, ಆಡಲಾರದ ಸಾಮಾಜಿಕ ವ್ಯವಸ್ಥೆಯಲ್ಲಿ ಉಸಿರು ಬಿಗಿ ಹಿಡಿದುಕೊಂಡು, ಜಾತಿತಾರತಮ್ಯದ ಎಲ್ಲಾ ಅವಮಾನಗಳನ್ನು ಸಹಿಸಿದ ಮೂಕಜನಗಳ ಮಾತಿನಂತೆ 'ಮೂಕನಾಯಕ' ಹೊರ ಬರುತಿತ್ತು. ಪಾಂಡುರಂಗ ಭಟ್ಕರ್ ಇದರ ಮೊದಲ ಸಂಪಾದಕರಾಗಿದ್ದರು. ತಮ್ಮ ಪತ್ರಿಕೆ 'ಮೂಕನಾಯಕ' ಆರಂಭದ ಕುರಿತು ಒಂದು 'ಪೇಡ್ ಅಡ್ವರ್ಟೈಸ್‌ಮೆಂಟ್' ಪ್ರಕಟಿಸಲು 'ಬಾಂಬೆ ಕ್ರೊನಿಕಲ್' ಮತ್ತು 'ಕೇಸರಿ'ಯಂತಹ ಪತ್ರಿಕೆಗಳನ್ನು ಕೇಳಿಕೊಂಡರು. ಯಾರು ಇದರ ಕುರಿತು ಎರಡು ಅಕ್ಷರ ಬರೆಯಲಿಲ್ಲ. ರಾಷ್ಟ್ರವಾದಕ್ಕೆ ಮೀಸಲಿದ್ದವಾದರು, ಬ್ರಾಹ್ಮಣ ಸಮುದಾಯದ ಜಾಹೀರಾತು, ಧಾರ್ಮಿಕ ಸಾಹಿತ್ಯ ಕುರಿತಾದ ಸೂಚನೆಗಳನ್ನು ಪ್ರಕಟಿಸುತ್ತಿದ್ದವು. ಇದರಿಂದ ರೋಸಿ ಹೋದ ಅಂಬೇಡ್ಕರರು ತಾವು ಜಾಹೀರಾತು ರಹಿತ ಪತ್ರಿಕೆ ತರಲು ನಿರ್ಧಾರ ಮಾಡಿದರು. 'ಮೂಕ ನಾಯಕ' ಪತ್ರಿಕೆಗೆ ಕೊಲ್ಹಾಪುರದ ಷಾಹು ಮಹಾರಾಜರ ಆರ್ಥಿಕ ನರೆವು ಇತ್ತು. ಇದರ ಜೊತೆಯಲ್ಲೆ ಅವರು 'ಬಹಿಷ್ಕೃತ ಹಿತಕಾರಣಿ ಸಭಾ' ವನ್ನು ಆರಂಭಿಸಿದರು.

ಇನ್ನು 'ಬಹಿಷ್ಕೃತ ಭಾರತ' ದಲ್ಲಂತು, ಈ ನೆಲವನ್ನು 'ಭಾರತಮಾತೆ' ಎಂದು ಹಾಡಿ ಹೊಗಳಿ, ಜನರನ್ನು ಪಶುಗಳಂತೆ ಹಲವು ಜಾತಿಗಳಾಗಿ ವಿಂಗಡಿಸಿ ಅದರ ಲಾಭ ಪಡೆಯುತ್ತಿದ್ದ ಚಾತುರ್ವರ್ಣ ವ್ಯವಸ್ಥೆಯ ಬ್ರಾಹ್ಮಣರ ಒಳಸಂಚನ್ನು ಧಿಕ್ಕರಿಸಿದಷ್ಟೇ ದಿಟ್ಟವಾಗಿ 'ಪುಣ್ಯಭೂಮಿ' 'ಪವಿತ್ರ ನದಿ' ಗಳ ನೆಲ ಅಂದವರಿಗೆ ರಪ್ಪನೆ ಕೆನ್ನೆಗೆ ಬಾರಿಸುವಂತೆ ಇಲ್ಲೊಂದು ಹೊರಹಾಕಲ್ಪಟ್ಟ, ಬಹಿಷ್ಕರಿಸಲ್ಪಟ್ಟ ಭಾರತ ಇರುವುದನ್ನು ತಮ್ಮ ಸಂಪಾದಕೀಯಗಳಲ್ಲಿ ವಿವರವಾಗಿ ಬರೆಯುತ್ತಿದ್ದರು. ಇಂಗ್ಲಿಷ್ ನಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರೂ, ಓದಿ ಬರೆಯಬಲ್ಲವರಾಗಿದ್ದರೂ, ಅಂಬೇಡ್ಕರರು ಮರಾಠಿ, ಹಿಂದಿಯಲ್ಲೇ ಪತ್ರಿಕೆ ಹೊರಡಿಸಿದ ಕಾರಣ ಹೆಚ್ಚಿನ ಜನರಿಗೆ ತಮ್ಮ ವಿಚಾರಗಳು ತಲುಪಲಿ ಎಂಬ ಉದ್ದೇಶವಿತ್ತು. 1927 ರಿಂದಲೂ 'ಬಹಿಷ್ಕೃತ ಭಾರತ'ದ ಸಂಪಾದಕರಾಗಿದ್ದ ಬಾಬಾ ಸಾಹೇಬರು ಈ ಪತ್ರಿಕೆಯಲ್ಲಿ ಸಾಮಾಜಿಕ, ರಾಜಕೀಯ, ಸಾಹಿತ್ಯಿಕ, ಧಾರ್ಮಿಕ ವಿಷಯಗಳ ಕುರಿತು ಲೇಖನ ಪ್ರಕಟಿಸುತ್ತಿದ್ದರು. ಇದರಲ್ಲಿ ಬೌದ್ಧಿಕ, ತಾರ್ಕಿಕ ವಿಚಾರಗಳ ಚರ್ಚೆಯ ಜೊತೆಗೆ ಸಮಕಾಲೀನ ಚಳವಳಿಗಳ ಕುರಿತಾದ ವಿಸ್ತೃತ ವರದಿಗಳು ಪ್ರಕಟವಾಗುತ್ತಿದ್ದವು. 1927, ಜುಲೈ 1ನೆಯ ತಾರೀಖಿನ ಸಂಪಾದಕೀಯದಲ್ಲಿ ಅಂಬೇಡ್ಕರರು ಹೀಗೆ ಬರೆಯುತ್ತಾರೆ "ಬ್ರಾಹ್ಮಣವಾದದಿಂದಾಗಿ ಹಿಂದೂ ಸಮಾಜಕ್ಕೆ ಅತ್ಯಂತ ನಷ್ಟವಾಗಿದೆ. ಇದು ಸತ್ಯ. ಬ್ರಾಹ್ಮಣವಾದದಿಂದಾಗಿ ಬ್ರಾಹ್ಮಣೇತರ ಜನ ಸಮುದಾಯಗಳನ್ನು ಕತ್ತಲಕೂಪದಲ್ಲಿಟ್ಟು ಅನಕ್ಷರಸ್ಥರು ಮತ್ತು ಅಜ್ಞಾನಿಗಳನ್ನಾಗಿ ಮಾಡಿದ್ದಾರೆ. ವೇದದಂತಹ ಧಾರ್ಮಿಕ ಗ್ರಂಥಗಳ ಓದನ್ನೇ ನಿಷೇಧಿಸಲಾಗಿದೆ. ಹುಟ್ಟಿನಿಂದಲೇ ಶ್ರೇಷ್ಠ–ಕನಿಷ್ಠ ಎಂಬ ಬೇದವನ್ನು ರೂಪಿಸಿದ ಪರಿಣಾಮ, ವ್ಯಕ್ತಿಯ ವ್ಯಕ್ತಿತ್ವದ ಉನ್ನತಿ ಮತ್ತು ಸುಧಾರಣೆಗೆ ಅವಕಾಶವೇ ಇಲ್ಲದಂತೆ ಮಾಡಲಾಗಿದೆ. ಓದಲು ಅನುವು ಮಾಡಿಕೊಡದೆ, ಜ್ಞಾನದ, ವಿಚಾರದ ಮಾರ್ಗಗಳನ್ನೇ ಮುಚ್ಚಿಬಿಟ್ಟರು. ಅಸ್ಪೃಷ್ಯತೆಯ ಕಲ್ಪನೆ ಬಿತ್ತಿ ಅದನ್ನು ಪ್ರಚಾರ ಮಾಡಿ, ಮನುಷ್ಯತ್ವದಂತಹ ಅಮೂಲ್ಯವಾದ ಮೌಲ್ಯದಿಂದ ಜನರನ್ನು ದೂರ ಉಳಿಸಿದರು" ಹೀಗೆ ಮನುಷ್ಯರು ಮುಕ್ತವಾಗಿ ಜೀವಿಸುವ, ಆಲೋಚಿಸುವ ಮೂಲಭೂತ ಹಕ್ಕುಗಳಿಗೆ ಬ್ರಾಹ್ಮಣವಾದ ಹೇಗೆಲ್ಲ ಅಡ್ಡಿಉಂಟು ಮಾಡಿದೆ ಎಂಬುದನ್ನು ವಿವರಿಸಿದ್ದಾರೆ.

4ನೆಯ ಸೆಪ್ಟೆಂಬರ್ 1927ರಲ್ಲಿ ಸ್ಥಾಪನೆಯಾದ 'ಸಮಾಜ್ ಸಮತಾ ಸಂಘ್' ನ ಕಾರ್ಯ ಚಟುವಟಿಕೆಗಳ ಭಾಗವಾಗಿ ಜೂನ್ 29, 1928ರಲ್ಲಿ 'ಸಮತಾ' ಪತ್ರಿಕೆಯನ್ನು ಆರಂಭಿಸುತ್ತಾರೆ. ಈ ಪತ್ರಿಕೆಯ ಉದ್ದೇಶ ತುಂಬ ಸ್ಪಷ್ಟವಾಗಿರುತ್ತದೆ. ಮಹಡ್ ಸತ್ಯಾಗ್ರಹ, ಮಂದಿರ ಪ್ರವೇಶ, ಅಸ್ಪೃಷ್ಯತೆಯ ನಿರ್ಮೂಲನೆ, ಸ್ತ್ರೀ ಸ್ವಾತಂತ್ರ್ಯ, ಅಸ್ಪೃಷ್ಯರಿಗೆ ಶಿಕ್ಷಣ ಮತ್ತು ಅಂತರಜಾತಿ, ಅಂತರ್ ಧರ್ಮೀಯ ವಿವಾಹಗಳನ್ನು ಪ್ರೋತ್ಸಹಿಸುವ ಅನೇಕ ಸಮಾಜಮುಖಿ ಕೆಲಸಗಳತ್ತ ತೊಡಗಿಕೊಳ್ಳುವುದು. ಒಂದರ್ಥದಲ್ಲಿ ವಿಚಾರಕ್ಕೆ, ವಾದಕ್ಕೆ ಸೀಮಿತಗೊಂಡಿದ್ದ ಈ ಮುಂಚಿನ ಪತ್ರಿಕೆಗಳಿಗಿಂತ 'ಸಮತಾ' ಮೂಲಕ ಪ್ರಾಯೋಗಿಕವಾಗಿ ಚಳವಳಿಗಳನ್ನು ರೂಪಿಸುವಲ್ಲಿ ಹೆಚ್ಚು ತೊಡಗಿಸಿಕೊಂಡರು.

ಇನ್ನು 1930 ನವೆಂಬರ್ ನಲ್ಲಿ ಅಂಬೇಡ್ಕರರು ಆರಂಭಿಸಿದ 'ಜನತಾ' ಪತ್ರಿಕೆಯಲ್ಲಿ ಜಾತಿ ನಿರ್ಮೂಲನೆ ಕುರಿತಾದ ಸುದೀರ್ಘ ಸಂಪಾದಕೀಯಗಳನ್ನು ಬರೆಯುತ್ತಿದ್ದರು. ಅಂತಹ ಲೇಖನಗಳ ಬರೆಯುವ ಮೂಲಕ ದೇಶದ ನಾನಾ ಪ್ರಾಂತ್ಯಗಳಲ್ಲಿ ಅದರ ಕುರಿತು ಚರ್ಚೆ ಆಗುವಂತೆ ಮಾಡಿದರು. ಇದು ಒಂದರ್ಥದಲ್ಲಿ ಗಾಂಧೀಯವರ 'ಹರಿಜನ' ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಮತ್ತು 'ಅಸ್ಪೃಷ್ಯತಾ ನಿರ್ಮೂಲನೆ' ಯ ಮಾರ್ಗಗಳು ಮತ್ತು ಅದರ ಸಂಬಂಧಿ ಚಳವಳಿಗೆ ಸವಾಲಿನಂತೆ ನೋಡಲಾಯಿತು. ಯಾಕೆಂದರೆ ಅಂಬೇಡ್ಕರರ ಪ್ರಕಾರ ಜಾತಿಯ ಶ್ರೇಣಿಕರಣ ನಿರ್ಮಾಣಗೊಂಡಿದ್ದೆ ಹಿಂದೂ ಧರ್ಮದ ವೇದಗಳಿಂದ, ಚಾತುರ್ವರ್ಣ ವ್ಯವಸ್ಥೆಯಿಂದ. ಹಾಗಾಗಿ ಆ ಶ್ರೇಣಿಯ ಬೇರನ್ನು ಅಲುಗಿಸದೆ, ಜಾತಿಯ ಟೊಂಗೆಯನ್ನು ಮತ್ತು ಅದು ಬಿಡುವ ಅಸ್ಪೃಷ್ಯತೆಯ ದುರ್ಗಂಧದ ಹೂವನ್ನು ಕೀಳಲಾಗದು ಎಂದಾಗಿತ್ತು. ಆದರೆ ಗಾಂಧೀಜಿಗೆ ಶ್ರೇಣಿಯನ್ನು ಕದಲಿಸದೆ, ಜಾತಿ ವ್ಯವಸ್ಥೆಯನ್ನು ಕೆಡಿಸದೆ ಕೇವಲ ಮೇಲ್ಜಾತಿ ಜನರ ಮನಪರಿವರ್ತನೆಯ ಮೂಲಕ ಅಸ್ಪೃಷ್ಯತೆಯನ್ನು ಕೊನೆಗಾಣಿಸಬೇಕೆಂಬುದಾಗಿತ್ತು. ಹಾಗಾಗಿ ಅವರು ತಮ್ಮ 'ಹರಿಜನ' (11–2–1933), ಇಂಗ್ಲಿಷ್ ಆವೃತ್ತಿಯಲ್ಲಿ ಮತ್ತು ಒಂದು ವಾರದ ನಂತರ 'ಹರಿಜನ' ಹಿಂದಿ ಆವೃತ್ತಿಯಲ್ಲಿ ಅಂಬೇಡ್ಕರರ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸುವ ಮೂಲಕ ಜಾತಿ–ವರ್ಣ ವ್ಯವಸ್ಥೆಯ ಕುರಿತಾದ ಚರ್ಚೆಗೆ ಇಂಬು ಕೊಟ್ಟರು. ಹೀಗೆ ಇಬ್ಬರು ಜನನಾಯಕರ ನಡುವಣ ವಿಚಾರ ಮಂಡನೆಗೆ, ವಾಗ್ವಾದಕ್ಕೆ ಪತ್ರಿಕೆಗಳು ಸಾಕ್ಷಿಯಾದವು. ಈ ಚರ್ಚೆ, ಭಿನ್ನ ವಿಚಾರಗಳ ವಿರೋಧದ ಆಚೆಗೆ, ಒಂದು ಹಂತಕ್ಕೆ ಗಾಂಧಿಯ ಅನುಯಾಯಿಗಳು ಅಂಬೇಡ್ಕರರನ್ನು ಗಾಂಧಿಯವರ ಶತ್ರುವಿನಂತೆ ಕಾಣುವಂತೆ ಮಾಡಿತು. ನಂತರ 1956 ಫೆಬ್ರವರಿಯಲ್ಲಿ ಇದೇ ಪತ್ರಿಕೆ ಹೊಸ ಹೆಸರು "ಪ್ರಬುದ್ಧ ಭಾರತ" ಅಡಿಯಲ್ಲಿ ಪುನಾ ಆರಂಭವಾಯಿತು.

1943ರಲ್ಲಿ ಪೂನಾದಲ್ಲಿ ನಡೆದ ಗೋವಿಂದ ರಾನಡೆಯವರ 101ನೆಯ

(33ನೇ ಪುಟಕ್ಕೆ)

# ಬಾಬಾ ಸಾಹೇಬ್ ಮತ್ತು ಡಾಕ್ಟರ್ ಸಾಹೇಬ್



Rathod

ಇಬ್ಬರು ಸಾಹೇಬರ ಕಣ್ಣಿಗೂ ದಪ್ಪಕಟ್ಟಿನ ಕನ್ನಡಕವಿತ್ತು
ಕನ್ನಡಕದ ಗಾಜುಗಳು ಪಡುವಣದ ಎರಡು ದಿಕ್ಕಿಂದ ಬಂದಿದ್ದವು
ಆ ಕನ್ನಡಕಗಳಿಗೆ ದೇಶಿಯ ಕಟ್ಟುಗಳಿದ್ದವು.

ಬಾಬಾ ಸಾಹೇಬರಿಗೆ ದೇಶಿಯ ಅವಮಾನದ ಕಟ್ಟು
ಡಾಕ್ಟರ್ ಸಾಹೇಬರಿಗೆ ದೇಶಿಯ ಒಳದ್ರವ್ಯದ ಕಟ್ಟು.

ಒಬ್ಬರು ಉಂಡ ನೋವಿಗೆ ಮದ್ದು ಹುಡುಕಿದರು
ಮತ್ತೊಬ್ಬರು ಕಂಡ ನೋವಿಗೆ ಉತ್ತರ ತಡಕಿದರು.

ಒಬ್ಬರು ಗಾಂಧೀಜಿಯನ್ನು ಎದುರಾದರು
ಮತ್ತೊಬ್ಬರು ಗಾಂಧೀಜಿಯ ಹಿಂದೆ, ಅಕ್ಕ ಪಕ್ಕ, ಕಣ್ಣು ಬಿಟ್ಟು ನಡೆದರು.

ಒಬ್ಬರು ಗಾಂಧೀಜಿಯನ್ನು ಪಕ್ಕಕ್ಕೆ ಸರಿಸಿ ಬೆಳಕು ಕಂಡರು
ಮತ್ತೊಬ್ಬರು ಗಾಂಧೀಜಿಯ ಬೆಳಕಿನೆಳೆ ಸೆಳೆದು ಬೆಳಕಾದರು.

ಜಾತಿಯ ಹಳೆಮರ ಬುಡಮೇಲಾದರೆ ಮಾತ್ರ
ಇಲ್ಲಿ ಎಲ್ಲ ಜಾತಿಯ ಹಕ್ಕಿಗಳು ರೆಕ್ಕೆ ಬಿಚ್ಚುತ್ತವೆಂದು ಇಬ್ಬರಿಗೂ
ಖಾತ್ರಿಯಿತ್ತು.

ನೊಂದವರ ಕಣ್ಣಿಂದ ಹಿಂತಿರುಗಿ, ಮುಂತಿರುಗಿ ನೋಡಿದರೆ ಮಾತ್ರ
ಅಸಲಿ ಚಿತ್ರಗಳು ಕಾಣುತ್ತವೆಂಬ ಸತ್ಯ ಇಬ್ಬರಿಗೂ ಗೊತ್ತಿತ್ತು.

ಇಬ್ಬರಿಗೂ ಫರಕಿತ್ತು:
'ಹಳ್ಳಿಯೇ ನರಕ; ಗಟ್ಟಿ ಕೇಂದ್ರವೇ ತಬ್ಬಲಿ ಜನರ ರಕ್ಷಕ' ಎನ್ನುವರು
ಬಾಬಾ ಸಾಹೇಬ್;
'ಕಟ್ಟ ಕಡೆಯ ಹಳ್ಳಿಯೇ ಕೇಂದ್ರದ ಜುಟ್ಟು ಹಿಡಿಯಬೇಕು' ಎನ್ನುವರು
ಡಾಕ್ಟರ್ ಸಾಹೇಬ್.



## ಕಾವ್ಯ

ಇಬ್ಬರಿಗೂ ಕನಸಿತ್ತು, ಇಬ್ಬರಲ್ಲೂ ಸಹಮತವಿತ್ತು–
ಮಹರ ಚಮ್ಮಾರ ಬೇಡ ಮಡಿವಾಳ ಅಲೆಮಾರಿ ಅಗಸ
ಕ್ಷೌರಿಕರಾದಿಯಾಗಿ
ನೂರಾರು ತಬ್ಬಲಿ ಜಾತಿಗಳು
ಬೆರೆತ ಬಹುಜನಸಮಾಜ ಕಲ್ಯಾಣರಾಜ್ಯ ಸೃಷ್ಟಿಯಲ್ಲಿ.

ಹೀಗಾಗಿ ಕೊನೆಗೊಂದು ದಿನ ಡಾಕ್ಟರ್ ಸಾಹೇಬರೂ
ಬಾಬಾಸಾಹೇಬರೂ
ಜೊತೆಯಾಗಿ ನಡೆಯೋಣವೆಂದು ಮಾತಾಡಿಕೊಂಡರು.

ಈ ಜೋಡಿನಡೆಗೆತಡೆಯೊಡ್ಡಿತು ಕಾಲ;
ಕೊನೆಗೆ ಕಾಲರಾಯ ಬಂದ ಗಳಿಗೆ ತಕ್ಕ ಡಾಕ್ಟರೂ ಇರಲಿಲ್ಲ–
ಬೌದ್ಧಬಾಬಾಸಾಹೇಬರ ಪರಿನಿಬ್ಬಾಣದ ಆ ನಡುರಾತ್ರಿಯಲ್ಲಿ;
ಅತ್ತ ಬುದ್ಧನಿಗೆ ಒಲಿದ ಡಾಕ್ಟರ್ ಸಾಹೇಬ್ ಆಸ್ಪತ್ರೆಯಲ್ಲಿ ನರಳಿದ್ದ ಕೊನೆ ದಿನಗಳಲ್ಲಿ.

ಈ ನಡುವೆ ಬಾಬಾ ಸಾಹೇಬರೂ ಡಾಕ್ಟರ್ ಸಾಹೇಬರೂ
ಪಾರ್ಟಿಯನ್ನೂ ಕಟ್ಟಿದ್ದರು, ಪಾರ್ಲಿಮೆಂಟನ್ನೂ ಒಂದು ಕೈ ನೋಡಿದ್ದರು.

ಅವರು ತೂರಿದ ಬೀಜಗಳು, ಬರೆದ ಬುಕ್ಕುಗಳು, ಕೊಟ್ಟ ನೋಟಗಳು
ಅರಳಿ ನಳನಳಿಸಿದ್ದು, ಕೊಳೆತು ಕಮರಿದ್ದು ಈಚಿನ ಕತೆ ಬಲ್ಲವರಿಗೆಲ್ಲ ಗೊತ್ತು.

ಇಷ್ಟೆಲ್ಲದರ ನಡುವೆ ಕೂಡ ಈ ಬೀಜಗಳು ಮರವಾಗಿ,
ಎಲೆ ಹರಡಿನೆರಳಾಗಿ ಒಣ ಮರಗಳಲ್ಲು ಅಡಗಿದ ಬೆಂಕಿಯಾಗಿ
ದಿಕ್ಕು ತಪ್ಪುವ ಅಶೋಕ ಚಕ್ರಕ್ಕೂ ಆಗಾಗ ಕೈ ತೋರಿ
ಸರಿ ದಿಕ್ಕು ಕೊಡುವುದೇನೂ ಸಣ್ಣ ಬಾಬತ್ತಲ್ಲ.

(ಟಿಪ್ಪಣಿ: ರಾಮಮನೋಹರ ಲೋಹಿಯಾ ಅವರನ್ನು ಜನ ಪ್ರೀತಿಯಿಂದ ಡಾಕ್ಟರ್ ಸಾಬ್ ಎನ್ನುತ್ತಿದ್ದರು; ಅಂಬೇಡ್ಕರ್ ಅವರನ್ನು ಬಾಬಾ ಸಾಹೇಬ್ ಎಂದು ಕರೆಯುತ್ತಿದ್ದರು.)

**–ನಟರಾಜ್ ಹುಳಿಯಾರ್**



ಕನ್ನಡದ ತಿಳಿವಿಗೆ ಹೊಸ ಮಾತುಗಳನ್ನು ಸೇರಿಸಬಲ್ಲ, ಸಮಕಾಲೀನ ವಿದ್ಯಮಾನಗಳ ಬಗೆಗೆ ಧ್ಯಾನಿಸಿ ಒಳನೋಟ ಕೊಡಬಲ್ಲ ಪ್ರಖರ ಚಿಂತಕರಾದ ಕೆ.ವಿ.ನಾರಾಯಣ ಅವರು, ಕನ್ನಡ ವಿಶ್ವವಿದ್ಯಾಲಯದ ದೇಸಿ ಆಲೋಚನ ಕ್ರಮವನ್ನು ರೂಪಿಸಿದ ಆರಂಭಿಕರಲ್ಲಿ ಒಬ್ಬರು. ಈ ಹಿಂದೆ ಕುವೆಂಪು ಭಾಷಾ ಭಾರತಿಯ ಅಧ್ಯಕ್ಷರಾಗಿದ್ದಾಗ ಅರ್ಥಪೂರ್ಣ ಮಾದರಿಯೊಂದನ್ನು ರೂಪಿಸಿದವರು. ಅಂಬೇಡ್ಕರ್ ಸಂಪುಟಗಳ ಅಚ್ಚುಕಟ್ಟಾದ ಮರುಮುದ್ರಣಕ್ಕೆ ಶ್ರಮಿಸಿದವರು. ಅವರ 'ತೊಂಡುಮೇವು' ಸಂಪುಟಗಳು ಕನ್ನಡ ಸಾಹಿತ್ಯದ ತಿಳಿವನ್ನು ಮೊನಚುಗೊಳಿಸಬಲ್ಲ ಮೌಲಿಕ ಕೃತಿಗಳು. ಇದೀಗ ಬೆಂಗಳೂರು ವಾಸಿಗರು.

**ಕೆ ವಿ ನಾರಾಯಣ**

**Email: narayana48@gmail.com**


# ನೀರು ಮತ್ತು ಉಪ್ಪು: ಮರುಕೊಳಿಸುತ್ತಿರುವ ನೆನಪು

ಚಿಂತಕರ ಮಾತು ಬರಹಗಳಿಂದ ನಮ್ಮ ವಿಚಾರಗಳನ್ನು ರೂಪಿಸಿಕೊಳ್ಳುವ, ಆ ಮೂಲಕ ಕ್ರಿಯಾಶೀಲತೆಯನ್ನು ಬೆಳೆಸಿಕೊಳ್ಳುವ ಬಗೆ ಒಂದು ರೀತಿ. ಹಾಗಲ್ಲದೆ ಆ ಚಿಂತಕರು ತಮ್ಮನ್ನು ತಾವು ತೊಡಗಿಸಿಕೊಂಡ ಕ್ರಿಯೆಗಳ ಹಿಂದಿನ ಅರ್ಥವಂತಿಕೆಯನ್ನು ಅರಿತು ಅದನ್ನು ನಮ್ಮ ಕಾಲಕ್ಕೆ ದಾಟಿಸಿಕೊಳ್ಳುವುದು ಇನ್ನೊಂದು ಬಗೆ. ಈ ಎರಡನೆಯ ಬಗೆಯ ಒಂದು ಮಾದರಿಯನ್ನು ಕಂಡುಕೊಳ್ಳುವ ಉದ್ದೇಶದಿಂದ ಮುಂದಿನ ಟಿಪ್ಪಣಿಯನ್ನು ಬರೆಯಲಾಗಿದೆ.

ಸುಮಾರು ಒಂಬತ್ತು ದಶಕಗಳ ಹಿಂದೆ ನಮ್ಮ ನಾಡಿನಲ್ಲಿ ನಡೆದ ಎರಡು ಹೋರಾಟಗಳು ಈ ಹೊತ್ತಿನಲ್ಲಿ ನೆನೆಪಿಗೆ ಬರುತ್ತಿವೆ. ಇವುಗಳನ್ನು ಹೋರಾಟ ಎನ್ನಲಾಗದು. ಏಕೆಂದರೆ ಇಲ್ಲಿ ಎದುರಾಳಿಯು ಕಣ್ಣೆದುರು ಕಾಣುವಂತಿರಲಿಲ್ಲ. ಅಮೂರ್ತವಾದ ಅಧಿಕಾರ ಕೇಂದ್ರದೊಡನೆ ಮುಖಾಮುಖಿಯಾಗಲು ನಡೆಸಿದ ಯತ್ನಗಳಿವು. ಮೊದಲನೆಯದು 1927 ರಲ್ಲಿ ಡಾ.ಅಂಬೇಡ್ಕರ್ ಅವರ ಮುಂದಾಳುತನದಲ್ಲಿ ನಡೆದ ಮಹಾಡ್ ಸತ್ಯಾಗ್ರಹ. ಈ ಹೋರಾಟವನ್ನು ಸತ್ಯಾಗ್ರಹ ಎಂದು ಆ ಹೊತ್ತಿನಲ್ಲಿ ಹೊರಡಿಸಿದ್ದ ಕರಪತ್ರದಲ್ಲಿ ಕರೆಯಲಾಗಿದೆ. ಕುಡಿಯುವ ನೀರನ್ನು ಎಲ್ಲರಂತೆ ಕೆರೆ, ಬಾವಿಗಳಿಂದ ಪಡೆದುಕೊಳ್ಳಲು ದಲಿತರಿಗೆ ಅವಕಾಶವಿಲ್ಲದಿದ್ದ ಸಂದರ್ಭದಲ್ಲಿ ಅಂದಿನ ಬಾಂಬೆ ಸರಕಾರವು ಸಾರ್ವಜನಿಕ ಪ್ರದೇಶಗಳಲ್ಲಿರುವ ನೀರಿನ ಆಕರಗಳಿಂದ ನೀರನ್ನು ಪಡೆದುಕೊಳ್ಳುವ ಹಕ್ಕು ಎಲ್ಲರಿಗೂ ಇದೆ ಎನ್ನುವ ನಿರ್ಣಯವನ್ನು(1924 ರಲ್ಲಿ) ಮಾಡಿತ್ತು. ಆದರೂ ಈ ನಿರ್ಣಯ ಜಾರಿಗೊಳ್ಳುವಲ್ಲಿ ಮೇಲು ಜಾತಿಯವರ ಒತ್ತಡದಿಂದ ಸೋಲು ಕಾಣುತ್ತಿತ್ತು. ಅಂತಹ ಹೊತ್ತಿನಲ್ಲಿ ರಾಯಗಡದ ಬಳಿಯ ಮಹಾಡ್ ಎಂಬಲ್ಲಿದ್ದ ಚವ್ದಾರ್ ತಲಾ (ಕೆರೆ) ಎಂಬಲ್ಲಿಂದ ನೀರನ್ನು ತೆಗೆದುಕೊಳ್ಳುವ ನಿರ್ಧಾರವನ್ನು ಡಾ.ಅಂಬೇಡ್ಕರ್ ಅವರು ಮಾಡಿದರು. ಸುಮಾರು ನಾಲ್ಕು ಸಾವಿರ ಜನರೊಡಗೂಡಿ ಅಲ್ಲಿಗೆ ನಡೆದು ಹೋಗಿ ಆ ಕೆರೆಯಿಂದ ನೀರು ತೆಗೆದುಕೊಳ್ಳುವುದಕ್ಕೆ ಮುಂದಾದರು.

1930ರಲ್ಲಿ ಗಾಂಧಿಯವರ ಮುಂದಾಳುತನದಲ್ಲಿ ನಡೆದ ದಂಡಿಯಾತ್ರೆ ಈಗ ನೆನಪಿಗೆ ಬರುವ ಇನ್ನೊಂದು ಸತ್ಯಾಗ್ರಹ. 1882ರಲ್ಲಿ ಬ್ರಿಟಿಶ್ ಆಡಳಿತ ಜಾರಿಗೆ ತಂದಿದ್ದ ಉಪ್ಪಿನ ಮೇಲೆ ಕರ ವಿಧಿಸುವ ಕಾಯ್ದೆಯನ್ನು ಮೀರಲು ನಡೆಸಿದ ಸತ್ಯಾಗ್ರಹವಿದು. ದಂಡಿ ಎಂಬ ಪ್ರದೇಶದಲ್ಲಿ ತಮಗೆ ಬೇಕಾದ ಉಪ್ಪನ್ನು ತಾವೇ ಪಡೆದುಕೊಳ್ಳುವ ಗುರಿಯನ್ನು ಇಟ್ಟುಕೊಂಡು ಉಪ್ಪಿನ ಮೇಲೆ ಕರ ಹಾಕುವ ಸರಕಾರದ ಕ್ರಮವನ್ನು ಮೀರಲು ಈ ಆಂದೋಲನವನ್ನು ಗಾಂಧಿ ಕೈಕೊಂಡರು. ಅವರ ಈ ನಿರ್ಧಾರಕ್ಕೆ ಗಾಂಧಿಯವರ ಸಹಚರರಲ್ಲೇ ಸಹಮತಿ ಇರಲಿಲ್ಲ. ಬೇರೆ ದಾರಿಯನ್ನು ಆಯ್ದುಕೊಳ್ಳುವುದು ಒಳಿತು ಎಂಬ ಸಲಹೆಗಳನ್ನು ಮುಂದಿಟ್ಟಿದ್ದರು. ಇದೊಂದು ನಗೆಪಾಟಲಿನ ವಿಚಾರವೆಂದು ಮಾಧ್ಯಮಗಳು ಹೇಳಿದವು. ಬ್ರಿಟಿಶ್ ಆಡಳಿತವೂ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಮೂರು ವರುಶಗಳ ಅಂತರದಲ್ಲಿ ನಡೆದ ಈ ಎರಡೂ ಹೋರಾಟಗಳ ನೆನಪು ಈಗೇಕೆ? ಇವೆರಡೂ ಈ ಭೂಮಿಯ ಮೇಲೆ ಬದುಕುವ ಎಲ್ಲ ಜನರಿಗೂ ಹುಟ್ಟಿನಿಂದಲೇ ದೊರಕಿರುವ ಹಕ್ಕುಗಳನ್ನು ಮರಳಿಗಳಿಸಿಕೊಳ್ಳುವ ಗುರಿಯನ್ನು ಹೊಂದಿವೆ. ಕೆರೆಯ ನೀರನ್ನು ಪಡೆದುಕೊಳ್ಳುವ ಹಕ್ಕು ಎಲ್ಲರಿಗೂ ಇದೆಯೆಂಬ ಕಾಯ್ದೆಯನ್ನು ಆಳುವ ಸರಕಾರ ಜಾರಿಗೆ ಕೊಡಬೇಕಾಗಿ ಬಂದುದೇ ಒಂದು ವಿಪರ್ಯಾಸ. ಅದನ್ನು ಜಾರಿಗೊಳಿಸದಂತೆ ಅಡ್ಡಿಮಾಡಿದ ಸಾಮಾಜಿಕ ಒತ್ತಡಗಳನ್ನು ಮೀರುವ ಗುರಿಯನ್ನು ಇರಿಸಿಕೊಂಡು ಡಾ. ಅಂಬೇಡ್ಕರ್ ಅವರು ನಡೆಸಿದ ಸತ್ಯಾಗ್ರಹವು ಜನರಿಂದ ಕಸಿದುಕೊಳ್ಳಲಾಗಿದ್ದ ಹಕ್ಕನ್ನು ಮರಳಿ ಪಡೆದುಕೊಳ್ಳುವ ಗುರಿಯನ್ನು ಹೊಂದಿತ್ತು. ಗಾಂಧಿಯವರು ಜನರ ದಿನದ ಅಗತ್ಯಗಳಲ್ಲಿ ಒಂದಾಗಿದ್ದ ಉಪ್ಪಿನ ಮೇಲೆ ಸುಂಕ ಹಾಕಿ ಜನರು ಉಪ್ಪು ಪಡೆದು ಕೊಳ್ಳಲು ಕಷ್ಟಕ್ಕೀಡಬೇಕಾಗಿದ್ದ ಪರಿಸ್ಥಿತಿಯ ವಿರುದ್ಧ ಈ ಸತ್ಯಾಗ್ರಹವನ್ನು ಯೋಜಿಸಿದ್ದರು. 1882ರ ಕಾಯ್ದೆ (ಇದ–



ಕ್ಕೊಂದು ಹಳೆಯ ಕತೆ ಇದೆ. ಅದಿಲ್ಲಿ ಬೇಡ)ಯನ್ನು 1930ರಲ್ಲಿ ಅರ್ಧ ಶತಮಾನದ ಅನಂತರ ವಿರೋಧಿಸಲು ಹೊರಟದ್ದು ಕೊಂಚ ವಿಚಿತ್ರವಾಗಿ ಕಾಣಬಹುದು. ಆದರೆ ಗಾಂಧಿ ಇದನ್ನೊಂದು ಸಂಕೇತವೆಂಬಂತೆ ಪರಿಗಣಿಸಿದಂತೆ ತೋರುತ್ತದೆ. ಅವರು ಸರಿ ಸುಮಾರು 1927ರಲ್ಲಿ ಯಂಗ್ ಇಂಡಿಯಾ ಪತ್ರಿಕೆಯ ತಮ್ಮ ಬರಹವೊಂದರಲ್ಲಿ 'ಯುವ ಜನಾಂಗವೇ ನಾಡಿನ ಉಪ್ಪು' ಎಂದು ಹೇಳಿದ್ದಾರೆ. 'ಈ ಉಪ್ಪು ತನ್ನ ಉಪ್ಪುತನವನ್ನು ಕಳೆದುಕೊಂಡರೆ ಅದನ್ನು ಮರಳಿ ಪಡೆದುಕೊಳ್ಳುವುದು ಹೇಗೆ' ಎಂದೂ ಕೇಳುತ್ತಾರೆ. ಉಪ್ಪಿನ ಉಪ್ಪುತನ ಅದಕ್ಕೇ ಅಗತ್ಯವಾದುದಲ್ಲ. ಆದು ಆಹಾರದಲ್ಲಿ ಬೆರೆತಾಗ ತನ್ನ ಈ ಗುಣವನ್ನು ಆ ಆಹಾರಕ್ಕೆ ಬಿಟ್ಟು ಕೊಡಬೇಕಾಗುತ್ತದೆ.

**‘ಡಾ.ಅಂಬೇಡ್ಕರ್ ಅವರು ನೀರು ಎಲ್ಲರಿಗೂ ದೊರಕಬೇಕಾದುದು ಎಂಬ ಸತ್ಯವನ್ನು ಸ್ಥಾಪಿಸಲು ನಡೆಸಿದ ಮಹಾಡ್ ಸತ್ಯಾಗ್ರಹವಾಗಲೀ, ಉಪ್ಪು ನಮ್ಮದು, ನಮಗೆ ಅದು ಸೇರಬೇಕಾದ್ದು ಎಂದು ಸಾಧಿಸಲು ಗಾಂಧಿ ನಡೆಸಿದ ದಂಡಿ ಸತ್ಯಾಗ್ರಹವಾಗಲೀ ಆಯಾ ಸಂದರ್ಭದ ಆಚೆಗೂ ತಮ್ಮ ಅರ್ಥ ಸಾಧ್ಯತೆಗಳನ್ನು ಚಾಚುತ್ತಿವೆ. ಈಗ ನಾಡು ಎದುರಿಸುತ್ತಿರುವ ಬಿಕ್ಕಟ್ಟಿನ ಹೊತ್ತಿನಲ್ಲಿ ಇವೆರಡೂ ನಮಗೆ ಸೂಚಿಸುವ ಸಾಧ್ಯತೆಗಳೇನು? ಈ ನೆಲದಲ್ಲಿ ಹುಟ್ಟಿ ಬೆಳೆದವರು, ಇಲ್ಲಿನ ನೀರು ಗಾಳಿ ಆಹಾರವನ್ನು ಪಡೆದುಕೊಂಡವರು ‘ಇಲ್ಲಿನವರೇ’ ಅಲ್ಲವೇ? ಅವರು ತಾವು ಇಲ್ಲಿನವರು ಎಂದು ಬೇರೆಯಾಗಿ ಸಾಧಿಸಿ ತೋರಿಸಬೇಕಾದ ಪರಿಸ್ಥಿತಿ ಈಗ ಒದಗಿದೆ. ಅಂದರೆ ಅವರಿಗೆ ಹುಟ್ಟಿನಿಂದಲೇ ದೊರೆತಿರುವ ಹಕ್ಕನ್ನು ಮೊಟಕುಗೊಳಿಸುವ, ಕಿತ್ತುಕೊಳ್ಳುವ ಯತ್ನಗಳು ಮೊದಲಾಗಿವೆ. ತಮ್ಮದಲ್ಲದ್ದನ್ನು ಗಳಿಸಿಕೊಳ್ಳಲು ಹೋರಾಡುವುದಲ್ಲ; ಈಗಾಗಲೇ ಹುಟ್ಟಿನಿಂದ ತಮ್ಮದಾಗಿರುವುದನ್ನು ಯಾರೋ ಕಿತ್ತುಕೊಳ್ಳುತ್ತಿರುವುದರ ವಿರುದ್ಧ ಹೋರಾಡಬೇಕಾಗಿ ಬಂದಿದೆ’**

ನೀರಿನಂತೆ ಉಪ್ಪುಕೂಡ ಬೇರೆ ಬೇರೆ ಬಗೆಯಲ್ಲಿ ಬದುಕಿಗೆ ದಿನದಿನವೂ ಬೇಕಾದ ವಸ್ತುವೇ ಸರಿ. ಇವೆರಡೂ ದೇಹಕ್ಕೆ ಬೇಕೇ ಬೇಕಾದವಾದರೂ ಇವೆರಡರ ಪಾತ್ರಗಳು ಮಾತ್ರ ಬೇರೆ ಬೇರೆ. ಗಾಂಧಿಯವರು ಉಪ್ಪನ್ನು ಯುವಜನಾಂಗಕ್ಕೆ ಹೋಲಿಸುವ ಮೂಲಕ ತಮ್ಮ ಹೋರಾಟಕ್ಕೆ ಅವರನ್ನು ಸೇರಿಸಿಕೊಳ್ಳುವ ಬಯಕೆಯನ್ನು ಹೊಂದಿದ್ದಂತೆ ತೋರುತ್ತದೆ. ಯುವ ಜನಾಂಗ ತಮ್ಮನ್ನು ತಾವು ಇನ್ನೊಂದು ಗುರಿಗೆ ಒಪ್ಪಿಸಿಕೊಳ್ಳುವಂತೆ ಮಾಡಬೇಕೆಂಬ ಆಶಯವಿದೆ. (ದಂಡಿ ಯಾತ್ರೆಯಲ್ಲಿ ಚಿಕ್ಕ ಹುಡುಗನೊಬ್ಬ ಕೋಲಿನ ಒಂದು ತುದಿಯನ್ನು ಹಿಡಿದು ಕೋಲಿನ ಇನ್ನೊಂದು ತುದಿಯಲ್ಲಿದ್ದ ಗಾಂಧಿಯನ್ನು ಕರೆದೊಯ್ಯುತ್ತಿದ್ದ ಐತಿಹಾಸಿಕ ಚಿತ್ರವನ್ನು ನೆನಪು ಮಾಡಿಕೊಳ್ಳಬಹುದು.) ಆ ಹೊತ್ತಿಗಾಗಲೇ ಹೊಸ ಬಗೆಯ ವಿದ್ಯಾಭ್ಯಾಸ, ಆಧುನಿಕತೆ, ಯಂತ್ರ ವಿಜ್ಞಾನ, ಉಪಭೋಗಿ ಜೀವನಕ್ರಮ ಮತ್ತಿತರ ಸೆಳೆತಗಳಿಂದ ನಾಡಿನ ಮುಖ್ಯ ಪ್ರವಾಹದಿಂದ, ಜನ ಸಮುದಾಯದ ಆಶೋತ್ತರಗಳಿಂದ ದೂರ ಸರಿಯುತ್ತಿದ್ದ ಯುವ ಜನಾಂಗವನ್ನು ಮತ್ತೆ ಒಳಸೆಳೆಯುವ ಯತ್ನ ಗಾಂಧಿಯವರಲ್ಲಿ ಕಾಣುತ್ತದೆ.



ಡಾ.ಅಂಬೇಡ್ಕರ್ ಅವರು ನೀರು ಎಲ್ಲರಿಗೂ ದೊರಕಬೇಕಾದುದು ಎಂಬ ಸತ್ಯವನ್ನು ಸ್ಥಾಪಿಸಲು ನಡೆಸಿದ ಮಹಾಡ್ ಸತ್ಯಾಗ್ರಹವಾಗಲೀ, ಉಪ್ಪು ನಮ್ಮದು, ನಮಗೆ ಅದು ಸೇರಬೇಕಾದ್ದು ಎಂದು ಸಾಧಿಸಲು ಗಾಂಧಿ ನಡೆಸಿದ ದಂಡಿ ಸತ್ಯಾಗ್ರಹವಾಗಲೀ ಆಯಾ ಸಂದರ್ಭದ ಆಚೆಗೂ ತಮ್ಮ ಅರ್ಥ ಸಾಧ್ಯತೆಗಳನ್ನು ಚಾಚುತ್ತಿವೆ. ಈಗ ನಾಡು ಎದುರಿಸುತ್ತಿರುವ ಬಿಕ್ಕಟ್ಟಿನ ಹೊತ್ತಿನಲ್ಲಿ ಇವೆರಡೂ ನಮಗೆ ಸೂಚಿಸುವ ಸಾಧ್ಯತೆಗಳೇನು? ಈ ನೆಲದಲ್ಲಿ ಹುಟ್ಟಿ ಬೆಳೆದವರು, ಇಲ್ಲಿನ ನೀರು ಗಾಳಿ ಆಹಾರವನ್ನು ಪಡೆದುಕೊಂಡವರು ‘ಇಲ್ಲಿನವರೇ’ ಅಲ್ಲವೇ? ಅವರು ತಾವು ಇಲ್ಲಿನವರು ಎಂದು ಬೇರೆಯಾಗಿ ಸಾಧಿಸಿ ತೋರಿಸಬೇಕಾದ ಪರಿಸ್ಥಿತಿ ಈಗ ಒದಗಿದೆ. ಅಂದರೆ ಅವರಿಗೆ ಹುಟ್ಟಿನಿಂದಲೇ ದೊರೆತಿರುವ ಹಕ್ಕನ್ನು ಮೊಟಕುಗೊಳಿಸುವ, ಕಿತ್ತುಕೊಳ್ಳುವ ಯತ್ನಗಳು ಮೊದಲಾಗಿವೆ. ತಮ್ಮದಲ್ಲದ್ದನ್ನು ಗಳಿಸಿಕೊಳ್ಳಲು ಹೋರಾಡುವುದಲ್ಲ; ಈಗಾಗಲೇ ಹುಟ್ಟಿನಿಂದ ತಮ್ಮದಾಗಿರುವುದನ್ನು ಯಾರೋ ಕಿತ್ತುಕೊಳ್ಳುತ್ತಿರುವುದರ ವಿರುದ್ಧ ಹೋರಾಡಬೇಕಾಗಿ ಬಂದಿದೆ. ನೀರು ಮತ್ತು ಉಪ್ಪಿನ ಸಂಕೇತಗಳು ಮತ್ತೆ ನಮ್ಮನ್ನು ಕಾಡಬೇಕಿದೆ. ಸ್ವಹಿತಗಳ ಬಲೆಯೊಳಗೆ ಸಿಲುಕಿ ಸಮುದಾಯದ ಹಿತದಿಂದ ದೂರ ಸರಿಯುತ್ತಿರುವ ಯುವ ಜನಾಂಗ ಮತ್ತೆ ಜನರ ಬದುಕಿನ ಭಾಗವಾಗಿ ನಿಲ್ಲಬೇಕಾದ ಸನ್ನಿವೇಶ ಈಗ ಒದಗಿಬಂದಿದೆ. □

(29ನೇ ಪುಟದಿಂದ)

# ಅಂಬೇಡ್ಕರ್ ಪತ್ರಿಕೆಗಳು...

ಜಯಂತಿ ಸಮಾರೋಪ ಸಮಾರಂಭದ ಪ್ರಯುಕ್ತ ಅಂಬೇಡ್ಕರರು ಮಂಡಿಸಿದ ‘ರಾನಡೆ, ಗಾಂಧೀ ಮತ್ತು ಜಿನ್ನಾ’ ಪ್ರಬಂಧದಲ್ಲಿ ಹೇಳಿದಂತೆ “ಭಾರತದಲ್ಲಿ ಪತ್ರಿಕಾರಂಗವು ಒಂದು ಕಾಲಕ್ಕೆ ವ್ಯವಸಾಯವಾಗಿತ್ತು. ಆದರೆ ಈಗ ಅದು ವ್ಯಾಪಾರವಾಗಿದೆ. ಹೀಗಾಗಿ ನೈತಿಕ ಜವಾಬ್ದಾರಿ ಇಲ್ಲದೆ ಅಧಃಪತನಕ್ಕೆ ಇಳಿದಿವೆ. ಜನರಿಗೆ ತಾವು ಜವಾಬ್ದಾರರು, ಅವರಿಗೆ ಸಲಹೆಗಾರರು ಎಂಬುದನ್ನು ಮರೆತಿವೆ. ಭಾರತದ ಪತ್ರಿಕೆಗಳು ಸಮಾಜದ ಹಿತ ಬಯಸುವವರಂತೆ ಕೆಲಸ ಮಾಡಲು, ಎಂಥ ಉನ್ನತ ಪದವಿಯಲ್ಲಿದ್ದವರೂ ತಪ್ಪು ಮಾಡಿದರೆ ಅದನ್ನು ಜನರಿಗೆ ತಿಳಿಯಪಡಿಸುವ ನೀತಿಯನ್ನು ರೂಪಿಸಿಕೊಳ್ಳಬೇಕಿದೆ. ಇಲ್ಲವಾದಲ್ಲಿ ಬರಿ ವ್ಯಕ್ತಿ ಪೂಜೆಗೆ ತಮ್ಮನ್ನು ಮೀಸಲಿರಿಸಿಕೊಂಡು ದೇಶದ ಹಿತವನ್ನು ಬಲಿಕೊಡುವುದಕ್ಕೆ ಹಿಂಜರಿಯದ ಹಂತಕ್ಕೆ ತಲುಪುವ ಅಪಾಯವಿದೆ. ಸಂಘಟಿತ ರೂಪದಲ್ಲಿರುವ ಬಂಡವಾಳದ ಗಾಳಕ್ಕೆ ಸಿಲುಕಿ ತಮ್ಮ ಪತ್ರಿಕಾ ಧರ್ಮವನ್ನೇ ಮರೆತುಬಿಡುವ ಹಂತಕ್ಕೆ ಬರಬಹುದು...”. ಈ ವಾಸ್ತವ ನಮ್ಮಕಣ್ಣೆದುರೆ ಇದೆ.


बहिष्कृत भारत.


ಹೀಗೆ ಅಂಬೇಡ್ಕರರು ತಮ್ಮ ರಾಜಕೀಯ ವಿಚಾರಗಳನ್ನು ಮಂಡಿಸಲು, ತಳಸಮುದಾಯಗಳ ಹಿತಕಾಯಲು ಸದಾ ಬರವಣಿಗೆಯನ್ನು ನೆಚ್ಚಿಕೊಂಡಿದ್ದರು. ದಾಖಲೆಗೊಂಡ ಅವರ ವಿಚಾರಗಳೇ ಇಂದು ದಾರಿದೀಪಗಳಾಗಿ ಶೋಷಿತ ವರ್ಗಗಳಿಗೆ ಉಳಿದಿವೆ. ಇಷ್ಟೆಲ್ಲ ಪತ್ರಿಕೆಗಳನ್ನು ಆರಂಭಿಸುವ ಅಗತ್ಯ ಬಿದ್ದಿದ್ದು ಯಾಕೆಂದರೆ ಅಂದು, ಅಂಬೇಡ್ಕರರ ವಿಚಾರಗಳನ್ನು ಒಪ್ಪದ ಪತ್ರಿಕೆಗಳು, ಅವರ ಲೇಖನ ಪ್ರಕಟಿಸುವ ಗೋಜಿಗೆ ಹೋಗುತ್ತಿದ್ದಿಲ್ಲ. ಯಾಕೆಂದರೆ, ಅವು ಮೇಲ್ಜಾತಿಗಳ ಮಾಲಿಕತ್ವದಲ್ಲಿದ್ದವು. ಇಂದು ಭಾರತದಲ್ಲಿ ಮಾಧ್ಯಮಗಳ ಒಡೆತನ, ಅವುಗಳ ಬದ್ಧತೆ ಸದಾ ಆಳುವವರ ಪರ ಮತ್ತು ಬ್ರಾಹ್ಮಣತ್ವದಿಂದ ಕೂಡಿರುವುದು ಗುಟ್ಟೇನಲ್ಲ. ಒಂದೆಡೆ ಭಾರತೀಯ ಪತ್ರಿಕೆಗಳನ್ನು ಅವುಗಳ ತಾತ್ವಿಕತೆಯನ್ನು ತಮ್ಮ ಪುಸ್ತಕ (ಇಂಡಿಯಾಸ್ ನ್ಯೂಸ್ ಪೇಪರ್ ರೆವಲ್ಯೂಷನ್) ದಲ್ಲಿ ಚರ್ಚಿಸಿದ ಆಸ್ಟ್ರೇಲಿಯಾ ಮೂಲದ ಮಾಧ್ಯಮ ತಜ್ಞ ರಾಬಿನ್ ಜಫ್ರಿ 2005ರಲ್ಲಿ ಗಮನಿಸಿದಂತೆ, ಇಂದಿನವರೆಗೂ ಭಾರತದ ಟೆಲಿವಿಜನ್‌ಗಳಲ್ಲಿ ಒಬ್ಬರೇ ಒಬ್ಬ ದಲಿತ ಸುದ್ದಿವಾಚಕರು ಇಲ್ಲದಿರುವುದು ಅಶ್ಚರ್ಯವೇನಲ್ಲ. ದಿನವಿಡೀ ಬಹುತ್ವದ ಬಗ್ಗೆ, ಬ್ರಾತೃತ್ವದ ಕುರಿತು, ಒಳಗೊಳ್ಳುವಿಕೆ ಮೇಲೆ ಮತ್ತು ಪ್ರಜಾಪ್ರಭುತ್ವದ ಮೇಲೆ ತಾಸುಗಟ್ಟಲೆ ಲೈವ್‌ಡಿಬೇಟ್ ಮಾಡುವ ಟೀವಿಗಳು, ಸಂಪಾದಕೀಯ ಬರೆಯುವ ಪತ್ರಿಕೆಗಳು ಅದೆಷ್ಟು ಜನ ದಲಿತರನ್ನು ತಮ್ಮ ನ್ಯೂಸ್ ರೂಮ್‌ಗಳಲ್ಲಿ ನೇಮಿಸಿಕೊಂಡಿದ್ದಾರೆ ಒಮ್ಮೆ ಗಮನಿಸಬೇಕಿದೆ.’ ಎನ್ನುತ್ತಾರೆ.

ಮಾಹಿತಿ:

1.**‘ಬಹಿಷ್ಕೃತ ಭಾರತ’ ಲೇ: ಡಾ. ಬಿ.ಆರ್. ಅಂಬೇಡ್ಕರ್. ಸಂಪಾದನೆ ಮತ್ತು ಅನುವಾದ ಡಾ. ಶೌರಾಜ್‌ಸಿಂಗ್ ಬೇಚೈನ್, ಗೌತಮ್ ಬುಕ್ ಸೆಂಟರ್, ದೆಹಲಿ.**

**2. ಭಾರತೀಯ ದಲಿತ್ ಪತ್ರಕಾರಿತ, ಲೇ: ಡಾ. ಅಶ್ವಿನಿ ಕುಮಾರ್. ಸ್ವರಾಜ ಪ್ರಕಾಶನ್, ದೆಹಲಿ.** □


# ಇದು ನಗುವಂತಹ ವಿಷಯವಲ್ಲ!



ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಹುಟ್ಟಿ ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ಉನ್ನತ ಅಧ್ಯಯನ ನಡೆಸಿ ಪ್ರಸ್ತುತ ಹಾರ್ವರ್ಡ್ ಕೆನೆಡಿ ಸ್ಕೂಲ್‌ನಲ್ಲಿ ಪೋಸ್ಟ್ ಡಾಕ್ಟೋರಲ್ ಫೆಲೋ ಆಗಿ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಅವರ 'ಕ್ಯಾಸ್ಟ್ ಮ್ಯಾಟರ್ಸ್' ಕೃತಿ ಹೆಚ್ಚು ಚರ್ಚೆಗೆ ಒಳಗಾಗಿದೆ. ಈ ಕೃತಿಯ ಬಗೆಗೆ ವಿಸ್ತಾರವಾದ ಬರಹವನ್ನು ಇದೇ ಸಂಚಿಕೆಯಲ್ಲಿ ಪಿ.ಭಾರತೀದೇವಿ ಬರೆದಿದ್ದಾರೆ.

**ಸೂರಜ್ ಯೆಂಗ್ಡೆ**

**Email: suraj_yengde@hks.harvard.edu**



ಹೊಸ ತಲೆಮಾರಿನಲ್ಲಿ ಪ್ರಖರವಾಗಿ ಚಿಂತಿಸುವ ಶ್ರೀನಿವಾಸರಾಜ ದೊಡ್ಡೇರಿ, ಚಳ್ಳಕೆರೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕುವೆಂಪು ಭಾಷಾ ಭಾರತಿಗಾಗಿ 'ವುದರಿಂಗ್ ಹೈಟ್ಸ್' ಕೃತಿಯನ್ನು ಅನುವಾದಿಸಿದ್ದಾರೆ. 'ಅಂಶಭೇದ' ಕವನ ಸಂಕಲನ ಪ್ರಕಟಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಚರಿತ್ರೆ ಅಧ್ಯಯನ ವಿಭಾಗದಿಂದ 'ಡಾ.ರಾಜ್ ಕುಮಾರ್ ಮತ್ತು ಕನ್ನಡದ ಅಸ್ಮಿತೆ' ಎಂಬ ಸಂಶೋಧನೆಗೆ ಪಿಹೆಚ್.ಡಿ ಪಡೆದಿದ್ದಾರೆ.

**ಅನು:ಶ್ರೀನಿವಾಸರಾಜು ದೊಡ್ಡೇರಿ**

**Email: nivas.sri.2010@gmail.com**

ಆಂಧ್ರ ಮೂಲದ ಉನ್ನಮಾಟಿ ಶಾಮಸುಂದರ್, ಪ್ರಸ್ತುತ ಜೆಎನ್‌ಯು ಸಂಶೋಧನಾ ವಿದ್ಯಾರ್ಥಿ. ಜಾತಿವಿರೋಧಿ ಹೋರಾಟಗಳಲ್ಲಿ ಈಗೀಗ ಕೇಳಿಬರುತ್ತಿರುವ ಹೆಸರು. ಸ್ನೇಹಿತರ ವಲಯಗಳಲ್ಲಿ ಉನ್ನಿ ಎಂದೇ ಈತ ಪ್ರಸಿದ್ಧ. 'ಚಂದಮಾಮ' ಮಕ್ಕಳ ಕಾಮಿಕ್ಸ್‌ನಲ್ಲಿ ಪ್ರಕಟವಾಗಿರುವ ವರ್ಣಚಿತ್ರಗಳ ಕುರಿತು ಉನ್ನಿ ಜೆಎನ್‌ಯುನಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ.

ತನ್ನ ಒರಟು, ಮೊನಚು ರೇಖೆಗಳ ಮೂಲಕವೇ ಉನ್ನಿ ಮಾಧ್ಯಮಗಳಿಗೆ ಹೆಚ್ಚು ಪರಿಚಿತ. ವಿಮೋಚನೆಯ ತುಡಿತದಿಂದ ಮೂಡಿದಂತಿರುವ ಇವರ ರೇಖಾಚಿತ್ರಗಳ ಮೊನಚು, ವ್ಯಂಗ್ಯಚಿತ್ರಗಳ ಶಿಷ್ಟ ಪರಿಕಲ್ಪನೆಯನ್ನು ಎಗ್ಗಿಲ್ಲದೆ ಉಡಾಯಿಸುತ್ತದೆ. ಹಾಗೆಯೇ ಈತ ಬರೆಯುತ್ತಿರುವ ರಾಜಕೀಯ ವಿಮರ್ಶೆ, ಹೊಸ ಕಾಲದ ಓದುಗರನ್ನು ಅನಾಮತ್ತಾಗಿ ತನ್ನತ್ತ ಸೆಳೆದುಕೊಂಡಿದೆ.

ಉನ್ನಿಯ ಕುಂಚ, ಲೇಖನಿಯ ಹರಿತ ನಮ್ಮನ್ನು ಚಕಿತಗೊಳಿಸುವಂತಿದೆ. ತನ್ನ ಸಾಮಾಜಿಕ ಆಶಯ ಮತ್ತು ಆತಂಕದ ಕೊಂಡಿಗಳನ್ನು ಈತ ತನ್ನ ಚಿತ್ರಗಳ ಮೂಲಕ ಬೆಸೆಯುತ್ತಿದ್ದಾರೆ ಅನಿಸುತ್ತದೆ. ರೌಂಡ್ ಟೇಬಲ್ ಇಂಡಿಯಾ ಜಾಲತಾಣದಲ್ಲಿ ಉನ್ನಿ ಬಹಳಷ್ಟು ಸಕ್ರಿಯ. ಎಷ್ಟೋ ಜನ ಲೇಖಕರ ಕೃತಿಗಳಿಗೆ ತನ್ನ ವಿಶಿಷ್ಟ ಗೆರೆಗಳ ಮೂಲಕ ಅರ್ಥವತ್ತಾದ ಚಿತ್ರಗಳನ್ನು ರಚಿಸಿಕೊಟ್ಟಿರುವುದರಿಂದ ಉನ್ನಿ ಈಗ ಬಹು ಬೇಡಿಕೆಯ ಕಲಾವಿದ ಕೂಡ.

ಈತ ಅಕಡೆಮಿಕ್ ಶಿಸ್ತಿನ ವ್ಯಕ್ತಿ. ಅಕಡೆಮಿಕ್ ಶಿಸ್ತು ಎಂಬುದನ್ನು ಇಲ್ಲಿ ನಾನು ಒಂದು ಅಧ್ಯಯನ ಶಿಸ್ತು ಎಂಬ ಅರ್ಥದಲ್ಲಿ ಮಾತ್ರವಲ್ಲದೆ ಚಳುವಳಿಯನ್ನು ಕಟ್ಟಲು ಅವಶ್ಯವಿರುವ ಪೋಷಕ ತತ್ವ ಎಂಬರ್ಥದಲ್ಲಿಯೂ ಬಳಸುತ್ತಿದ್ದೇನೆ. ಅಂಬೇಡ್ಕರ್‌ವಾದಿ ಚಿಂತನೆಗೆ ಉನ್ನಿ ತನ್ನ ರೇಖೆಗಳ ಮೂಲಕವೇ ವಿಶಿಷ್ಟ ಆಯಾಮ ಒದಗಿಸುತ್ತಿದ್ದಾರೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಈ ವಿಶಿಷ್ಟತೆಯೇ 'ನೋ ಲಾಫಿಂಗ್ ಮ್ಯಾಟರ್' ಎಂಬ ಪುಸ್ತಕವನ್ನು ರೂಪಿಸಿದೆ.

1932 ರಿಂದ 1956ರ ವರೆಗಿನ ಅಂಬೇಡ್ಕರರ ಸಾರ್ವಜನಿಕ ಬದುಕಿನ ಘಟನೆಗಳನ್ನು ಹಿಡಿದಿಟ್ಟಿರುವ ವ್ಯಂಗ್ಯಚಿತ್ರಗಳನ್ನು ಈ ಪುಸ್ತಕ ತನ್ನೊಳಗೆ ಅಡಕ ಮಾಡಿಕೊಂಡಿದೆ. ಈ ಚಿತ್ರಗಳ ಕುರಿತು ಉನ್ನಿ ಒದಗಿಸಿರುವ ಅಮೂಲ್ಯವಾದ ಟಿಪ್ಪಣಿಗಳೂ ಇಲ್ಲಿವೆ. ಈ ವ್ಯಂಗ್ಯಚಿತ್ರಗಳು ಅಂದಂದಿನ ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂಥವು.

ನಾಗರಿಕ ಹಕ್ಕುಗಳ ಯುವ ಹೋರಾಟಗಾರನಾಗಿ ಭಾರತದ ಸಾರ್ವಜನಿಕ ಬದುಕಿಗೆ ಕಾಲಿಟ್ಟ ಅಂಬೇಡ್ಕರ್ ಅವರನ್ನು ಇಂಗ್ಲಿಷ್ ಪತ್ರಿಕೆಗಳು 1919ರಿಂದಲೂ ಕುತೂಹಲದಿಂದ ಗಮನಿಸಿದಂತಿವೆ. ಅವರು ತಮ್ಮ ಮೇಧಾವಿತನ, ಆಳವಾದ ರಾಜಕೀಯ ಪ್ರಜ್ಞೆ, ಅಸ್ಥಿರಗೊಳ್ಳದ ನೈತಿಕತೆಯ ಬಲದಿಂದ ದೊಡ್ಡ ನಾಯಕರಾಗಿ ಹೊಮ್ಮಿದಂತೆಯೂ ಈ ಪತ್ರಿಕೆಗಳು ಅವರ ಕುರಿತು ಕಾಲಮ್ಮುಗಟ್ಟಲೆ ಪ್ರಕಟಿಸಲು ಶುರುಮಾಡಿವೆ; ಅಂಬೇಡ್ಕರರ ಕಾರ್ಯ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿವೆ; ವರದಿ ಮಾಡಿವೆ. ಈ ವರದಿಗಾರಿಕೆ ಮತ್ತು ಅಂಬೇಡ್ಕರರನ್ನು ವಿಮರ್ಶೆಗೆ ಒಳಪಡಿಸುವ ಭಾಗವಾಗಿ ಅವರ ಕುರಿತು ಅಣಕ, ವ್ಯಂಗ್ಯಚಿತ್ರಗಳು ಪ್ರಕಟಗೊಂಡಿವೆ. ಅಂಬೇಡ್ಕರ್ ಭಾರತದ ಮಾಧ್ಯಮ ಲೋಕದಲ್ಲಿ ಅನಿವಾರ್ಯವಾಗಿ ದಾಖಲಾಗಿರುವುದು ಹೀಗೆ. ಈ ವ್ಯಂಗ್ಯಚಿತ್ರಗಳ ಧ್ವನಿ ಧಾಟಿಗಳು ಕುಹಕತನದವು ಎನ್ನಿಸುವಂತಿದ್ದರೂ 'ನೋ ಲಾಫಿಂಗ್ ಮ್ಯಾಟರ್' ಅವನ್ನೆಲ್ಲ ಒತ್ತರಿಸಿ ಅಂಬೇಡ್ಕರ್ ಹೋರಾಟಗಳ ಐತಿಹಾಸಿಕ ಚಹರೆಯನ್ನು ಮುನ್ನೆಲೆಗೆ ತಂದುಬಿಡುವ ಯತ್ನದಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡಿದೆ.

ವೈಸರಾಯ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಪರಿಶಿಷ್ಟ ಜಾತಿಗಳ ಒಕ್ಕೂಟದ ನಾಯಕರಾಗಿ, ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ, ಕೇಂದ್ರ ಸರ್ಕಾರದ ಮಂತ್ರಿಯಾಗಿ, ಸಂಸತ್ ಸದಸ್ಯರಾಗಿ, ಒಟ್ಟಾರೆ ಅಧಿಕಾರದಲ್ಲಿರಲಿ ಬಿಡಲಿ ತಾವು ನಿರಂತರ ತೊಡಗಿಸಿಕೊಂಡ ಹೋರಾಟಗಳಲ್ಲಿ ಅಂಬೇಡ್ಕರ್ ವಹಿಸಿದ್ದ ಪಾತ್ರದ ಕುರಿತು ವಸ್ತುನಿಷ್ಠ ಟಿಪ್ಪಣಿಗಳನ್ನು ಉನ್ನಿ ಇಲ್ಲಿ ನೀಡಿದ್ದಾರೆ. ಈ ಪುಸ್ತಕದ ಓದು, ಅನ್ಯಾಯ ಅಸಮಾನತೆಗಳ ಮುಖವನ್ನು ಚಿತ್ರವತ್ತಾಗಿ ಪರಿಚಯಿಸುತ್ತದೆ.

ಇಲ್ಲಿನ ವ್ಯಂಗ್ಯಚಿತ್ರಗಳು ಬಿಂಬಿಸಿರುವಂತೆ ಅಂಬೇಡ್ಕರ್ ತಮ್ಮ ಸಮಕಾಲೀನ ರಾಜಕೀಯ ಗುಂಪುಗಳಿಂದ ಟೀಕೆಗಳನ್ನು ಎದುರಿಸಿದವರು; ಹಲವರ ವಿರೋಧ ಕಟ್ಟಿಕೊಂಡವರು. ಬ್ರಿಟಿಷ್ ಸರ್ಕಾರ, ಕಾಂಗ್ರೆಸ್ ಪಕ್ಷ, ಕಮ್ಯುನಿಸ್ಟರು, ಸನಾತನಿಗಳು ಮತ್ತು ಸ್ವತಃ ಅಂಬೇಡ್ಕರ್ ಯಾರ ವಿಮೋಚನೆಗಾಗಿ ಹೋರಾಡುತ್ತಿದ್ದರೋ ಆ ಶೋಷಿತರ ಕೆಲವು ಗುಂಪುಗಳು... ಹೀಗೆ ಸುತ್ತಲೂ ಅವರಿಗೆ ಅಸಂಖ್ಯ ಟೀಕಾಕಾರರಿದ್ದರು; ಅಷ್ಟಾಗಿ ಅವರನ್ನು ಇಷ್ಟಪಡದಿರುವವರೇ ಇದ್ದರು. ಅದು ಅಂತಹ ಅಚ್ಚರಿಯ ಸಂಗತಿಯಲ್ಲ. ಅಂತಹ ವಿಷಮ ವಾತಾವರಣದಲ್ಲಿಯೂ ಅಂಬೇಡ್ಕರರು ಹೇಗೆ ತಮ್ಮ ಪಾಲಿನ ಕೆಲಸದಲ್ಲಿ ಮಗ್ನರಾಗಿದ್ದರು ಎನ್ನುವುದು ಮಾತ್ರ ನಿಜಕ್ಕೂ ಬೆರಗು ಹುಟ್ಟಿಸುವ ಸಂಗತಿ. ತಮ್ಮ ಮೂವತ್ತೈದು ನಲವತ್ತು ವರ್ಷಗಳ ಸಾರ್ವಜನಿಕ ಬದುಕಿನಲ್ಲಿ ಅಂಬೇಡ್ಕರ್ ತೋರಿದ ದಿಟ್ಟತನ ಮತ್ತು ಬದ್ಧತೆಗೆ ಇದು ಸಾಕ್ಷಿಯಾಗಿದೆ. ನಿಜವಾದ ಅಂಬೇಡ್ಕರ್‌ವಾದಿಗಳು ಅನುಸರಿಸಬೇಕಾದ ಮಾರ್ಗವನ್ನು ನಮಗೆ ಕಾಣಿಸುವಂತಿದೆ.

ಎಷ್ಟೇ ಒಬ್ಬಂಟಿಯಾಗಿದ್ದರೂ ಅಂಬೇಡ್ಕರ್ ತಮ್ಮ ಹೋರಾಟದಲ್ಲಿ ರಾಜಿ ಮಾಡಿಕೊಳ್ಳಲಿಲ್ಲ; ಹೋರಾಟದಿಂದ ವಿಮುಖರಾಗಲಿಲ್ಲ. ಭಾರತೀಯ ಸಮಾಜದ ದಿಕ್ಕೆಟ್ಟ ದೋಣಿಯನ್ನು ಸಮಾನತೆಯ ತತ್ವ, ಸಾಮಾಜಿಕ ಏಳಿಗೆ, ಸ್ಥಿರ ಪ್ರಜಾಪ್ರಭುತ್ವ ಎಂಬ ದಂಡೆಗೆ ಮುಟ್ಟಿಸಲು ದೃಢ ಮನಸ್ಸಿನಿಂದ ಹುಟ್ಟುಹಾಕುತ್ತಾ ಕುಳಿತಿರುವ ನಾವಿಕನಂತೆ ಅವರು ಭಾಸವಾಗುವುದಿದೆ. ಈ ದೇಶವು ತನ್ನ ಪ್ರಗತಿಪಥದಲ್ಲಿ ಅಂಬೆಗಾಲಿಡುತ್ತಾ ಸಾಗಿ, ಕ್ರಮೇಣ ತಾರುಣ್ಯವನ್ನೂ ಪ್ರಬುದ್ಧತೆಯನ್ನೂ ಪಡೆದೇ ತೀರುತ್ತದೆ ಎಂಬುದರ ಕುರಿತು ಅವರು ಆಶಾವಾದಿಯಾಗಿರುವಂತಿದೆ. ಸಂಪ್ರದಾಯವಾದಿ ನಿಲುವಿಗೆ ನಿತ್ಯವೂ ಸವಾಲೆಸೆಯುತ್ತಿದ್ದ ನಡೆ (ಉದಾ.,


**‘ನಾಗರಿಕ ಹಕ್ಕುಗಳ ಯುವ ಹೋರಾಟಗಾರನಾಗಿ ಭಾರತದ ಸಾರ್ವಜನಿಕ ಬದುಕಿಗೆ ಕಾಲಿಟ್ಟ ಅಂಬೇಡ್ಕರ್ ಅವರನ್ನು ಇಂಗ್ಲಿಷ್ ಪತ್ರಿಕೆಗಳು 1919ರಿಂದಲೂ ಕುತೂಹಲದಿಂದ ಗಮನಿಸಿದಂತಿವೆ. ಅವರು ತಮ್ಮ ಮೇಧಾವಿತನ, ಆಳವಾದ ರಾಜಕೀಯ ಪ್ರಜ್ಞೆ, ಅಸ್ಥಿರಗೊಳ್ಳದ ನೈತಿಕತೆಯ ಬಲದಿಂದ ದೊಡ್ಡ ನಾಯಕರಾಗಿ ಹೊಮ್ಮಿದಂತೆಯೂ ಈ ಪತ್ರಿಕೆಗಳು ಅವರ ಕುರಿತು ಕಾಲಮ್ಮುಗಟ್ಟಲೆ ಪ್ರಕಟಿಸಲು ಶುರುಮಾಡಿವೆ; ಅಂಬೇಡ್ಕರರ ಕಾರ್ಯ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಿವೆ; ವರದಿ ಮಾಡಿವೆ. ಈ ವರದಿಗಾರಿಕೆ ಮತ್ತು ಅಂಬೇಡ್ಕರರನ್ನು ವಿಮರ್ಶೆಗೆ ಒಳಪಡಿಸುವ ಭಾಗವಾಗಿ ಅವರ ಕುರಿತು ಅಣಕ, ವ್ಯಂಗ್ಯಚಿತ್ರಗಳು ಪ್ರಕಟಗೊಂಡಿವೆ. ಅಂಬೇಡ್ಕರ್ ಭಾರತದ ಮಾಧ್ಯಮ ಲೋಕದಲ್ಲಿ ಅನಿವಾರ್ಯವಾಗಿ ದಾಖಲಾಗಿರುವುದು ಹೀಗೆ. ಈ ವ್ಯಂಗ್ಯಚಿತ್ರಗಳ ಧ್ವನಿ ಧಾಟಿಗಳು ಕುಹಕತನದವು ಎನ್ನಿಸುವಂತಿದ್ದರೂ ‘ನೋ ಲಾಫಿಂಗ್ ಮ್ಯಾಟರ್’ ಅವನ್ನೆಲ್ಲ ಒತ್ತರಿಸಿ ಅಂಬೇಡ್ಕರ್ ಹೋರಾಟಗಳ ಐತಿಹಾಸಿಕ ಚಹರೆಯನ್ನು ಮುನ್ನೆಲೆಗೆ ತಂದುಬಿಡುವ ಯತ್ನದಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡಿದೆ’**

ಮಹಿಳೆಯರ ಮೇಲಿನ ದಬ್ಬಾಳಿಕೆಗೆ ಅಂತ್ಯ ಹಾಡಲು ಅವರು ತಯಾರಿಸಿದ ಹಿಂದೂ ಕೋಡ್ ಬಿಲ್), ಪಾಳೇಗಾರಿಕೆ ಮತ್ತು ಪುರೋಹಿತಶಾಹಿಯ ವಿರುದ್ಧದ ಹೋರಾಟ (ಉದಾ., ಮಹಾಮಹೋಪಧ್ಯಾಯ, ರಾವ್ ಬಹದ್ದೂರ್, ಖಾನ್ ಬಹದ್ದೂರ್ ಮುಂತಾದ ಬಿರುದು ಬಾವಲಿಗಳನ್ನು ರದ್ದುಪಡಿಸಬೇಕೆಂದು ಸರ್ಕಾರಕ್ಕೆ ಅವರು ಮಾಡಿಕೊಂಡ ಮನವಿ), ರಾಜಕಾರಣಿಗಳನ್ನು ಪ್ರವಾದಿಗಳಂತೆಯೋ ಮಹಾತ್ಮರಂತೆಯೋ ಬಿಂಬಿಸಬಾರದು ಎಂಬ ನಿಲುವು, ವ್ಯಕ್ತಿಪೂಜೆ ಎನ್ನುವುದು ಸಮಾಜದ ಬೆಳವಣಿಗೆಗೆ ಕಂಟಕ ಎಂಬ ಚಿಂತನೆ– ಇವೆಲ್ಲವುಗಳ ಮೂಲಕ ಪ್ರಬುದ್ಧ ಸಮಾಜ ಹೇಗಿರಬೇಕೆಂಬ ನೀಲನಕ್ಷೆ ತಯಾರಿಸಲು ಹೊರಟವರಂತೆ ಅವರು ಕಾಣುತ್ತಾರೆ.

ಇನ್ನು ಮಹಿಳಾಪರ ವಿಷಯಗಳಲ್ಲಂತೂ ಅಂಬೇಡ್ಕರ್ ಮಾಧ್ಯಮಗಳಲ್ಲಿ ಅತಿ ಹೆಚ್ಚು ಚರ್ಚೆಗೊಳಗಾದ ರಾಜಕಾರಣಿಯಾಗಿದ್ದರು. ಮಹಿಳೆಯರಿಗೆ ವಿವಾಹ ವಿಚ್ಛೇದನದ ಹಕ್ಕು ಇರಬೇಕು ಎಂದು ಅಂಬೇಡ್ಕರ್ ಸಂಸತ್ತಿನಲ್ಲಿ ಮಂಡಿಸಿದ್ದಕ್ಕೆ ಈ ನಾಡಿನ ಗಂಡಾಳ್ವಿಕೆ ಪರಂಪರೆಯೇ ಕನಲಿ ನಿಂತಿತ್ತು.

ಭಾರತೀಯ ಸಂವಿಧಾನ ಹೇಗಿರಬೇಕೆಂಬ ಪೂರ್ವಭಾವಿ ಚರ್ಚೆಗಳಲ್ಲಿ ಹಳ್ಳಿಗಳ ಮಾದರಿಯ ಆಡಳಿತ ವ್ಯವಸ್ಥೆ ಇಲ್ಲಿರಬೇಕು ಎಂದು ಅಭಿಪ್ರಾಯಪಟ್ಟವರು ಹಲವರು. ಅಂಬೇಡ್ಕರ್ ಇಂತಹ ಸಲಹೆಗಳನ್ನೆಲ್ಲ ತಳ್ಳಿಹಾಕುವುದಲ್ಲದೆ, ವಾಲ್ಟರ್ ಬ್ಯಾಜೆಟ್‌ನಂತಹ ಇಂಗ್ಲಿಷ್ ಪತ್ರಕರ್ತರ ಬರಹಗಳು ಹೇಗೆ ಇಂತಹ ಚಿಂತನೆಗಳನ್ನು ಪ್ರಭಾವಿಸಿವೆ ಎಂದು ತೋರಿಸಿಕೊಡುತ್ತಾರೆ. ಹಳ್ಳಿಗಳು ಶೋಷಿತರ ಪಾಲಿಗೆ ಎಷ್ಟು ಭಯಾನಕವಾಗಿವೆ ಎಂದು ವಾದಿಸುತ್ತಾ, ಬ್ರಿಟಿಷ್ ಇಂಡಿಯಾದ ಆಡಳಿತಗಾರ ಚಾರ್ಲ್ಸ್ ಮೆಕಾಫೆಯನ್ನು ಉಲ್ಲೇಖಿಸಿ ಅಂಬೇಡ್ಕರ್ ಹೇಳಿದ್ದು ಕುತೂಹಲಕಾರಿಯಾಗಿದೆ: ‘ಭಾರತವು ವಸಾಹತುಶಾಹಿಗಳ ಹಿಡಿತಕ್ಕೆ ಸುಲಭವಾಗಿ ಸಿಲುಕಿಕೊಳ್ಳಲು ಹಳ್ಳಿಗಳ ಪಾರಂಪರಿಕ ಆಡಳಿತ ವ್ಯವಸ್ಥೆಯೇ ಕಾರಣ. ಇದು ಸಂಕುಚಿತ ನೆಲೆಯದು. ವಿಶಾಲವಾಗಿ ನೋಡಲು ನಿರಾಕರಿಸುವಂಥದು.’


ಆದರೆ ‘ನೋ ಲಾಫಿಂಗ್ ಮ್ಯಾಟರ್’ ಸಂಕಲಿಸಿಕೊಂಡಿರುವ ವ್ಯಂಗ್ಯಚಿತ್ರಗಳಲ್ಲಿ ಅಂಬೇಡ್ಕರರು ಎಳಸು ಹುಡುಗನಂತೆ, ರಚ್ಚೆ ಹಿಡಿದ ಮಗುವಿನಂತೆ, ಪುಂಡು ಪೋಕರಿಯಂತೆ ಮತ್ತು ತನ್ನ ಸಮಕಾಲೀನ ರಾಷ್ಟ್ರೀಯ ನಾಯಕರ ಜೊತೆ ಇರುವಾಗ ಅಕ್ಷರಶಃ ಕುಬ್ಜನಂತೆ ಚಿತ್ರಿಸಲ್ಪಟ್ಟಿರುವುದರತ್ತ ಉನ್ನಿ ಬೆರಳು ಮಾಡುತ್ತಾರೆ. ಉನ್ನಿ ಇಲ್ಲಿ ಕಲೆಹಾಕಿರುವ ವ್ಯಂಗ್ಯಚಿತ್ರಗಳು ಈ ದೇಶದ ವಿದ್ವತ್ ವಲಯದ ದುರಾಗ್ರಹವನ್ನು ಬಯಲು ಮಾಡುವಂತೆಯೇ ಇವೆ. ವಿಮೋಚನೆಯ ರಾಜಕಾರಣವನ್ನು ಒಂದು ಹಂತದಲ್ಲಿ ಈ ಮಾಧ್ಯಮದ ಮಂದಿ ತಮ್ಮ ಕಾಮಾಲೆ ಕಣ್ಣಿನಿಂದ ನೋಡಿದ್ದಕ್ಕೆ ಪುಸ್ತಕದಲ್ಲಿ ಸಾಕ್ಷಿ ದೊರೆಯುವಂತಿದೆ. ವ್ಯಂಗ್ಯಚಿತ್ರಕಾರರು ತಮ್ಮ ಅಭಿವ್ಯಕ್ತಿಗಳಲ್ಲಿ ಪೂರ್ವಾಗ್ರಹಗಳಿಗೆ ಎಡೆಗೊಡುವ ವಿದ್ಯಮಾನವನ್ನು ಉನ್ನಿ ಇಲ್ಲಿ ಕಟುವಾಗಿ ಪ್ರಶ್ನಿಸುತ್ತಾರೆ. ಸದ್ಯ ಮತ್ತು ಶಾಶ್ವತವೆಂಬ ಎರಡೂ ನೆಲೆಗೆ ಸಲ್ಲಬೇಕಾದ ನಿಜಕ್ಕೆ ಮುಖಾಮುಖಿಯಾದಾಗ ಮಾತ್ರ ಕಾಲದ ಪರೀಕ್ಷೆಯಲ್ಲಿ ವ್ಯಂಗ್ಯಚಿತ್ರಕಾರರು ಗೆಲ್ಲಬಲ್ಲರು ಎಂಬ ತಾತ್ವಿಕತೆಯನ್ನು ಈ ಕೃತಿ ಮಂಡಿಸುತ್ತದೆ; ಅಣಕವಾಡುವಾಗ ನಾವು ಹಿಡಿದ ತಕ್ಕಡಿಯ ತೂಗುಮುಳ್ಳು ಸತ್ಯದ ಕಡೆಗೆ ವಾಲಿರುವುದು ಎಷ್ಟು ಅವಶ್ಯ ಎಂಬುದನ್ನು ಗೊಂದಲಕ್ಕೆ ಆಸ್ಪದವಿಲ್ಲದಂತೆ ಹೇಳುತ್ತದೆ. ಈ ಪುಸ್ತಕವನ್ನು ನೀವು ಓದಿ ಮುಗಿಸಿದಾಗ ದಲಿತ ರಾಜಕಾರಣದ ಬಗ್ಗೆ ಕೆಲವು ಹೊಳಹುಗಳಂತೂ ನಿಮಗೆ ದಕ್ಕಿರುತ್ತವೆ.




**ನೋ ಲಾಫಿಂಗ್ ಮ್ಯಾಟರ್: ದಿ ಅಂಬೇಡ್ಕರ್ ಕಾರ್ಟೂನ್ಸ್ 1932–56**
**ಆಯ್ಕೆ ಮತ್ತು ಸಂಪಾದನೆ: ಉನ್ನಮಾಟಿ ಶಾಮಸುಂದರ್**
**ನವಯಾನ, ನ್ಯೂ ಡೆಲ್ಲಿ.**
**ಪುಟ: 405, ಬೆಲೆ: ರೂ.599/–**

ಸಂವಹನವು ಡಿಜಿಟಲ್ ಬಿಂಬಗಳಿಗೆ ಸೀಮಿತಗೊಳ್ಳುತ್ತಿರುವ ಈ ಎಮೋಜಿ ಹಾಗು ಜಿಐಎಫ್‌ಗಳ ಯುಗದಲ್ಲಿ, ರಾಜಕೀಯ ವ್ಯಂಗ್ಯಚಿತ್ರಗಳು ನೇರವಾಗಿಯೂ ನವಿರಾಗಿಯೂ ವಾಸ್ತವ ಸತ್ಯವನ್ನು ಬಿಂಬಿಸುತ್ತಿವೆ ಎಂಬುದೇನೋ ಹೌದು. ಆದರೆ ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳೂ ಇವೆ. ಅಂಬೇಡ್ಕರ್ ಕಾಲದ ಮಾಧ್ಯಮಗಳ ದುರಾಗ್ರಹಗಳು ಈಗ ಕೊನೆಯಾಗಿವೆಯೊ, ಇಲ್ಲವೇ ಹಾಗೆಯೇ ಚಾಲ್ತಿಯಲ್ಲಿವೆಯೊ? ಉತ್ತರ ಅಷ್ಟು ಆಶಾದಾಯಕವಾಗಿರುವಂತಿಲ್ಲ. ಇವತ್ತಿಗೂ ಪರಿಸ್ಥಿತಿ ಹಾಗೆಯೇ ಇದೆ... ಇವಾಗಲೂ ಕೂಡ ದಲಿತ ನಾಯಕತ್ವವನ್ನು ಅಗತ್ಯಕ್ಕಿಂತ ತುಸು ಹೆಚ್ಚೇ ಎನ್ನುವಷ್ಟು ಲೇವಡಿ ಮಾಡಲಾಗುತ್ತದೆ; ಪತ್ರಿಕೆ, ಟಿವಿ, ವೆಬ್ ಮಾಧ್ಯಮಗಳಲ್ಲಿ ಹಾಸ್ಯಾಸ್ಪದವಾಗಿ ಬಿಂಬಿಸಲಾಗುತ್ತದೆ. ಅಂಬೇಡ್ಕರ್ ಇವತ್ತು ನಮ್ಮೊಂದಿಗಿದ್ದಿದ್ದರೂ ಭಾರತದ ಮಾಧ್ಯಮಲೋಕದ ಪ್ರತಿಕ್ರಿಯೆ ಹೆಚ್ಚೂಕಡಿಮೆ ಹೀಗೆಯೇ ಇರುತ್ತಿತ್ತು. ಅದನ್ನು ಈ ಪುಸ್ತಕ ಇನ್ನಷ್ಟು ನಿಚ್ಚಳವಾಗಿ ಮನವರಿಕೆ ಮಾಡಿಕೊಡುತ್ತಿದೆ ಅಷ್ಟೆ.


ಇಲ್ಲಿ ಪ್ರಕಟವಾಗಿರುವ ಚಿತ್ರಗಳ




**ಚಿತ್ರ 1: ಟೆಂಪಲ್ ಎಂಟ್ರಿ ಈಸ್ ಗಿವನ್ ಟು ಹರಿಜನ್ಸ್: ‘ಹಿಂದೂಸ್ತಾನ್ ಟೈಮ್ಸ್’, 6 ಜುಲೈ 1942; ಶಂಕರ್**

ಸ್ಕ್ಯಾನಿಂಗ್ ಗುಣಮಟ್ಟ ಅಷ್ಟು ಚೆನ್ನಾಗಿಲ್ಲ. ಆದರೆ ಪುಡಿಗಟ್ಟುವಷ್ಟು ಹಳೆಯ ದಿನಪತ್ರಿಕೆಗಳಿಂದ, ಆರ್ಕೈವ್‌ಗಳ ಮೈಕ್ರೊ ಫಿಲ್ಮ್‌ಗಳಿಂದ ಉನ್ನಿ ಬಹಳ ಜತನದಿಂದ ಇಲ್ಲಿನ ಚಿತ್ರಗಳನ್ನು ಹೆಕ್ಕಿದ್ದಾರೆ. ಅಂಬೇಡ್ಕರ್ ಬಗೆಗಿನ ಅವಗಣನೆ, ಆಕರಗಳ ಸೀಮಿತತೆ ಇವೆಲ್ಲ ಅವರ ಕುರಿತು ಮಾಹಿತಿ ಸಂಗ್ರಹಿಸುವವರಿಗೆ ಎದುರಾಗಬಲ್ಲ ತೊಡಕುಗಳು. ಆದ್ದರಿಂದ 'ಗಾಂಧಿ ಇನ್ ಕಾರ್ಟೂನ್ಸ್' ಅಥವ 'ಡೋಂಟ್ ಸ್ಪೇರ್ ಮಿ ಶಂಕರ್'ನಂತಹ ಅತ್ಯುತ್ತಮ ಸ್ಕ್ಯಾನಿಂಗ್ ಗುಣಮಟ್ಟದ ಪುಸ್ತಕಗಳಿಗೆ ಇದನ್ನು ಹೋಲಿಸದೆ ಉನ್ನಿಯ ಈ ಪ್ರಯತ್ನವನ್ನು ಕೊಂಚ ಉದಾರವಾಗಿ ನೋಡಲೇಬೇಕಾಗುತ್ತದೆ.

* * *




**ಚಿತ್ರ 2: ಅರೌಂಡ್ ದಿ ಕಾರ್ನರ್: 'ಶಂಕರ್ಸ್ ವೀಕ್ಲಿ', 11 ಡಿಸೆಂಬರ್ 1949; ಶಂಕರ್**

**ಚಿತ್ರ 1:** ದಲಿತರಿಗೆ ದೇವಾಲಯ ಪ್ರವೇಶ ದೊರೆಯಬೇಕು ಎನ್ನುವ ಬಗ್ಗೆ ಅಂಬೇಡ್ಕರ್ ಅವರಿಗೆ ಅಂತಹ ಒಲವಿಲ್ಲದೆ ಇದ್ದುದಕ್ಕೂ ವೈಸರಾಯ್ ಸಮಿತಿಯೊಳಗೆ ಅವರಿಗೆ ಪ್ರವೇಶ ದೊರಕಿದ್ದಕ್ಕೂ ಈ ಚಿತ್ರ ಸಂವಾದಿಯಾಗಿದೆ ಎಂದು ಮೇಲುನೋಟಕ್ಕೆ ಅನ್ನಿಸಿದರೂ, ಇದರಲ್ಲಿ ವ್ಯಂಗ್ಯ ಅಥವ ತಮಾಷೆ ಏನಿದೆ ಎಂಬುದನ್ನು ವಿಚಾರಿಸಿ ನೋಡಬೇಕಿದೆ. ಇಲ್ಲಿ ಲಾರ್ಡ್ ಲಿನ್‌ಲಿಥ್ಗೊ ಅವರನ್ನು ಬ್ರಾಹ್ಮಣ ಪುರೋಹಿತನಂತೆ ಚಿತ್ರಿಸಲಾಗಿದೆ. ವೈಸರಾಯ್ ಸಮಿತಿಯನ್ನು ಗುಡಿ ಎಂಬುದಾಗಿ ಸಂಕೇತಿಸಲಾಗಿದೆ. ಒಂದು ಹುದ್ದೆಗಾಗಿ, ವೈಯಕ್ತಿಕ ಸ್ಥಾನಮಾನಕ್ಕಾಗಿ ಅಂಬೇಡ್ಕರ್ ಬ್ರಿಟಿಷರನ್ನು ಹೊಸೆಯುತ್ತಿದ್ದರು ಎಂಬಂತೆ ಚಿತ್ರಿಸಿರುವುದೂ ಕಾಣುತ್ತದೆ. ಇದು ಅವರ ಸಾಮಾಜಿಕ ಬದ್ಧತೆ ಮತ್ತು ಹೋರಾಟವನ್ನು ಅವಮಾನಿಸಿದಂತೆ ಎಂಬುದನ್ನು ವ್ಯಂಗ್ಯಚಿತ್ರಕಾರರಾದ ಶಂಕರ್ ಗಮನಿಸಿದಂತಿಲ್ಲ. ಶಂಕರ್ ಇಲ್ಲಿ ಜಾತಿ ಸೌಕರ್ಯಗಳನ್ನು ಪುರಸ್ಕರಿಸುತ್ತಿದ್ದಾರೆ ಎಂದೇನೂ ಅನ್ನಿಸದಿದ್ದರೂ ಇಲ್ಲಿನ ವ್ಯಂಗ್ಯ ಏನೆಂಬುದು ಸ್ಪಷ್ಟವಾಗುವುದಿಲ್ಲ ಎನ್ನುವುದೇ ಸಮಸ್ಯೆ.

**ಚಿತ್ರ 2:** ಶಂಕರ್ ಅವರ ಈ ಚಿತ್ರ ಹಿಟ್ಲರ್‌ನ 'ಫೇವರಿಟ್ ಗರ್ಲ್' ಅಥವ 'ಫ್ಯೂರರ್ಸ್ ಚೈಲ್ಡ್' ಎಂಬ ಫೋಟೊದಿಂದ ಪ್ರಭಾವಿತವಾಗಿದೆ. ಹಿಟ್ಲರ್‌ಗೆ ಪ್ರಚಾರ ಕೊಡಲು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತಿದ್ದ ಚಿತ್ರಗಳಲ್ಲಿ ಅದೂ ಒಂದು. ಆ ಚಿತ್ರವನ್ನು ಸೆರೆಹಿಡಿದದ್ದು ಹಿಟ್ಲರ್‌ನ ಚೇಲಾ ಹೆನ್ರಿಕ್ ಹಾಫ್‌ಮನ್. ಅದರಲ್ಲಿ ಕಾಣಿಸಿಕೊಂಡಿದ್ದ ಹುಡುಗಿ ಬರ್ನಿಲ್ ನೆನಾವ್. ಇವಳ ಯಹೂದಿ ಹಿನ್ನೆಲೆ ನಾಜಿ ಪಕ್ಷಕ್ಕೆ ತೀವ್ರ ಇರಸುಮುರಸು ಉಂಟುಮಾಡಿದ್ದರಿಂದ ಈಕೆಯೊಂದಿಗಿನ 'ನಂಟ'ನ್ನು ನಾಜಿಗಳ ದೊಣ್ಣೆನಾಯಕ ಕಡಿದುಕೊಳ್ಳಬೇಕಾಯ್ತು.

ಶಂಕರ್ ಯಾತಕ್ಕೆ ಆ ಭಾವಚಿತ್ರವನ್ನು ಆಧಾರವಾಗಿಟ್ಟುಕೊಂಡು ವ್ಯಂಗ್ಯಚಿತ್ರ ರಚಿಸಿದ್ದಾರೆ ಎಂಬುದನ್ನು ಊಹಿಸುವುದು ಕಷ್ಟ. ಆದರೆ 'ಫ್ಯೂರರ್ಸ್ ಚೈಲ್ಡ್'ನ ಹೋಲಿಕೆಗಳು ಈ ಚಿತ್ರದಲ್ಲಿವೆ ಎನ್ನುವುದು ನಿಜ. 'ಹಿಂದೂ ಕೋಡ್ ಬಿಲ್' ಅನ್ನು ಅಂಬೇಡ್ಕರರ ನೆಚ್ಚಿನ ಬಾಲಕಿಯಂತೆ ಚಿತ್ರಿಸಿರುವುದು ಇಲ್ಲಿ ಅಸಹಜವಾಗಿದೆ. ಅದಕ್ಕಿಂತಲೂ ಅಸಹಜವೆಂದರೆ ಮಹಿಳೆಯರು ಬ್ರಾಹ್ಮಣಶಾಹಿಯನ್ನು ಅಳಿಸಲು ತಯಾರಾಗಿ ನಿಂತಿರುವುದು. ಮೇಲ್ಜಾತಿ ಗಂಡಸರಿಂದಲೇ ಅವೊತ್ತಿನ ಸಂಸತ್ತು ತುಂಬಿ ತುಳುಕುತ್ತಿತ್ತು ಎಂಬುದನ್ನು ನೆನಪಿಸಿಕೊಂಡರೆ ಶಂಕರ್‌ರ ಈ ವ್ಯಂಗ್ಯಚಿತ್ರ, ವ್ಯಂಗ್ಯಕ್ಕಿಂತಲೂ ಹೆಚ್ಚಾಗಿ ಮರುಕವನ್ನು ಹುಟ್ಟಿಸುವಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬೇಕು.




**ಚಿತ್ರ 3: ರೋಡ್ ಟು ರೀನೊ: 'ಪಯನಿಯರ್', 15 ಡಿಸೆಂಬರ್ 1949; ಆರ್. ಬ್ಯಾನರ್ಜಿ**

**ಚಿತ್ರ 3:** ಈ ಚಿತ್ರ ತನ್ನ ಶೀರ್ಷಿಕೆಯನ್ನು ಪಡೆದಿರುವುದು 'ದಿ ರೋಡ್ ಟು ರೀನೊ' (1931) ಎಂಬ ಹಾಲಿವುಡ್ ಚಲನಚಿತ್ರದಿಂದ. ಅದರಲ್ಲಿ ನಾಯಕಿ ಎರಡು ಸಲ ವಿವಾಹ ವಿಚ್ಛೇದನ ಪಡೆದುದಲ್ಲದೆ ಮೂರನೆಯ ಮದುವೆಗೂ ಯತ್ನಿಸುತ್ತಾಳೆ.

ಹಿಂದೂ ಕೋಡ್ ಬಿಲ್‌ನ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾಗುತ್ತಿದ್ದಾಗ ಅದು ಭಾರತೀಯ ಸಮಾಜದಲ್ಲಿ, ಮುಖ್ಯವಾಗಿ ಭಾರತೀಯ ಗಂಡಸರಲ್ಲಿ ವಿಚಿತ್ರ ತಳಮಳಗಳನ್ನು ಹುಟ್ಟಿಸಿದ್ದು ಕುತೂಹಲಕಾರಿಯಾಗಿದೆ. ಈ ಮಸೂದೆಯು ಮಹಿಳೆಯರಿಗೆ ವಿವಾಹ ವಿಚ್ಛೇದನದ ಹಕ್ಕನ್ನು ನೀಡುತ್ತದೆ ಎಂಬುದನ್ನು ಕೇಳಿ ಬಹುಪಾಲು ಗಂಡಸರು ಕಂಗಾಲಾಗಿದ್ದರು. ತಮ್ಮ ಗಂಡನಿಂದ ವಿಚ್ಛೇದನ ಪಡೆಯುವುದೊಂದನ್ನು ಬಿಟ್ಟು ಮಹಿಳೆಯರಿಗೆ ಬೇರೆ ಕೆಲಸವೇ ಇಲ್ಲ ಎಂದು ಅವರು ತಿಳಿದಂತಿತ್ತು. ತಾವು ಇನ್ನೊಬ್ಬ ಹೆಂಗಸಿನ ಜೊತೆ ಸಂಪರ್ಕ ಹೊಂದಲು ಸದಾ ತವಕಿಸುವಂತೆ ಹೆಂಗಸರೂ ಇಂತಹದೇ ಪ್ರವೃತ್ತಿ ಬೆಳೆಸಿಕೊಂಡರೇನು ಗತಿ ಎಂದು ಅವರು ಹೆದರಿದಂತಿತ್ತು. ಭಾರತದ ಸಾಂಪ್ರದಾಯಿಕ ರೋಗಿಷ್ಠ ಮನಸ್ಥಿತಿ ಈ ಬಗೆಯ ಚಿಂತನೆಗೆ ಅವರನ್ನು ಪ್ರೇರೇಪಿಸಿರಬಹುದು. ವಿವಾಹ ವಿಚ್ಛೇದನಕ್ಕೆ ಮಹಿಳೆ ಮುಂದಾದಲ್ಲಿ ಭಾರತೀಯ ಕುಟುಂಬಗಳ ನೆಲೆಗಟ್ಟು ಕುಸಿಯುತ್ತದೆ ಎಂದು ವಾದಿಸತೊಡಗಿದ್ದ ಈ ಗಂಡಸರು ಮಹಿಳೆಯರಿಗೆ ಇರಬೇಕಾದ ಮೂಲಭೂತ ಹಕ್ಕುಗಳ ಬಗ್ಗೆ ಎಂದೂ ತಲೆಕೆಡಿಸಿಕೊಂಡವರೇ ಅಲ್ಲ.




**ಚಿತ್ರ 4: ಟಚ್ ಮಿ ನಾಟ್: 'ಶಂಕರ್ಸ್ ವೀಕ್ಲಿ', 12 ಸೆಪ್ಟೆಂಬರ್ 1954; ಶಂಕರ್**


ಸಮಾನ ನಾಗರಿಕ ಹಕ್ಕುಗಳ ಭಾಗವಾಗಿ ಮಹಿಳೆಯರಿಗೆ ನೀಡಲಾಗಿರುವ ಈ ವಿವಾಹ ವಿಚ್ಛೇದನದ ಹಕ್ಕನ್ನು ಹಲವು ದೇಶಗಳಲ್ಲಿ ಮಹಿಳೆಯರು ದೀರ್ಘಕಾಲದ ಹೋರಾಟಗಳ ಮೂಲಕ ತಮ್ಮದಾಗಿಸಿಕೊಂಡಿದ್ದಾರೆ.

**ಚಿತ್ರ 4:** ಕೈಲಾಸನಾಥ ಕಟ್ಜು (ಈಗಿನ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶ ಮಾರ್ಕಂಡೇಯ ಕಟ್ಜು ಅವರ ಅಜ್ಜ), ಅಸ್ಪೃಶ್ಯತಾ ಆಚರಣೆ ನಿಷೇಧ ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡಿಸಿದ್ದರು. ಅಂಬೇಡ್ಕರ್ ಈ ಕಾಯ್ದೆಯ ರೂಪರೇಷೆ ಸರಿಯಿಲ್ಲ ಎಂದು ಅದನ್ನು ಟೀಕಿಸಿದ್ದರು. ಕಾಯ್ದೆಯ ಹೆಸರನ್ನು ನಾಗರಿಕ ಹಕ್ಕುಗಳ ರಕ್ಷಣಾ ಕಾಯ್ದೆ ಎಂಬುದಾಗಿ ಬದಲಿಸಬೇಕೆಂದೂ ಅವರು ಒತ್ತಾಯಿಸಿದ್ದರು. ಅಂಬೇಡ್ಕರರ ಟೀಕೆಗೆ ಕಟ್ಜು, 'ಅಸ್ಪೃಶ್ಯತಾ ಆಚರಣೆಯನ್ನು ತಡೆಗಟ್ಟಲು ನಿಮ್ಮಿಂದಲಾದರೂ ಸಾಧ್ಯವಾಯ್ತೆ?' ಎಂದು ಪ್ರಶ್ನಿಸಿದಾಗ, 'ಅದು ನನ್ನ ಸಮಸ್ಯೆಯಲ್ಲ, ಮೇಲ್ಜಾತಿಯವರ ಸಮಸ್ಯೆ' ಎಂಬುದಾಗಿ ಅಂಬೇಡ್ಕರ್ ಉತ್ತರಿಸಿದ್ದರು.



**ಉನ್ನಮಾಟಿ ಶಾಮಸುಂದರ್**

**(ವ್ಯಂಗ್ಯಚಿತ್ರಗಳನ್ನು ಕುರಿತ ಟಿಪ್ಪಣಿಗಳು ಉನ್ನಮಾಟಿ ಶಾಮಸುಂದರ್ ಅವರವು.)** □



ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ನಂದಗಾವದ ಸುಭಾಷ್ ರಾಜಮಾನೆ, ಸದ್ಯಕ್ಕೆ ಬೆಂಗಳೂರಿನ ಯಲಹಂಕದ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕ. ಈತನಕ 'ದಿಆರ್ಟಿಸ್ಟ್' (ಅನು,2006) ನಿರ್ದಿಗಂತವಾಗಿ ಏರಿ (ಸಂಶೋಧನೆ, 2017) ಮುಳುಗದಿರಲಿ ಬದುಕು (ಅನು, 2019) ಮೊದಲಾದ ಐದು ಕೃತಿಗಳನ್ನು ಪ್ರಕಟಿಸಿರುವ ಸುಭಾಷ್ ಗಂಭೀರ ಓದುಗ ಮತ್ತು ಸೂಕ್ಷ್ಮ ಸಂವೇದನೆಯ ಬರಹಗಾರ.

**ಸುಭಾಷ್ ರಾಜಮಾನೆ**

**Email: rajamanesubash98@gmail.com**

# ಅಂಬೇಡ್ಕರ್ ಅವರ ಅವಿರತ ಬದುಕಿನ ಕ್ಷಣಗಳೊಂದಿಗೆ ಒಡನಾಡಿದ ಅನುಭವ

ನದಿಯೊಂದು ಎಲ್ಲೋ ಹುಟ್ಟಿ ತನ್ನ ಪಾತ್ರವನ್ನು ತಾನೇ ನಿರ್ಮಿಸಿಕೊಳ್ಳುವುದರ ಜೊತೆಯಲ್ಲಿ ತೊರೆ, ಹಳ್ಳ-ಕೊಳ್ಳಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಲೇ ವಿಸ್ತಾರವಾಗಿ ಹರಿಯುವ ನದಿಗೆ ಅಂಬೇಡ್ಕರ್‌ರ ಬದುಕನ್ನು ಹೋಲಿಸಬಹುದು. ಅವರ ಬದು-ಕೆಂಬ ನದಿಯಿಂದ ದಮನಿತ ಸಮುದಾಯಗಳ ಅದೆಷ್ಟೋ ಜನರು ತಮಗೆ ದಕ್ಕಿದಷ್ಟು ಪ್ರೇರಣೆಯನ್ನು ಪಡೆದುಕೊಂಡು ತಮ್ಮ ಜೀವನ ವಿಧಾನ ಮತ್ತು ದೃಷ್ಟಿಕೋನಗಳನ್ನು ಬದಲಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರೊಂದಿಗೆ ನಿಕಟ ಒಡನಾಟವನ್ನು ಹೊಂದಿದ್ದ ಅವರ ಸಮಕಾಲೀನರ ಅನೇಕ ಬರೆಹಗಳನ್ನು 'ಅಂಬೇಡ್ಕರ್: ದಿ ಅಟೆಂಡೆಂಟ್ ಡಿಟೇಲ್ಸ್' ಕೃತಿಯು ಒಳಗೊಂಡಿದೆ. ಜಾತಿ ಪೆಡಂಭೂತದ ವಿರೋಧಿ ಮತ್ತು ಅಂಬೇಡ್ಕರ್ ಚಿಂತನೆಗಳಿಗೆ ಮೀಸಲಾಗಿರುವ ನವಯಾನ ಪ್ರಕಾಶನ ಸಂಸ್ಥೆಯಿಂದ ಪ್ರಕಟವಾಗಿರುವ ಈ ಕೃತಿಯು ಹಲವು ಕಾರಣಗಳಿಂದ ಮಹತ್ವದ್ದಾಗಿದೆ.


01\. ಈ ಕೃತಿಯು ಅಂಬೇಡ್ಕರ್‌ರ ಜೀವನ ವಿಧಾನ ಮತ್ತು ಅವರ ಚಿಂತನಧಾರೆಯ ಸ್ವರೂಪವನ್ನು ಅಧಿಕೃತವಾಗಿ ದಾಖಲಿಸುತ್ತದೆ. ಇದರಲ್ಲಿ ದೊಡ್ಡ ಚಿಂತಕರ, ದಲಿತ ನಾಯಕರ, ಲೇಖಕ/ಕಿಯರ ಬರಹಳಷ್ಟೇ ಅಲ್ಲದೇ ಕೆಲವು ಸಾಮಾನ್ಯರ ಲೇಖನಗಳೂ ಇಲ್ಲಿವೆ. ಅಂಬೇಡ್ಕರ್‌ರು ಹಿರಿಯರು-ಕಿರಿಯರು ಮತ್ತು ಮುಖ್ಯರು-ಅಮುಖ್ಯರು ಎನ್ನದೆ ಎಲ್ಲರೊಂದಿಗೂ ಬೆರೆಯುವ ವ್ಯಕ್ತಿಯಾಗಿದ್ದರು. ಇದ-ರಿಂದಾಗಿ ಜನಸಾಮಾನ್ಯರ ಮೇಲೆ ಅಂಬೇಡ್ಕರರ ಪ್ರಭಾವ ಎಂತಹದ್ದು ಎಂಬುದು ತಿಳಿಯುತ್ತದೆ. ಬೇರೆ ಬೇರೆ ಹಿನ್ನೆಲೆಯಿಂದ ಬಂದವರ ಕಣ್ಣೋಟದ ಮುಖಾಂತರ ಅಂಬೇಡ್ಕರ್‌ರ ಜೀವನದ ವೈವಿಧ್ಯಮಯ ಚಹರೆಗಳನ್ನು ಕಾಣಲು ಸಾಧ್ಯವಾಗಿದೆ.

02\. ಮರಾಠಿ ಆತ್ಮಕತೆಯಲ್ಲಿ ತಮ್ಮದೇ ಹೊಸ ಮಾದರಿಗಳನ್ನು ನಿರ್ಮಿಸಿದ ನಾಮದೇವ ನಿಮ್ಗಾಡೆ, ಶಾಂತಾಬಾಯಿ ಕಾಂಬಳೆ, ಬೇಬಿ ಕಾಂಬಳೆ-ಇವರ ಆತ್ಮಕತೆಯ ಆಯ್ದ ಭಾಗಗಳೂ ಇದರಲ್ಲಿವೆ. ಇವರು ಸ್ವತಃ ಅಂಬೇಡ್ಕರ್‌ನ್ನು ಕಂಡು ಪ್ರೇರಣೆ ಪಡೆದ ಬಗೆಯು ಅಪೂರ್ವವಾಗಿದೆ. ಊರ್ಮಿಳಾ ಪವಾರ್ ಮತ್ತು ದಯಾ ಪವಾರ್-ಇವರು ಅಂಬೇಡ್ಕರ್‌ರ ಸಮಕಾಲೀನರಲ್ಲದಿದ್ದರೂ ಅವರ ಪ್ರಖರ ಚಿಂತನೆ ಮತ್ತು ಸಾಮುದಾಯಿಕ ಚಳವಳಿಯಿಂದ ಪ್ರಭಾವಿತರಾದವರು; ಇವರು ತಮ್ಮ ಆತ್ಮಕತೆಗಳನ್ನು ಬರೆಯುವುದರ ಮೂಲಕ ದಲಿತರಲ್ಲಿ ಘನತೆ ಮತ್ತು ಸ್ವಾಭಿಮಾನದಿಂದ ಕೂಡಿದ ಬದುಕಿನ ಛಲವನ್ನು ಭಿತ್ತಿದವರು. ದಲಿತ ಸ್ತ್ರೀವಾದಿ ಚಿಂತನೆ ಬೆಳೆಯಲು ಅಂಬೇಡ್ಕರ್‌ರ ಕೊಡುಗೆ ಅಮೂಲ್ಯವಾದದ್ದು.

03\. ಅಂಬೇಡ್ಕರ್ ಅವರೊಂದಿಗೆ ಆಪ್ತವಾದ ಬಾಂಧವ್ಯವನ್ನು ಪಡೆದವರಲ್ಲಿ ನಾನಕ್ ಚಂದ್ ರತ್ತು, ದೇವಿ ದಯಾಳ್, ಶಂಕರಾನಂದ ಶಾಸ್ತ್ರೀ, ಭಗವಾನ ದಾಸ್ ಮತ್ತು ನಾಮದೇವ ನಿಮ್ಗಾಡೆ ಮುಖ್ಯರಾಗಿದ್ದಾರೆ. ಅಂಬೇಡ್ಕರ್ ಅವರನ್ನು ಅತ್ಯಂತ ಸಮೀಪದಿಂದ ಕಂಡವರಾಗಿದ್ದವರ ನೆನಪಿನ ದಾಖಲೆಗಳು ಸಾಂಸ್ಕೃತಿಕವಾಗಿ ಮುಖ್ಯವಾಗಿವೆ. ಇವುಗಳ ಮೂಲಕ ಎಷ್ಟೊಂದು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಅಂಬೇಡ್ಕರ್‌ರ ದೈತ್ಯ ಶಕ್ತಿಯ ಚಿತ್ರಣವೊಂದು ಲಭಿಸುವಂತಾಗಿದೆ. ಅಂಬೇಡ್ಕರ್‌ರ ದಿನಚರಿ, ಅಧ್ಯಯನ ವಿಧಾನ, ಬರವಣಿಗೆಯ ಶಿಸ್ತು, ಪುಸ್ತಕಗಳ ಸಂಗ್ರಹ-ಇವುಗಳ ಬಗ್ಗೆ ವಿಶೇಷ ಒಳನೋಟಗಳಿವೆ.

04\. ಕೆಲವರು ಅಂಬೇಡ್ಕರ್ ಅವರೊಂದಿಗೆ ನಡೆಸಿದ ವಾದ-ವಾಗ್ವಾದಗಳ ಸ್ವರೂಪವನ್ನು ಅರಿಯಲು ಸಾಧ್ಯವಾಗಿದೆ. ಅಂಬೇಡ್ಕರ್ ಯಾವತ್ತೂ ವ್ಯಕ್ತಿಪೂಜೆ ಮತ್ತು ವ್ಯಕ್ತಿ ಆರಾಧನೆಯನ್ನೂ ಒಪ್ಪಿದವರಲ್ಲ. ಅವರು ತಮ್ಮನ್ನು ಆರಾಧನೆ ಮಾಡುವವರನ್ನೂ ತೀವ್ರವಾಗಿ ಖಂಡಿಸುತ್ತಿದ್ದರು. ಸಂವಾದಗಳಲ್ಲಿ ನಿರರ್ಗಳವಾಗಿ ಹರಿಯುತ್ತಿದ್ದ ಅವರ ಗಂಭೀರ ವಾಗ್ಝರಿಯ ಪರಿಯನ್ನು ಕಂಡರೆ ಅವರ ಪಾಂಡಿತ್ಯ ಮತ್ತು ವಿದ್ವತ್‌ಗಣಿಯ ಆಳವು ಎಂತಹದ್ದು ಎಂಬುದು ಮನವರಿಕೆಯಾಗುತ್ತದೆ. ಅವರ ನವಿರಾದ ಹಾಸ್ಯಪ್ರಜ್ಞೆಯು ಮನೋಜ್ಞವಾಗಿದೆ. ಆದ್ದರಿಂದ ಇಲ್ಲಿಯ ನೆನಪುಗಳು ಅಂಬೇಡ್ಕರ್‌ರಿಗಷ್ಟೇ ಸೀಮಿತವಾಗದೇ ಜಾತಿಪೀಡಿತ ಜಡ ಮನಸ್ಸುಗಳು ಚಲನಶೀಲತೆಯನ್ನು ಪಡೆಯಲು ಮಾರ್ಗದರ್ಶಿಯಾಗಿವೆ.


## ಪುಸ್ತಕ ಅವಲೋಕನ




**ಅಂಬೇಡ್ಕರ್: ದಿ ಅಟೆಂಡೆಂಟ್ ಡಿಟೇಲ್ಸ್**
**ಸಂಪಾದನೆ: ಸಲೀಮ್ ಯುಸೂಫಜಿ**
**ಬೆಲೆ: 295, ಪುಟಗಳು: 190**
**ಮೊದಲ ಮುದ್ರಣ: 2017**
**ಪ್ರಕಾಶನ: ನವಯಾನ, ನವ ದೆಹಲಿ**

05\. ಅಂಬೇಡ್ಕರ್ ಅವರು ಜ್ಯೋತಿಬಾ ಫುಲೆಯವರ ಜೀವನ ಚರಿತ್ರೆ ಮತ್ತು ಭಾರತದ ಮಿಲಿಟರಿಯ ಚರಿತ್ರೆಯನ್ನು ಬರೆಯುವ ಆಸೆ ತಮಗೆ ಇತ್ತೆಂದು ಹೇಳಿಕೊಂಡಿದ್ದಾರೆ. ಅವರಿಗೆ ತಮ್ಮ ಆತ್ಮಕತೆಯನ್ನು ಬರೆಯುವ ಬಯಕೆಯೂ ಇತ್ತು; ಆದರೆ ಅದಕ್ಕೆ ಸಮಯ ದೊರೆಯಲಿಲ್ಲವೆಂದು ಹೇಳಿದ್ದಾರೆ. ನಮಗೀಗ ಅವರೇ ಬರೆದ ಆತ್ಮಕತೆ-ಯ ತುಣುಕೆಂದರೆ "ವೇಟಿಂಗ್ ಫಾರ್ ಎ ವೀಸಾ" ಅಷ್ಟೇ. ಇದನ್ನು ಕೃತಿಯಲ್ಲಿ ಸೇರಿಸಲಾಗಿದೆ. ಇನ್ನೊಂದು ಮಹತ್ವಪೂರ್ಣ ಸಂಗತಿಯೆಂದರೆ-ವಿಜಯ್ ಸುರ್ವಾಡೆಯವರು ಅಂಬೇಡ್ಕರ್‌ರಿಗೆ ಸಂಬಂಧಪಟ್ಟಂತೆ ಸಂಗ್ರಹಿಸಿದ ಅಪರೂಪದ ಫೋಟೋಗಳನ್ನು ಈ ಕೃತಿಯಲ್ಲಿ ಬಳಸಲಾಗಿದೆ. ಸಾವಿರ ಪದಗಳಲ್ಲಿ ಹೇಳಲಾಗದ್ದನ್ನು ಈ ಒಂದೊಂದು ಫೋಟೊಗಳು ಕೂಡ ಮಾತಾಡುತ್ತಿವೆ.

ಒಟ್ಟಾರೆಯಾಗಿ ಅಂಬೇಡ್ಕರ್‌ರ ಜೀವನ ಮೀಮಾಂಸೆ ಮತ್ತು ದೂರದೃಷ್ಟಿಯ ದಾರ್ಶನಿಕತೆಯನ್ನು ತಿಳಿಯಲು ಈ ಕೃತಿಯು ಸಹಕಾರಿಯಾಗಿದೆ. ಅಂಬೇಡ್ಕರ್ ತಮ್ಮ ಬದುಕಿನ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆದವರಲ್ಲ; ತಮ್ಮ ಸಂಪರ್ಕಕ್ಕೆ ಬಂದವರನ್ನೂ ನಿರಂತರ ಕ್ರಿಯಾಶೀಲತೆಗೆ ಪ್ರಚೋದಿಸಿದವರು; ಈ ಕೃತಿಯನ್ನು ಓದುವುದೆಂದರೆ, ಅವರ ಅವಿರತ ಬದುಕಿನ ಕ್ಷಣಗಳೊಂದಿಗೆ ಒಡನಾಡಿದ ಅನುಭವವಾಗುತ್ತದೆ. □



ದೊಡ್ಡಬಳ್ಳಾಪುರ ತಾಲೂಕಿನ ಕಂಟನಕುಂಟೆಯ ರಂಗನಾಥ ಮೈಸೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪನ ಮಾಡುತ್ತಿದ್ದಾರೆ. ಈತನಕ 'ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ' 'ಜನರ ವ್ಯಾಕರಣ' 'ಸೇನೆಯಿಲ್ಲದ ಕದನ' 'ಓದಿನ ಜಾಡು' ಮೊದಲಾದ ಕೃತಿಗಳ ಮೂಲಕ ಅರ್ಥಪೂರ್ಣ ವಾಗ್ವಾದ ನಡೆಸಿದ್ದಾರೆ. ಈಗಿನ ಸೋಷಿಯಲ್ ಮೀಡಿಯಾದ ದಾವಂತಕ್ಕೆ ಬಲಿಯಾಗದೆ, ನಮ್ಮ ಕಾಲದ ವಿಧ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವಸರಿಸದೆ ಧ್ಯಾನಿಸಿ ಬರೆವ, ಆಲೋಚಿಸುವ ಹೊಸ ತಲೆಮಾರಿನ ಚಿಂತಕರಲ್ಲಿ ರಂಗನಾಥ ಭಿನ್ನರಾಗಿ ಕಾಣುತ್ತಾರೆ.

## ರಂಗನಾಥ ಕಂಟನಕುಂಟೆ

**Email: kantanakunte.ranganatha@gmail.com**

'ಪೌರತ್ವ (ತಿದ್ದುಪಡಿ) ಮಸೂದೆ' ಕಳೆದ ಡಿಸೆಂಬರ್ 12 ರಂದು ಸಂಸತ್ತಿನಲ್ಲಿ ಅಂಗೀಕಾರವಾದ ನಂತರ ದೇಶದಾದ್ಯಂತ ನಡೆದ ಪ್ರತಿಭಟನೆಗಳಲ್ಲಿ ಕಾಣಿಸಿಕೊಂಡ ಚಿತ್ರಗಳೆಂದರೆ ಗಾಂಧಿ, ಅಂಬೇಡ್ಕರ್ ಮತ್ತು ರಾಷ್ಟ್ರಧ್ವಜ. ಈ ಪ್ರತಿಭಟನೆಯ ಆಂದೋಲನದಲ್ಲಿ ಮಹಿಳೆಯರು, ಯುವಕರು ಮತ್ತು ಅಲ್ಪಸಂಖ್ಯಾತರು ಇವುಗಳನ್ನು ಎತ್ತಿಹಿಡಿದಿದ್ದು ವಿಶೇಷ ಸಂಗತಿ. 'ಸ್ವತಂತ್ರ ಭಾರತ'ದಲ್ಲಿ ಎಂದೂ ಈ ಪರಿಯಲ್ಲಿ ಗಾಂಧಿ ಅಂಬೇಡ್ಕರ್ ಮತ್ತು ರಾಷ್ಟ್ರಧ್ವಜಗಳನ್ನು ಎತ್ತಿ ಹಿಡಿದ ಉದಾಹರಣೆ ಕಡಿಮೆ. ಅದರಲ್ಲಿಯೂ ಮುಕ್ತ ಮಾರುಕಟ್ಟೆಯ ನೀತಿಗಳು ಜಾರಿಗೊಂಡ ನಂತರ ಹುಟ್ಟಿರುವ ಯುವಕರು ಅಂಬೇಡ್ಕರ್ ಚಿತ್ರಗಳನ್ನು ಹಿಡಿದಿರುವುದು ವಿಶೇಷವಾಗಿದೆ. ಯಾಕೆಂದರೆ ಕಳೆದ ಸಹಸ್ರಮಾನದ ಕೊನೆಯ ದಶಕದ ನಂತರದಲ್ಲಿ ಜನ ಚಳವಳಿಗಳು ಚದುರಿಹೋಗಿ ಇಡೀ ದೇಶವನ್ನು ಎಚ್ಚರಿಸುವಂತಹ ಯಾವ ದೊಡ್ಡಚಳವಳಿಗಳೂ ನಡೆಯಲಿಲ್ಲ. ಈ ಕಾಲದಲ್ಲಿ ನಡೆದ ಚಳವಳಿಗಳನ್ನು ಕಾರ್ಮಿಕರು, ರೈತರು, ಮಹಿಳೆಯರು ಪ್ರತ್ಯೇಕವಾಗಿ ತಮ್ಮತಮ್ಮ ಅಸ್ತಿತ್ವಕ್ಕಾಗಿ ನಡೆಸಿದ 'ಐಡೆಂಟಿಟಿ ಚಳವಳಿ'ಗಳಾಗಿದ್ದವು. ಇವು ಯುವಜನರನ್ನು ಚಳವಳಿಗಳ ಕಡೆಗೆ ಸೆಳೆದದ್ದು ಇಲ್ಲವೇ ಪ್ರಭಾವಿಸಿದ್ದು ಬಹಳ ಕಡಿಮೆ. ಇದೇ ಕಾಲದಲ್ಲಿಯೇ ವಿದ್ಯಾರ್ಥಿ ಸಂಘಟನೆಗಳು ನೆಲಕಚ್ಚಿ 'ವಿದ್ಯಾರ್ಥಿ ಚಳವಳಿ' ನಗಣ್ಯವಾಗಿದ್ದೂ ಕೂಡ ಇದೆ. ಅದರಲ್ಲಿಯೂ ಮಾಹಿತಿ ತಂತ್ರಜ್ಞಾನ ಯುಗ ಆರಂಭವಾದ ನಂತರವಂತೂ ಯುವಜನರು ಅಲ್ಲಿ ಕಳೆದುಹೋಗಿದ್ದಾರೆಂಬ ಆರೋಪವಿದೆ. ವಿದ್ಯಾರ್ಥಿಗಳು ಯುವಕರು ಅಂತರ್‌ಜಾಲದ 'ಮಾಯಾಲೋಕ'ದಲ್ಲಿ ಮುಳುಗಿರುವ ಕಾರಣದಿಂದಾಗಿಯೇ ಅವರು ದೇಶದ ಜನರ ಸಮಸ್ಯೆಗಳಿಂದ ದೂರ ಸರಿಸಿದ್ದಾರೆ; ಇಲ್ಲವೇ ಅಪಕಲ್ಪನೆಗಳಿಂದ ತಮ್ಮ ವಿಚಾರಗಳನ್ನು ರೂಪಿಸಿಕೊಂಡು ಪೊಳ್ಳು ರಾಜಕೀಯ ಮತ್ತು ಧಾರ್ಮಿಕ ವಿಚಾರಧಾರೆಗಳನ್ನು ಪೋಷಿಸುತ್ತಿದ್ದಾರೆ ಎಂದೂ ಭಾವಿಸಲಾಗಿತ್ತು. ಇದು ನಿಜವೂ ಆಗಿದೆ.

ಆದರೆ ಈ ಭಾವನೆ ದಟ್ಟವಾಗಿರುವಾಗಲೇ ಪೌರತ್ವ(ತಿದ್ದುಪಡಿ)ವಿಧೇಯಕ ಕಾಯ್ದೆಯಾಗಿ ಜಾರಿಯಾದ ನಂತರ ಅದನ್ನು ಪ್ರತಿಭಟಿಸಲು ದೊಡ್ಡ ಜನಸಮುದಾಯ ದೇಶದಾದ್ಯಂತ ಬೀದಿಗಿಳಿಯಿತು. ಹಾಗೆ ಬೀದಿಗಿಳಿದ ಜನರಲ್ಲಿ ವಿದ್ಯಾರ್ಥಿಗಳು ಮತ್ತು ಯುವ ಸಮುದಾಯದ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಅಲ್ಲದೆ ಚಳವಳಿಯ ಮುಂಚೂಣಿಯಲ್ಲಿ ನಿಂತು ಪ್ರಭುತ್ವದ ರಕ್ಷಣಾ ಪಡೆಗಳ ವಿರುದ್ಧ ಎದೆ ಸೆಟೆಸಿ ನಿಂತು 'ಆಜಾದಿ' ಇಲ್ಲವೇ ವಿಮೋಚನೆಯ ಘೋಷಣೆಗಳನ್ನು ಕೂಗಿದ್ದು ಕೂಡ ವಿದ್ಯಾರ್ಥಿಗಳು ಮತ್ತು ಯುವಕರೇ ಆಗಿದ್ದಾರೆ. ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ, ಜಾಮಿಯಾ ಮಿಲಿಯ ಇಸ್ಲಾಮಿಯಾ ವಿಶ್ವವಿದ್ಯಾಲಯ, ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ; ಹೀಗೆ ಅನೇಕ ವಿಶ್ವವಿದ್ಯಾಲಯಗಳ ಕಾಲೇಜುಗಳ ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಯುವ ಜನರು ದೇಶದಾದ್ಯಂತ ಬೀದಿಗಿಳಿದರು. ಹೀಗೆ ಬೀದಿಗಿಳಿಯುವ ಹೊತ್ತಿನಲ್ಲಿ ಪ್ರತಿಭಟನೆಯ ಸಂಕೇತವಾಗಿ ಇವರು ಕೈಯಲ್ಲಿ ಹಿಡಿದದ್ದು ಸಂವಿಧಾನ, ಅಂಬೇಡ್ಕರ್, ಗಾಂಧಿ ಹಾಗೂ ರಾಷ್ಟ್ರಧ್ವಜಗಳು.

ಇಲ್ಲಿನ ಮುಖ್ಯ ಪ್ರಶ್ನೆಯೆಂದರೆ ಯುವಕರು ಇದ್ದಕ್ಕಿದ್ದಂತೆ ಯಾಕೆ ಅಂಬೇಡ್ಕರ್ ಭಾವಚಿತ್ರ ಮತ್ತು ಸಂವಿಧಾನವನ್ನು ಪ್ರತಿಭಟನಾಸ್ತ್ರವನ್ನಾಗಿ ಆರಿಸಿಕೊಂಡು ಮುಂದು ಮಾಡಿದರು? ಅಲ್ಲದೆ ಇಲ್ಲಿಯವರೆಗೂ ಐಡೆಂಟಿಟಿಗಾಗಿ ನಡೆಸಿದ ಚಳವಳಿಗಳಲ್ಲಿ ತಮ್ಮ ತಮ್ಮ ಪ್ರತ್ಯೇಕ ಬಾವುಟಗಳನ್ನು ಜನ ಬಳಸುತ್ತಿದ್ದರು. ಆದರೆ ಸಿಎಎ ವಿರುದ್ಧದ ಪ್ರತಿಭಟನೆಗಳಲ್ಲಿ ರಾಷ್ಟ್ರದ'ಏಕತೆ'ಯ ಸಂಕೇತವಾಗಿ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದದ್ದು ಮಹತ್ವದ ವಿಚಾರ. ಲಕ್ಷಾಂತರ ಬಾವುಟಗಳನ್ನು ಹಾರಿಸಿ ದೇಶದ ಜನರ ಐಕ್ಯತೆನ್ನು ಸಾರಿದ್ದು ವಿಶೇಷವಾಗಿತ್ತು. ಹಾಗೆಯೇ ಪ್ರಪಂಚಕ್ಕೆ ಸತ್ಯಾಗ್ರಹದ ಮಹತ್ವವನ್ನು ಸಾರಿದ ಗಾಂಧೀಜಿಯವರ ಭಾವಚಿತ್ರವನ್ನು ಹಿಡಿದದ್ದು ಬಹುಮುಖ್ಯ ಸಂಗತಿ. ಅಲ್ಲದೆ ಗಾಂಧೀಜಿಯವರು ಹಾಕಿಕೊಟ್ಟ ಅಹಿಂಸಾ ಮಾರ್ಗದಲ್ಲಿ ದಿಟ್ಟವಾಗಿ ಪ್ರಭುತ್ವದ ವಿರುದ್ಧ ಸೆಟೆದು ನಿಂತಿದ್ದು ಭರವಸೆ ಮೂಡಿಸಿತು. ಇವೆರಡಕ್ಕಿಂತಲೂ




ಮಹತ್ವದ ಸಂಗತಿಯೆಂದರೆ ಅಂಬೇಡ್ಕರ್ ಅವರನ್ನು ಯುವ ಜನರು ತಮ್ಮ ಐಕಾನ್ ಆಗಿ ಆಯ್ಕೆ ಮಾಡಿಕೊಂಡಿದ್ದು ವಿಶೇಷವಾಗಿದೆ. ವಿದ್ಯಾರ್ಥಿಗಳು ಯುವ ಜನರು ತಮ್ಮ ಪ್ರತಿಭಟನೆಯನ್ನು ವ್ಯಕ್ತ ಪಡಿಸುವುದರ ಸಂಕೇತವಾಗಿ ಸಂವಿಧಾನ ಮತ್ತು ಅಂಬೇಡ್ಕರ್ ಚಿತ್ರವನ್ನು ಬಳಸಿದ್ದು ಹೊಸ ವಿದ್ಯಮಾನ. ನಮ್ಮ ದೇಶದ ಸಾಮಾಜಿಕ ರಾಜಕೀಯ ಸಂದರ್ಭದಲ್ಲಿ ಯುವಕರ ಐಕಾನ್ ಆಗಿ ವಿವೇಕಾನಂದರನ್ನು ಬಿಂಬಿಸಲಾಗಿದೆ. ಹಾಗೆಯೇ ಸುಭಾಷ್‌ಚಂದ್ರ ಬೋಸ್ ಮತ್ತು ಭಗತ್ ಸಿಂಗರನ್ನು ಬಿಂಬಿಸಲಾಗಿದೆ. ಆದರೆ ಈ ಚಳವಳಿಯ ಸಂದರ್ಭದಲ್ಲಿ ಗಾಂಧಿ, ವಿವೇಕಾನಂದ, ಭಗತ್ ಸಿಂಗ್, ಸುಭಾಷ್‌ಚಂದ್ರ

**‘ಇಲ್ಲಿಯವರೆಗೂ ಈ ಪರಿಯಲ್ಲಿ ಸ್ವತಂತ್ರ ಭಾರತದಲ್ಲಿ ಎಂದೂ ಕೂಡ ಯುವಜನರು ತಮ್ಮ ಐಕಾನ್ ಆಗಿ ಅಂಬೇಡ್ಕರ್ ಅವರನ್ನು ಆಯ್ಕೆಮಾಡಿಕೊಂಡಿರಲಿಲ್ಲ. ದಲಿತ ವಿದ್ಯಾರ್ಥಿ ಸಂಘಟನೆಗಳು ಮತ್ತು ಚಳವಳಿಗಳು ಮಾತ್ರ ಅಂಬೇಡ್ಕರ್ ಅವರನ್ನು ಐಕಾನ್ ಆಗಿ ಆಯ್ಕೆ ಮಾಡಿಕೊಂಡಿದ್ದವೆಯೇ ಹೊರತು ಬೇರೆಯವರು ಬಳಸಿರಲಿಲ್ಲ. ಈಗ ಮೊದಲ ಬಾರಿಗೆ ಜಾತಿ ಧರ್ಮಗಳ ಗಡಿ ಮೀರಿ ಎಲ್ಲ ಸಮುದಾಯಗಳು ಅಂಬೇಡ್ಕರ್ ಅವರನ್ನು ಒಪ್ಪಿ ಅಪ್ಪಿಕೊಂಡಿರುವುದು ಕಂಡುಬರುತ್ತದೆ. ವಿಶೇಷವೆಂದರೆ ಗಾಂಧಿ ಅಧ್ಯಯನಕಾರ ಮತ್ತು ಪ್ರಸಿದ್ಧ ಇತಿಹಾಸಕಾರ ರಾಮಚಂದ್ರ ಗುಹಾ ಅವರು ಕೂಡ ಬೆಂಗಳೂರಿನ ಟೌನ್‌ಹಾನ್ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಹಿಡಿದಿದ್ದು ಗಾಂಧಿಯ ಭಾವಚಿತ್ರವನ್ನಲ್ಲ; ಅಂಬೇಡ್ಕರ್ ಅವರ ಭಾವಚಿತ್ರ’ ‘ಸದ್ಯದಲ್ಲಿ ಈ ದೇಶಜಾತಿ, ವರ್ಗ, ಲಿಂಗತಾರತಮ್ಯ, ಧಾರ್ಮಿಕ ಕಲಹಗಳ ಕುಲುಮೆಗಳಲ್ಲಿ ಬೇಯುತ್ತಿದೆ. ಅಸಹಾಯಕರ ನೆತ್ತರು ಬೀದಿಗಳಲ್ಲಿ ಚೆಲ್ಲಾಡುತ್ತಿದೆ. ಪ್ರಜಾತಂತ್ರದ ಆಶಯಗಳನ್ನು ಆಚರಣೆಗೆ ತರುವ ಪ್ರಯತ್ನಗಳು ಮರೀಚಿಕೆಯಾಗುತ್ತಿವೆ. ಪ್ರಭುತ್ವ ರಕ್ಕಸವಾಗಿದೆ. ಧರ್ಮ ಬೆಳಕಾಗುವ ಬದಲು ಬೆಂಕಿಯಾಗಿ ವಿಷ ಉಗುಳುತ್ತಿದೆ. ಬದುಕು ಬಹಳ ದುಸ್ತರವಾಗುತ್ತಿದೆ. ಇಂತಹ ಹೊತ್ತಿನಲ್ಲಿ ದೇಶದ ಜನರ ಬದುಕು ಸಹಜ ಸ್ಥಿತಿಗೆ ಬರಬೇಕಾದರೆ ಅಂಬೇಡ್ಕರ್ ಅವರ ವಿಚಾರಧಾರೆಗಳು ನಮ್ಮೆಲ್ಲರಿಗೆ ದಾರಿದೀಪವಾಗಿದೆ. ಅವರು ಈ ದೇಶದ ಬಹುದೊಡ್ಡ ಕನಸುಗಾರ’**

ಬೋಸ್ ಮುಂತಾದವರಿಗಿಂತ ಅಚ್ಚರಿ ಎನ್ನಿಸುವಷ್ಟರಮಟ್ಟಿಗೆ ಹೆಚ್ಚು ಮುಂಚೂಣಿಗೆ ಬಂದವರೆಂದರೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್. ಈ ಬಗೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿಯೂ ಸಾಕಷ್ಟು ಚರ್ಚೆಯಾಗಿದೆ.

ಇಲ್ಲಿಯವರೆಗೂ ಈ ಪರಿಯಲ್ಲಿ ಸ್ವತಂತ್ರ ಭಾರತದಲ್ಲಿ ಎಂದೂ ಕೂಡ ಯುವಜನರು ತಮ್ಮ ಐಕಾನ್ ಆಗಿ ಅಂಬೇಡ್ಕರ್ ಅವರನ್ನು ಆಯ್ಕೆಮಾಡಿಕೊಂಡಿರಲಿಲ್ಲ. ದಲಿತ ವಿದ್ಯಾರ್ಥಿ ಸಂಘಟನೆಗಳು ಮತ್ತು ಚಳವಳಿಗಳು ದ್ವೇಷಿಸುತ್ತಾರೆ. ಇಂತಹ ದ್ವೇಷ ಇಂದಿಗೂ ಒಂದು ವಲಯದ ವಿದ್ಯಾರ್ಥಿ ಯುವಜನರಲ್ಲಿ ಉಸಿರಾಡುತ್ತಿದೆ. ಆ ಕಾರಣಕ್ಕಾಗಿಯೇ ಅಂಬೇಡ್ಕರ್ ಅವರ ಮೇಲೆ ಅವೈಚಾರಿಕ ದಾಳಿ ನಡೆಯುತ್ತಲೇ ಇದೆ. ಇದು ಅಂಬೇಡ್ಕರ್ ಇದ್ದಾಗ ಆರಂಭಗೊಂಡಿದ್ದು ಇನ್ನೂ ನಿಂತಿಲ್ಲ. ಇಂತಹ ಹೊತ್ತಿನಲ್ಲಿ ವಿದ್ಯಾರ್ಥಿಗಳು ಯುವಜನರು ಜಾತಿ ಮತ ವರ್ಗ ಧರ್ಮಗಳನ್ನು ಮೀರಿ ಅಂಬೇಡ್ಕರ್ ಅವರನ್ನು ಒಳಗೊಂಡಿದ್ದು ನಿಜಕ್ಕೂ ಒಳ್ಳೆಯ ಬೆಳವಣಿಗೆ. ಅಲ್ಲದೆ ಇದುವರೆಗೂ

# ಅಂಬೇಡ್ಕರ್: ಫೋಟೋ ಫ್ರೇಮ್ ಮಾತ್ರವಾದರೆ ಸಾಲದು

ಮಾತ್ರ ಅಂಬೇಡ್ಕರ್ ಅವರನ್ನು ಐಕಾನ್ ಆಗಿ ಆಯ್ಕೆ ಮಾಡಿಕೊಂಡಿದ್ದವೆಯೇ ಹೊರತು ಬೇರೆಯವರು ಬಳಸಿರಲಿಲ್ಲ. ಈಗ ಮೊದಲ ಬಾರಿಗೆ ಜಾತಿ ಧರ್ಮಗಳ ಗಡಿ ಮೀರಿ ಎಲ್ಲ ಸಮುದಾಯಗಳು ಅಂಬೇಡ್ಕರ್ ಅವರನ್ನು ಒಪ್ಪಿ ಅಪ್ಪಿಕೊಂಡಿರುವುದು ಕಂಡುಬರುತ್ತದೆ. ವಿಶೇಷವೆಂದರೆ ಗಾಂಧಿ ಅಧ್ಯಯನಕಾರ ಮತ್ತು ಪ್ರಸಿದ್ಧ ಇತಿಹಾಸಕಾರ ರಾಮಚಂದ್ರ ಗುಹಾ ಅವರು ಕೂಡ ಬೆಂಗಳೂರಿನ ಟೌನ್‌ಹಾನ್ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಹಿಡಿದಿದ್ದು ಗಾಂಧಿಯ ಭಾವಚಿತ್ರವನ್ನಲ್ಲ; ಅಂಬೇಡ್ಕರ್ ಅವರ ಭಾವಚಿತ್ರ.

ಹೀಗೆ ಎಲ್ಲರೂ ಅಂಬೇಡ್ಕರ್ ಅವರನ್ನು ಆಯ್ಕೆ ಮಾಡಿಕೊಂಡಿದ್ದು ಭಾರತೀಯ ಸಮಾಜದ ಒಂದು ಗುಣಾತ್ಮಕ ಬೆಳವಣಿಗೆಯೇ ಸರಿ. ಇಲ್ಲಿನ ಮೇಲ್ಜಾತಿಗಳು ಅಂಬೇಡ್ಕರ್ ಅವರ ವಿರುದ್ಧ ಇನ್ನಿಲ್ಲದ ಅಪಪ್ರಚಾರ ನಡೆಸಿ ಅವರ ವಿರುದ್ಧ ಯುವಕರಲ್ಲಿ ದ್ವೇಷದ ಭಾವನೆಯನ್ನು ಬಿತ್ತಲಾಗಿದೆ. ಅಂಬೇಡ್ಕರ್ ಅವರು ಸಂವಿಧಾನ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದನ್ನು ಜನರು ಗುರುತಿಸಿ ಅವರನ್ನು ‘ಸಂವಿಧಾನ ಶಿಲ್ಪಿ’ ಎಂಬ ಗೌರವದಿಂದ ಕಾಣುತ್ತಿದ್ದಾರೆ. ಅಂಬೇಡ್ಕರ್ ಅವರಿಗೆ ನ್ಯಾಯಯುತವಾಗಿ ಸಲ್ಲುತ್ತಿರುವ ಈ ಗೌರವವನ್ನು ಕಸಿದುಕೊಳ್ಳಲು ಇನ್ನಿಲ್ಲದ ಸುಳ್ಳು ಸಂಗತಿಗಳನ್ನು ಹಬ್ಬಿಸಿ ಅವರ ವ್ಯಕ್ತಿತ್ವವನ್ನು ಮಸುಕಾಗಿಸುವ ಕೆಲಸ ಮಾಡಲಾಗುತ್ತಿದೆ. ಅಲ್ಲದೆ ಮೀಸಲಾತಿಯ ಅವಕಾಶವನ್ನು ಕಲ್ಪಿಸುವಲ್ಲಿ ಅಂಬೇಡ್ಕರ್ ವಹಿಸಿದ್ದ ಗಣನೀಯ ಪಾತ್ರವನ್ನು ಬಳಸಿಕೊಂಡೇ ಅವರ ವಿರುದ್ಧ ದ್ವೇಷದ ಭಾವನೆಯನ್ನು ಬೆಳೆಸಲಾಗಿದೆ. ಮೀಸಲಾತಿಯ ಅವಕಾಶಗಳು ಮತ್ತು ಪ್ರತಿಭೆಗಳನ್ನು ಮುಖಾಮುಖಿ ಮಾಡಿ ಮೇಲ್ಜಾತಿಯ ಪ್ರತಿಭಾವಂತರನ್ನು ವಂಚಿಸಲಾಗಿದೆ ಎಂಬ ಭಾವನೆಯನ್ನು ವ್ಯಾಪಕವಾಗಿ ಬೆಳೆಸಲಾಗಿದೆ. ಹಾಗೆ ಬೆಳೆಸುತ್ತ ಅಂಬೇಡ್ಕರ್ ವಿರುದ್ಧ ಈ ದೇಶದ ಮೇಲ್ಜಾತಿಯ ಮತ್ತು ಹಿಂದುಳಿದ ವರ್ಗಗಳ ಯುವಕರನ್ನು ಎತ್ತಿಕಟ್ಟಲಾಗಿದೆ. ಹಾಗಾಗಿಯೇ ವಿದ್ಯಾರ್ಥಿಗಳು ಮತ್ತು ಯುವಕರು ಅಂಬೇಡ್ಕರ್ ಅವರನ್ನು ಅಂಬೇಡ್ಕರ್ ಅವರನ್ನು ದಲಿತ ಸಂಘಟನೆಗಳೇ ಹೆಚ್ಚು ಪ್ರತಿನಿಧಿಸಿದ್ದರಿಂದ ಅಂಬೇಡ್ಕರ್ ದಲಿತರಿಗೆ ಸೀಮಿತ ಎಂಬಂತೆ ಆಗಿತ್ತು. ದಲಿತರು ವಾಸ ಮಾಡುವ ಜಾಗಗಳಿಗೆ ಅಂಬೇಡ್ಕರರ ಹೆಸರಿಡುವುದು. ಅಲ್ಲಿಯೇ ಅಂಬೇಡ್ಕರ್ ಪ್ರತಿಮೆಗಳನ್ನು ಸ್ಥಾಪಿಸುವುದು ಇತ್ಯಾದಿಗಳು ನಡೆದು ಅಂಬೇಡ್ಕರ್ ದಲಿತರ ನಾಯಕ ಎಂಬ ಚಿತ್ರಿತವಾಗಿದ್ದರು. ಈ ಭಾವನೆ ಮೀಸಲಾತಿಯ ಲಾಭವನ್ನು ಪಡೆಯುತ್ತಿರುವ ಶೂದ್ರರಲ್ಲಿ ಮತ್ತು ಮಹಿಳೆಯರಲ್ಲಿಯೂ ಪ್ರಬಲವಾಗಿತ್ತು ಮತ್ತು ಇಂದಿಗೂ ಇದೆ. ಇದು ಅಂಬೇಡ್ಕರ್ ಎಲ್ಲರ ನಾಯಕರಾಗಿ ಬೆಳೆಯಲು ತೊಡಕಾಗಿತ್ತು. ಆದರೆ ಪ್ರಸ್ತುತ ಸಿಎಎ ವಿರುದ್ಧ ಚಳವಳಿಯ ಸಂದರ್ಭದಲ್ಲಿ ಮಾತ್ರ ಅಂಬೇಡ್ಕರ್ ಆ ಎಲ್ಲೆಗಳನ್ನು ದಾಟಿ ಎಲ್ಲರ ಚಿಂತಕನಾಗಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ.

ಹೀಗೆ ಅಂಬೇಡ್ಕರ್ ಜಾತಿ–ಧರ್ಮಗಳ ಗಡಿದಾಟಿ ಹೊಸ ಚಲನೆಗೊಳ್ಳಲು ಕಾರಣವೇನು? ಎಂಬ ಪ್ರಶ್ನೆಯನ್ನು ಇಲ್ಲಿ ಕೇಳಿಕೊಳ್ಳುವ ಅಗತ್ಯವಿದೆ. ಇದ–ಕ್ಕೆ ಹಲವು ಕಾರಣಗಳು ಇದ್ದಂತಿವೆ. ಒಂದು. ಸಿಎಎ ಕಾಯ್ದೆ ಸಂವಿಧಾನದ ಮೂಲಭೂತ ಆಶಯಕ್ಕೆ ವಿರುದ್ಧವಾಗಿದೆ. ಧರ್ಮಾಧಾರಿತ ಪೌರತ್ವ ನೀಡುವುದು ನಮ್ಮದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾದುದು. ಹಾಗಾಗಿ ಸಂವಿಧಾನಕ್ಕೆ ವಿರುದ್ಧವಾದ ಕಾಯ್ದೆ ಜಾರಿಗೊಳ್ಳುವಾಗ ಅದರ ರಕ್ಷಣೆಯ ಸಂಕೇತವಾಗಿ ಸಂವಿಧಾನದ ಪ್ರತಿಗಳನ್ನು, ಅದರ ಪ್ರಸ್ತಾವನೆಯ ಆಶಯಗಳನ್ನು ಎತ್ತಿ ಹಿಡಿಯಲಾಯಿತು ಎನ್ನಿಸುತ್ತದೆ. ಅಂದರೆ ಹೊಸ (ತಿದ್ದುಪಡಿ) ಕಾಯ್ದೆ ಜಾರಿಯಾಗುತ್ತಿರುವುದು ಮೊದಲಿನ ಸಂವಿಧಾನದ ಆಶಯಗಳು ಅಪ್ರಸ್ತುತವಾಗುತ್ತಿವೆ. ಇದನ್ನು ವಿರೋಧಿಸುವುದು ಇದರ ಹಿಂದಿನ ಉದ್ದೇಶ. ಇದಲ್ಲದೆ ‘ಸಂವಿಧಾನದ ಶಿಲ್ಪಿ’ಯಾಗಿ ಅಂಬೇಡ್ಕರ್ ಅವರ ಶ್ರಮದಿಂದ ರಚನೆಗೊಂಡಿದ್ದ ಸಂವಿಧಾನಕ್ಕೆ ಕೊಳ್ಳಿಯಿಡುವ ಕೆಲಸ ನಡೆಯುತ್ತಿದೆ. ಇದ–

(43ನೇ ಪುಟಕ್ಕೆ)

# ಬಡವರ ಬ್ಯಾರಿಸ್ಟರ್ ಡಾ. ಬಿ. ಆರ್. ಅಂಬೇಡ್ಕರ್




ವಿಕಾಸ್ ದಲಿತ ಸಂಘರ್ಷ ಸಮಿತಿ ಮತ್ತು ಬಹುಜನ ವಿದ್ಯಾರ್ಥಿ ಸಂಘದಲ್ಲಿ ಕಾರ್ಯಕರ್ತರಾಗಿದ್ದವರು. 'ಚಮ್ಮಟಿಗೆ' ಮತ್ತು ಅನುವಾದಿತ ಕೃತಿ 'ಕಪ್ಪುಕುಲುಮೆ' ಪ್ರಕಟಿತ ಕೃತಿಗಳು. ಮೂಲತಃ ಹಾಸನ ಜಿಲ್ಲೆಯವರಾದ ಇವರು ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಾ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಈ ಕಾಲದಲ್ಲಿ ಬಾಬಾ ಸಾಹೇಬರ ಚಿಂತನೆಯ ಮರು ಓದು ಮತ್ತು ತಿಳಿವಿನ ವಿಸ್ತರಣೆಗೆ ಪ್ರಾಮಾಣಿಕವಾಗಿ ಶ್ರಮಿಸುವ ಶ್ರಮಜೀವಿ.

**ವಿಕಾಸ್ ಆರ್.ಮೌರ್ಯ**

**Email: v.r.mourya86@gmail.com**




ಅಂಬೇಡ್ಕರರು ವಕೀಲ ವೃತ್ತಿಯಲ್ಲಿಯೇ ಮುಂದುವರಿಯಬಹುದಾಗಿತ್ತು. ಬ್ರಿಟಿಷರು ಬಾಂಬೆ ಸಂಸ್ಥಾನದಲ್ಲಿ ಮೊದಲು ಜಿಲ್ಲಾ ನ್ಯಾಯಾಧೀಶರಾಗಲು ಆಹ್ವಾನ ನೀಡಿ–ದರು. ಮುಂದಿನ ಮೂರು ವರ್ಷಗಳೊಳಗೆ ಹೈಕೋರ್ಟ್ ನ್ಯಾಯಾಧೀಶರಾಗಲು ಸಹ ಆಹ್ವಾನಿಸುವುದಾಗಿ ಭರವಸೆ ನೀಡಿದ್ದರು. ನಂತರ ಹೈದರಾಬಾದಿನ ನಿಜಾಮ್ ತಮ್ಮ ಸಂಸ್ಥಾನದ ಮುಖ್ಯ ನ್ಯಾಯಾಧೀಶರಾಗಲು ಆಹ್ವಾನಿಸಿದ್ದರು. ಆದರೆ ಅಂಬೇಡ್ಕರರು ಈ ಆಹ್ವಾನವನ್ನು ತಿರಸ್ಕರಿಸಿದರು. ಅವರ ಗುರಿ ಬೇರೆಯೇ ಆಗಿತ್ತು. ಆ ಗುರಿ ಏನೆಂಬುದು ಈಗ ಜಗತ್ತಿಗೇ ತಿಳಿದಿದೆ. ಆದರೆ ಆ ಗುರಿಯ ಕಡೆ ಮುಖ ಮಾಡಿಕೊಂಡಿರುವವರ ಸಂಖ್ಯೆ ಕಡಿಮೆ ಇದೆ. ಅಂಬೇಡ್ಕರರು ಏನು ಗಳಿಸಿಕೊಟ್ಟರೋ ಅದನ್ನು ಪಡೆದುಕೊಂಡು ರೆಕ್ಕೆ ಕಟ್ಟಿಕೊಂಡವರು ಇಂದು ಅಂಬೇಡ್ಕರರ ಕನಸಿನ ವಿರುದ್ಧ ರೆಕ್ಕೆ ಬಿಚ್ಚಿ ಹಾರುತ್ತಿದ್ದಾರೆ'

ಮಾನವತಾವಾದಿ, ಆರ್ಥಿಕ ತಜ್ಞ, ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್‌ರವರ ಬಗ್ಗೆ ತಿಳಿಯಲು ಇಂದು ಬಹಳಷ್ಟು ಗ್ರಂಥಗಳಿವೆ. ಅವರದ್ದೇ ಬರಹ ಭಾಷಣಗಳಿವೆ. ಆದಗ್ಯೂ ಅವರು ಸೇವೆ ಸಲ್ಲಿಸಿದ ಹಲವು ಕ್ಷೇತ್ರಗಳ ಬಗ್ಗೆ ಶೋಧಿಸಲು ಸಾಕಷ್ಟು ಅವಕಾಶಗಳಿವೆ. ಈಗಲೂ ಕೆಲವು ಕ್ಷೇತ್ರಗಳಲ್ಲಿನ ಅವರ ಸೇವೆಯ ಕನಿಷ್ಠ ಮಾಹಿತಿಗಳೂ ಸಹ ನಮ್ಮ ಬಳಿಯಿಲ್ಲ. ಅಂತಹದೊಂದು ಕ್ಷೇತ್ರಗಳಲ್ಲಿ ವಕೀಲಿಕೆಯೂ ಒಂದು. ಅಂಬೇಡ್ಕರರು 1923 ರಿಂದ 1956 ರವರೆಗೆ ಸುಮಾರು ಮೂರು ದಶಕಗಳ

**ಭಾರತಕ್ಕೆ ಬಂದ ಅಂಬೇಡ್ಕರರು ತುಂಬು ಕುಟುಂಬವನ್ನು ಸಲಹಬೇಕಿತ್ತು. ಜೊತೆಗೆ ತಮ್ಮ ಮೇಲೆ ವಿಶ್ವಾಸವಿಟ್ಟಿದ್ದ ಹಲವು ಸ್ನೇಹಿತರ ಜೊತೆಗೂಡಿ ಅಸ್ಪೃಶ್ಯತೆ ವಿರುದ್ಧ ಸಂಘಟಿಸಬೇಕಿತ್ತು. ಈ ಹೋರಾಟ ಜೀವನದ ನಡುವೆಯೇ ಅಂಬೇಡ್ಕರರು ಕುಟುಂಬ ಸಲಹಲು, ಬಾಂಬೆಯ ದಾವರ್ ಖಾಸಗಿ ಕಾಲೇಜು ನಂತರ ಸಿಡೆನ್‌ಹ್ಯಾಮ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಕೆಲಸ ನಿರ್ವಹಿಸಿದರು. ಬಿಡುವಿನ ವೇಳೆಯಲ್ಲಿ ಇಬ್ಬರು ಪಾರ್ಸಿ ವಿದ್ಯಾರ್ಥಿಗಳಿಗೆ ಮನೆಪಾಠವನ್ನೂ ಮಾಡುತ್ತಿದ್ದರು. ಹೀಗೆ ಸಂಪಾದಿಸಿದ ಹಣದಲ್ಲಿ ಸ್ನೇಹಿತರ ಸಾಲ ತೀರಿಸಿ, ಕುಟುಂಬದ ಖರ್ಚು ನಿಭಾಯಿಸಿ ಎರಡು ವರ್ಷಗಳಲ್ಲಿ ಸುಮಾರು 7000 ರೂಪಾಯಿಗಳನ್ನು ಸಂಗ್ರಹಿಸಿದರು. ಜೊತೆಗೆ ಸ್ನೇಹಿತರಲ್ಲಿ ಸಾಲ ಮಾಡಿ ಮತ್ತೆ ಅರ್ಧಕ್ಕೆ ಬಿಟ್ಟ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲು 1920 ರಲ್ಲಿ ಲಂಡನ್ನಿಗೆ ತೆರಳಿದರು. 1921 ರಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1923 ರಲ್ಲಿ 'ರೂಪಾಯಿ ಸಮಸ್ಯೆ' ಎಂಬ ಮಹಾಪ್ರಬಂಧಕ್ಕೆ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನೂ ಪಡೆದರು.**

ಕಾಲ ವಕೀಲರಾಗಿ ಸೇವೆ ಸಲ್ಲಿಸಿದ್ದರ ಬಗ್ಗೆ ಕಡಿಮೆ ಮಾಹಿತಿ ಲಭ್ಯವಿದೆ. ತೀರ ಇತ್ತೀಚೆಗೆ ವಿಜಯ್ ಗಾಯಕವಾಡ್‌ರವರು **'Court Cases Argued by DR. B. R. AMBEDKAR'** ಸಂಶೋಧಿತ ಗ್ರಂಥವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸುವುದಕ್ಕಿಂತ ಮುಂಚೆ ಧನಂಜಯ್ ಕೀರ್‌ರವರ ಸಂಪಾದನೆಯ ಅಂಬೇಡ್ಕರರ ಜೀವನ ಚರಿತ್ರೆ ಪುಸ್ತಕದಲ್ಲಿ ಹಾಗೂ ಆನಂದ್ ತೇಲ್ತುಂಬ್ಡೆ-ಸೂರಜ್ ಯೆಂಗ್ಡೆಯವರ ಜಂಟಿ ಲೇಖನದಲ್ಲಿ ಹಲವು ಮಾಹಿತಿಗಳಿದ್ದವಷ್ಟೆ. ವಿಸ್ತೃತ ರೂಪದಲ್ಲಿ ವಕೀಲ ವೃತ್ತಿಯಲ್ಲಿ ಅಂಬೇಡ್ಕರರು ಸೇವೆ ಸಲ್ಲಿಸಿದ್ದರ ಬಗ್ಗೆ ಮಾಹಿತಿ ಸಂಪೂರ್ಣವಾಗಿ ಇರಲಿಲ್ಲ. ಆದರೆ ಗಾಯಕವಾಡ್‌ರವರ ಕೆಲಸ ಇದ್ದ ಆ ಮಿತಿಯನ್ನೂ ಸರಿಪಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ.

ಬಾಬಾಸಾಹೇಬ್ ಅಂಬೇಡ್ಕರರು, ಕೊಲೆ ಪ್ರಕರಣಗಳೂ ಸೇರಿದಂತೆ ಎಲ್ಲಾ ರೀತಿಯ ಪ್ರಕರಣಗಳನ್ನು ವಾದಿಸಿದ್ದಾರೆ. ರೈತರು, ಕಾರ್ಮಿಕರು ಮತ್ತು ದಮನಿತರ ಪರವಾಗಿ ವಾದಿಸಿದ್ದಾರೆ. ಬ್ರಾಹ್ಮಣರು, ಮರಾಠರು, ದಲಿತರು, ಮುಸ್ಲಿಮರು, ಗಾಂಧಿವಾದಿಗಳು, ಕಾಂಗ್ರೆಸ್ ಸದಸ್ಯರ ಪರವಾಗಿಯೂ ಬ್ರಿಟಿಷರ, ಭೂಮಾಲಿಕರ ವಿರುದ್ಧವಾಗಿಯೂ ವಕೀಲಿಕೆ ಮಾಡಿದ್ದಾರೆ. ಕುಟುಂಬ ನಿರ್ವಹಣೆ ಮತ್ತು ತಮ್ಮ ಓದು, ಹೋರಾಟಗಳಿಗೆ ವಕೀಲಿಕೆಯ ಶುಲ್ಕ ದೊಡ್ಡ ಮಟ್ಟದ ಸಹಾಯ ಮಾಡಲಿಲ್ಲವಾದರೂ ಅವರು ವಕೀಲಿಕೆಯನ್ನು ಸಾಧಾರಣವಾಗಿ ಪರಿಗಣಿಸದೆ ಗಂಭೀರವಾಗಿ ತೆಗೆದುಕೊಂಡದ್ದರ ಬಗ್ಗೆ ಹಲವು ಸಾಕ್ಷ್ಯಗಳಿವೆ. ಅಂತಹ ಒಂದಷ್ಟು ಪ್ರಕರಣಗಳನ್ನು ವಿವರಿಸುವ ಮುಂಚೆ ಅಂಬೇಡ್ಕರರು ಬ್ಯಾರಿಸ್ಟರ್ ಪದವಿಯನ್ನು ಪಡೆದ ರೀತಿಯನ್ನು ನಾನಿಲ್ಲಿ ಹೇಳಲೇಬೇಕು. ಏಕೆಂದರೆ ಅದೊಂದು ಸಾಹಸ ಗಾಥೆ. ಪ್ರತಿ ವಿದ್ಯಾರ್ಥಿ/ನಿಗೊಂದು ಮಾರ್ಗದರ್ಶನ.

**ಬಾರ್-ಅಟ್-ಲಾ ಪದವಿ ಪಡೆದ ಹಾದಿ**

ಅಂಬೇಡ್ಕರರು 1907 ರಲ್ಲಿ ಮೆಟ್ರಿಕ್ಯುಲೇಷನ್‌ನಲ್ಲಿ ಉತ್ತೀರ್ಣರಾದರು. 1913 ರಲ್ಲಿ ಬಿ.ಎ ಪದವಿಯನ್ನು ಮುಗಿಸಿದರು. ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡರ ವಿದ್ಯಾರ್ಥಿ ವೇತನದ ಸಹಾಯದಿಂದ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಮಾಡಲು ತೆರಳಿದರು. ಅವರು ಪಡೆದ ವಿದ್ಯಾರ್ಥಿ ವೇತನ 21,664 ರೂಪಾಯಿ-22 ಆಣೆ ಮತ್ತು 10 ಪೈಸೆಯನ್ನು ಒಳಗೊಂಡಿತ್ತು ಹಾಗೂ ಕಾಲಾವಧಿ ಜೂನ್ 15, 1913 ರಿಂದ ಜೂನ್ 14, 1916 ರವರೆಗೆ ಮೂರು ವರ್ಷಗಳು. ಇವೆರಡನ್ನೂ ಸದುಪಯೋಗಪಡಿಸಿಕೊಂಡ ಅಂಬೇಡ್ಕರರು 'ಪ್ರಾಚೀನ ಭಾರತದಲ್ಲಿ ವಾಣಿಜ್ಯ' ಎಂಬ ಪ್ರಬಂಧಕ್ಕೆ 1915 ರಲ್ಲಿ ಎಂ.ಎ ಪದವಿಯನ್ನೂ, **National Dividend of India; a historical and analytical study** ಎಂಬ ಮಹಾ ಪ್ರಬಂಧಕ್ಕೆ 1916 ರಲ್ಲಿ ಪಿ.ಎಚ್.ಡಿ ಪದವಿಯನ್ನೂ ಪಡೆದುಕೊಂಡರು.



ಆದರೆ ಅಂಬೇಡ್ಕರ್‌ರವರ ವಿದ್ಯಾಭ್ಯಾಸದ ದಾಹ ಇನ್ನೂ ತೀರಿರಲಿಲ್ಲ. ಅವರಿಗೆ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಬಾರ್-ಅಟ್-ಲಾ ಪೂರೈಸಬೇಕೆಂಬ ಆಸೆಯಿತ್ತು. ಅದಕ್ಕಾಗಿ 1916 ಜೂನ್‌ನಿಂದ ಇನ್ನೊಂದು ವರ್ಷದವರೆಗೆ ತಮ್ಮ ವಿದ್ಯಾರ್ಥಿ ವೇತನವನ್ನು ಮುಂದುವರೆಸುವಂತೆ ಮಹಾರಾಜ ಸಯ್ಯಾಜಿರಾವ್ ಗಾಯಕವಾಡರಿಗೆ ಪತ್ರದ ಮೂಲಕ ಕೇಳಿಕೊಂಡಾಗ ಜೂನ್ 14, 1917 ರವರೆಗೆ ವಿದ್ಯಾರ್ಥಿ ವೇತನ ಮುಂದುವರೆಸಲ್ಪಟ್ಟಿತು. ಇದು 4078 ರೂಪಾಯಿ, 9 ಆಣೆ ಮತ್ತು 8 ಪೈಸೆಯನ್ನು ಒಳಗೊಂಡಿತ್ತು.

ವಿದ್ಯಾರ್ಥಿ ವೇತನ ಮುಂದುವರೆದ ಕಾರಣ ಅಂಬೇಡ್ಕರರು ಇಂಗ್ಲೆಂಡಿನ ಲಂಡನ್ ವಿಶ್ವವಿದ್ಯಾಲಯದಲ್ಲಿ ಏಕ ಕಾಲಕ್ಕೆ ಎಂ.ಎಸ್ಸಿ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಕ್ಕೂ, **The Honourable Society of Grey's Inn** ನಲ್ಲಿ ವಕೀಲ ವೃತ್ತಿಗಾಗಿ 'ಬಾರ್-ಅಟ್-ಲಾ' ಪದವಿಗೂ ದಾಖಲಾದರು. ಇಲ್ಲಿ ಕೇವಲ ಒಂದು ವರ್ಷ ಮಾತ್ರ ವಿದ್ಯಾಭ್ಯಾಸ ಮಾಡಲು ಅವಕಾಶವಿತ್ತು. ಮಹಾರಾಜ್ ಗಾಯಕವಾಡರವರ ವಿದ್ಯಾರ್ಥಿ ವೇತನದ ಕರಾರು 1917 ಜೂನ್‌ಗೆ ಮುಗಿಯುವುದಿತ್ತು ಹಾಗೂ ಅಂಬೇಡ್ಕರರು ಭಾರತಕ್ಕೆ ಮರಳಲೇಬೇಕಾಗಿತ್ತು. ಆದರೆ ಅಂಬೇಡ್ಕರರೊಳಗಿನ ವಿದ್ಯಾರ್ಥಿ ಅಷ್ಟು ಬೇಗ ಸೋಲೊಪ್ಪಿಕೊಳ್ಳುವವನಾಗಿರಲಿಲ್ಲ. ಲಂಡನ್ ವಿಶ್ವವಿದ್ಯಾಲಯದ ಸೆನೆಟ್‌ಗೆ 'ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುತ್ತಿದ್ದು, ಮುಂದೊಂದು ದಿನ ಮರಳಿದಾಗ ಮುಂದುವರೆಸಲು' ಅವಕಾಶ ಕೋರಿ ಪತ್ರ ಬರೆದರು. ಸೆನೆಟ್ ನಾಲ್ಕು ವರ್ಷಗಳ ಕಾಲಾವಕಾಶ ನೀಡಿ ಅಂಬೇಡ್ಕರರ ಅಹವಾಲಿಗೆ ಒಪ್ಪಿಕೊಂಡಿತು.

ಭಾರತಕ್ಕೆ ಬಂದ ಅಂಬೇಡ್ಕರರು ತುಂಬು ಕುಟುಂಬವನ್ನು ಸಲಹಬೇಕಿತ್ತು. ಜೊತೆಗೆ ತಮ್ಮ ಮೇಲೆ ವಿಶ್ವಾಸವಿಟ್ಟಿದ್ದ ಹಲವು ಸ್ನೇಹಿತರ ಜೊತೆಗೂಡಿ ಅಸ್ಪೃಶ್ಯತೆ ವಿರುದ್ಧ ಸಂಘಟಿಸಬೇಕಿತ್ತು. ಈ ಹೋರಾಟ ಜೀವನದ ನಡುವೆಯೇ ಅಂಬೇಡ್ಕರರು ಕುಟುಂಬ ಸಲಹಲು, ಬಾಂಬೆಯ ದಾದರ್ ಖಾಸಗಿ ಕಾಲೇಜು ನಂತರ ಸಿಡೆನ್‌ಹ್ಯಾಮ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ಕೆಲಸ ನಿರ್ವಹಿಸಿದರು. ಬಿಡುವಿನ ವೇಳೆಯಲ್ಲಿ ಇಬ್ಬರು ಪಾರ್ಸಿ ವಿದ್ಯಾರ್ಥಿಗಳಿಗೆ ಮನೆಪಾಠವನ್ನೂ ಮಾಡುತ್ತಿದ್ದರು. ಹೀಗೆ ಸಂಪಾದಿಸಿದ ಹಣದಲ್ಲಿ ಸ್ನೇಹಿತರ ಸಾಲ ತೀರಿಸಿ, ಕುಟುಂಬದ ಖರ್ಚು ನಿಭಾಯಿಸಿ ಎರಡು ವರ್ಷಗಳಲ್ಲಿ ಸುಮಾರು 7000 ರೂಪಾಯಿಗಳನ್ನು ಸಂಗ್ರಹಿಸಿದರು. ಜೊತೆಗೆ ಸ್ನೇಹಿತರಲ್ಲಿ ಸಾಲ ಮಾಡಿ ಮತ್ತೆ ಅರ್ಧಕ್ಕೆ ಬಿಟ್ಟ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲು 1920 ರಲ್ಲಿ ಲಂಡನ್ನಿಗೆ ತೆರಳಿದರು. 1921 ರಲ್ಲಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1923 ರಲ್ಲಿ 'ರೂಪಾಯಿ ಸಮಸ್ಯೆ' ಎಂಬ ಮಹಾಪ್ರಬಂಧಕ್ಕೆ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನೂ ಪಡೆದರು.

ಇಷ್ಟಾಗಿಯೂ ಬಾರ್-ಅಟ್-ಲಾ ಪದವಿಯನ್ನು ಪಡೆಯಲು ಆಗಿರಲಿಲ್ಲ. ಇದಕ್ಕೆ ಕಾರಣ ಅಂಬೇಡ್ಕರ್ ಅವರ ಸ್ನೇಹಿತರೊಬ್ಬರು ಪ್ರಬಂಧಕ್ಕಾಗಿ ಭಾರತ ನ್ಯಾಯಪದ್ಧತಿಯ ಬಗ್ಗೆ ಕಳಿಸಬೇಕಾಗಿದ್ದ ಪುಸ್ತಕವನ್ನು ಕಳಿಸದೇ ಇದ್ದದ್ದು, ಹಾಗೂ ಹಣದ ಸಮಸ್ಯೆ. ಈ ನಡುವೆ ಅಂಬೇಡ್ಕರರ ಆಪ್ತ ಅಧ್ಯಾಪಕರಾಗಿದ್ದ ಎಡ್ವಿನ್ ಆರ್. ಸೆಲಿಂಗ್‌ಮನ್‌ರವರು 'ಜರ್ಮನಿಯ ಬಾನ್ ವಿಶ್ವವಿದ್ಯಾಲಯ'ದಲ್ಲಿ ಅರ್ಥಶಾಸ್ತ್ರ ಪದವಿ ಪಡೆಯಲು ಅಂಬೇಡ್ಕರರಿಗೆ ಶಿಫಾರಸ್ಸು ಮಾಡಿದ್ದ ಕಾರಣ-ಕ್ಕೆ ಜರ್ಮನಿಯಲ್ಲೂ ಅಂಬೇಡ್ಕರ್ ವಿದ್ಯಾಭ್ಯಾಸ ಆರಂಭಿಸಿದ್ದರು. ಅಂಬೇಡ್ಕರರ ಇವಿಷ್ಟು ಸಾಹಸಕ್ಕೆ ಪದೇ ಪದೇ ಧನಸಹಾಯ ನೀಡಿದವರು ಇಬ್ಬರು ಆಪ್ತ ಸ್ನೇಹಿತರು. ಒಬ್ಬರು ಪಾರ್ಸಿ ಗೆಳೆಯ ನಾವಲ್ ಭತೇನ, ಇನ್ನೊಬ್ಬರು ಚತ್ರಪತಿ ಶಾಹು ಮಹಾರಾಜ್.

ಕೊನೆಗೆ 1922 ರಲ್ಲಿ ಲಂಡನ್ನಿನ **The Honourable Society of Grey's Inn** ನಿಂದ ಅಂಬೇಡ್ಕರರು ವಕೀಲ ಪದವಿ ಬಾರ್-ಅಟ್-ಲಾ ಪಡೆದರು. 1923 ರಲ್ಲಿ ಡಾಕ್ಟರ್ ಆಫ್ ಸೈನ್ಸ್ ಪದವಿ ಪಡೆದು ಭಾರತಕ್ಕೆ ಹಿಂದಿರುಗಿದರು. ಸ್ನೇಹಿತ ನಾವಲ್ ಭತೇನ ನೀಡಿದ 500 ರೂಪಾಯಿಯಲ್ಲಿ 25, ಜೂನ್ 1923 ರಲ್ಲಿ ಬಾಂಬೆ ಹೈ ಕೋರ್ಟ್‌ನಿಂದ ಸನದು ಪಡೆದು ಅಂಬೇಡ್ಕರರು ತಮ್ಮ ವಕೀಲ ವೃತ್ತಿಯನ್ನು ಆರಂಭಿಸಿದರು.

**ಬ್ಯಾರಿಸ್ಟರ್ ಬಾಬಾಸಾಹೇಬ್**


ಆರಂಭದಲ್ಲಿಯೇ ತಿಳಿಸಿದಂತೆ ಅಂಬೇಡ್ಕರರು ಎಲ್ಲರ ಪರವಾಗಿಯೂ ವಾದಿಸಿದ್ದಾರೆ. ಮಾನವ ಹಕ್ಕು ಉಲ್ಲಂಘನೆಯಂತಹ ವಿಚಾರ ಬಂದಾಗ ಬ್ರಿಟಿಷರ ವಿರುದ್ಧ ನಿಂತು ವಾಕ್ ಸ್ವಾತಂತ್ರ್ಯ ಹಾಗೂ ದೇಶದ್ರೋಹ ಪ್ರಕರಣಗಳ ಪರವಾಗಿ ಭೂಮಾಲಿಕರಿದ್ದರೂ ಸರಿಯೇ ವಾದಿಸಿದ್ದಾರೆ. ಅಂಬೇಡ್ಕರರ ವಾದದ ವೈಖರಿ, ಚತುರತೆ ಹಾಗೂ ಪ್ರಕರಣಗಳ ಬಗೆಗಿನ ಆಳವಾದ ತಿಳಿವಳಿಕೆಯು ಅವರನ್ನ ಕೆಲವೇ ವರ್ಷಗಳಲ್ಲಿ ಪ್ರಮುಖ ವಕೀಲರನ್ನಾಗಿ ಪ್ರಸಿದ್ಧಿ ಮಾಡಿತು.

**ಕೆಲವು ಪ್ರಕರಣಗಳನ್ನು ಗಮನಿಸೋಣ.**

ಪ್ರಮುಖವಾದದ್ದು ಫಿಲಿಪ್ ಸ್ಪ್ರಾಟ್ ಪ್ರಕರಣ. ಫಿಲಿಪ್ ಸ್ಪ್ರಾಟ್ ಒಬ್ಬ ಬ್ರಿಟಿಷ್ ಕಮ್ಯುನಿಸ್ಟ್, ಭಾರತೀಯ ಕಮ್ಯುನಿಸ್ಟ್ ಪಕ್ಷದ ಸ್ಥಾಪಿತರಲ್ಲೊಬ್ಬನಾದ ಸ್ಪ್ರಾಟ್ ಬಾಂಬೆಗೆ ಬಂದ ಕೆಲವೇ ದಿನಗಳಲ್ಲಿ ಆತನ ಮೇಲೆ ಕ್ರಿಮಿನಲ್ ಕೇಸ್ ದಾಖಲಾಗುತ್ತದೆ. ಬ್ರಿಟಿಷ್ ಸರ್ಕಾರದಿಂದ ದೇಶದ್ರೋಹದ ಪ್ರಕರಣದಲ್ಲಿ ಬಂಧನಕ್ಕೊಳಗಾಗುತ್ತಾರೆ. ಇದಕ್ಕೆ ಕಾರಣ, ಆತ 'ಇಂಡಿಯಾ ಮತ್ತು ಚೈನಾ' ಎಂಬ ಕರಪತ್ರವನ್ನು ಬರೆದು ಹಂಚಿರುತ್ತಾನೆ. ಮರಾಠಿ ಹಾಗೂ ಇಂಗ್ಲಿಷ್ ಪತ್ರಿಕೆಗಳು ಈ ಕರಪತ್ರವನ್ನು ಪ್ರಚಾರ ಮಾಡಿರುತ್ತವೆ. ಈ ಕರಪತ್ರದಲ್ಲಿ ಬ್ರಿಟಿಷರನ್ನು 'ಕೊಲೆಗಾರರು' ಎಂದು ದೂರಿದ್ದನಲ್ಲದೇ, ಭಾರತೀಯರು ಚೀನಾ ಮಾದರಿಯಲ್ಲಿ ಬ್ರಿಟಿಷರ ವಿರುದ್ಧ ಕ್ರಾಂತಿ ಹೂಡಬೇಕೆಂದು

ವಾದಿಸಿರುತ್ತಾನೆ. ಜೊತೆಗೆ ಬ್ರಿಟಿಷರೊಂದಿಗೆ ಕೈಜೋಡಿಸಿರುವ ಭಾರತೀಯರನ್ನೂ ತರಾಟೆಗೆ ತೆಗೆದುಕೊಂಡಿರುತ್ತಾನೆ. ಈ ಪ್ರಕರಣದಲ್ಲಿ ಸ್ಟ್ರಾಟ್ ಪರವಾಗಿ ಹಿರಿಯ ವಕೀಲ ಎಫ್.ಎಸ್.ತಲ್ಯಾರ್ ಖಾನ್ ಒಪ್ಪಿಕೊಂಡಿರುತ್ತಾರೆ. ಮಹಮದ್ ಅಲಿ ಜಿನ್ನಾ ಸ್ಟ್ರಾಟ್‌ಗೆ ಜಾಮೀನು ಕೊಡಿಸಲು ಶ್ರಮಿಸಿರುತ್ತಾರೆ. ಅಂಬೇಡ್ಕರರು ಕೋರ್ಟಿನಲ್ಲಿ ಸ್ಟ್ರಾಟ್ ಪರವಾಗಿ ವಾದಿಸುತ್ತಾರೆ. ಸ್ಟ್ರಾಟ್ ಅವರು ಬ್ರಿಟಿಷ್ ಸರ್ಕಾರವನ್ನು ವಿರೋಧಿಸಿಲ್ಲ ಬದಲಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಮಾತ್ರ ವಿರೋಧಿಸಿದ್ದಾರೆ ಎಂದು ವಾದಿಸಿ ನ್ಯಾಯಾಧೀಶರ ಗಮನ ಸೆಳೆದು ಸ್ಟ್ರಾಟ್ ಬಿಡುಗಡೆಯಾಗುವಂತೆ ಮಾಡುತ್ತಾರೆ. ಮುಂದೆ ಕಮ್ಯುನಿಸ್ಟ್ ಹೋರಾಟಗಾರ ರಣದಿವೆಯವರ ವಿರುದ್ಧವೂ ಬ್ರಿಟಿಷರು ಇಂತಹದ್ದೇ ದೇಶದ್ರೋಹದ ಪ್ರಕರಣ ಹೂಡಿದಾಗಲೂ ಅಂಬೇಡ್ಕರರು ಅವರ ಪರವಾಗಿ ವಾದಿಸಿ ಬಿಡುಗಡೆಗೊಳಿಸಿದ್ದರು. ಅಷ್ಟೇ ಅಲ್ಲ ಹಲವು ಕಮ್ಯುನಿಸ್ಟ್ ಹರತಾಳಗಳಲ್ಲಿನ ಕೇಸುಗಳಲ್ಲಿ ಅಂಬೇಡ್ಕರರು ಸಕ್ರಿಯವಾಗಿ ವಕೀಲಿಕೆ ಮಾಡಿದ್ದರು. ಆದರೆ ತದನಂತರ ಕಮ್ಯುನಿಸ್ಟರು ಮತ್ತು ಅಂಬೇಡ್ಕರರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ಮನೆ ಮಾಡಿ ಅವರಿಬ್ಬರನ್ನೂ ದೂರವಾಗಿಸಿದವು.

ಅಂಬೇಡ್ಕರರು ಪಾಲ್ಗೊಂಡ ಮತ್ತೊಂದು ಗಂಭೀರ ಪ್ರಕರಣ 'ಚಿರ್ನರ್ ಅರಣ್ಯ'ದ ಪ್ರಕರಣ. ಬ್ರಿಟಿಷರ ವಿರುದ್ಧ ಕಾಂಗ್ರೆಸ್ ಅಸಹಕಾರ ಚಳವಳಿಯನ್ನು ಹೂಡಿ ದಶಕಗಳೇ ಕಳೆದಿದ್ದವು. 1930 ರಲ್ಲಿ ಮಹಾರಾಷ್ಟ್ರದಲ್ಲಿಯೂ ಕಾನೂನು ಭಂಗ ಚಳವಳಿಯಲ್ಲಿ ಭಾರತೀಯರು ಪಾಲ್ಗೊಂಡಿದ್ದರು. ಅಂತಹ ಚಳವಳಿಯಲ್ಲೊಂದು ಚಿರ್ನರ್ ಹಳ್ಳಿಯ ಸತ್ಯಾಗ್ರಹ. ಇಲ್ಲಿಯ ಅರಣ್ಯ ಕಾನೂನನ್ನು ಸತ್ಯಾಗ್ರಹಿಗಳು ಉಲ್ಲಂಘಿಸಿ ಹೋರಾಡುತ್ತಿದ್ದರು. ಆಗ ಬ್ರಿಟಿಷ್ ಸರ್ಕಾರ ಸತ್ಯಾಗ್ರಹವನ್ನು ಧಮನಿಸಲು ಅಲ್ಲಿಗೆ ಪೊಲೀಸರನ್ನೂ ಜೊತೆಗೆ ತಹಸಿಲ್ದಾರರನ್ನೂ ಕಳಿಸಿದಾಗ, ಇದ್ದಕ್ಕಿದ್ದಂತೆ ಪೊಲೀಸರು ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸಿದರು. ಈ ಗದ್ದಲದಲ್ಲಿ ತಹಸಿಲ್ದಾರ್ ಸೇರಿದಂತೆ ನಾಲ್ವರು ಅಧಿಕಾರಿಗಳು ಮತ್ತು ಏಳು ಸತ್ಯಾಗ್ರಹಿಗಳು ಹತರಾಗಿದ್ದರು. ಸರ್ಕಾರ ಅಧಿಕಾರಿಗಳು ಹತರಾಗಲು ಸತ್ಯಾಗ್ರಹಿಗಳು ಕಾರಣವೆಂದು 47 ಜನರನ್ನು ಬಂಧಿಸಿತ್ತು. ಈ ಪ್ರಕರಣದಲ್ಲಿ ನಾಲ್ವರು ಸತ್ಯಾಗ್ರಹಿಗಳ ಪರವಾಗಿ ಅಂಬೇಡ್ಕರರು ವಾದಿಸಿ ಬಿಡುಗಡೆಗೊಳ್ಳುವಂತೆ ಮಾಡಿದರು. ಈ ಪ್ರಕರಣದಿಂದ ಅಂಬೇಡ್ಕರರು ಭಾರತದಾದ್ಯಂತ ಹೆಸರುವಾಸಿಯಾದರು.




ಮಹಾರಾಷ್ಟ್ರದ ಅಬ್ರಾಹ್ಮಣ ಚಳವಳಿಗೆ ಅಂಬೇಡ್ಕರರು ತೀರ ಹತ್ತಿರವಾದ ಪ್ರಕರಣ 'ದೇಶಾಂಚ ದುಶ್ಮನ್' ಪುಸ್ತಕ ಮುಟ್ಟುಗೋಲು ಹಾಕಿಕೊಂಡಿದ್ದ ಪ್ರಕರಣ. ಮಹಾರಾಷ್ಟ್ರದ ಸತ್ಯಶೋಧಕ ಸಮಾಜದ ಸದಸ್ಯರಾಗಿದ್ದ ಕೇಶವ ಜೆಡೆಯವರು ಬರೆದಿದ್ದ 'ದೇಶಾಂಚ ದುಶ್ಮನ್' ಪುಸ್ತಕದಲ್ಲಿ ತಿಲಕ್ ಮತ್ತು ಚಿಪ್ಲಂಕರ್ ಅವರನ್ನು 'ರಾಷ್ಟ್ರ ವಿರೋಧಿ' ಗಳು ಎಂದು ಟೀಕಿಸಿರುತ್ತಾರೆ. ಈ ಕಾರಣದಿಂದ ಪುಸ್ತಕ ಬ್ಯಾನ್ ಆಗಿರುತ್ತದೆ. ಇದೇ ಪುಸ್ತಕಕ್ಕೆ ಸಂಬಂಧಿಸಿದಂತೆ ಜೆಡೆಯವರ ಮೇಲೆ ಸ್ಥಳೀಯ ಬ್ರಾಹ್ಮಣನೊಬ್ಬ ಮಾನನಷ್ಟ ಮೊಕದ್ದಮೆಯನ್ನು ಹಾಕಿರುತ್ತಾರೆ. ಈ ಪ್ರಕರಣದಲ್ಲಿ ಅಂಬೇಡ್ಕರರು ಜೆಡೆಯವರ ಪರವಾಗಿ ವಾದಿಸಿ, ಮಾನನಷ್ಟ ಮೊಕದ್ದಮೆಯಿಂದ ಅವರನ್ನು ಬಚಾವು ಮಾಡಿಸಿದರು. ಕೇವಲ ದಂಡ ಪಾವತಿಸಿ ಜೆಡೆಯವರನ್ನು ಬಿಡುಗಡೆಗೊಳಿಸಿದರು.

ಮಹಾಡ್ ಕೆರೆಯ ಪ್ರಕರಣದಲ್ಲಂತೂ ಅಂಬೇಡ್ಕರರು ಸತತವಾಗಿ 10 ವರ್ಷಗಳು ವಾದಿಸಿದರು. ಮಹಾಡ್‌ನ ಬ್ರಾಹ್ಮಣರು ಕೆರೆಯನ್ನು ಖಾಸಗಿ ಆಸ್ತಿ ಎಂದು ವಾದಿಸುತ್ತಿದ್ದರು. ಆದರೆ ಅಂಬೇಡ್ಕರರು ಬ್ರಾಹ್ಮಣರ ಕಟ್ಟುಪಾಡುಗಳು ಮತ್ತು ಪವಿತ್ರ–ಅಪವಿತ್ರ ಕಲ್ಪನೆಗಳನ್ನೇ ಮುಂದು ಮಾಡಿಕೊಂಡು ಒಂದು ಬಲವಾದ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ಒದಗಿಸುತ್ತಾರೆ. ಆ ಸಾಕ್ಷ್ಯವೇನೆಂದರೆ, ಮಹಾಡ್ ಕೆರೆಯ ನೀರನ್ನು ಅದರ ಪಕ್ಕದಲ್ಲಿಯೇ ಇದ್ದ ಮುಸಲ್ಮಾನರೂ ಸಹ ಬಳಸುತ್ತಿದ್ದುದ್ದು. ಆ ಕಾರಣದಿಂದ ಮುಸಲ್ಮಾನರೂ ಸಹ ಮಹಾಡ್ ನೀರನ್ನು ಬಳಸುತ್ತಿದ್ದು ಈ ಕೆರೆ ಖಾಸಗಿ ಸ್ವತ್ತಲ್ಲ ಬದಲಿಗೆ ಸಾರ್ವಜನಿಕ ಸ್ವತ್ತೆಂದು ರುಜುವಾತು ಮಾಡಿ ಪ್ರಕರಣವನ್ನು ಗೆಲ್ಲುತ್ತಾರೆ. ಇದಾದ ನಂತರ ಬಾಂಬೆಯ ಭುಲೇಶ್ವರ ದೇವಾಲಯವನ್ನು ದಲಿತರಿಗೆ ತೆರೆಯಲು ಹೋರಾಟ ರೂಪುಗೊಂಡಿರುತ್ತದೆ. ಈ ಪ್ರಕರಣದಲ್ಲಿಯೂ ಅಲ್ಲಿನ ಬ್ರಾಹ್ಮಣರು ಆ ದೇಗುಲವನ್ನು ಖಾಸಗಿ ಆಸ್ತಿಯೆಂದು ವಾದಿಸುತ್ತಿದ್ದರು. ಆದರೆ ಅಂಬೇಡ್ಕರರು ಆ ದೇಗುಲವಿರುವುದು ಸರ್ಕಾರದ ಜಮೀನಿನಲ್ಲಿ ಹಾಗೂ ಆ ದೇಗುಲಕ್ಕೆ ಸರ್ಕಾರ ನೀಡಿದ ಅನುದಾನಗಳ ಅಫಿಡವಿಟ್ ಹಾಕಿ 3 ವರ್ಷಗಳವರೆಗೆ ವಾದಿಸಿ ಆ ಪ್ರಕರಣವನ್ನೂ ಗೆಲ್ಲುತ್ತಾರೆ. ಈ ಎರಡೂ ಪ್ರಕರಣಗಳಲ್ಲಿನ ತೀರ್ಪುಗಳು ಮುಂದಿನ ಬಹಳಷ್ಟು ಇಂತಹದೇ ಪ್ರಕರಣಗಳಲ್ಲಿನ ಗೆಲುವಿಗೆ ಇತರೆ ವಕೀಲರಿಗೆ ಸಹಾಯ ಮಾಡಿದ್ದವು.

ಮತ್ತೊಂದು ಪ್ರಕರಣ ಅಂಬೇಡ್ಕರರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ಸಮರ್ಥ ಲಾಯರ್ ಆಗಿ ಪರಿಚಯಿಸಿತು. ಅದು ಆರ್.ಡಿ.ಕರ್ವೆಯವರ ಪ್ರಕರಣ. ಕರ್ವೆಯವರು 'ಸಮಾಜ ಸ್ವಾಸ್ಥ್ಯ' ಎಂಬ ಮಾಸಿಕ ಪತ್ರಿಕೆ ತರುತ್ತಿದ್ದರು. ಅದು ಹೆಚ್ಚಾಗಿ ಲೈಂಗಿಕತೆ ಮತ್ತು ಆರೋಗ್ಯ ಶಿಕ್ಷಣಕ್ಕೆ ಒತ್ತು ಕೊಡುತ್ತಿತ್ತು. ಒಂದು ಸಂಚಿಕೆಯಲ್ಲಿ ಅವರು ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಪ್ರಕಟಿಸಿತ್ತು. ಇದಕ್ಕಾಗಿ ಲೈಂಗಿಕ ಶಿಕ್ಷಣವನ್ನು ನೀಡಬೇಕೆಂದು ಪ್ರತಿಪಾದಿಸಿತ್ತು. ಇದರ ವಿರುದ್ಧವಾಗಿ 'ಅಶ್ಲೀಲತೆ' ಎಂದು ಆರೋಪಿಸಿ ಮಹಾರಾಷ್ಟ್ರದ ಸಂಪ್ರದಾಯವಾದಿಗಳು ಕೋರ್ಟಿನಲ್ಲಿ ದಾವೆ ಹೂಡಿದ್ದರು. ಈ ಪ್ರಕರಣದಲ್ಲಿ ಅಂಬೇಡ್ಕರರು ಕರ್ವೆಯವರ ಪರವಾಗಿ ವಾದಿಸಿ ಸೋತರಾದರೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದರು. ಇದೇ ಕಾಲಘಟ್ಟದಲ್ಲಿ ಲೈಂಗಿಕ ಶಿಕ್ಷಣದ ಪರವಾಗಿ ಜೆ.ಆರ್.ಡಿ ಟಾಟಾ ಮತ್ತು ಆರ್.ಡಿ ಕರ್ವೆಯವರೂ ಸಹ ಇದ್ದರು. ಜನಸಂಖ್ಯೆ ನಿಯಂತ್ರಿಸಲು ಅಂಬೇಡ್ಕರರು ಹೆಚ್ಚು ಪ್ರಗತಿಶೀಲರಾಗಿ ಯೋಚಿಸುತ್ತಿದ್ದರು ಎಂಬುದಕ್ಕೆ ಈ ಪ್ರಕರಣವೇ ಸಾಕ್ಷಿ.

ಚಿತ್ಪಾವನ ಬ್ರಾಹ್ಮಣರ ಪರವಾಗಿಯೂ ಸಹ ಅಂಬೇಡ್ಕರರು ವಾದಿಸಿದ್ದಾರೆ. ಏಕಾಂಗಿಯಾಗಿ ಜೀವಿಸುತ್ತಿದ್ದ ಬ್ರಾಹ್ಮಣರೊಬ್ಬರು ತಾವಿದ್ದ ಸ್ಥಳದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ 50,000 ರೂಪಾಯಿಗಳನ್ನು ದಾನ ಮಾಡಿ ತೀರಿಕೊಂಡಿದ್ದರು. ಅವರು ತೀರಿ ಹೋದ ನಂತರ ಆ ಹಣವನ್ನು ಬಳಸಿಕೊಳ್ಳುವುದರಲ್ಲಿ ಅಲ್ಲಿ ವಾಸವಿದ್ದ ಚಿತ್ಪಾವನ ಬ್ರಾಹ್ಮಣರು ಮತ್ತು ದಕ್ಷಿಣದ ಬ್ರಾಹ್ಮಣರ ನಡುವೆ ಕಿತ್ತಾಟವುಂಟಾಯಿತು. ಆಗ ಅಂಬೇಡ್ಕರರು ಜಾತಿಪದ್ಧತಿ ಮತ್ತು ಬ್ರಾಹ್ಮಣರ ನಡುವಿನ ಮೇಲು ಕೀಳುಗಳನ್ನು ಅಭ್ಯಸಿಸಿದ ವ್ಯಕ್ತಿಯಾಗಿದ್ದರಿಂದ ಚಿತ್ಪಾವನ ಬ್ರಾಹ್ಮಣರು ಅವರನ್ನು ತಮ್ಮ ಪರವಾಗಿ ವಾದಿಸಲು ಬೇಡಿಕೊಂಡಿದ್ದರು. ಅಂಬೇಡ್ಕರರು ಸಹ ಅವರ ಪರವಾಗಿ ವಾದಿಸಿದ್ದರು.

ಹೀಗೆ ಹಲವು ಪ್ರಕರಣಗಳನ್ನು ಉಲ್ಲೇಖಿಸಬಹುದು.

ಅತಿ ಹೆಚ್ಚಾಗಿ ಅಂಬೇಡ್ಕರರ ಬಳಿ ದಲಿತರು ಮತ್ತು ಬಡವರು ಬರುತ್ತಿದ್ದದ್ದರಿಂದ ಅವರಿಗೆ ಬಹುಬೇಗನೇ 'ಬಡವರ ಬ್ಯಾರಿಸ್ಟರ್' ಎಂಬ ಬಿರುದು ಸಹ ಬಂದಿತು. ಅದೆಷ್ಟೋ ಪ್ರಕರಣಗಳಲ್ಲಿ ಕೇವಲ ಪ್ರಯಾಣ ಮತ್ತು ಊಟಕ್ಕೆ ಮಾತ್ರ ಹಣ ಪಡೆದು ಕೇಸುಗಳನ್ನು ವಾದಿಸಿದ ಉದಾಹರಣೆಗಳಿವೆ. ಆದರೆ ಮತ್ತೊಂದು ಕಡೆ ಒಂದಷ್ಟು ವರ್ಷ ಮನೆ ಸಂಬಾಳಿಸಲು ಈ ವಕೀಲ ವೃತ್ತಿಯೇ ದಾರಿಯಾಗಿದ್ದೂ ಸಹ ನಿಜ.

ಅಂಬೇಡ್ಕರರು ವಕೀಲ ವೃತ್ತಿಯಲ್ಲಿಯೇ ಮುಂದುವರಿಯಬಹುದಾಗಿತ್ತು. ಬ್ರಿಟಿಷರು ಬಾಂಬೆ ಸಂಸ್ಥಾನದಲ್ಲಿ ಮೊದಲು ಜಿಲ್ಲಾ ನ್ಯಾಯಾಧೀಶರಾಗಲು ಆಹ್ವಾನ ನೀಡಿದರು. ಮುಂದಿನ ಮೂರು ವರ್ಷಗಳೊಳಗೆ ಹೈಕೋರ್ಟ್ ನ್ಯಾಯಾಧೀಶರಾಗಲು ಸಹ ಆಹ್ವಾನಿಸುವುದಾಗಿ ಭರವಸೆ ನೀಡಿದ್ದರು. ನಂತರ ಹೈದರಾಬಾದಿನ ನಿಜಾಮ್ ತಮ್ಮ ಸಂಸ್ಥಾನದ ಮುಖ್ಯ ನ್ಯಾಯಾಧೀಶರಾಗಲು ಆಹ್ವಾನಿಸಿದ್ದರು. ಆದರೆ ಅಂಬೇಡ್ಕರರು ಈ ಆಹ್ವಾನವನ್ನು ತಿರಸ್ಕರಿಸಿದರು. ಅವರ ಗುರಿ ಬೇರೆಯೇ ಆಗಿತ್ತು. ಆ ಗುರಿ ಏನೆಂಬುದು ಈಗ ಜಗತ್ತಿಗೇ ತಿಳಿದಿದೆ. ಆದರೆ ಆ ಗುರಿಯ ಕಡೆ ಮುಖ ಮಾಡಿಕೊಂಡಿರುವವರ ಸಂಖ್ಯೆ ಕಡಿಮೆ ಇದೆ. ಅಂಬೇಡ್ಕರರು ಏನು ಗಳಿಸಿಕೊಟ್ಟರೋ ಅದನ್ನು ಪಡೆದುಕೊಂಡು ರೆಕ್ಕೆ ಕಟ್ಟಿಕೊಂಡವರು ಇಂದು ಅಂಬೇಡ್ಕರರ ಕನಸಿನ ವಿರುದ್ಧ ರೆಕ್ಕೆ ಬಿಚ್ಚಿ ಹಾರುತ್ತಿದ್ದಾರೆ.

ಅದೇನೇ ಇರಲಿ, ಅಂಬೇಡ್ಕರರ ಬ್ಯಾರಿಸ್ಟರ್ ಬದುಕು ಮತ್ತಷ್ಟು ಹೆಚ್ಚು ಸಂಶೋಧನೆಗಳನ್ನು ಕೇಳುತ್ತಿದೆ. ಅವರು ಕೋರ್ಟಿನಲ್ಲಿ ವಾದಿಸಿದ ರೀತಿ, ಸಾಕ್ಷ್ಯಗಳ ವಿಚಾರಣೆ, ಪ್ರಕರಣದ ಸುತ್ತಾ ಕೈಗೊಂಡ ತನಿಖೆ ಇವೆಲ್ಲವನ್ನೂ ಮುಂದಿನ ಪೀಳಿಗೆಗೆ ರವಾನಿಸಬೇಕಿದೆ. ಪುಸ್ತಕ ಮತ್ತು ಶುಲ್ಕಕ್ಕೆ ಗಂಟು ಬಿದ್ದಿರುವ ವಕೀಲಿಕೆಯನ್ನು ಮಸ್ತಕ ಮತ್ತು ಮನುಷ್ಯತ್ವಕ್ಕೆ ಗಂಟು ಹಾಕಲು ಇದು ಹೆಚ್ಚು ಸಹಾಯಕವಾಗಬಹುದು.

□


(39ನೇ ಪುಟದಿಂದ)

# ಫೋಟೋ ಫ್ರೇಮ್...

ರಿಂದ ಅಂಬೇಡ್ಕರ್ ಮತ್ತು ಸಂವಿಧಾನಗಳೆರಡನ್ನೂ ಪ್ರತಿಭಟನೆಯ ಸಂಕೇತವಾಗಿ ಬಳಸಿದಂತೆ ಕಾಣುತ್ತದೆ. ಹೀಗೆ ಅಂಬೇಡ್ಕರ್ ಅವರನ್ನು ಹೊಸ ತಲೆಮಾರು ಆಯ್ಕೆ ಮಾಡಿಕೊಳ್ಳುವುದರ ಹಿಂದೆ ದಲಿತ ಚಳವಳಿಯ ಶ್ರಮ ಮತ್ತು ಬದ್ಧತೆಗಳು ಇರುವುದನ್ನು ಇಲ್ಲಿ ಗಮನಿಸಲೇಬೇಕಾಗುತ್ತದೆ. ಅಂದರೆ ದಲಿತ ಚಳವಳಿಗಳು ಅಂಬೇಡ್ಕರ್ ಅವರನ್ನು ತಮ್ಮ ನಾಯಕನಾಗಿಸಿಕೊಂಡು ಅವರ ವ್ಯಕ್ತಿತ್ವವನ್ನು ಜೀವಂತವಾಗಿ ಉಳಿಸಿಕೊಂಡುಬಂದಿವೆ. ಹಾಗೆ ಉಳಿಸಿಕೊಂಡುಬಂದಿವೆ ಅವರನ್ನು ಪ್ರತಿಭಟನೆಯ ಸಂಕೇತವಾಗಿ ರೂಪಿಸಿವೆ. ಅಲ್ಲದೆ ಅಂಬೇಡ್ಕರ್ ಅವರೂ ಕೂಡ ನಿರಂತರವಾಗಿ ಹೋರಾಟಗಳಲ್ಲಿಯೇ ಸಕ್ರಿಯರಾಗಿದ್ದದ್ದು ಕೂಡ ಇದ-ಕ್ಕೆ ಕಾರಣವಾಗಿದೆ. ಹಾಗೆ ಪ್ರತಿಭಟನೆಯ ಸಂಕೇತವಾಗಿ ಉಳಿದದ್ದೇ ಇಂದು ಯುವಕರು ಅಂಬೇಡ್ಕರ್ ಅವರ ವ್ಯಕ್ತಿತ್ವದಕಡೆಗೆ ಮುಖಮಾಡುವಂತೆ ಮಾಡಿದೆ. ಬಹುಶ ಇಂತಹ ದಿನಕ್ಕಾಗಿ ಅಂಬೇಡ್ಕರ್ ಕೂಡ ಕಾಯುತ್ತಿದ್ದರು ಎನ್ನಿಸುತ್ತದೆ. ಯಾಕೆಂದರೆ ಅಂಬೇಡ್ಕರ್ ಇಡೀ ದೇಶದ ಎಲ್ಲ ಸಮುದಾಯಗಳ ಹಿತವನ್ನು ಬಯಸಿದವರು. ಆದರೆ ಸ್ವತಂತ್ರ ಭಾರತದಲ್ಲಿ ಅವರು ದಲಿತರ ಐಕಾನ್ ಆಗಿ ಮಾತ್ರ ಕಾಣಿಸಿಕೊಂಡು ಉಳಿದ ಸಮುದಾಯಗಳ ವ್ಯಕ್ತಿತ್ವದಿಂದ ದೂರ ಸರಿಯುವಂತೆ ಆಗಿತ್ತು. ಇದು ಅಂಬೇಡ್ಕರ್ ವಿಚಾರಧಾರೆಗಳು ವಿಸ್ತಾರಗೊಳ್ಳದೆ ಒಂದು ಸಮುದಾಯಕ್ಕೆ ಮಾತ್ರ ಸೀಮಿತಗೊಳ್ಳುವಂತೆ ಆಗಿತ್ತು. ಇದರಿಂದ ಅಂಬೇಡ್ಕರ್ ಚಿಂತನೆ ನಮ್ಮ ಸಮಾಜದಲ್ಲಿ ಎಷ್ಟು ಮಹತ್ವವನ್ನು ಪಡೆಯಬೇಕಾಗಿತ್ತೋ ಅಷ್ಟನ್ನು ಪಡೆದಿರಲಿಲ್ಲ.


ಆದರೆ ಸದ್ಯದಲ್ಲಿ ಅಂತಹ ಸೀಮಿತ ಮತ್ತು ಸಂಕುಚಿತ ನೆಲೆಯಿಂದ ಹೊರಬಂದು ಅಂಬೇಡ್ಕರ್ ಎಲ್ಲರ ನಾಯಕರಾಗಿ ಬೆಳೆಯುವ ಒಂದು ಐತಿಹಾಸಿಕ ಸಂದರ್ಭ ಇಂದು ಸೃಷ್ಟಿಯಾಗಿದೆ. ಆದರೆ ಇಲ್ಲಿಯೇ ನಿಜವಾದ ಸವಾಲು ಮತ್ತು ಸಮಸ್ಯೆ ಎದುರಾಗುವುದು. ಅದೇನೆಂದರೆ ಅಂಬೇಡ್ಕರ್ ಯುವಕರ ಕೈಯೊಳಗೆ ಮತ್ತೊಂದು ಸಾಂಕೇತಿಕ ಪ್ರತಿಮೆಯಾದರೆ ಹೆಚ್ಚು ಪ್ರಯೋಜನವಿಲ್ಲ. ಬದಲಿಗೆ ಅಂಬೇಡ್ಕರ್ ಅವರೇ ಹೇಳಿರುವಂತೆ 'ನನ್ನ ಅನುಯಾಯಿಯಾಗಿರುವುದಕ್ಕಿಂತ ನಾನು ಅಪೂರ್ಣಗೊಳಿಸಿರುವ ಕೆಲಸಗಳನ್ನು ಪೂರ್ಣಗೊಳಿಸಬೇಕು. ಹಾಗೆಯೇ ನನ್ನನ್ನು ತಲೆಯ ಮೇಲೆ ಹೊತ್ತು ಮೆರೆಯುವುದಕ್ಕಿಂತ ನನ್ನನ್ನು ತಲೆಯೊಳಕ್ಕೆ ಇಳಿಸಿಕೊಳ್ಳಬೇಕು' ಎಂದಿದ್ದಾರೆ. ಅಂದರೆ ವ್ಯಕ್ತಿ ಪೂಜೆಯಿಂದ ಯಾವ ಪ್ರಯೋಜನವೂ ಇಲ್ಲ. ಇದುವರೆಗೆ ಅಂಬೇಡ್ಕರ್ ಅವರ ವ್ಯಕ್ತಿಪೂಜೆ ಮಾಡಿ ಅವರಿಗೆ ಅಗೌರವ ತೋರಿಸಿರುವುದೂ ಉಂಟು. ಅವರ ಹೆಸರನ್ನು ವೈಯಕ್ತಿಕ ಲಾಭಗಳಿಗೆ ಬಳಸಿಕೊಳ್ಳುವುದೂ ಉಂಟು. ಸರ್ಕಾರಗಳು, ಪ್ರಭುತ್ವ ಕೂಡ ಅವರ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವುದುಂಟು. ಇದು ಮುಂದುವರೆಯುವುದು ಅಂಬೇಡ್ಕರ್ ಆಶಯಗಳಿಗೆ ವಿರುದ್ಧವಾದುದು. ಹಾಗಾಗಿ ಪ್ರಸ್ತುತ ಸಂದರ್ಭದಲ್ಲಿ ಅಂಬೇಡ್ಕರ್ ಹೊಸ ತಲೆಮಾರಿಗೆ ಒಂದು 'ಸಂಕೇತನಾಮ'ವಾದರೆ ಸಾಲದು. ಬದಲಿಗೆ ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಅರಿಯಬೇಕು ಮತ್ತು ಅದನ್ನು ಕಾರ್ಯರೂಪಕ್ಕಿಳಿಸಬೇಕು. ಅದಿಲ್ಲದೆ ಅಂಬೇಡ್ಕರ್ ಅವರನ್ನು ಒಂದು ಸಂಕೇತದ ಮಟ್ಟಿಗೆ ಮಾತ್ರ ಸೀಮಿತಗೊಳಿಸಿದರೆ ಮತ್ತೆ ನಮಗೆ ನಾವೇ ವಂಚಿಸಿಕೊಂಡಂತಾಗುತ್ತದೆ. ಉದಾಹರಣೆಗೆ ಲ್ಯಾಟಿನ್ ಅಮೆರಿಕದ ಕ್ರಾಂತಿಕಾರಿ ಅರ್ನೆಸ್ಟ್ ಚೆಗೆವಾರ ಇಂದು ವಿಶ್ವಮಾನ್ಯನಾಗಿದ್ದಾನೆ! ಅವನ ಭಾವಚಿತ್ರವಿರುವ ಟೀಶರ್ಟ್ ಜನಪ್ರಿಯವಾಗಿದ್ದು ವಿಶ್ವದೆಲ್ಲೆಡೆ ಮಾರಾಟವಾಗಿ ಅವನ ಭಾವಚಿತ್ರ ಎಲ್ಲರಿಗೂ ಪರಿಚಯವಿದೆ. ಆದರೆ ಚೆಗೆವಾರ ನಂಬಿದ್ದ ಜೀವನ ಮೌಲ್ಯಗಳು ಯಾವುವು? ಅವುಗಳನ್ನು ಕಾರ್ಯರೂಪಕ್ಕೆ ತರಲು ತನ್ನ ಜೀವನವನ್ನು ಹೇಗೆ ತ್ಯಾಗ ಮಾಡಿದ್ದರು ಪರಿಚಯ ಎಷ್ಟು ಜನರಿಗೆ ಇದೆ? ಅವನು ಜಾಗತಿಕ ಬಟ್ಟೆ ವ್ಯಾಪಾರಿಗಳ ಮಾರಾಟದ ಸರಕಾಗಿಬಿಟ್ಟಿದ್ದಾನೆ! ಇದು ದೊಡ್ಡ ದುರಂತ. ಹೀಗೆ ಒರ್ವ ತತ್ವಜ್ಞಾನಿಯನ್ನು, ಸಿದ್ಧಾಂತಿಯನ್ನು, ಸಮಾಜಶಾಸ್ತ್ರಜ್ಞನನ್ನು, ಪ್ರಜಾಪ್ರಭುತ್ವವಾದಿಯನ್ನು, ಸಮಾಜ ಸುಧಾರಕನನ್ನು ಒಂದು ಫೋಟೋ ಫ್ರೇಮಿಗೆ ಯಾವುದೇ ಕಾರಣಕ್ಕೂ ಸೀಮಿತಗೊಳಿಸಬಾರದು. ಈ ಬಗೆಗೆ ಹೊಸ ತಲೆಮಾರಿಗೆ ಎಚ್ಚರಿಗೆ ಅರಿವು ಅತ್ಯಗತ್ಯ. ಚೆಗೆವಾರನಂತೆ ಅಂಬೇಡ್ಕರ್ ಜನಪ್ರಿಯವಾಗುವುದರಲ್ಲಿಯಾವುದೇ ಅರ್ಥವಿಲ್ಲ.

ಅಂದರೆ ಅಂಬೇಡ್ಕರ್ ಭಾವಚಿತ್ರ ಮತ್ತು ಸಂವಿಧಾನವನ್ನು ಕೈಯಲ್ಲಿ ಹಿಡಿದ ಯುವಕರು, ಮಹಿಳೆಯರು ಅಲ್ಪಸಂಖ್ಯಾತರು ಹಾಗೂ ಎಲ್ಲ ದಮನಿತ ಸಮುದಾಯುಗಳು, ಅವರನ್ನು ಅರಿವಿನ ಮಾರ್ಗವಾಗಿ, ಬುದ್ಧನ ಪ್ರತಿರೂಪವಾಗಿ ಕಾಣಬೇಕಿದೆ. ಅವರು ಹಚ್ಚಿರುವ ವಿಚಾರದ ಹಣತೆಯಿಂದ ತಮ್ಮ ಅಂತರಂಗ



ದೀಪವನ್ನು ಹಚ್ಚಿಕೊಂಡು ತಮ್ಮ ವ್ಯಕ್ತಿತ್ವಗಳನ್ನು ಬೆಳಗಿಸಿಕೊಳ್ಳಬೇಕಿದೆ. ಆ ಮೂಲಕ ಅಂಬೇಡ್ಕರ್ ಒಂದು ಜೀವನ ಮಾರ್ಗವಾಗಬೇಕಿದೆ. ಅಲ್ಲಿನ ಬುದ್ಧನು ಉಸಿರಾಡಬೇಕಿದೆ. ಆಗ ಮಾತ್ರವೇ ಅಂಬೇಡ್ಕರ್ ನಮ್ಮವರಾಗುವುದು. ಅವರು ನಮ್ಮಲ್ಲಿ ಉಸಿರಾಡುವುದು. ನಾವು ಅವರ ಕನಸುಗಳಲ್ಲಿ ಜೀವಿಸುವುದು. ಸದ್ಯದಲ್ಲಿ ಈ ದೇಶ ಜಾತಿ, ವರ್ಗ, ಲಿಂಗತಾರತಮ್ಯ, ಧಾರ್ಮಿಕ ಕಲಹಗಳ ಕುಲುಮೆಗಳಲ್ಲಿ ಬೇಯುತ್ತಿದೆ. ಅಸಹಾಯಕರ ನೆತ್ತರು ಬೀದಿಗಳಲ್ಲಿ ಚೆಲ್ಲಾಡುತ್ತಿದೆ. ಪ್ರಜಾತಂತ್ರದ ಆಶಯಗಳನ್ನು ಆಚರಣೆಗೆ ತರುವ ಪ್ರಯತ್ನಗಳು ಮರೀಚಿಕೆಯಾಗುತ್ತಿವೆ. ಪ್ರಭುತ್ವ ರಕ್ಕಸವಾಗಿದೆ. ಧರ್ಮ ಬೆಳಕಾಗುವ ಬದಲು ಬೆಂಕಿಯಾಗಿ ವಿಷ ಉಗುಳುತ್ತಿದೆ. ಬದುಕು ಬಹಳ ದುಸ್ತರವಾಗುತ್ತಿದೆ. ಇಂತಹ ಹೊತ್ತಿನಲ್ಲಿ ದೇಶದ ಜನರ ಬದುಕು ಸಹಜ ಸ್ಥಿತಿಗೆ ಬರಬೇಕಾದರೆ ಅಂಬೇಡ್ಕರ್ ಅವರ ವಿಚಾರಧಾರೆಗಳು ನಮ್ಮೆಲ್ಲರಿಗೆ ದಾರಿದೀಪವಾಗಿದೆ. ಅವರು ಈ ದೇಶದ ಬಹುದೊಡ್ಡ ಕನಸುಗಾರ.

ಜಾತಿ-ವರ್ಗರಹಿತ ಮತ್ತು ಲಿಂಗ ತಾರಮ್ಯರಹಿತ ಸಮಾನತೆಯ ಸಮಾಜದ ಕನಸು ಕಂಡವರು. ಪ್ರಜಾಪ್ರಭುತ್ವದ ಅಪ್ರತಿಮ ನ್ಯಾಯವಾದಿಗಳು. ಈ ದಿಕ್ಕಿನಲ್ಲಿ ಕೆಲಸ ಆರಂಭಿಸಿ ಮುಂದೆ ಸಾಗಬೇಕಾದ ದಾರಿ ತೋರಿದವರು. ಅವರನ್ನು ನಿರಂತರವಾಗಿ ಅಭ್ಯಾಸ ಮಾಡುವ ಮೂಲಕ ಅವರುಕೊಟ್ಟ ತಿಳಿವನ್ನು ಒಳಗೊಳ್ಳುವ ಮೂಲಕ ಅವರ ಕೆಲಸವನ್ನು ಕನಸುಗಳನನ್ನು ಪೂರ್ಣಗೊಳಿಸಬೇಕಿದೆ. ಆ ಮೂಲಕ ದೇಶದ ಭವಿಷ್ಯವನ್ನು ರೂಪಿಸಬೇಕಾದ ಹೊಣೆ ಯುವಜನರ ಮೇಲಿದೆ. ಇದಕ್ಕೆ ಅಂಬೇಡ್ಕರ್ ಅವರೇ ಕೊಟ್ಟ ಸೂತ್ರ 'ಶಿಕ್ಷಣ, ಸಂಘಟನೆ ಮತ್ತು ಹೋರಾಟ' ಮಾರ್ಗಗಳೇ ಇಂದಿನ ಅಗತ್ಯ. ಇದಕ್ಕೆ ತೋರುದೀಪ ಅಂಬೇಡ್ಕರ್ ವಿಚಾರಧಾರೆ. ಅದು ಯುವಜನಾಂಗವನ್ನು ಕೈಹಿಡಿದು ಮುನ್ನಡೆಸುತ್ತದೆ. □



ಇದೀಗ ದೆಹಲಿಯ ಜೆಎನ್‌ಯುನ ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾಗಿರುವ ಪುರುಷೋತ್ತಮ ಬಿಳಿಮಲೆಯವರು ಕನ್ನಡದ ತಿಳಿವನ್ನು ಜಾಗತಿಕವಾಗಿ ವಿಸ್ತರಿಸಲು ಕನ್ನಡದ ಕೆಲವು ಪ್ರಮುಖ ಕೃತಿಗಳನ್ನು ಪೀಠದ ಮೂಲಕ ಇಂಗ್ಲೀಷಿಗೆ ಅನುವಾದಿಸುವ ಕಾರ್ಯ ಮಾಡುತ್ತಿದ್ದಾರೆ. ಹಂಪಿ ಜಾನಪದ, ಕೂಡುಕಟ್ಟು, ಶಿಷ್ಟಪರಿಶಿಷ್ಟ, ಈಚಿನ 'ಕನ್ನಡ ಕಥನಗಳು' ಕೃತಿಯ ತನಕ ಹಲವು ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ರೂಪುಗೊಳ್ಳುವ ಆರಂಭಿಕ ಹಂತದಲ್ಲಿ ದುಡಿದವರಲ್ಲಿ ಇವರೂ ಒಬ್ಬರು.

**ಪುರುಷೋತ್ತಮ ಬಿಳಿಮಲೆ**

**Email: pbilimale@gmail.com**

**2019ರ ನವಂಬರ ತಿಂಗಳಲ್ಲಿ ಜೆಎನ್‌ಯು ಆಡಳಿತವು ಶುಲ್ಕ ಹೆಚ್ಚು ಮಾಡಿದಾಗ ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ಸಾರ್ವತ್ರಿಕ ಶಿಕ್ಷಣದ ಪರಿಕಲ್ಪನೆಯನ್ನು ಮುಂದು ಮಾಡಿ, ಪ್ರಬಲ ಹೋರಾಟ ಸಂಘಟಿಸಿ ಗೆಲುವು ಸಾಧಿಸಿದ್ದರು. ದೇಶದಲ್ಲಿ ಇನ್ನಷ್ಟು ರೋಹಿತ ವೇಮುಲಾರನ್ನು ಸಾಯಲು ನಾವು ಬಿಡುವುದಿಲ್ಲ ಎಂದು ಘೋಷಿಸುವ ಮೂಲಕ ಜೆಎನ್‌ಯು ಅಂಬೇಡ್ಕರ್ ಆದರ್ಶಗಳನ್ನು ಎತ್ತಿ ಹಿಡಿದಿತ್ತು. ಇವತ್ತಿನ ದಿನ ದಜೆಎನ್‌ಯುವಿನ ಎಲ್ಲರೂ ಅಂಬೇಡ್ಕರ್ ಅವರನ್ನು ಗಟ್ಟಿಯಾಗಿ ಅಪ್ಪಿಕೊಂಡಿದ್ದಾರೆ. ಅದು ಜೆಎನ್‌ಯುವಿನ ಸ್ವಭಾವಕ್ಕೆ ಅನುಗುಣವಾಗಿಯೇ ಇದೆ'**

ಬೇರೆ ಬೇರೆ ಕಾರಣಗಳಿಗೆ ಸದಾ ಸುದ್ದಿಯಲ್ಲಿರುವ, ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲೊಂದಾದ ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯವನ್ನು ( ಜೆಎನ್‌ಯು) ಸರಕಾರವು 1969ರಲ್ಲಿ ವಿಶೇಷ ಅಧಿಸೂಚನೆ ಹೊರಡಿಸಿ ಸ್ಥಾಪಿಸಿತು. ಪ್ರಖ್ಯಾತ ಕಾನೂನು ತಜ್ಞರಾದ ಎಂ ಸಿ ಛಾಗ್ಲಾ ಅವರು ಈ ವಿವಿಯ ರೂಪು ರೇಷೆಗಳು ಹೇಗಿರಬೇಕೆಂಬುದನ್ನು ಸಮಾಜಕ್ಕೆ ವಿವರಿಸಿದರು. ಭಾರತದೇಶದ ಹಿಂದುಳಿದ ಪ್ರದೇಶಗಳ ಜನರು ರಾಜಧಾನಿಗೆ ಆಗಮಿಸಿ, ಉನ್ನತ ಶಿಕ್ಷಣವನ್ನು ಪಡೆದು ಅವರು ಇನ್ನಷ್ಟು ಪ್ರವರ್ಧಮಾನರಾಗುವಂತೆ ಮಾಡುವುದು ವಿವಿಯ ಪ್ರಧಾನ ಉದ್ದೇಶವೆಂಬುದನ್ನು ಎಲ್ಲರಿಗೂ ತಿಳಿಸಿ ಹೇಳಲಾಯಿತು. ಹಾಗೆ ಹೇಳುವಾಗ ಯಾರೂ ಅಂಬೇಡ್ಕರ್ ಅವರನ್ನಾಗಲೀ, ಕಾರ್ಲ್ ಮಾರ್ಕ್ಸ್ ಅವರನ್ನಾಗಲಿ ನೆನಸಿಕೊಂಡಿರಲಿಲ್ಲ. ಆದರೆ ಅವರಿಬ್ಬರ ಚಿಂತನೆಗಳು ವಿವಿಯ ಸ್ಥಾಪನೆಯ ಕನಸಿನೊಳಗೆ ತಾನೇತಾನಾಗಿ ಸೇರಿಕೊಂಡಿತ್ತು.

ತುಂಬಾ ಹಣತೆತ್ತು, ರಾಜಧಾನಿಗೆ ಬಂದು, ಓದಲಾಗದವರಿಗೆಂದೇ ಸ್ಥಾಪಿಸಲಾದ ಜೆಎನ್‌ಯುವಿನಲ್ಲಿ ಮುಂದೆ ಕಡಿಮೆ ವೆಚ್ಚದ ವಸತಿ ನಿಲಯಗಳನ್ನೂ ಸ್ಥಾಪಿಸಲಾಯಿತು. ಇದು ಅಂಬೇಡ್ಕರ್ ಅವರ ಆಶಯಗಳಿಗೆ ಪೂರಕವಾಗಿದ್ದ ಇನ್ನೊಂದು ಪ್ರಮುಖ ಘಟನೆ. ಹಾಗೆ ನೋಡಿದರೆ, ಇಡೀ ದೇಶದಲ್ಲಿ ಹಿಂದುಳಿದ ಜನರ ಅಭಿವೃದ್ಧಿಯಲ್ಲಿ ವಿದ್ಯಾರ್ಥಿ ನಿಲಯಗಳು ವಹಿಸಿದ ಪಾತ್ರವು ಅಸಾಮಾನ್ಯವಾದುದು. ಬಡವರ ಮನೆಗಳಲ್ಲಿ ಮಲಗಲೇ ಜಾಗವಿಲ್ಲ. ಅಂಥಲ್ಲಿ ಓದಲು ಸ್ಥಳವೆಲ್ಲಿ? ಹೀಗಾಗಿ ವಸತಿ ನಿಲಯಗಳಿಗೆ ಬರುವ ವಿದ್ಯಾರ್ಥಿಗಳು ಹೊಸ ಲೋಕವೊಂದನ್ನು ಪ್ರವೇಶಿಸಿ, ಅದರ ಪೂರ್ಣ ಪ್ರಯೋಜನವನ್ನೇ ಪಡೆಯುತ್ತಾರೆ. ಇದರ ಬಗ್ಗೆ ನಿಜವಾಗಲೂ ವಿಶೇಷವಾದ ಒಂದು ಅಧ್ಯಯನವನ್ನೇ ಯಾರಾದರೂ ನಡೆಸಬೇಕು. ಇರಲಿ, ಪ್ರಸ್ತುತ ಈ ವಿಶ್ವವಿದ್ಯಾಲಯದ 1000 ಎಕರೆಗಳ ವಿಸ್ತೀರ್ಣದಲ್ಲಿ ಒಟ್ಟು 12 ನಿಕಾಯಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿಯೊಂದು ನಿಕಾಯದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ 10ಕ್ಕೂ ಮಿಕ್ಕು ಅಧ್ಯಯನ ಕೇಂದ್ರಗಳಿವೆ. ನಾಲ್ಕು ಸ್ವತಂತ್ರವಾದ ವಿಶೇಷ ಅಧ್ಯಯನ ಕೇಂದ್ರಗಳಿವೆ. ಕನ್ನಡ ಅಧ್ಯಯನ ಪೀಠ, ಗ್ರೀಕ್ ಪೀಠ, ಅಂಬೇಡ್ಕರ್ ಪೀಠ( ಸ್ಥಾಪನೆ 2011) ಮೊದಲಾದ ಆರು ಪೀಠಗಳಿವೆ. 2019ರಲ್ಲಿ ಇಲ್ಲಿ 8895 ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದಾರೆ. ಅದರಲ್ಲಿ ಸುಮಾರು 3000 ಮಕ್ಕಳು ಹಿಂದುಳಿದ ಪ್ರದೇಶದ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರು. ವಿಶ್ವವಿದ್ಯಾಲಯದ ಅಧಿಕೃತ ಮಾಹಿತಿಯಂತೆ 2019–20 ರ ಅವಧಿಯಲ್ಲಿ ಶೇಕಡಾ 40 ಕ್ಕೂ ಹೆಚ್ಚು ಮಕ್ಕಳ ತಂದೆ ತಾಯಿಗಳು ಬಡತನದ ರೇಖೆಯಿಂದ ಕೆಳಗೆ ಇರುವವರು. ನ್ಯಾಶನಲ್ ಅಸೆಸ್ಮೆಂಟ್ ಮತ್ತು ಅಕ್ರಿಡಿಯೇಶನ್ ಕೌನ್ಸಿಲ್ ನವರು ಜೆಎನ್‌ಯುವಿಗೆ ನಾಲ್ಕರಲ್ಲಿ 3.9 ಅಂಕ ನೀಡಿ'ಇದು ದೇಶದ ಅತ್ಯುತ್ತಮ ವಿವಿಗಳಲ್ಲಿ ಒಂದು'ಎಂದು ಹೇಳಿತು.

ದೇಶದ ಹಿಂದುಳಿದ ವಿದ್ಯಾರ್ಥಿಗಳ ಆರ್ಥಿಕ ಪರಿಸ್ಥಿತಿಯ ಸುಧಾರಣೆ, ಸಾಂಸ್ಕೃತಿಕ ಶಕ್ತಿಗಳ ವಿಶ್ಲೇಷಣೆ, ವಿವಿಧ ಬಗೆಯ ಶೋಷಣೆಗಳು, ಜಾತಿಗಳ ಕ್ರೌರ್ಯ, ಸಾಮಾಜಿಕ ಪರಿವರ್ತನೆಯ ಸ್ವರೂಪ, ಸಾಮಾಜಿಕ ಬಹಿಷ್ಕಾರಗಳು, ಚರಿತ್ರೆಯಲ್ಲಿ ದಲಿತರ ಸ್ಥಾನಮಾನ, ರಾಜ್ಯಗಳ ಸ್ವಾಯತ್ತೆಯ ಪ್ರಶ್ನೆ, ರಾಷ್ಟ್ರೀಯತೆಯ ನಿಜವಾದ ಅರ್ಥಗಳೇನು? ಸಣ್ಣ ಭಾಷೆಗಳ ಸಬಲೀಕರಣ ಹೇಗೆ ಸಾಧ್ಯ? ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸುತ್ತಲೇ ಜೆಎನ್‌ಯು ಒಂದು ಪ್ರಖರ ಬೌದ್ಧಿಕ ಕೇಂದ್ರವಾಗಿ ಬೆಳೆಯಿತು. ಇಲ್ಲಿನ ಪಠ್ಯಕ್ರಮ ಮತ್ತು ಅಭ್ಯಾಸಗಳ ಕೇಂದ್ರದಲ್ಲಿ ಚಾರಿತ್ರಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾದ ಅಥವಾ ಅಂಚಿಗೆ ಸರಿಸಲಾದ ಜನರೇ ಇದ್ದರು. ಈ ಬಗೆಯ ಚರ್ಚೆಗಳು ರೂಪಿಸುವ ಭಾರತದ ಪರಿಕಲ್ಪನೆಯಲ್ಲಿ ಇತಿಹಾಸದ ಬಗೆಗೆ ಕಲ್ಪಿತ ಭ್ರಮೆಗಳಾಗಲೀ, ವರ್ತಮಾನದ ಕಟು ವಾಸ್ತವಗಳ ಕುರಿತಾಗಿ ದಿವ್ಯ ನಿರ್ಲಕ್ಷ್ಯವೂ ಇರುವುದಿಲ್ಲ. ಈ ಅರ್ಥದಲ್ಲಿ ಅಂಬೇಡ್ಕರ್ ಅವರು ಜೆಎನ್‌ಯುವಿನ ಅಂತರಂಗದಲ್ಲಿ ಸದಾ ಇದ್ದರು, ಈಗ ಇದ್ದಾರೆ ಮತ್ತು ಮುಂದೆಯೂ ಇರುತ್ತಾರೆ. ತೀರಾ ಈಚಿನವರೆಗೂ




ಇದೊಂದು ಅಪರಾಧವೆಂದು ಪರಿಗಣಿತವಾಗಿರಲಿಲ್ಲ, ವಿವಿಯ ಈ ಚೌಕಟ್ಟಿನಲ್ಲಿ ಕಲಿತ ವಿದ್ಯಾರ್ಥಿಗಳು ದೇಶದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇಲ್ಲಿನ ಪ್ರಾಧ್ಯಾಪಕರು ಬರೆದ ಸಂಶೋಧನಾ ಲೇಖನಗಳಿಗೆ ಅಂತಾರಾಷ್ಟ್ರೀಯವಾದ ಮನ್ನಣೆ ದೊರಕಿದೆ. ಮಾನವಿಕಗಳಲ್ಲಿ ಮತ್ತು ಜೀವ ವಿಜ್ಞಾನಗಳಲ್ಲಿ ಇಲ್ಲಿನ ಪ್ರಾಧ್ಯಾಪಕರ ಸಾಧನೆಗಳ ಕುರಿತು ದೇಶ ವಿದೇಶಗಳಲ್ಲಿ ಉನ್ನತ ಮಟ್ಟದ ಚರ್ಚೆಗಳು ನಡೆದಿವೆ. ಇಲ್ಲಿ ಕಲಿತ ಮಹನೀಯರನೇಕರು ದೇಶದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅಂಥವರಲ್ಲಿ ರಿಸರ್ವ ಬ್ಯಾಂಕಿನ ಸಹ ಗವರ್ನರ್ ಆಗಿರುವ ಹರೂನ್ ರಶೀದ್ ಖಾನ್, ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ

# ಅಂಬೇಡ್ಕರ್ ಮತ್ತು ಜೆಎನ್‌ಯು




ಮುಜಾಫರ್ ಆಲಂ, ಇದೀಗ ಕೇಂದ್ರ ಸರಕಾರದಲ್ಲಿ ಸಚಿವರಾಗಿರುವ ನಿರ್ಮಲಾ ಸೀತಾರಾಮನ್ ಮತ್ತು ಜೈಶಂಕರ್ ಅವರು ಪ್ರಮುಖರು. ಕೋಮುವಾದೀ ನೆಲೆಗಳಿಗೆ ಕೊನೆಹಾಡಿ, ಅರ್ಥಶಾಸ್ತ್ರದ ಆಧಾರದ ಮೇಲೆ ಆಧುನಿಕ ಭಾರತದ ಇತಿಹಾಸ ಬರೆದ ಪ್ರೊ. ಬಿಪಿನ್ ಚಂದ್ರ, ಸಂಸ್ಕೃತ ಕಾವ್ಯಗಳು, ಶಾಸ್ತ್ರಗಳು, ಹಳೆಯ ಮನೆಗಳು, ಜನರ ವಲಸೆ, ನೇಗಿಲಿನ ಮೊನೆ ಇತ್ಯಾದಿ ನವೀನ ಆಕರಗಳನ್ನು ಬಳಸಿ ಪ್ರಾಚೀನ ಭಾರತದ ಇತಿಹಾಸವನ್ನು ಹೊಸದಾಗಿ ಬರೆದ ಪ್ರೊ. ರೋಮಿಲಾ ಥಾಪರ್, ಹಿಂದಿ ಸಾಹಿತ್ಯ ವಿಮರ್ಶೆಗೆ ಚೈತನ್ಯ ತಂದುಕೊಟ್ಟ ಪ್ರೊ.ನಾಮವರ್ ಸಿಂಗ್, ಮೊದಲಾದವರು ತಮ್ಮತಮ್ಮ ಕ್ಷೇತ್ರಗಳಲ್ಲಿ ಅಸಾಮಾನ್ಯ ಸಾಧನೆ ಮಾಡಿ ತಮ್ಮದೇ ಆದ ಒಂದು ಬೌದ್ಧಿಕ ಪರಂಪರೆಯನ್ನೇ ನಿರ್ಮಿಸಿದರು. ಇವರ ವಾದವನ್ನು ಒಪ್ಪುವವರೂ, ಒಪ್ಪದವರೂ ಇವರನ್ನೇ ಕೇಂದ್ರವಾಗಿರಿಸಿಕೊಂಡು ತಮ್ಮ ವಾದ ಮಂಡನೆ ಮಾಡುತ್ತಾರೆ.

ಎಡಪಕ್ಷಗಳ ಪ್ರಮುಖ ನೇತಾರರಾಗಿರುವ ಸೀತಾರಾಮ ಯೆಚೂರಿ ಮತ್ತು ಪ್ರಕಾಶ್‌ಕಾರೆಟ್, ಪ್ರಖ್ಯಾತ ಚುನಾವಣಾ ವಿಶ್ಲೇಷಕ ಡಾ.ಯೋಗೇಂದ್ರಯಾದವ್, ಲಿಬಿಯಾದ ಪ್ರಧಾನ ಮಂತ್ರಿ ಅಲಿ ಜೆದಾನ್ , ನಮ್ಮ ನಡುವಿನ ಅಗ್ರಮಾನ್ಯ ಚಿಂತಕ ಪಿ ಸಾಯಿನಾಥ್, ಮೊದಲಾದವರು ಜೆಎನ್‌ಯುವಿನ ಹಿರಿಯ ವಿದ್ಯಾರ್ಥಿಗಳು. ಈ ಚಿಂತಕರು ಭಾರತದ ಇತಿಹಾಸವನ್ನಾಗಲೀ ವರ್ತಮಾನವನ್ನಾಗಲೀ ಗ್ರಹಿಸಿದ ಬಗೆಗೆ ಮತ್ತು ಅದನ್ನು ವಿಶ್ಲೇಷಿಸುತ್ತಿದ್ದ ಬಗೆಗೆ ವಿದ್ವತ್ ವಲಯದಲ್ಲಿ ಇಂದಿಗೂ ಅಪಾರ ಗೌರವವಿದೆ. ಈ ವಿವಿಯಲ್ಲಿ ಅಲ್ಲಿಇಲ್ಲಿ ಓಡಾಡುತ್ತಾ, ಮರದ ಕೆಳಗೆ ನಿಂತು ವಿದ್ಯಾರ್ಥಿಗಳೊಡನೆ ನಿತ್ಯ ಹರಟುವ ಸುದೀಪ್ತಾ ಕವಿರಾಜ್, ಪ್ರಭಾತ್ ಪಟ್ನಾಯಕ್, ಅಮಿತಾಬ್ ಮಟ್ಟೂ, ಎಚ್‌ಎಸ್ ಶಿವಪ್ರಕಾಶ್, ರುಸ್ತುಂ ಭರೂಚಾ, ಜಯತಿಘೋಷ್, ಜಾನಕಿ ನಾಯರ್, ಸುಧಾ ಪೈ, ಅನ್ವರ್ ಪಾಶಾ, ಆಯೆಷಾಕಿದ್ವಾಯಿ, ಮಹಾಲಕ್ಷ್ಮಿ , ಗೋಪಾಲ ಗುರು, ರಾಕೇಶ್ ಬಟಾಬಿಯಾಲ್, ಮೊದಲಾದವರು ಎಲ್ಲರ ಕಣ್ಮಣಿಗಳು. ಇವರೆಲ್ಲರೂ ತಮ್ಮತಮ್ಮ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದವರೇ. ಇಲ್ಲಿ ಕಲಿತ ನೂರಾರು ವಿದ್ಯಾರ್ಥಿಗಳು ಇಂದು ದೇಶದ ವಿವಿಧೆಡೆಗಳಲ್ಲಿ ಯಶಸ್ವೀ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅರವಿಂದ್ ಗುಪ್ತಾ, ವೇಣುರಾಜಮಣಿ, ಸಂಜಯ ಬಾರೂ, ತಲತ್‌ಅಹ್ಮದ್, ಅಭಿಜಿತ್ ಬ್ಯಾನರ್ಜೀ, ರಂಜಿತ್ ನಾಯಕ್, ವಿನೀತ್ ನಾರಾಯಣ್, ಮೊದಲಾದವರು ಕೆಲವು ಉದಾಹರಣೆಗಳಷ್ಟೇ.

ಯಾವ ಹಮ್ಮು ಬಿಮ್ಮುಇಲ್ಲದೆ, ಯಾವುದೋ ದಾಬಾದೊಳಗೆ ಕುಳಿತು ಚಹಾ ಕುಡಿಯುತ್ತಾ ವಿವಿಧ ವಿಷಯಗಳ ಬಗೆಗೆ ಮುಕ್ತವಾಗಿ ಹರಟುವ ಇಲ್ಲಿನ ವಿದ್ವಾಂಸರು ವಿದ್ಯಾರ್ಥಿಗಳೊಡನೆ ಆಳವಾದ ಸಂವಾದ ನಡೆಸುತ್ತಾತಾವೂ ಬೆಳೆಯುತ್ತಾರೆ, ವಿದ್ಯಾರ್ಥಿಗಳನ್ನೂ ಬೆಳೆಸುತ್ತಾರೆ. ಇಂಥ ಅನೌಪಚಾರಿಕತೆಯೇ ವಿಶ್ವವಿದ್ಯಾಲಯವನ್ನು ಬೌದ್ಧಿಕವಾಗಿ ಬೆಳೆಸಿದೆ. ಚರ್ಚೆ, ವಾಗ್ವಾದ, ಮತ್ತು ಆರೋಗ್ಯಕರ ಭಿನ್ನಮತಗಳ ಮೂಲಕ ಇಲ್ಲಿನ ಜಗತ್ತು ದಿನಾ ತೆರೆದುಕೊಳ್ಳುತ್ತದೆ. ಬೆಳೆಯುತ್ತಿರುವ ಕೋಮುವಾದ, ಆತಂಕವಾದ, ಕೃಷಿ ಸಮಸ್ಯೆಗಳು, ರೈತರ ಆತ್ಮಹತ್ಯೆ, ಸರಕಾರದ ಆರ್ಥಿಕ ನೀತಿ, ನಿವಾರಿಸಿಕೊಳ್ಳಲಾಗದ ಬಡತನ, ದಲಿತರ ಮಾರಣ ಹೋಮ, ಮಹಿಳಾ ಶೋಷಣೆ, ಪರಿಸರ ನಾಶ, ಅಂತಾರಾಷ್ಟ್ರೀಯ ಕಾನೂನುಗಳು, ವಿದೇಶೀನೀತಿಗಳ ಸಮಸ್ಯೆಗಳು, ಹೀಗೆ ಹತ್ತು ಹಲವು ವಿಷಯಗಳ ಮೇಲೆ ಇಲ್ಲಿ ನಿತ್ಯಚರ್ಚೆ ನಡೆಯುತ್ತದೆ. ಅದಕ್ಕೆ ಸಂಬಂಧಿಸಿದ ಸಾಕ್ಷ್ಯ ಚಿತ್ರಗಳ ಪ್ರದರ್ಶನ, ಪೋಸ್ಟರ್‌ಗಳ ರಚನೆ, ಕವಿತೆಗಳ ಬರೆಹ ಇಲ್ಲಿನ ನಿತ್ಯ ಚಟುವಟಿಕೆಗಳು. ಈ ಕಾರಣಕ್ಕಾಗಿಯೋ ಏನೋ ಜಗತ್ತಿನಾದ್ಯಂತದಿಂದ ವಿದ್ಯಾರ್ಥಿಗಳು ಇಲ್ಲಿಗೆ ಬರಲು ಇಚ್ಛಿಸುತ್ತಾರೆ. ಇಲ್ಲಿನ ಮಕ್ಕಳು 'ನಾವು ಜೆಎನ್‌ಯುವಿನಲ್ಲಿ ಕಲಿತವರು'ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಒಂದು ದೇಶದ ಪ್ರಗತಿಯನ್ನು ಅದರ ಬೌದ್ಧಿಕ ಬೆಳವಣಿಗೆಯ ಮೂಲಕ ಗುರುತಿಸುವ ಕ್ರಮವಿದ್ದರೆ, ಅಂಥ ಕಡೆ ಜೆಎನ್‌ಯುವಿಗೆ ಒಂದು ಪ್ರಮುಖ ಸ್ಥಾನವಿದೆ.

ಇಂಥ ವಿಶ್ವವಿದ್ಯಾಲಯವೊಂದರ ಗಂಭೀರ ಚಿಂತನಾಕ್ರಮವನ್ನು' ತುಕುಡೇಗ್ಯಾಂಗ್', ' ಕಮ್ಯುನಿಸ್ಟರಹಬ್' ' ಅರ್ಬನ್ ನಕ್ಸಲ್ಸ್', ಖಾನ್ ಮಾರ್ಕೆಟ್‌ಗ್ಯಾಂಗ್' ಎಂದೆಲ್ಲಾ ಕರೆಯುವುದು ಒಂದು ಬಗೆಯ ಸರಳ ರಾಜಕೀಯ ಅಷ್ಟೇ. ಅವು ಶೈಕ್ಷಣಿಕ ಪ್ರತಿಕ್ರಿಯೆಗಳಲ್ಲ. ಹೀಗೆ ಕರೆದವರಲ್ಲಿ ಹೆಚ್ಚಿನವರು ಜೆಎನ್‌ಯು ಮಾತ್ರವಲ್ಲ ಯಾವುದೇ ವಿಶ್ವವಿದ್ಯಾಲಯದ ಮೆಟ್ಟಲು ಕೂಡಾ ಹತ್ತಿದವರಲ್ಲ. ಇಂಥ ಆರೋಪಗಳಿಂದ ಜೆಎನ್‌ಯು ಇದುವರೆಗೆ ಮಾಡಿದ ಸಾಧನೆಗಳನ್ನು ಗೌಣಗೊಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಏಕೆಂದರೆ, ಜೆಎನ್‌ಯು ತನ್ನ ಅಂತರ್ಯದಲ್ಲಿ ನಿಯತವಾಗಿ ಸ್ವಯಂವಿಮರ್ಶೆಗೊಳಪಡುತ್ತಿರುವ ಅನೇಕ ಸಿದ್ಧಾಂತಗಳನ್ನು ಹೊಂದಿದೆ. ಈ ಕಾರಣದಿಂದಾಗಿಯೇ ಎಷ್ಟೇ ಪ್ರಯತ್ನಿಸಿದರೂ ಆಳುವ ವ್ಯವಸ್ಥೆಗೆ ಜೆ.ಎನ್.ಯುವಿನ ಗೌರವವನ್ನು ಹಾಳು ಮಾಡಲು ಸಾಧ್ಯವಾಗಲಾರದು.

ಒಂದು ಅಂದಾಜಿನ ಪ್ರಕಾರ ಜೆಎನ್‌ಯುವಿನಲ್ಲಿ ವಿವಿಧ ಸಿದ್ಧಾಂತಗಳಿಗೆ ಸೇರಿದ ಸುಮಾರು 29 ಗುಂಪುಗಳಿವೆ. ಅವುಗಳಲ್ಲಿ ವಿವಿಧ ಚಿಂತನಾಕ್ರಮಗಳ ಮಾರ್ಕ್ಸ್‌ವಾದಿಗಳಿದ್ದಾರೆ, ಅಂಬೇಡ್ಕರ್‌ವಾದಿಗಳಿದ್ದಾರೆ, ಪೆರಿಯಾರ್‌ವಾದಿಗಳಿದ್ದಾರೆ, ಗಾಂಧೀವಾದಿಗಳಿದ್ದಾರೆ, ಲೋಹಿಯಾವಾದಿಗಳಿದ್ದಾರೆ. ಉದಾರವಾದಿಗಳಿದ್ದಾರೆ, ಮಾನವತಾವಾದಿಗಳಿದ್ದಾರೆ, ಬಲಪಂಥೀಯರಿದ್ದಾರೆ. ಕಾಲಕಾಲಕ್ಕೆ ನಡೆಯುವ ಚರ್ಚೆಗಳಲ್ಲಿ ಈ ಭಿನ್ನ ಗುಂಪಿನ ವಿದ್ವಾಂಸರು ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ಅಭಿಪ್ರಾಯಗಳನ್ನು ಖಚಿತವಾಗಿ ಮಂಡಿಸುತ್ತಾರೆ. ಇದರಿಂದ ವಿಶ್ವವಿದ್ಯಾಲಯದ ನಿಜವಾದ ಅರ್ಥ ನಿರಂತರವಾಗಿ ಸಾಕಾರಗೊಳ್ಳುತ್ತಲೇ ಹೋಗುತ್ತದೆ. ಇದು ಕಾರಣವಾಗಿ ಇವತ್ತು ಕೂಡಾ ಜೆಎನ್‌ಯುವಿನಲ್ಲಿ ವಿಚಾರಗಳು ಹೊಸ ರೂಪವನ್ನು ಪಡೆದುಕೊಳ್ಳುತ್ತಲೇ ಇವೆ. ಪುಸ್ತಕ ಪ್ರೀತಿ ಇರುವವರು ತಮಗೆ ಬೇಕಾದ ಪುಸ್ತಕಗಳನ್ನು ಓದಿ ಚರ್ಚಿಸುತ್ತಿದ್ದಾರೆ. ಅಂತಹ ಚರ್ಚೆಗಳಲ್ಲಿ ಮಾರ್ಕ್ಸ್‌ನ ಸಮಸ್ಯೆ ಏನು? ಅಂಬೇಡ್ಕರ್ ವಿಚಾರಗಳು ಪ್ರಸ್ತುತವಾಗಿವೆ ನಿಜ, ಆದರೆ ಅದು ದೋಷಾತೀತವಾಗಿದೆಯೇ? ಎಂಬಿತ್ಯಾದಿ ಸಂಗತಿಗಳು ಪ್ರಮುಖ ಸ್ಥಾನ ಪಡೆಯುತ್ತಿವೆ. ಬೋಧನೆ ಮತ್ತು ಸಂಶೋಧನೆಗಳು ಪರಸ್ಪರ ಒಂದನ್ನು ಇನ್ನೊಂದು ಪ್ರಭಾವಿಸುತ್ತಾ ಚರ್ಚೆಯ ಮೂಲಕ ಅನೇಕ ವಿಷಯಗಳನ್ನು ಬಲಪಡಿಸುತ್ತಿವೆ. ಜಗತ್ತಿನ ಪರಿಕಲ್ಪನೆಗೆ ಸರಿಯಾಗಿ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಆಲೋಚನೆ ಬರುವಂತೆ ಮಾಡುವುದಷ್ಟೇ ಅಲ್ಲಿ ನಡೆಯುವ ಕೆಲಸ.

ಆದ್ದರಿಂದ, ಜೆಎನ್‌ಯು ವಿನಲ್ಲಿ ಅಂಬೇಡ್ಕರ್ ಅವರ ಕುರಿತು ತಿಳಿದುಕೊಳ್ಳುವುದೆಂದರೆ, ಅದಕ್ಕೆ ಪೂರ್ವಭಾವಿಯಾಗಿ ಅಂಬೇಡ್ಕರ್ ಅವರ ಬರೆಹಗಳನ್ನು ಮೂಲದಲ್ಲಿಯೇ ಪೂರ್ತಿಯಾಗಿ ಓದುವುದು, ಆನಂತರ ಅವುಗಳ ಬಗ್ಗೆ ಬಂದಿರುವ ಪರ–ವಿರೋಧಗಳನ್ನು ಅಭ್ಯಾಸ ಮಾಡುವುದು, ವಿವಿಧ ವಿದ್ವಾಂಸರುಗಳ ಜೊತೆಗೆ ಅವುಗಳ ಬಗ್ಗೆ ಚರ್ಚಿಸುವುದು, ವಿಚಾರ

(49ನೇ ಪುಟಕ್ಕೆ)

**"ಭಾರತದ ಸಿನಿಮಾರಂಗವೇ ಅಂತರ್ಯದಲ್ಲಿ ಜಾತಿ ಆಧಾರಿತವಾಗಿದೆ, ಪೂರ್ವಗ್ರಹಪೀಡಿತವಾಗಿದೆ ಮತ್ತು ತಾಂತ್ರಿಕ ಪರಿಣಿತಿ ಎಂಬುದೆ ಕಲೆಗಾರಿಕೆ ಎನ್ನುವ ಭ್ರಮೆಗೆ ಒಳಗಾಗಿದೆ. ಈ ಮನಸ್ಥಿತಿಗೆ ದಲಿತರು ಎಂದಿಗೂ ಮೊದಲ ಆದ್ಯತೆಯಾಗುವುದಿಲ್ಲ. ದಲಿತರನ್ನು ಒಳಗೊಳ್ಳುವುದು ಒಂದು ನೈತಿಕತೆ ಎಂದು ಇವರಿಗೆ ಅನಿಸಿಲ್ಲ. ನಿಮ್ಮ ಸಿನಿಮಾಗಳಲ್ಲಿ ಕಥಾನಾಯಕರು/ನಾಯಕಿರಾಗಿರುವ ದಲಿತ ಪಾತ್ರಗಳು ಇಲ್ಲವಲ್ಲ ಯಾಕೆ ಎಂದು ಪ್ರಶ್ನಿಸಿದರೆ ಇಲ್ಲಿನ ಬಹುಪಾಲು ನಿರ್ದೇಶಕರು ಆರಂಬದಲ್ಲಿ ತಡಬಡಾಯಿಸುತ್ತಾರೆ ನಂತರ ಮಾರುಕಟ್ಟೆಯನ್ನು ದೂಶಿಸುತ್ತಾರೆ. ಇವರಿಂದ ವಿಭಿನ್ನ ಸಿನಿಮಾಗಳನ್ನು ನಿರೀಕ್ಷಿಸಿಲು ಸಾದ್ಯವಿಲ್ಲ. ಆದರೆ 21ನೆ ಶತಮಾನದಲ್ಲಿ ಕೋರ್ಟ, ಫಂಡ್ರಿ, ಮದ್ರಾಸ್, ಕಾಲಾ, ಸೈರಟ್, ಮಸಾನ್, ನ್ಯೂಟನ್, ಅಸುರನ್‌ನಂತಹ ಸಿನಿಮಾಗಳು ಈ ವೈದಿಕಶಾಹಿ ಮನೋಗತವನ್ನು ದಿಕ್ಕರಿಸಿರುವುದು ಮತ್ತೊಂದು ಕಥನ"**




# ಜಾತಿ ವ್ಯವಸ್ಥೆ ಮತ್ತು ಭಾರತೀಯ ಸಿನಿಮಾರಂಗ: 'ಅಚೂತ್ ಕನ್ಯ' ದಿಂದ 'ಅಸುರನ್'ತನಕ

ಜಾತಿ ಎನ್ನುವುದು ಭಾರತೀಯ ಸಮಾಜದ ಗಂಬೀರವಾದ ಕಳಂಕ. ಇದು ಗುಣಪಡಿಸಲಾಗದ ರೋಗವಾಗಿ ಉಳಿದುಕೊಂಡಿದೆ. ಇಲ್ಲಿ ಜಾತಿಯೆ ಒಂದು ಧರ್ಮವಾಗಿದೆ. ಹುಟ್ಟಿನ ಆದಾರದಲ್ಲಿ ವ್ಯಕ್ತಿಯ ಜಾತಿಯನ್ನು ಗುರುತಿಸುವ ಹಿಂದೂ ದರ್ಮವು ಜಾತಿಗಳನ್ನು ವರ್ಗೀಕರಿಸುತ್ತದೆ. ಆ ಜಾತಿ ಆದಾರದ ಮೇಲೆ ವರ್ಣಾಶ್ರಮದ ವ್ಯವಸ್ಥೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ಜಾತಿ ಪ್ರತ್ಯೇಕತೆ ಮತ್ತು ತಾರತಮ್ಯವನ್ನು ಗೋಚರವಾಗಿಯೂ ಮತ್ತು ಅಗೋಚರವಾಗಿಯೂ ಆಚರಿಸಲಾಗುತ್ತದೆ. ಜಾತಿ ಶ್ರೇಷ್ಟತೆ ಯಾವ ಮಟ್ಟದಲ್ಲಿಯೆಂದರೆ ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲಿರುವ ಜಾತಿಯು ತನ್ನ ಕೆಳಗಿನ ಜಾತಿಯನ್ನು ಶೋಷಿಸುತ್ತದೆ ಮತ್ತು ತಾನು ಸ್ವತಃ ತನ್ನ ಮೇಲಿನ ಜಾತಿಯಿಂದ ಶೋಷಣೆಗೆ ಒಳಗಾಗುವುದನ್ನು ಭಯಬಕ್ತಿಯಿಂದ ಸ್ವೀಕರಿಸುತ್ತದೆ. ಪ್ರತಿಯೊಂದು ಮೇಲ್ಜಾತಿ, ಮದ್ಯಮ ಜಾತಿಯು ಅಸ್ಪೃಶ್ಯತೆ ಮತ್ತು ಶೋಷಣೆಯನ್ನು ಹಕ್ಕು ಎಂಬಂತೆ ಸಾಧಿಸುತ್ತಾರೆ. ಧರ್ಮದ ನಂಬಿಕೆಯೊಂದಿಗೆ ಈ ಜಾತಿಪದ್ಧತಿಯು ಆಳವಾಗಿ ಬೇರುಬಿಟ್ಟಿದೆ ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ಈ ಜಾತಿ ಪದ್ಧತಿಯು ಮತ್ತಷ್ಟು ಗಟ್ಟಿಗೊಂಡಿದೆ.

9, ಜನವರಿ 1917ರಂದು ಕೊಲಂಬಿಯ ವಿಶ್ವವಿದ್ಯಾಯಲದಲ್ಲಿ "ಭಾರತದಲ್ಲಿ ಜಾತಿಗಳು : ಅವುಗಳ ಕಾರ್ಯವಿದಾನ, ಉಗಮ ಮತ್ತು ಬೆಳವಣಿಗೆ" ಎನ್ನುವ ಸಂಶೋದನ ಪ್ರಬಂದ ಮಂಡಿಸಿದ ಅಂಬೇಡ್ಕರ್ ಅವರು (ಆಗ ಅವರಿಗೆ ಕೇವಲ 25 ವರ್ಶಗಳು) "ಸಮಾಜದಲ್ಲಿನ ಉಪಜಾತಿಗಳು ಸಹಜವಾದದ್ದು. ಆದರೆ ಈ ಉಪಜಾತಿಗಳ ಅಸಹಜತೆಯೆಂದರೆ ಅವು ವರ್ಗ ವ್ಯವಸ್ಥೆಯ ತೆರೆದ ಬಾಗಿಲುಗಳ ಗುಣಗಳನ್ನು ಕಳೆದುಕೊಂಡಿರುವುದು ಮತ್ತು ಅವು ಜಾತಿಗಳು ಎನ್ನುವ ಸ್ವಯಂ ಅಡಕಗೊಂಡ ಘಟಕಗಳಾಗಿವೆ. ಇಲ್ಲಿ ಪ್ರಶ್ನೆ ಇರುವುದು : ಬಾಗಿಲುಗಳನ್ನು ಮುಚ್ಚಿಕೊಳ್ಳಬೇಕೆಂದು ಜಾತಿಗಳಿಗೆ ಒತ್ತಾಯಿಸಲಾಗಿದೆಯೆ? ಅಥವಾ ಸ್ವಇಚ್ಚೆಯಿಂದ ಬಾಗಿಲುಗಳನ್ನು ಮುಚ್ಚಿಕೊಂಡರೆ? ಇಲ್ಲಿನ ಉತ್ತರಕ್ಕೆ ಎರಡು ಟಿಸಿಲುಗಳಿವೆ : ಕೆಲವರು ಬಾಗಿಲು ಮುಚ್ಚಿದರು, ಇತರರು ತಮ್ಮ ವಿರುದ್ಧ ಬಾಗಿಲುಗಳನ್ನು ಮುಚ್ಚಲಾಗಿದೆ ಎಂದು ಕಂಡುಕೊಂಡರು" ಎಂದು ಹೇಳುತ್ತಾರೆ.

ಇಂದು ಭಾರತೀಯ ಸಿನಿಮಾರಂಗಕ್ಕೆ 100 ವರ್ಶ ತುಂಬಿದೆ. ಈ ಕಾಲಘಟ್ಟದಲ್ಲಿ ಭಾರತೀಯ ಸಿನಿಮಾರಂಗಕ್ಕೆ ಇಂತಹ ಅಸಮಾನತೆಯ, ಶ್ರೇಣೀಕೃತ ಜಾತಿ ಪದ್ಧತಿಯ ಮುಚ್ಚಿದ ಬಾಗಿಲುಗಳನ್ನು ತೆರೆಯಬೇಕೆನಿಸಿದೆಯೆ? ಅನಿಸಿದ್ದರೆ ಯಾವ ರೀತಿ ತೆರೆದು ನೋಡಲು ಪ್ರಯತ್ನಿಸಿದೆ? ಕಂಡುಕೊಂಡ, ಅನುಸರಿಸಿದ ವಿದಾನಗಳೇನು? ಜಾತಿ ವ್ಯವಸ್ಥೆ ಕುರಿತಾಗಿ ಸಿನಿಮಾರಂಗದ ಅರಿವು ಮತ್ತು ಸಂವೇದನೆ ಯಾವ ಮಟ್ಟದಲ್ಲಿದೆ? ಅನೇಕ ಜನಪ್ರಿಯ ಸಿನಿಮಾಗಳನ್ನು ಹತ್ತಾರು ಬಾರಿ ಮತ್ತೆ ಮತ್ತೆ ನೋಡುವುದರ ಮೂಲಕ ಆ ಸಿನಿಮಾಗಳ ಯಶಸ್ಸಿಗೆ ಕಾರಣರಾಗುವ ತಳಸಮುದಾಯಗಳನ್ನು ಸಿನಿಮಾಗಳಲ್ಲಿ ಯಾವ ರೀತಿ ಪ್ರತಿನಿದಿಸಲಾಗಿದೆ? ಶೇಕಡಾ 60% ಕ್ಕಿಂತಲೂ ಹೆಚ್ಚಿನ ಪ್ರಮಾಣದ ಜನಸಂಖ್ಯೆಯಲ್ಲಿರುವ ತಳಸಮುದಾಯಗಳ ಪ್ರಾತಿನಿದ್ಯ ಸಿನಿಮಾರಂಗದಲ್ಲಿ ಶೇಕಡಾ 0.1% ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿದೆ. ಇಲ್ಲಿ ಪ್ರಾತಿನಿದ್ಯವೆಂದರೆ ಸಿನಿಮಾ ಕತೆಗಳ ಪಾತ್ರಗಳಾಗಿಯೂ ಮತ್ತು ಆ ಪಾತ್ರಗಳನ್ನು ಅಬಿನಯಿಸುವ ಕಲಾವಿದರಾಗಿಯೂ, ನಿರ್ದೇಶಕರು ಮತ್ತು ಇತರ ತಂತ್ರಜ್ಞರನ್ನು ಪರಿಗಣಿಸಬೇಕು. ಇದಕ್ಕೆ ಉತ್ತರಗಳೂ ಸಂಕೀರ್ಣವಾಗಿವೆ. ಸಂಪೂರ್ಣ ಜಾತಿ ಆಧಾರಿತ ಸಮಾಜದಲ್ಲಿ ಅದರ ಭಾಗವಾಗಿರುವ ಸಿನಿಮಾದ ಜವಬ್ದಾರಿಯೂ ಗುರುತರವಾಗಿರುತ್ತದೆ. ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಕ್ಷೇತ್ರಗಳಲ್ಲಿ ಸ್ಥಿರವಾಗಿ ನೆಲೆಯೂರಿದ ಜಾತಿಯನ್ನು ಭಾರತೀಯ ಸಿನಿಮಾ ವ್ಯಾಖ್ಯಾನಿಸಿದ ಮಾದರಿ ಏನು? ಅಂಬೇಡ್ಕರ್, ಫುಲೆ, ಅಯೋತಿದಾಸ್, ಅಯ್ಯಂಕಾಳಿ ಮುಂತಾದ ವಿಮೋಚಕರ ಬದುಕು ಮತ್ತು ಚಿಂತನೆಗಳಿಂದ ಜಾತಿ ಪದ್ಧತಿಯನ್ನು ಅರಿತುಕೊಳ್ಳಲು ನಿರ್ದೇಶಕರು ಪ್ರಯತ್ನಿಸಿದರೆ ಎನ್ನುವ ಪ್ರಶ್ನೆಗೆ ಇಲ್ಲವೆ ಇಲ್ಲ ಎನ್ನುವ ಉತ್ತರ ದೊರಕುತ್ತದೆ. ಕೆಲವು ಉದಾಹರಣೆಗಳನ್ನು ಹೊರತುಪಡಿಸಿ ಇಲ್ಲಿನ ನಿರ್ದೇಶಕರು ಜಾತಿಯನ್ನು ಮೇಲ್ಮಟ್ಟದಲ್ಲಿ, ತೆಳುವಾಗಿ ಕಪ್ಪುಬಿಳುಪು ದೃಶ್ಟಿಕೋನದ ಮೂಲಕ ಅರ್ಥೈಸಲು ಹೆಣಗಿದ್ದಾರೆ. ಅನೇಕ ಸಂದರ್ಬಗಳಲ್ಲಿ ಜಾತಿ ಸಂಘರ್ಶವನ್ನು ವರ್ಗ ಸಂಘರ್ಶದ ಮಟ್ಟಕ್ಕೆ ಇಳಿಸಿದ್ದಾರೆ. ಮನೋರಂಜನೆ ಪ್ರದಾನವಾಗಿರುವ ಸಿನಿಮಾಗಳಲ್ಲಿ ಜಾತಿ ಕುರಿತಾಗಿ ಪ್ರಸ್ತಾಪವೆ ಇಲ್ಲ. ಜಾತಿ ವಸ್ತುವನ್ನು ಆಯ್ಕೆ ಮಾಡಿಕೊಂಡ

# ಸೀಮಾತೀತ ಸಿನಿಮಾ




ಬಿ ಶ್ರೀಪಾದ ಭಟ್

# ಅಂಬೇಡ್ಕರ್ ವಿಶೇಷಾಂಕ

ಬೆರಳೆಣಿಕೆಯಷ್ಟು ಸಿನಿಮಾಗಳಲ್ಲಿ ಕೇವಲ ಭಾವುಕತೆ, ಮೇಲೋಡ್ರಾಮವೇ ಪ್ರಧಾನವಾಗಿ ನಿರೂಪಿತವಾಗಿದೆ. ಇಲ್ಲಿ ಸಂಘರ್ಶದ ಪ್ರಶ್ನೆಯೆ ಉದ್ಭವಿಸುವುದಿಲ್ಲ ಏಕೆಂದರೆ ಸ್ವತಃ ನಿರ್ದೇಶಕನಿಗೆ ಅದರ ಅಗತ್ಯವಿಲ್ಲ ಮತ್ತು ಅರಿವೂ ಇಲ್ಲ. ಈ ನಿರ್ದೇಶಕರಿಗೆ ತಳ ಸಮುದಾಯಗಳ ನೆಲಸಂಸ್ಕೃತಿ, ಬಹುತ್ವ, ಸಮಾಜೋ–ಸಾಂಸ್ಕೃತಿಕ ಆಯಾಮಗಳು ಗೊತ್ತಿಲ್ಲ. ಅನೇಕ ಸಿನಿಮಾಗಳಲ್ಲಿ ತಳ ಸಮುದಾಯಗಳನ್ನು ಜಾತಿ ಹಿನ್ನೆಲೆಯಲ್ಲಿ ಪರಿಗಣಿಸುವುದಿಲ್ಲ, ಬದಲಿಗೆ ಇವರೆಲ್ಲಾ ಕೆಳವರ್ಗದವರು, ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದಾರೆ ಅತ್ಯಂತ ನಿರ್ಗತಿಕ ಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆಂದು ತೋರಿಸುತ್ತ ಅವರು ಬಡತನದಲ್ಲಿ ಬಳಲುತ್ತಿರುವ ಅನ್ಯಗ್ರಹದ ಜೀವಿಗಳು ಎಂಬಂತೆ ಬಿಂಬಿಸಿದ್ದಾರೆ. ಇವರೆಲ್ಲಾ ಸದಾ ಹರಿದ ಚಿಂದಿ ಬಟ್ಟೆಯನ್ನುಟ್ಟಿರುತ್ತಾರೆ, ಗುಡಿಸಲುಗಳಲ್ಲಿ ವಾಸಿಸುತ್ತಿರುತ್ತಾರೆ ಮತ್ತು ಸದಾಕಾಲವೂ ಬೆನ್ನು ಬಾಗಿಸಿ, ಕೈ ಮುಗಿದುಕೊಂಡು ನಿಂತಿರುತ್ತಾರೆ. ಭಾರತದ ನಿರ್ದೇಶಕರು ತಳ ಸಮುದಾಯಗಳ ಬಾಶೆ, ಬದುಕನ್ನು ಕೀಳಾಗಿ ಚಿತ್ರಿಸಿದ್ದಾರೆ. ಇವರು ಸದಾ ಅನುಕಂಪಕ್ಕೆ ಮತ್ತು ತಿರಸ್ಕಾರಕ್ಕೆ, ನಗೆಪಾಟಲಿಗೆ ಗುರಿಯಾಗುವಂತೆ ನಿರೂಪಿಸಿದ್ದಾರೆ. ಮತ್ತೊಂದು ಸಂಗತಿಯೆಂದರೆ ತಳಸಮುದಾಯಗಳ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸುವುದೂ ಸಹ ಮೇಲ್ಜಾತಿ ನಾಯಕರು. ಇದು ಭಾರತದ ಮುಖ್ಯವಾಹಿನಿ ಸಿನಿಮಾರಂಗವು ಜಾತಿಯನ್ನು ಒಂದು ವರ್ಗವಾಗಿ ನಿರೂಪಿಸಿದ ಅತ್ಯಂತ ಘಾತುಕ ಚಿತ್ರಣ. ಉದಾಹರಣೆಗೆ ಕರಣ್ ಜೋಹರ್ ನಿರ್ಮಾಣದ ಹಿಂದಿ





ಸಿನಿಮಾ 'ಧಡಕ್' (2018) ನಾಗ್ರಾಜ್ ಮಂಜುಲೆ ಅವರ 'ಸೈರಟ್' ಮರಾಠಿ ಸಿನಿಮಾದ ರೀಮೇಕ್. ಆದರೆ ಮುಂಜುಲೆ ಸಿನಿಮಾದಲ್ಲಿ ತಳ ಸಮುದಾಯದ ಹುಡುಗ–ಮೇಲ್ಜಾತಿ ಹುಡುಗಿಯ ಪಾತ್ರಗಳು ಈ ಹಿಂದಿ 'ದಡಕ್'ನಲ್ಲಿ ಮೇಲ್ಜಾತಿ ಹುಡುಗ–ಮೇಲ್ಜಾತಿ ಹುಡುಗಿಯ ಪಾತ್ರಗಳಾಗಿ ನಿರೂಪಿತವಾದವು. ಇದು ಮತ್ತೊಂದು ವರ್ಗ ಸಂಘರ್ಷದ ಕತೆಯಾಗಿಯೆ ಪ್ರೇಕ್ಷಕರಿಗೆ ಉಣಬಡಿಸಲಾಯಿತು. ಯಾಕೆ ನಿರ್ದೇಶಕರು ಜಾತಿ ಪ್ರಶ್ನೆ ಎತ್ತಿಕೊಳ್ಳಲು ಹಿಂಜರಿಯುತ್ತಾರೆ?

ಪ್ರೊ. ಎಂ.ಎಸ್.ಎಸ್. ಪಾಂಡ್ಯನ್ ಅವರು 'ಮೊದಲೆ ಆಸ್ತಿತ್ವದಲ್ಲಿರುವ ಸಾಂಸ್ಕೃತಿಕ ಗಡಿಗಳನ್ನು ಮುಗುಚುವಂತಹ ಮತ್ತು ಈ ಮುಂಚೆ ಗೆಟ್ಟೋಕೀಕರಣಗೊಂಡಿದ್ದ ಸಾಂಸ್ಕೃತಿಕ ಆಚರಣೆಗಳನ್ನು ಮರುಹಂಚಿಕೆ ಮಾಡುವಂತಹ ಸಾಮರ್ಥ್ಯ ಸಿನಿಮಾಗಿದೆ' ಎಂದು ಹೇಳುತ್ತಾರೆ. ಮುಂದುವರೆದು 'ಸಿನಿಮಾ ಮಾದ್ಯಮದಲ್ಲಿ ಮೇಲ್ಜಾತಿ ಗಣ್ಯರು ಒಂದಲ್ಲ ಒಂದು ಬಗೆಯಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಅದರ ಹಕ್ಕುದಾರಿಕೆಯನ್ನು ಪ್ರತಿಪಾದಿಸುವುದಕ್ಕಾಗಿ ಸಬಲ್ಟ್ರಾನ್ ಸಮುದಾಯವು ಸಿನಿಮಾದೊಂದಿಗೆ ಎಂಗೇಜ್ ಆಗುವ ಸಾದ್ಯತೆಗಳನ್ನು ಕಡಿತಗೊಳಿಸುತ್ತಾರೆ' ಎನ್ನುತ್ತಾರೆ. ಇದು ನಿಜ

ಭಾರತದ ಜನಪ್ರಿಯ ಸಿನಿಮಾಗಳ ನಿರ್ದೇಶಕರು ಮತ್ತು ಕತೆಗಾರರು ಪಾರಂಪರಿಕ ನಂಬಿಕೆಗಳ ಸುತ್ತ ಗಿರಿಕಿ ಹೊಡೆಯುತ್ತಾರೆ. ಈ ಮಾತು ಹೊಸ ಅಲೆ ಸಿನಿಮಾಗಳಿಗೂ ಅನ್ವಯಿಸುತ್ತದೆ. ಜಾತಿಯನ್ನು ಕತೆಯಾಗಿ ಆಯ್ಕೆ ಮಾಡಿಕೊಂಡ ಸಿನಿಮಾಗಳಲ್ಲಿಯೂ ಸಹ ತಳ ಸಮುದಾಯಗಳು ಪ್ರತಿ ಫ್ರೇಮಿನಲ್ಲಿ 'ಬಲಿಪಶುಗಳು' ಎನ್ನುವ ಆಕ್ರಂದನದಲ್ಲಿ ನರಳುತ್ತಿರುತ್ತಾರೆ. ಕೆಲ ಉದಾಹರಣೆಗಳನ್ನು ಗಮನಿಸೋಣ. ಈ ಬಲಿಪಶುಗಳ ಏಕತಾನತೆಯ ಪ್ರತಿನಿದೀಕರಣವು 1936ರಲ್ಲಿ ಬಿಡುಗಡೆಗೊಂಡ ಭಾರತದ ಮೊದಲ ಜಾತಿ ಆಧಾರಿತ (ಮುಖ್ಯವಾಹಿನಿ) ಸಿನಿಮಾ 'ಅಚೂತ್ ಕನ್ಯಾ'ದ ದೇವಿಕರಾಣಿಯಿಂದ ಹಿಡಿದು, 1938ರಲ್ಲಿ ಬಿಡುಗಡೆಯಾದ ತೆಲುಗು (ಮುಖ್ಯವಾಹಿನಿ) ಸಿನಿಮಾ 'ಮಾಲಾ ಪಿಲ್ಲ'ದ ಶಮಾಪಲತಾ, 1959ರಲ್ಲಿ ಬಿಡುಗಡೆಯಾದ ಬಿಮಲ್ ರಾಯ್ ನಿರ್ದೇಶನದ 'ಸುಜಾತ' (ಮುಖ್ಯವಾಹಿನಿ) ಸಿನಿಮಾದ ನೂತನ್, 1974ರಲ್ಲಿ ಬಿಡುಗಡೆಯಾದ ಶ್ಯಾಂ ಬೆನಗಲ್ ನಿರ್ದೇಶನದ 'ಅಂಕುರ್' (ಹೊಸ ಅಲೆ) ಸಿನಿಮಾದ ಶಬನಾ ಅಜ್ಮಿ, 1975ರಲ್ಲಿ ಬಿಡುಗಡೆಯಾದ ಕನ್ನಡ (ಮುಖ್ಯವಾಹಿನಿ) ಸಿನಿಮಾ 'ಭಾಗ್ಯಜ್ಯೋತಿ'ಯ ಭಾರತಿ, 1981ರಲ್ಲಿ ಬಿಡುಗಡೆಯಾದ ಗೋವಿಂದ್ ನಿಹಾಲನಿ ನಿರ್ದೇಶನ (ಹೊಸ ಅಲೆ) ಸಿನಿಮಾ 'ಆಕ್ರೋಶ್'ನ ಸ್ಮಿತಾ ಪಾಟೀಲ್, 1987ರಲ್ಲಿ ತೆರೆಕಂಡ ಕೆ. ವಿಶ್ವನಾಥ್ ನಿರ್ದೇಶನದ (ಮುಖ್ಯವಾಹಿನಿ) ಸಿನಿಮಾ 'ಸ್ವಯಂಕೃಶಿ'ಯ ಚಿರಂಜೀವಿ, 2001ರಲ್ಲಿ ಬಿಡುಗಡೆಯಾದ (ಮುಖ್ಯವಾಹಿನಿ) ಸಿನಿಮಾ 'ಲಗಾನ್' ಸಿನಿಮಾದ ಕಚ್ರಾ, 2019ರಲ್ಲಿ ತೆರೆಕಂಡ ಅನುಭವ್ ಸಿನ್ಹಾ ನಿರ್ದೇಶನದ (ಮುಖ್ಯವಾಹಿನಿ) ಸಿನಿಮಾ 'ಆರ್ಟಿಕಲ್ 15'ನ ಜಾಟವ್, ಗೌರಾ ಇತ್ಯಾದಿ ಪಾತ್ರಗಳ ಚಿತ್ರಣ ಒಂದೆ ತೆರನಾಗಿದೆ. ಇದು ಕೇವಲ ಉದಾಹರಣೆಗಳು ಮಾತ್ರ. (ಇದಕ್ಕೆ ಅಪವಾದಗಳಿವೆ. ಇದನ್ನು ಮುಂದೆ ಚರ್ಚಿಸೋಣ). 1985ರಲ್ಲಿ ನಿರ್ದೇಶಕ ಪ್ರಕಾಶ್ ಝಾ 'ದಾಮುಲ್' ಎನ್ನುವ ಸಿನಿಮಾ ನಿರ್ದೇಶಿಸುತ್ತಾನೆ. ಈ ಸಿನಿಮಾದಲ್ಲಿ ದಲಿತರಿಗೆ ಚುನಾವಣೆಯಲ್ಲಿ ಮತದಾನ ಮಾಡುವುದನ್ನು ನಿರಾಕರಿಸಲಾಗುತ್ತದೆ. ಕಡೆಗೆ ಸಂಜೀವನ ಎನ್ನುವ ದಲಿತನನ್ನು ಹತ್ಯೆ ಮಾಡಲಾಗುತ್ತದೆ. ಇದು ಆ ಕಾಲಕ್ಕೆ ಜಾತಿ ವ್ಯವಸ್ಥೆಯ ಕ್ರೌರ್ಯವನ್ನು ಪ್ರತಿಬಿಂಬಿಸುವ ಒಂದು ದಿಟ್ಟ ಪ್ರಯತ್ನ. ಆದರೆ ವ್ಯಂಗ್ಯವೆಂದರೆ ಇದೆ ಪ್ರಕಾಶ್ ಝಾ 2011ರಲ್ಲಿ ಸಮಾಜೋ–ರಾಜಕೀಯ ಡ್ರಾಮದ ಹೆಸರಿನಲ್ಲಿ ಮೀಸಲಾತಿ ವಿರೋದಿ "ಆರಕ್ಷಣ್" ಎನ್ನುವ ಸಿನಿಮಾ ನಿರ್ದೇಶಿಸುತ್ತಾನೆ. ಇಂತಹ ನೂರಾರು ವೈರುದ್ಯಗಳಿವೆ. ಪ್ರೊ. ಶೋಮಾ ಚಟರ್ಜಿಯವರು 'ದಲಿತರನ್ನು ಕೇಂದ್ರವಾಗಿಟ್ಟುಕೊಂಡ ಸಿನಿಮಾಗಳ ಚಿತ್ರಕತೆಯ ವಿಧಾನಗಳು ಪ್ರಶಂಸನೀಯವಾದರೂ ಸಹ ಅದರ ಅಂತಿಮ ಫಲಶ್ರುತಿ ಆ ಮಾರ್ಗಕ್ಕೆ ನ್ಯಾಯ ಒದಗಿಸುವುದಿಲ್ಲ' ಎಂದು ಹೇಳುತ್ತಾರೆ. ಹರೀಶ್.ಎಸ್. ವಾಂಖೆಡೆಯವರು 'ಬಾಲಿವುಡ್‌ನ ಜನಪ್ರಿಯತೆ ಒಂದು ನಕಲಿ ಜಗತ್ತು. ಅನೇಕ ಸಂದರ್ಭಗಳಲ್ಲಿ ಕಮರ್ಶಿಯಲ್ ತರ್ಕವನ್ನು ಮುರಿಯಲು ಸೋತಿದೆ. ಈ ಕಾರಣಕ್ಕಾಗಿ ಸಮಾಜದ ಕತ್ತಲ ಜಗತ್ತಿನ ಅನಾವರಣವು ಕೇವಲ ತೋರಿಕೆಯದಾಗಿರುತ್ತದೆ... ... ಅದೇ ರೀತಿ ಪರ್ಯಾಯ ಸಿನಿಮಾಗಳು ಜಾತಿ ಪ್ರಶ್ನೆಯನ್ನು ಎತ್ತಿಕೊಂಡಿವೆ ಮತ್ತು ಅದರ ದೌರ್ಜನ್ಯವನ್ನು ಹಸಿ ಹಸಿಯಾಗಿಯೇ ಬಿಂಬಿಸಿವೆ, ಆದರೆ ಇದನ್ನು ಮುಂದುವರೆಸಿ ಚರ್ಚೆ, ಸಂವಾದದಲ್ಲಿ ತೊಡಗಿಕೊಂಡಿಲ್ಲ, ಈ ಸಿನಿಮಾಗಳಲ್ಲಿ ದಲಿತ ಪಾತ್ರಗಳು ಸದಾ ನಿರ್ಗತಿಕ ನೆಲೆಯಲ್ಲಿ ಬದುಕುತ್ತಿರುತ್ತಾರೆ ಇದು ಸಹ ಏಕರೂಪಿ ಪಡಿಯಚ್ಚು ಪ್ರತಿನಿದೀಕರಣವಾಗಿದೆ' ಎನ್ನುತ್ತಾರೆ. ಹೊಸ ಅಲೆ ಸಿನಿಮಾಗಳಲ್ಲಿ ಜಾತಿ ಪ್ರಶ್ನೆಯನ್ನು ಸಬಲ್ಟ್ರಾನ್ ಪರಿಕಲ್ಪನೆಯಲ್ಲಿ ಹುದುಗಿಡಲಾಗಿದೆ. ಉದಾಹರಣೆಗೆ ಸ್ಲಂ ಬದುಕನ್ನು

ಪದೆ ಪದೆ ಬಳಸಿಕೊಳ್ಳುತ್ತ ಅದರೊಳಗೆ ಜಾತಿ ಪ್ರಶ್ನೆ ಅಡಕಗೊಂಡಿರುತ್ತದೆ ಮತ್ತು ಅದು ಎಲ್ಲಿಯೂ ಬಹಿರಂಗವಾಗಿ ನಿರೂಪಿತವಾಗುವುದಿಲ್ಲ. ಜಾತಿ ಸಂಘರ್ಷಗಳು ಎಲ್ಲಿಯೂ ಚರ್ಚಿತವಾಗುವುದಿಲ್ಲ

ಈ ಸಿನಿಮಾಗಳ ನಿರ್ದೇಶಕರು ಮೇಲ್ಜಾತಿಗೆ ಸೇರಿದವರು ಎಂಬುದು ಕಾಕತಾಳೀಯವಲ್ಲ. ಈ ನಿರ್ದೇಶಕರು ಮೇಲ್ಜಾತಿಯವರಾಗಿರುವುದರಿಂದಲೆ ಅವರಿಗೆ ದಲಿತ ಪಾತ್ರಗಳು ಪಟಕ್ಕನೆ ಬಲಿಪಶುಗಳಾಗಿಯೆ ಕಂಡುಬರುತ್ತಾರೆ ಎಂಬುದು ವಾಸ್ತವ. ಆದರೆ 21ನೆ ಶತಮಾನದಲ್ಲಿ ದಲಿತ ನಿರ್ದೇಶಕರ ಪ್ರವೇಶದಿಂದ ಈ 'ಬಲಿಪಶುವೀಕರಣ', "ಮೆಲೋಡ್ರಾಮ'ದ ಏಕಮುಖಿ ನಿರೂಪಣೆಗೆ ಕತ್ತರಿ ಬಿದ್ದಿದ್ದು ಮತ್ತೊಂದು ಕತೆ.

'ದಲಿತ ಬಲಿಪಶು' ಎನ್ನುವ ನಿರೂಪಣೆ ಮುಖ್ಯವಾಗಿ ಮೇಲ್ಜಾತಿ ನಿರ್ದೇಶಕರ ಉದಾರವಾದಿ ದೃಷ್ಟಿಕೋನದಿಂದ ಮೂಡಿಬಂದಿದೆ. ಈ ನಿರ್ದೇಶಕರು ತಮ್ಮ ಸಿನಿಮಾಗಳಲ್ಲಿ ತಳ ಸಮುದಾಯದ ಪಾತ್ರಗಳನ್ನು ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿರವರಂತಹ ಸುದಾರಣವಾದಿ ದೃಷ್ಟಿಕೋನದಿಂದ ಚಿತ್ರಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಗಾಂಧಿಯವರ ಧಾರ್ಮಿಕತೆ ಮತ್ತು ಅಸ್ಪೃಶ್ಯತೆ ಕುರಿತಾದ ಮುಗ್ಧ ನಿಲುವುಗಳು ಸಹ ಈ ನಿರ್ದೇಶಕರಿಗೆ ಮಾದರಿಯಾಗಿವೆ. ಆದರೆ ಅಂಬೇಡ್ಕರ್ ಅವರು ಅಸ್ಪೃಶ್ಯತೆಯನ್ನು ವಿರೋದಿಸಲು ಧರ್ಮ ಮತ್ತು ಆದ್ಯಾತ್ಮವನ್ನು ನೆಚ್ಚಲಿಲ್ಲ. ಏಕೆಂದರೆ ಸುಧಾರಣವಾದಿಯಾದ, ಆದ್ಯಾತ್ಮದ ಆತ್ಮವಿರುವ 'ಭಕ್ತಿ ಪಂಥ'ದಿಂದಲೂ ಸಹ ಈ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗಲಿಲ್ಲ ಎಂಬುದು ಅಂಬೇಡ್ಕರ್ ಅವರಿಗೆ ಖಚಿತವಾಗಿತ್ತು. **Racine and Racine** ಅವರು 'ಶೈವ ಮತ್ತು ವೈಷ್ಣವ ನಂಬಿಕೆಯುಳ್ಳ ಅಸ್ಪೃಶ್ಯ ಸಮುದಾಯದವರಿಗೆ ಶುದ್ದೀಕರಣದ ಅಗ್ನಿಪರೀಕ್ಷೆಯ ನಂತರವಷ್ಟೆ ದೇವರನ್ನು ಪ್ರಾರ್ಥಿಸಲು ಅವಕಾಶ ದೊರಕುತ್ತಿತ್ತು, ಈ ಅರ್ಥದಲ್ಲಿ ಭಕ್ತಿ ಚಳುವಳಿ ಸಂಪ್ರದಾಯವಾದಿ ಹಿಂದೂ ಧರ್ಮ ಭಾಗವಾಗಿತ್ತು' ಎಂದು ಬರೆಯುತ್ತಾರೆ. ಆದರೆ ಭಾರತೀಯ ಸಿನಿಮಾರಂಗದ ಮೇಲ್ಜಾತಿ ನಿರ್ದೇಶಕರಿಗೆ ಈ ಸುದಾರಣವಾದಿ ಮನಸ್ಥಿತಿಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಈ ಕಾರಣಕ್ಕಾಗಿ ಇವರು ಸಿನಿಮಾಗಳಲ್ಲಿ ತಳಸಮುದಾಯದ ಪಾತ್ರಗಳು ಕೇವಲ ಕ್ಯಾರಿಕೇಚರ್‌ಗಳಾಗಿದ್ದವು. ಆ ಪಾತ್ರಗಳಲ್ಲಿ ಆತ್ಮವಿರಲಿಲ್ಲ. ಆತ್ಮಬಲವೂ ಇರಲಿಲ್ಲ.

ಸಬಲ್ಟ್ರಾನ್ ಹೋರಾಟವನ್ನು ಸೆಲ್ಯುಲಾಯ್ಡ್ ಮೇಲೆ ನಿರೂಪಿಸುವಾಗ ಮೂಲಭೂತವಾಗಿ ಇಲ್ಲಿನ ಶ್ರೇಣೀಕೃತ ಜಾತಿ ವ್ಯವಸ್ಥೆಯ ಆಳವಾದ ಪರಿಚಯವಿರಬೇಕು ಮತ್ತು ಅದರ ಒಳಹೊರಗಿನ ಮೇಲಾಟಗಳ ಕುರಿತು ನಿರ್ದೇಶಕರಿಗೆ ಸೂಕ್ಷ್ಮ ಸಂವೇದನೆಯ ಅವಶ್ಯಕತೆ ಇದೆ. ಆದರೆ ಭಾರತದ ಸಿನಿಮಾರಂಗವೆ ಅಂತರ್ಯದಲ್ಲಿ ಜಾತಿ ಆಧಾರಿತವಾಗಿದೆ, ಪೂರ್ವಗ್ರಹಪೀಡಿತವಾಗಿದೆ ಮತ್ತು ತಾಂತ್ರಿಕ ಪರಿಣಿತಿ ಎಂಬುದೆ ಕಲೆಗಾರಿಕೆ ಎನ್ನುವ ಬ್ರಮೆಗೆ ಒಳಗಾಗಿದೆ. ಈ ಮನಸ್ಥಿತಿಗೆ ದಲಿತರು ಎಂದಿಗೂ ಮೊದಲ ಆದ್ಯತೆಯಾಗುವುದಿಲ್ಲ. ದಲಿತರನ್ನು ಒಳಗೊಳ್ಳುವುದು ಒಂದು ನೈತಿಕತೆ ಎಂದು ಇವರಿಗೆ ಅನಿಸಿಲ್ಲ. ನಿಮ್ಮ ಸಿನಿಮಾಗಳಲ್ಲಿ ಕಥಾನಾಯಕರು/ ನಾಯಕಿರಾಗಿರುವ ದಲಿತ ಪಾತ್ರಗಳು ಇಲ್ಲವಲ್ಲ ಯಾಕೆ ಎಂದು ಪ್ರಶ್ನಿಸಿದರೆ ಇಲ್ಲಿನ ಬಹುಪಾಲು ನಿರ್ದೇಶಕರು ಆರಂಬದಲ್ಲಿ ತಡಬಡಾಯಿಸುತ್ತಾರೆ ನಂತರ ಮಾರುಕಟ್ಟೆಯನ್ನು ದೂಶಿಸುತ್ತಾರೆ. ಇವರಿಂದ ವಿಭಿನ್ನ ಸಿನಿಮಾಗಳನ್ನು ನಿರೀಕ್ಷಿಸಲು ಸಾದ್ಯವಿಲ್ಲ. ಆದರೆ 21ನೆ ಶತಮಾನದಲ್ಲಿ ಕೋರ್ಟ, ಫಂಡ್ರಿ, ಮದ್ರಾಸ್, ಕಾಲಾ, ಸೈರಟ್, ಮಸಾನ್, ನ್ಯೂಟನ್, ಅಸುರನ್‌ನಂತಹ ಸಿನಿಮಾಗಳು ಈ ವೈದಿಕಶಾಹಿ ಮನೋಗತವನ್ನು ದಿಕ್ಕರಿಸಿರುವುದು ಮತ್ತೊಂದು ಕಥನ

ಅವಂತಿಕಾ ಪಾಲ್ ಅವರು 'ಭಾರತದ ಮಾಧ್ಯಮವೂ ಸಹ ತನ್ನ ಪತ್ರಿಕಾ ದೋರಣೆಗೆ, ತನ್ನ ಅನುಕೂಲಕ್ಕೆ ತಕ್ಕಂತೆ ದಲಿತ ಪದವನ್ನು ಬಳಸಿಕೊಳ್ಳುತ್ತಿದೆ, ಮುಜಪ್ಫರ್ ನಗರದಲ್ಲಿ 17 ವರ್ಶದ ದಲಿತ ಬಾಲಕಿಯ ಮೇಲೆ ಅತ್ಯಾಚಾರ, ಶೂ ಹಾಕಿಕೊಂಡಿದ್ದಕ್ಕೆ ಭಾರತದ ದಲಿತರ ಮೇಲೆ ಹಲ್ಲೆ, ಈ ರೀತಿಯ ವರದಿಗೆ ಮಾತ್ರ ಸೀಮಿತಗೊಳ್ಳುತ್ತದೆ' ಎನ್ನುತ್ತಾರೆ.

ಭಾರತೀಯ ಸಿನಿಮಾರಂಗದಲ್ಲಿ ಜಾತಿ ಪ್ರಶ್ನೆಯನ್ನು ಪ್ರತಿನಿಧಿಸುವ ಸಿನಿಮಾಗಳ ವಿಶ್ಲೇಷಣೆ/ವಿಮರ್ಶೆ ಮತ್ತು ದಲಿತ/ ಮುಸ್ಲಿಂ/ಆದಿವಾಸಿ ಪಾತ್ರಗಳ ಪ್ರಾತಿನಿದ್ಯ, ದಲಿತ ಕಲಾವಿದರಿಗೆ ಅವಕಾಶ ಮತ್ತು ಪಾತ್ರಗಳ ಪೋಶಣೆ, ಮುಂದಿರುವ ಸವಾಲುಗಳು ವಿವರವಾಗಿ ಚರ್ಚಿಸಬೇಕಾಗಿದೆ.

(ಮುಂದುವರೆಯುತ್ತದೆ)

(15ನೇ ಪುಟದಿಂದ)

## ದಲಿತ/ ಸಬಾಲ್ಟನ್ ಚಿಂತನೆ ಮುಖಾಮುಖಿ

ಗ್ರಾಮ್‌ಶಿ ಚಿಂತನೆಯೊಂದಿಗೆ ಅಂಬೇಡ್ಕರ್ ಚಿಂತನೆಯನ್ನು ಬೆರೆಸಬೇಕು ಎಂಬ ತೀರ್ಮಾನಕ್ಕೆ ಅವರು ಬರುತ್ತಾರೆ. ಅವರ ಪ್ರಕಾರ, ಕೆಳಸ್ತರತೆಯ ಸಮಾಜೋ–ಸಾಂಸ್ಕೃತಿಕ ವಿಮರ್ಶೆಯು ಒಂದು ಪರಿಪೂರ್ಣ ವಿಧಾನವಾಗಿ, ಕೆಳಸ್ತರದ ತುದಿಯೆಂದರೆ, ಅಸ್ಪೃಶ್ಯರು ಎಂಬೆಡೆಗೆ ಬೆರಳು ಮಾಡಿ ತೋರಿಸುತ್ತದೆ. ಅದರಲ್ಲೂ ಸ್ವಮರುಕದಿಂದ ಸ್ವಪ್ರಜ್ಞೆ ಕಡೆಗಿನ ಚಲನೆ ಅಥವಾ ಪಯಣವು ದಲಿತ ಮಹಿಳೆಯ ಅನುಭವದಲ್ಲಿ ಪ್ರಭಾವಶಾಲಿಯಾಗಿ ಹೊರಹೊಮ್ಮಿದೆ.

**ಕನ್ನಡ ಚಿಂತನೆಯಲ್ಲಿ ಅಂಬೇಡ್ಕರ್ ಹಾಗೂ ಗ್ರಾಮ್‌ಶಿ**

ಕರ್ನಾಟಕದಲ್ಲಿ ದಲಿತ, ಬಂಡಾಯ ಹಾಗೂ ರೈತ ಚಳವಳಿಗಳನ್ನು ಸಮಾಜವಾದಿ ಚಿಂತನೆ ಪ್ರಭಾವಿಸಿದಷ್ಟು ಅಂಬೇಡ್ಕರ್ ಹಾಗೂ ಗ್ರಾಮ್‌ಶಿಯವರ ತತ್ವಚಿಂತನೆ ಪ್ರಭಾವಿಸಲಿಲ್ಲ ಎಂದು ಹೇಳಲೇಬೇಕು. ಆರಂಭದಲ್ಲಿ ಹೆಸರಿಸಿದ ಹಾಗೆ, ಡಿ. ಆರ್, ನಾಗರಾಜ್, ತಾತ್ವಿಕವಾಗಿ ಅಂಬೇಡ್ಕರ್‌ರೊಂದಿಗೆ ಅನುಸಂಧಾನ ಮಾಡಿದ್ದೇ ದೊಡ್ಡ ಪ್ರಯತ್ನವಾಗಿತ್ತು. ಆದರೆ, ಹೊಸ ಸಹಸ್ರಮಾನದ ಎರಡನೇ ದಶಕದಲ್ಲಿ ಅಂಬೇಡ್ಕರ್–ಗ್ರಾಮ್‌ಶಿ ಚಿಂತನೆಗಳನ್ನು ಸಮಾನ ನೆಲೆಯಲ್ಲಿ ಕಾಣುವ ಕೆಲಸ ಕನ್ನಡದಲ್ಲಿ ಆರಂಭವಾಯಿತು. ಕೆ. ಫಣಿರಾಜ್ ಅವರ 'ಅಂಟೊನಿಯೊ ಗ್ರಾಮ್ಷಿ'(2011), ನಂತರದ ವರ್ಷಗಳಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದ ಮಲ್ಲಿಕಾರ್ಜುನ ಮೇಟಿಯವರ ಸಂಪಾದಕತ್ವದ 'ಕರ್ನಾಟಕ ಸಬಾಲ್ಟರ್ನ್ ಓದು ಮಾಲಿಕೆ'(2017)ಯ ಸಬಾಲ್ಟರ್ನ್ ತಾತ್ವಿಕತೆ, ದಲಿತ ಸಂಸ್ಕೃತಿ ಚರಿತ್ರೆ, ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳ ಸಂಸ್ಕೃತಿ ಚರಿತ್ರೆ, ವಂಚಿತರ ದೃಷ್ಟಿಕೋನ–ಮಹಿಳಾನೆಲೆ, ರೈತರು ಹಾಗೂ ಕಾರ್ಮಿಕರ ಕುರಿತ ಮತ್ತು ಸಾಹಿತ್ಯ ಕುರಿತ ಸಂಪುಟಗಳು ಈ ಹಿನ್ನೆಲೆಯಲ್ಲಿ ಗಮನಾರ್ಹ. ಸಂಪುಟ ಸಂಪಾದಕರಾದ ಡೊಮಿನಿಕ್ ಡಿ., ಬಿ.ಎಲ್.ರಾಜು, ಆರ್. ಚಲಪತಿ, ವಿಠಲ್ ಭಂಡಾರಿ, ಎ. ಎಸ್. ಪ್ರಭಾಕರ್ ಹಾಗೂ ಕುಂ.ಸೀ. ಉಮೇಶ್ ಮುಂತಾದವರ ಪರಿಶ್ರಮ ಮೆಚ್ಚುವಂತದ್ದು. ಈ ಲೇಖನದ ವ್ಯಾಪ್ತಿಯಲ್ಲಿ ಉಲ್ಲೇಖಿಸಲಾದ ಕೆಲ ಪರಿಕಲ್ಪನೆಗಳ ವಿಸ್ತೃತ ವಿವರಣೆಗೆ ಈ ಸಂಪುಟಗಳನ್ನು ಗಮನಿಸಬಹುದು. ಆರಡಿಮಲ್ಲಯ್ಯ ಕಟ್ಟೇರ ಅವರಂತಹ ಹೊಸ ತಲೆಮಾರಿನ ಸಂಶೋಧಕರು ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದ 'ಅಲೆಮಾರಿ ಸಮುದಾಯಗಳ ಒಳಾಡಳಿತ ನೀತಿಸಂಹಿತೆ' ಲೇಖನದಲ್ಲಿ ಅಂಬೇಡ್ಕರ್, ಗ್ರಾಮ್‌ಶಿ ಹಾಗೂ ಮಾರ್ಕ್ಸ್‌ನ ಪರಿಕಲ್ಪನೆಗಳನ್ನು ಅಳವಡಿಸಿಕೊಂಡಿರುವ ರೀತಿ ಉಲ್ಲೇಖಾರ್ಹ.

ಕೊಸಿಮೊ ಜೀನ್‌ರ ಸಂಪಾದಿತ ಕೃತಿಗೆ ಕೇವಲ ಒಂದು ವರ್ಷದ ಹಿಂದೆ ಪ್ರಕಟವಾದ **Dalit Studies (2016)** ಸಂಪಾದಿತ ಕೃತಿಯಲ್ಲಿ ಸಂಪಾದಕರಾದ ರಾಮ್‌ನಾರಾಯಣ್ ಎಸ್. ರಾವತ್ ಹಾಗೂ ಕೆ. ಸತ್ಯನಾರಾಯಣ, ದಲಿತರ ಕುರಿತ ಭಾರತೀಯ ಅಕಡೆಮಿಕ್ ವಿದ್ವತ್ತು ಅನುಸರಿಸಿದ ಪ್ರಬಲ ವಿಧಾನಗಳನ್ನು ಹೀಗೆ ಗುರುತಿಸುತ್ತಾರೆ: ಅ) ಗಾಂಧಿ ಹರಿಜನ ಸಿದ್ಧಾಂತ; ಆ) ಆಧುನಿಕ ಭಾರತದ ಅಧ್ಯಯನ ಮಾಡಲು ರಾಷ್ಟ್ರೀಯತಾವಾದಿ ಚೌಕಟ್ಟಿನ ಬದಲು ವಸಾಹತುವಾದಿ ಚಾರಿತ್ರಿಕ ಶಾಸ್ತ್ರೀಯ ಮಾದರಿಗಳನ್ನು ಅನುಸರಿಸಿದ್ದು; ಇ) ಭಾರತೀಯ ನಾಗರಿಕತೆಯ ರಾಷ್ಟ್ರೀಯತಾವಾದಿ ಪರಿಕಲ್ಪನೆ; ಹಾಗೂ ಈ) ನೆಹರೂವಾದಿ ಮಾದರಿಯ ಆಧುನಿಕ ಅಭಿವೃದ್ಧೀಯತೆ. ಸಂಪಾದಕರು ಸೂಚಿಸುವ ಹಾಗೆ, ಭಾರತದ ಅಧ್ಯಯನ ಮಾಡಲು ಹೊಸ ದೃಷ್ಟಿಕೋನ ಬೇಕಿದ್ದಲ್ಲಿ, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕೆಂಬ ಸಲಹೆ ನೀಡಿದ್ದಾರೆ: ಅ) ಭಾರತೀಯ ಚರಿತ್ರೆ ಅಧ್ಯಯನಕ್ಕೆ ಮಾನವ ಘನತೆಯ ಪ್ರಶ್ನೆ ಕೇಂದ್ರವಾಗಬೇಕು, ಆ) ಜಾತಿ ತಾರತಮ್ಯ ಮುಂದುವರಿದುಕೊಂಡು ಹೋಗುವಂತೆ ಮಾಡಿರುವ ಚಿಂತನಾಕ್ರಮದ ಆಚರಣೆಗಳನ್ನು ಪರೀಕ್ಷಿಸಬೇಕು, ಹಾಗೂ ಇ) ವಸಾಹತುವಾದಿ ಹಾಗೂ ರಾಷ್ಟ್ರೀಯತಾವಾದಿ ಪರಿಕಲ್ಪನಾ ಮೋಹದಿಂದ ಬಿಡಿಸಿಕೊಳ್ಳಬೇಕು.

ಇದನ್ನು ಸಾಧಿಸಲು, ದಲಿತ ಅಧ್ಯಯನವು ಗ್ರಾಮ್‌ಶಿ ಪ್ರತಿಪಾದಿಸಿದ ಆಚರಣಾ ತತ್ವಜ್ಞಾನ ಹಾಗೂ ಅಂಬೇಡ್ಕರ್ ಪ್ರತಿಪಾದಿಸಿದ ಜಾತಿ ನಿರ್ಮೂಲನೆ ಮಾಡುವ ಮೂಲಕ ಕಟ್ಟುವ ಹೊಸ ಜ್ಞಾನ, ಕೆಳಸ್ತರವನ್ನು ತನ್ನೊಳಗು ಮಾಡಿಕೊಂಡ ಚಾರಿತ್ರಿಕ ಪ್ರಜ್ಞೆಯನ್ನೊಳಗೊಂಡ ಒಂದು ತಾತ್ವಿಕ ಚೌಕಟ್ಟನ್ನು ಹಾಕಿಕೊಂಡಲ್ಲಿ ಯಾವುದೇ ಡಿಸಿಪ್ಲಿನ್‌ನಲ್ಲೂ ವಿಶಾಲ ಪ್ರಜ್ಞೆಯನ್ನುಳ್ಳ, ಸಮಗ್ರ ಚರಿತ್ರೆಯನ್ನು ಬರೆಯುವ ಹೊಸ ಮಾದರಿಗಳನ್ನು ರೂಪಿಸಿಕೊಳ್ಳುವತ್ತ ನಡೆಯಬಹುದಾಗಿದೆ. □

(45ನೇ ಪುಟದಿಂದ)

# ಅಂಬೇಡ್ಕರ್ ಮತ್ತು ಜೆಎನ್‌ಯು

ವಿಮರ್ಶೆ ಮಾಡುವುದು, ಮತ್ತು ಕೊನೆಯಲ್ಲಿ ವಿಸ್ತಾರವಾಗಿ ಒಂದು ಪ್ರಬಂಧವನ್ನು ಬರೆಯುವುದು. ಈ ಪ್ರಕ್ರಿಯೆಯು ಅಂಬೇಡ್ಕರ್ ಅವರನ್ನು ಸಾಂಸ್ಥೀಕರಣಕ್ಕೆ ಒಳಪಡಲು ಬಿಡುವುದಿಲ್ಲ. ಜೊತೆಗೆ ಈ ಒಟ್ಟೂ ಕೆಲಸಗಳು ಸಂಶೋಧಕನ ಪ್ರಶ್ನಿಸುವ ಸಾಮರ್ಥ್ಯವನ್ನು ವಿಶೇಷವಾಗಿ ಹೆಚ್ಚಿಸಿ, ಅಲೋಚನೆಗೆ ಅವಕಾಶ ಮಾಡಿಕೊಡುತ್ತದೆ.

ಸಾಮಾನ್ಯವಾಗಿ ಇದು ಬಲಪಂಥೀಯರಿಗೆ ಅರ್ಥವಾಗುವುದಿಲ್ಲ. ಅವರಿಗೆ ಸಾಂಸ್ಥೀಕರಣದಲ್ಲಿ ವಿಶೇಷ ಆಸಕ್ತಿ. ಹೀಗಾಗಿ ಅವರು ಜೆಎನ್‌ಯುವಿನಲ್ಲಿ ಅಂಬೇಡ್ಕರ್ ಅವರನ್ನು ಒಳಪಡಿಸಿಕೊಳ್ಳಲು ಅವರ ಹೆಸರನ್ನು ಗ್ರಂಥಾಲಯಕ್ಕೆ ಇರಿಸಲು ಹೋರಾಟ ನಡೆಸಿದರು. ಆದರೆ ಇದರಿಂದ ಜೆಎನ್‌ಯುವಿನ ಅಂಬೇಡ್ಕರ್ವಾದಿಗಳೇನೂ ಸಂಭ್ರಮಿಸಲಿಲ್ಲ. ಕಳೆದ ವರ್ಷ ಅಂಬೇಡ್ಕರ್ ದಿನಾಚರಣೆಯನ್ನು ಸರಕಾರೀ ಅಧಿಕಾರಿಗಳ ಉಪಸ್ಥಿತಿಯಲ್ಲಿ ಭವ್ಯವಾಗಿ ನಡೆಸಲು ಪ್ರಯತ್ನಿಸಲಾಯಿತಾದರೂ ಅದು ಉದ್ದೇಶಿತ ಪರಿಣಾಮ ಬೀರಲಿಲ್ಲ. ಇಂಥ ಕಾರಣಗಳಿಗಾಗಿಯೇ ಅನೇಕರು ಇನ್ನೂಜೆ. ಎನ್.ಯು.ಗೆ ಬರಲು ಹಾತೊರೆಯುತ್ತಾರೆ. ಇಲ್ಲಿ ಅಂಬೇಡ್ಕರ್ ಅವರನ್ನು ಹೀಗೆಯೇ ಬೋಧಿಸಬೇಕೆಂದು ಯಾರೂ ಹೇಳುವುದಿಲ್ಲ. ಅವರ ಕುರಿತಾದ ಪ್ರಶ್ನೆಗಳು ಹೇಗಿರಬೇಕೆಂದು ಯಾರೂ ಸೂಚಿಸುವುದಿಲ್ಲ. ವಸ್ತುನಿಷ್ಠ ಮಾದರಿಯ ಡಿಜಿಟಲ್ ಸಂಕೇತಗಳಿಂದ ಅಂಬೇಡ್ಕರ್ ಅವರನ್ನು ದೂರವಿರಿಸಲಾಗಿದೆ. ತಾತ್ವಿಕ ಅರಾಜಕತೆಯು ಅಂಬೇಡ್ಕರ್ ಅವರನ್ನು ಹೆಚ್ಚು ಹೆಚ್ಚು ಹತ್ತಿರ ತರುತ್ತದೆ ಎಂದು ಜೆಎನ್‌ಯು ನಂಬುತ್ತದೆ.




ಅಂಬೇಡ್ಕರ್ ಅವರ ಕುರಿತಾದ ಒಂದು ಪ್ರಶ್ನೆಗೆ ನಿರ್ದಿಷ್ಟವಾದ ಒಂದೇ ಉತ್ತರ ಇರುತ್ತದೆ ಎಂದು ಇಲ್ಲಿ ಯಾರೂ ನಂಬುವುದಿಲ್ಲ. ಹಾಗಾಗಿ ಜೆಎನ್‌ಯುನಲ್ಲಿ ಅಂಬೇಡ್ಕರರನ್ನು ಯಾರಿಗೂ ನಿಯಂತ್ರಿಸಲು ಸಾಧ್ಯವಿಲ್ಲ. ನಾವು 'ಅಂಬೇಡ್ಕರರ ಅತ್ಯಂತ ಗಹನವಾದ ಮತ್ತು ವಿಸ್ತಾರವಾದ ಓದನ್ನು ನಿಮ್ಮಲ್ಲಿ ಕಾಣಬಯಸುತ್ತೇವೆ' ಎಂದು ಅಂಬೇಡ್ಕರ್ ಪೀಠದ ಪ್ರೊ.ವಿವೇಕ ಕುಮಾರ್ ಹೇಳುತ್ತಾರೆಯೇ ವಿನಾ, 'ಇಲ್ಲಿ ಅಂಬೇಡ್ಕರ್ ಅವರ ವಿಗ್ರಹ ಸ್ಥಾಪಿಸಲು ಒತ್ತಡ ಹಾಕೋಣ' ಎಂದು ಹೇಳುವುದೇ ಇಲ್ಲ. 'ಬುದ್ಧ ಮತ್ತು ಮಾರ್ಕ್ಸ್ ನ ಕುರಿತ ಅಂಬೇಡ್ಕರ್ ಅವರ ವಿಚಾರಗಳನ್ನು ಓದುವ ಅಗತ್ಯವಿದೆ' ಎಂದು ಭಾರತೀಯ ಭಾಷಾ ಕೇಂದ್ರದ ಪ್ರೊ. ರಾಮಚಂದ್ರ ಅವರು ಬಾಪ್ಸಾದ ಸಭೆಗಳಲ್ಲಿ ಹೇಳುತ್ತಾರೆ. ' ಅಂಬೇಡ್ಕರ್ ಅವರ ಬುದ್ಧತತ್ವ ಮತ್ತು ಭಗವದ್ಗೀತೆ ಕುರಿತ ಗಾಂಧೀಜಿಯ ನಿಲುವುಗಳನ್ನು ತೌಲನಿಕವಾಗಿ ಓದಿ ನೋಡಿ' ಎಂದು ಫ್ರೆಂಚ್ ವಿದ್ವಾಂಸ ಪ್ರೊ. ಅಜಿತ್‌ಖನ್ನಾ ಅವರು ಕರೆನೀಡುತ್ತಾರೆ. 'ರಾಜ್ಯಗಳ ಸ್ವಾಯತ್ತೆ ಮತ್ತು ರಾಜ್ಯ ಭಾಷೆಗಳ ಕುರಿತು ಅಂಬೇಡ್ಕರ್ ಹೇಳಿದ ವಿಚಾರಗಳನ್ನು ಇವತ್ತು ಮರುಪರಿಶೀಲನೆಗೆ ಒಳಪಡಿಸಬೇಕಾಗಿದೆ' ಬಹುಜನ ಪಕ್ಷದ ಚಿಂತಕ ಪ್ರೊ. ಕಾಜಲ್ ಅವರು ಹೇಳುತ್ತಾರೆ. ಇದು ಅಂಬೇಡ್ಕರ್ ಅವರ ಕುರಿತಾದ ಸಕಾರಾತ್ಮಕ ಧೋರಣೆ ಎಂದು ನಮ್ಮಂಥವರು ಭಾವಿಸುತ್ತಾರೆ. ಅಂಬೇಡ್ಕರ್ ಕುರಿತಾದ ಜೆಎನ್‌ಯು ಚರ್ಚೆಗಳು ಕೇಳುಗರನ್ನು ತತ್ವಶಾಸ್ತ್ರದ ಎತ್ತರದ ನೆಲೆಗಳಿಗೆ ಕೊಂಡೊಯ್ಯಲು ಪ್ರಯತ್ನಿಸುತ್ತವೆ. ಅಲ್ಲಿ ಸರಿತಪ್ಪಿನ ಪ್ರಶ್ನೆಗಳಿಗಿಂತ ತಲುಪುವ ಬೌದ್ಧಿಕ ಶಿಖರಗಳೇ ಮುಖ್ಯವಾಗುತ್ತವೆ. ಈ ನಿಟ್ಟಿನಲ್ಲಿ ಅಂಬೇಡ್ಕರ್ ವಿಚಾರಗಳು ಹೆಚ್ಚು ಪ್ರಖರ ಮತ್ತು ಉಪಯುಕ್ತ ಎಂಬುದನ್ನು ಜೆಎನ್‌ಯು ವಿನ ಬಹುತೇಕ ಪ್ರಾಧ್ಯಾಪಕರು ಒಪ್ಪಿಕೊಂಡಿದ್ದಾರೆ. ಹೀಗೆ ಒಪ್ಪಿಕೊಂಡವರಲ್ಲಿ ಮಾರ್ಕ್ಸ್‌ವಾದಿಗಳೂ ಸೇರಿದಂತೆ ಇತರ ಅನೇಕ ವಿಚಾರಧಾರೆಯ ಪರಿಣತರಿದ್ದಾರೆ.

ಚಾರಿತ್ರಿಕವಾಗಿ ಭಾರತದ ಶಿಕ್ಷಣ ವ್ಯವಸ್ಥೆಯು ಪರಾವಿದ್ಯೆಗೆ ಹೆಚ್ಚು ಮಹತ್ವ ನೀಡಿ ಬ್ರಾಹ್ಮಣ ಕೇಂದ್ರಿತವಾಗಿದ್ದುದನ್ನು ಅಂಬೇಡ್ಕರ್ ಅವರು ನಿಷ್ಠುರವಾದ ವಿಮರ್ಶೆಗೆ ಒಳಪಡಿಸಿದ್ದರು. ಬ್ರಾಹ್ಮಣ್ಯದ ಪರವಾಗಿ ಬಲವಾಗಿ ವಾದಮಂಡನೆ ಮಾಡುವ ಮನುಸ್ಮೃತಿಯನ್ನು ಅವರು ಬೆಂಕಿಗೆಸೆದಿದ್ದರು. ಮುಂದೆ ಅಂಬೇಡ್ಕರ್ ಅವರು ಭಾರತಕ್ಕೊಂದು ಸಂವಿಧಾನವನ್ನು ಬರೆದಾಗ ದಲಿತರು–ಹಿಂದುಳಿದವರು ಶಿಕ್ಷಣ ಪಡೆಯಬೇಕಾದ ಅಗತ್ಯಗಳನ್ನು ಪ್ರತಿಪಾದಿಸಿದ್ದರು. ಅಂಬೇಡ್ಕರ್ ಅವರ ಸಾರ್ವಜನಿಕ ಶಿಕ್ಷಣದ ಪರಿಕಲ್ಪನೆಗೆ ಎರಡು ಆಯಾಮಗಳಿದ್ದುವು–ಒಂದು, ಶಿಕ್ಷಣದ ಮೇಲಿನ ಮೇಲ್ಜಾತಿಗಳ ಹಿಡಿತವನ್ನು ಸಡಿಲಿಸುವುದು ಮತ್ತು ಎರಡು, ಬಡವರಿಗೂ ಉತ್ತಮ ಶಿಕ್ಷಣ ಸಿಗುವಂತೆ ಮಾಡುವುದು. 2019ರ ನವಂಬರ ತಿಂಗಳಲ್ಲಿ ಜೆಎನ್‌ಯು ಆಡಳಿತವು ಶುಲ್ಕ ಹೆಚ್ಚು ಮಾಡಿದಾಗ ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ಸಾರ್ವತ್ರಿಕ ಶಿಕ್ಷಣದ ಪರಿಕಲ್ಪನೆಯನ್ನು ಮುಂದು ಮಾಡಿ, ಪ್ರಬಲ ಹೋರಾಟ ಸಂಘಟಿಸಿ ಗೆಲುವು ಸಾಧಿಸಿದ್ದರು. ದೇಶದಲ್ಲಿ ಇನ್ನಷ್ಟು ರೋಹಿತ ವೇಮುಲಾರನ್ನು ಸಾಯಲು ನಾವು ಬಿಡುವುದಿಲ್ಲ ಎಂದು ಘೋಷಿಸುವ ಮೂಲಕ ಜೆಎನ್‌ಯು ಅಂಬೇಡ್ಕರ್ ಆದರ್ಶಗಳನ್ನು ಎತ್ತಿ ಹಿಡಿದಿತ್ತು.

ಈಚಿನ ದಶಕಗಳಲ್ಲಿ ಪ್ರಬಲ ಶಕ್ತಿಯಾಗಿ ಮೂಡಿ ಬರುತ್ತಿರುವ ಅಂಬೇಡ್ಕರ್ ಅವರನ್ನು ನಿರ್ಲಕ್ಷಿಸಿ ಮುಂದೆ ಹೋಗಲು ಜೆಎನ್‌ಯುವಿನ ಯಾವ ಗುಂಪಿನ ವಿದ್ವಾಂಸರಿಗೂ ಅಸಾಧ್ಯವಾಗುತ್ತಿದೆ. 2014ರಲ್ಲಿ ಉದಯವಾಗಿ, ಇದೀಗ ಕ್ಯಾಂಪಸ್ಸಿನಲ್ಲಿ ಪ್ರಬಲ ಶಕ್ತಿಯಾಗಿ ಬೆಳೆಯುತ್ತಿರುವ ಬಾಪ್ಸಾ **(Birsa Ambedkar Phule Students' Association (BAPSA)** ಅದರ ಹೆಸರೇ ಹೇಳುವಂತೆ, ಬಿರ್ಸಾ ಮುಂಡಾ ಅಂಬೇಡ್ಕರ್, ಮತ್ತು ಫುಲೆ ಅವರನ್ನು ಒಟ್ಟು ಸೇರಿಸಿಕೊಂಡು ಮುನ್ನಡೆಯುತ್ತಿದೆ. ಎಬಿವಿಪಿ ಕೂಡಾ ಅಂಬೇಡ್ಕರ್ ಅವರ ಜೊತೆ ಭಾರತಮಾತೆಯನ್ನು ಸೇರಿಸಿಕೊಂಡು ಮಾತಾಡುತ್ತಿದೆ. ಅಂಬೇಡ್ಕರ್ ಅವರು ತೀವ್ರ ರಾಷ್ಟ್ರವಾದಿಯೂ, ಮುಸ್ಲಿಂ ವಿರೋಧಿಯೂ ಅಗಿದ್ದರೆಂದು ಹೇಳಲು ಅದು ಪ್ರಯತ್ನಿಸುವಂತಿದೆ. ಅಂಬೇಡ್ಕರ್ ಅವರನ್ನು ಹಿಡಿದುಕೊಂಡು ಒಂದಷ್ಟು ದಲಿತರ ಮತವನ್ನು ತನ್ನಡೆಗೆ ಸೆಳೆಯುವಲ್ಲಿಯೂ ಅದು ಯಶಸ್ವಿಯಾಗಿದೆ. ಮಾರ್ಕ್ಸ್, ಲೆನಿನ್, ಟ್ರೋಟ್ಸ್ಕಿ, ಸ್ಟಾಲಿನ್, ಮಾವೋ, ಚೆಗೆವಾರಾ ಮೊದಲಾದ ಕ್ರಾಂತಿಕಾರಿಗಳ ಚಿತ್ರಗಳನ್ನು ಅಂಗಿಯಲ್ಲಿ ಹಾಕಿಕೊಂಡು ಓಡಾಡುತ್ತಿದ್ದ ಎಸ್‌ಎಫ್‌ಐ, ಎಐಎಸ್‌ಎ ಮೊದಲಾದ ಸಂಘಟನೆಗಳ ಸದಸ್ಯರು ಇದೀಗ ಅಂಬೇಡ್ಕರ್ ಅವರಿಗೂ ಜಾಗ ನೀಡುತ್ತಿದ್ದಾರೆ, ಜೈ ಭೀಮ್ ಅಂತ ಕೂಗುತ್ತಿದ್ದಾರೆ. ಪ್ರಖರ ಮಾರ್ಕ್ಸ್‌ವಾದಿಗಾಳಗಿರುವ ಪ್ರೊ. ಸುಧಾ ಪೈ ಹಾಗೂ ಪ್ರೊ.ಅವಿನಾಶ್‌ಕುಮಾರ್ ಅವರು ಈಚೆಗೆ ಅಂಬೇಡ್ಕರ್ ಮತ್ತು ರಾಜ್ಯಗಳ ಪುನರ್ ವಿಂಗಡನೆಗಳ ಬಗ್ಗೆ ಒಳ್ಳೆಯ ಪುಸ್ತಕವೊಂದನ್ನೇ ಬರೆದಿದ್ದಾರೆ. ಪ್ರಸಿದ್ಧ ಚಿಂತಕ ಪ್ರೊ. ವೆಲೆರಿಯನ್ ರಾಡ್ರಿಗ್ಸ್ ಅವರು 'ನಾವೆಲ್ಲ ಸ್ವಲ್ಪ ತಡವಾಗಿ ಅಂಬೇಡ್ಕರ್ ಅವರನ್ನು ಓದಲು ಆರಂಭಿಸಿ ತಪ್ಪು ಮಾಡಿದೆವು' ಎಂದು ಗೊಣಗುತ್ತಾರೆ.

ಇವತ್ತಿನ ದಿನ ದಜೆಎನ್‌ಯುವಿನ ಎಲ್ಲರೂ ಅಂಬೇಡ್ಕರ್ ಅವರನ್ನು ಗಟ್ಟಿಯಾಗಿ ಅಪ್ಪಿಕೊಂಡಿದ್ದಾರೆ. ಅದು ಜೆಎನ್‌ಯುವಿನ ಸ್ವಭಾವಕ್ಕೆ ಅನುಗುಣವಾಗಿಯೇ ಇದೆ. □

# ಗಿಳಿಯು ಪಂಜರದೊಳಿಲ್ಲ



**ಅಷ್ಟೊಂದು ಪ್ರೀತಿಸಿ ನನಗೋಸ್ಕರ ಸಾಯಲೂ ಕೂಡ ಮುಂದಾಗಿದ್ದ ಮಹೇಶ್ ಇವನೇನಾ ಎಂದು ಗಂಗಾ ದಂಗುಬಡಿದು ಹೋದಳು. ಗಂಗಾ ಹಾಸ್ಟೆಲ್‌ನಲ್ಲಿ ಓದಿದ ಹುಡುಗಿ, ಈ ಜಗತ್ತಿನ ಎಲ್ಲ ಆಯಾಮಗಳ ಅರಿವು ಕೂಡ ಅವಳಿಗಿತ್ತು. ಆದರೂ ಅವನ ಮಾತಿನ ಬಾಣ ಅವಳ ಎದೆಯಲ್ಲಿ ಹೊಕ್ಕು ರಕ್ತಕಾರುವಂತೆ ಚುಚ್ಚುತ್ತಿತ್ತು. "ಮಹೇಶ ನಿಜಕ್ಕೂ ನನ್ನ ಪ್ರೀತಿಸಿದ್ನಾ..? ಅಥವಾ ನನ್ನ ರೂಪ ಪಡಿಯೋಕೆ ನಾಟ್ಕಾ ಆಡಿದ್ನಾ? ನನ್ನ ಮನಸ್ಸನ್ನ ಅರ್ಥ ಮಾಡಿಕೊಳ್ಳದೇ ಹೋದ ಇವನೆಂಥ ಗಂಡ? ಇದೆಂಥ ಪ್ರೀತಿ. ಹೌದು ನಾನು ಇವನ ಪ್ರೀತಿಯನ್ನ ಒಪ್ಪಿಕೊಂಡು ತಪ್ಪು ಮಾಡಿದ್ನಾ? ಯಾರೋ ಆಡಿದ ಮಾತಿಗೆ ಇಷ್ಟು ತಲೆಕೆಡಿಸಿಕೊಂಡು ಸಾಯಿ ಎನ್ನುವ ಮಟ್ಟಕ್ಕೆ ಮಾತನಾಡಬೇಕಾದ್ರೆ ಇದೂ ಒಂದು ಪ್ರೀತಿನಾ? ನನ್ನ ಬದುಕು ಅಂಬಿಗನಿಲ್ಲದ ದೋಣಿಯಾಯಿತಾ?" ಪ್ರಶ್ನೆ ಕಾಡತೊಡಗಿದವು. ಯಾವುದಕ್ಕೂ ಉತ್ತರವಿರಲಿಲ್ಲ. ಬಾಲ್ಯ ನೆನಪಿಗೆ ಬಂತು. ಮಹದಾಕಾಂಕ್ಷೆಯ ಅವ್ವ, ಹಾಸ್ಟೆಲ್‌ಗೆ ಬಂದು ತನ್ನನ್ನ ಬಿಟ್ಟು ಹೋದ ಸಾವ್ಕಾರ, ಮೇಡಂ ಹಾಗೂ ತನ್ನ ಗೆಳತಿಯರು ಎಲ್ಲರೂ ಸ್ಮೃತಿಪಟಲದಲ್ಲಿ ಹಾದು ಹೋದರು. ಅವಳಿಗೆ ಮಹೇಶ್‌ನ ವ್ಯಕ್ತಿತ್ವ ತುಂಬಾನೇ ಕಾಡತೊಡಗಿತು.**

ಅಗಲವಾದ ರಸ್ತೆಗಳು, ರಸ್ತೆಗಳ ಮೇಲೆಲ್ಲ ವಾಹನಗಳು, ಕಿಕ್ಕಿರಿದ ಜನಸಂದಣಿ, ಬೆರಗುಗಣ್ಣಿಂದ ಎರಡು ಜಡೆ, ಫ್ರಾಕ್ ಹಾಕಿಕೊಂಡ ಪುಟ್ಟ ಪೋರಿ ಟಾಂಗಾದಲ್ಲಿ ಕುಳಿತು ವಿಸ್ಮಯದಿಂದ ಇದ್ಯಾವ ಜಗತ್ತು? ನಾನ್ಯಾಕೆ ಇಲ್ಲಿಗೆ ಬಂದೆ? ಎಂಬಂತೆ ಆ ಕಡೆ ಈ ಕಡೆ ನೋಡುತ್ತಿದ್ದಳು. ಟಾಂಗಾದವನು ಪೋರಿ ತುಂಬಾ ಸುಂದರವಾಗಿದ್ದಾಳೆ, ಇವಳು ನಿಮ್ಮ ಮಗಳಾ? ಎಂದು ಪಕ್ಕದಲ್ಲಿ ಕುಂತಿದ್ದವನನ್ನು ಕೇಳಿದ. "ಇಲ್ಲ. ಇವಳು ದೇವ್ದಾಸಿ ಮಗ್ಳು. ಚೆನ್ನಾಗಿ ಓದ್ತಾಳೆ. ಪಾಪ ಅಂತ ನಾನು ಇವಳನ್ನು ಶಾಲೆಗೆ ಸೇರಿಸಲು ಬಂದೀನಿ..." ಎಂದ. ಆ ಪುಟ್ಟ ಪೋರಿ ಏನೂ ಅರಿಯದೆ ಪಿಳಿಪಿಳಿ ಕಣ್ಣು ಬಿಡುತ್ತ ತನ್ನ ಪಕ್ಕದಲ್ಲಿ ಕುಳಿತ ಮನುಷ್ಯನನ್ನು ಮೆಲ್ಲಗೆ ಹೆದರುತ್ತ ಕೇಳಿತು, "ನನ್ಯಾಕೆ ಇಲ್ಲಿಗೆ ಕರ್ಕೊಂಡು ಬಂದೀರಿ...?" "ಏ. ಸುಮ್ನಿರು ಅಂತ ಪಿಸುಮಾತಲ್ಲೆ ಗದರಿದ. ಮಗುವಿಗೆ ಮತ್ತೆ ಕಸಿವಿಸಿಯಾಗಿ "ನಮ್ಮವ್ವನ್ ಹತ್ತಿರ ನನ್ನ ಬಿಡ್ರಿ" ಎಂದು ಒಂದೇ ಸಮನೆ ರಾಗ ಎಳೆದು ಅಳತೊಡಗಿದಳು. ಆ ಮನುಷ್ಯ ಅವಳನ್ನು ಸಮಾಧಾನಗೈಯ್ಯಲು ಓಡಾಡುವ ಮೋಟಾರು ತೋರಿಸಿದ, ಜನರನ್ನು ತೋರಿಸಿದ, ಅಂಗಡಿಗಳನ್ನು ತೋರಿಸಿದ. ಆ ಪೋರಿಗೆ ಸಮಾಧಾನವಾಗಲೇ ಇಲ್ಲ. ಕೊನೆಗೆ ಅವನು ಟಾಂಗಾ ಬದಿಗೆ ನಿಲ್ಲಿಸಿ ಕೆಳಗಿಳಿದು ರಸ್ತೆ ಪಕ್ಕ ಜಿಲೇಬಿ ಕರಿಯುತ್ತಿದ್ದ ಹುಡುಗನಿಂದ ಒಂದೆರಡು ಜಿಲೇಬಿ ತಂದುಕೊಟ್ಟ. ಆ ಪುಟ್ಟ ಹುಡುಗಿ ಅಳು ನಿಲ್ಲಿಸಿ ಜಲೇಬಿ ಪೊಟ್ಟಣ ಕೈಗೆ ತೆಗೆದುಕೊಂಡಳು.

ಇನ್ನೂ ಚಿಕ್ಕ ವಯಸ್ಸು, ಒಮ್ಮೆ ಹಠ, ಒಮ್ಮೆ ನಗು, ಒಮ್ಮೆ ಅಳು, ಒಮ್ಮೆ ಮುನಿಸು, ಏನೂ ಅರಿದ ಮುಗ್ಧ ಮನಸ್ಸು. ತನ್ನ ಪುಟ್ಟ ಕೈಗಳಿಂದ ಪೊಟ್ಟಣ ಬಿಚ್ಚಿ ಜಿಲೇಬಿ ತಿನ್ನಲು ಮುಂದಾದಳು. ಟಾಂಗಾ ಕಪ್ಪನೆಯ ಡಾಂಬರ್‌ನ ಮೇಲೆ ಓಡುತ್ತಲಿತ್ತು. ಮಗು ಜಿಲೇಬಿ ತಿನ್ನುತ್ತ ಆ ಕಡೆ ಈ ಕಡೆ ತನ್ನ ಪುಟ್ಟ ಕಣ್ಣುಗಳನ್ನು ಅರಳಿಸಿಕೊಂಡು ನೋಡುತ್ತಲೇ ಇತ್ತು. ಓಡಿ ಓಡಿ ಟಾಂಗಾ ಒಂದು ಕಾಂಪೌಂಡ್‌ನ ಗೇಟಿನ ಒಳಗೆ ತಿರುಗಿತು. ಅದು ವಿಸ್ತಾರವಾದ ಜಾಗ. ದೊಡ್ಡ ದೊಡ್ಡ ಮನೆಗಳು. ಆ ಮನುಷ್ಯ ಕೆಳಗಿಳಿದು ಪುಟ್ಟ ಮಗು ಹಾಗೂ ಬ್ಯಾಗು ಇಳಿಸಿಕೊಂಡು ಟಾಂಗಾದವನಿಗೆ ದುಡ್ಡು ಕೊಟ್ಟು ಮಗುವಿನ ಸಮೇತ ಆ ಬಂಗಲೆಯೊಳಗೆ ಹೋದ. ಬಲಬದಿಯ ಕೋಣೆಯಲ್ಲಿ ಕುರ್ಚಿಯ ಮೇಲೆ ಕುಳಿತಿದ್ದ ಹೆಂಗಸೊಬ್ಬಳಿಗೆ ನಮಸ್ಕರಿಸಿದ. ಓ... ಬಂದ್ರಾ, ಕೂಡ್ರಿ ಎಂದು ಅವಳು ಇವರಿಗೆ ಕುಳಿತುಕೊಳ್ಳಲು ಹೇಳಿ ಮುಂದಿದ್ದ ಖಿರ್ದಿ ಮುಚ್ಚಿದಳು. ಪುಟ್ಟ ಪೋರಿ ಹೆದರುತ್ತ ಆ ಮನುಷ್ಯನ ಕೈಯ್ಯ ಕಿರುಬೆರಳ ಹಿಡಿತವನ್ನು ಇನ್ನೂ ಬಿಗಿ ಮಾಡಿದ್ದಳು. ಆತ ಆಕೆಯನ್ನು ಪ್ರೀತಿಯಿಂದ ಎಂಬಂತೆ ಬೆನ್ನುಮೇಲೆ ಕೈಯ್ಯಾಡಿಸಿ ತಾನು ಕುಳಿತ ಕುರ್ಚಿಯ ಪಕ್ಕದ ಕುರ್ಚಿಯ ಮೇಲೆ ಕೂಡಿಸಿದ. ಅವರಿಬ್ಬರೂ ಅವಳಿಗೆ ಬಾರದ ಭಾಷೆಯಲ್ಲಿ ಏನೇನೋ ಮಾತಾಡಿಕೊಂಡರು. ಆನಂತರ ಆ ಹೆಂಗಸು ಒಂದು ಫಾರಂ ಮೇಲೆ ಆ ಮನುಷ್ಯನ ಸಹಿ ಹಾಕಿಸಿಕೊಂಡಳು.

ಅದು ತುಂಬಾ ಮುದ್ದಾದ ಮಗು. ಉದ್ದವಾದ ಕೂದಲು, ನೀಳವಾದ ಮೂಗು, ಹುಣ್ಣಿಮೆಯ ಬೆಳದಿಂಗಳಿನಂತ ಮೈ ಬಣ್ಣ, ಕಾಮನಬಿಲ್ಲಿನಂತೆ ತಿದ್ದಿ ತೀಡಿದ ಹುಬ್ಬು, ಜೇನು ಕಣ್ಣು. ಅವಳ ಮುಖ ಒಮ್ಮೆ ನೋಡಿದರೆ ನೋಡುತ್ತಲೇ ಇರಬೇಕೆನಿಸುವಷ್ಟು ಆಕರ್ಷಕವಾಗಿತ್ತು. ಅವಳು ತನ್ನ ತಾಯಿಯಂತೆಯೆ ಮುಖಭಾವ. ಅವಳ ತಾಯಿಯೂ ತುಂಬಾ ಅಂದವಾಗಿದ್ದಳು. ಆತ ಆ ಪೋರಿಯನ್ನು ಒಮ್ಮೆ ನೋಡಿ "ಏನು ಅದೃಷ್ಟನೇ ನಿಂದು" ಅಂದುಕೊಂಡು ನಿಟ್ಟುಸಿರಿಟ್ಟ. ಆ ಹೆಂಗಸು ಅವಳನ್ನು ಬಳಿ ಕರೆದು ತನ್ನ ಎರಡೂ ಕೈಯಿಂದ ಬಾಚಿ ತಬ್ಬಿಕೊಂಡಳು. ಕೆನ್ನೆಗೆ ಒಂದು ಮುತ್ತನಿಟ್ಟು "ಇವಳ ಹೆಸರೇನು?" ಎಂದು ಕೇಳಿದಳು.


"ಗಂಗಾ ಅಂತ ಮೇಡಂ..."

"ಇವರ ತಂದೆ ತಾಯಿ ಇದ್ದಾರಾ...?"

□

"ಹಾಂ... ಇವಳಿಗೆ ತಾಯಿ ಇದ್ದಾಳೆ, ತಂದೆ ಇಲ್ಲ, ಇವಳ ತಾಯಿ ನಮ್ಮೂರಿನವಳೆ. ರಾಧಮ್ಮ ಅಂತ. ಇವರಿಗೆ ಮೈತುಂಬಾ ಬಡತನ. ಅದನ್ನೇ ಹಾಸಿ ಹೊದೆಯುವಷ್ಟು. ಅವಳ ಜೊತೆಯಲ್ಲಿ ಇವಳಿಗೆ ಯಾವ ಭವಿಷ್ಯವೂ ಇಲ್ಲ. ಅದಕ್ಕೇ ನಾನೇ ಈ ಮಗೂನ ನಿಮ್ ಹತ್ರ ಬಿಟ್ರೆ ಎರಡ್ ಅಕ್ಷರ ಕಲ್ತು ಏನಾರ ಉದ್ದಾರ ಆಗಲಿ ಅಂತಾ ಇವಳ ಅಮ್ಮನ್ನೊಪ್ಪಿ ಕರ್ಕೊಂಡು ಬಂದೀನಿ. ಅವಳು ಇದು ಕೂಡ ನನ್ನಂಗಾಗೋದು ಬ್ಯಾಡ ಅಂತ ಒಪ್ಪಿದಳು." ಎಂದು ಗಂಗಾಳ ತಲೆ ನೇವರಿಸಿ, ರಮಿಸಿ "ಇವ್ರು ಹೇಳಿದಂಗ ಕೇಳ್ಬೇಕು, ಸಾಲಿಗೆ ಹೋಗ್ಬೇಕು, ಜಾಣೆ ಅನ್ನಿಸ್ಕೊಬೇಕು" ಎಂದು ಹೇಳಿ ಆಕೆಗೆ ವಂದಿಸಿ ಹೊರಟು ಹೋದ.

ಗಂಗಾಳ ಕಣ್ಣಲ್ಲಿ ನೀರು ಜಿನುಗತೊಡಗಿತು. ಆ ವ್ಯಕ್ತಿ ಹೋದ ದಾರಿಯನ್ನೇ ನೋಡುತ್ತ ಬಾಡಿದ ಮುಖ ಹೊತ್ತು ಪಿಳಿಪಿಳಿ ಕಣ್ಣು ಬಿಡುತ್ತಿರುವಾಗ ಮೇಡಂ ಅವಳ ಭುಜದ ಮೇಲೆ ಕೈಯ್ಯಿಟ್ಟು, ಗದ್ದ ಹಿಡಿದು ಸಮಾಧಾನಿಸಿ, ಅವಳನ್ನು ಒಂದು ಕೋಣೆಗೆ ಕರೆದುಕೊಂಡು ಹೋದರು. ಆ ಕೋಣೆಯ ತುಂಬೆಲ್ಲ ಹೆಣ್ಣು ಮಕ್ಕಳು. ಎಲ್ಲರಿಗೂ ಒಂದರ ಮೇಲೊಂದರಂತೆ 4 ಅಂತಸ್ತಿನ ಮಂಚಗಳ ಸಾಲುಗಳು. ಮಂಚದ ಮೇಲೆ ಹಾಸಿಗೆ, ದಿಂಬು. ಅವರ ಸಾಮಾನುಗಳನ್ನು ಇರಿಸಿಕೊಳ್ಳಲು ಎರಡು ಸಾಲಿ ಮಂಚಗಳ ನಡುವೆ ಗೂಡುಗಳು ಇದ್ದವು. ಮೇಡಂ ಎಲ್ಲರನ್ನೂ ಕರೆದು "ಇವ್ಳು ಗಂಗಾ, ಇನ್ಮೇಲೇ ಇವ್ಳು ಇಲ್ಲೇ ಇರ್ತಾಳೆ. ಇವ್ಳನ್ನ ನೀವು ಚನ್ನಾಗಿ ನೋಡ್ಕೊಳಿ, ಜಗಳ ಮಾಡ್ಬೇಡಿ..." ಎಂದಳು.




ಎಲ್ಲ ಮಕ್ಕಳು "ಸರಿ ಮೇಡಂ..." ಎಂದರು ಜೋರಾಗಿ.

ಮೇಡಂ ಹೋದ ನಂತರ ಗಂಗಾ ತನಗೆಂದು ತೋರಿದ ಬೆಡ್ ಮೇಲೆ ಕುಂತಳು. ಮಕ್ಕಳು ಅವಳ ಸುತ್ತ ನೆರೆದರು.

"ಗಂಗಾ, ನಿನ್ನ ಇಲ್ಲಿಗೆ ಯಾರ್ ತಂದು ಸೇರ್ಸಿದ್ರು? ನಿಮ್ದು ಯಾವೂರು? ಎಂದು ಕೇಳಿದಳು ರಮಾ.

"ನನ್ನ ನಮ್ಮೂರಿನ ತಿಮ್ಮಪ್ಪ ಸಾವ್ಕಾರ ಅಂತ ದೊಡ್ಡು ಸಾವ್ಕಾರ. ಅವ್ರ ತಂದು ಇಲ್ಲಿ ಬಿಟ್ರು. ನಮ್ಮೂರು ಆಳಂದ ಐತಿ..." ಎಂದಳು.



ರೇಣುಕಾ ಹೆಳವರ್ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ದೇಗಲ್ಮಡಿ ಗ್ರಾಮದವರು. ಸದ್ಯ ಕಲಬುರ್ಗಿಯಲ್ಲಿ ಪೊಲೀಸ್ ಕೆಲಸ ನಿರ್ವಹಿಸಿಕೊಂಡಿದ್ದಾರೆ. ರಾಜ್ಯಶಾಸ್ತ್ರ ಮತ್ತು ಪತ್ರಿಕೋದ್ಯಮ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕವನ, ಕಥೆ, ಲೇಖನ ಬರೆಯುವುದು ಇವರ ಹವ್ಯಾಸ.

## ರೇಣುಕಾ ಹೆಳವರ್

Email:renuka761@yahoo.com

ತಕ್ಷಣ "ಆ ಸಾವ್ಕಾರ ಯಾಕ ನಿನ್ನ ತಂದು ಇಲ್ಲಿ ಬಿಟ್ಟ...? ಅವ್ರಿಗೂ ನಿಮ್ಗೂ ಏನ್ ಆಗ್ಬೇಕು" ಎಂದು ಸಾವಿತ್ರಿಯ ಕಡೆಯಿಂದ ಪ್ರಶ್ನೆ ತೂರಿಬಂತು. ಪಾಪ ಪುಣ್ಯ ಏನನ್ನೂ ಅರಿದ ಗಂಗಾ, "ನಂಗೊತ್ತಿಲ್ಲ... ಅವ್ವ ಕಳ್ಸಿದ್ಲು ನಾ ಬಂದೆ" ಎಂದಳು.

"ನಿಮ್ಮವ್ವ ನಿನ್ನ ನೋಡೋಕೆ ಬರಲ್ವಾ..." ಎಂದು ಕೇಳಿದಳು ಮಂಜಿ. ಅವ್ವ ಎಂಬ ಶಬ್ದ ಕಿವಿಗೆ ಬಿದ್ದೊಡನೆ ಗಂಗಾ ಅಳಲಾರಂಭಿಸಿದಳು. ಎಲ್ಲ ಪುಟ್ಟ ಪುಟ್ಟ ಹುಡುಗಿಯರೇ, ಅವರಲ್ಲೇ ಸ್ವಲ್ಪ ದೊಡ್ಡವಳಾದ ಹೇಮಾ ಬಂದು ಗಂಗಾಳನ್ನು ಸಮಾಧಾನಿಸಿ, ಎಲ್ಲ ಹುಡುಗಿಯರನ ತಮ್ಮ ಜಾಗಕ್ಕೆ ಕಳಿಸಿದಳು. ಗಂಗಾಳಿಗೆ ಊಟ ಮಾಡಿಸಿ, ಮನೆ ತೋರಿಸಿ ಮಲಗಲು ಹೇಳಿದಳು.

ಗಂಗಾ ಹಾಸಿಗೆ ಮೇಲೆ ಮಲಗಿ, ಅವ್ವನ ನೆನಪಾಗಿ ಕಣ್ಣೀರು ಸುರಿಸಲಾರಂಭಿಸಿದಳು. ಗಂಗಾಳನ್ನ ಇಲ್ಲಿಗೆ ಕಳಿಸುವಾಗ ಅವ್ವ "ನೀ ಗುಲ್ಬರ್ಗಾಕ್ಕ ಹೋಗಿ ಶಾಲಿನ್ಯಾಗ ಚನ್ನಾಗಿ ಓದ್ಕೋಬೇಕು. ನಾನ್ ನಿನ್ನ ನೋಡಾಕ ವಾರಕ್ಕೊಮ್ಮೆ ಬರ್ತೀನಿ" ಅಂತ ಹೇಳಿ ಕಳುಹಿಸಿದ್ದಳು. ಗಂಗಾ ಬಿಕ್ಕುತ್ತಲೇ ನಿದ್ರೆಗೆ ಜಾರಿದ್ದಳು.

ಮರುದಿವಸ ಕಿಟಕಿಯಿಂದ ಸೂರ್ಯನ ಕಿರಣಗಳು ಆ ಎಳೆಯ ಮುಗ್ಧ ಮುಖದ ಮೇಲೆ ಬಿದ್ದಾಗ ಎದ್ದ ಗಂಗಾಳಿಗೆ ಅದು ಹೊಸ ಜಾಗವೆಂಬ ನಿಜ ಮನಸ್ಸಿಗೆ ಬಂತು. ರಮಾ, ಸಾವಿತ್ರಿ, ಮಂಜಿ ಎಲ್ಲರೂ ಸ್ನಾನಕ್ಕಾಗಿ ಕಚ್ಚಾಡ್ತಾ ಇದ್ರು. ಗಂಗಾ ಎದ್ದವಳೇ ಸೀದಾ ತನಗೆ ಬಲವೆನ್ನಿಸಿದ ಹೇಮಾ ಹತ್ತಿರ ಹೋಗಿ ಕುಳಿತಳು. ಅವರ ಗಲಾಟೆ ಮುಗಿದ ಮೇಲೆ ಹೇಮಾ-ಗಂಗಾ ಇಬ್ಬರೂ ರೆಡಿಯಾಗಿ ಕಾಂಪೌಂಡಿನ ಒಳಗೇ ಇರುವ ಶಾಲೆಗೆ ಹೋದರು. ಗಂಗಾಳಿಗೆ ಹೇಮಾ ತರಗತಿಯ ರೂಮ್ ತೋರಿಸಿ ತನ್ನ ತರಗತಿಗೆ ಹೋದಳು. ಗಂಗಾ ತುಂಬಾ ಮುದ್ದಾಗಿದ್ದಳು ಎಂದಷ್ಟೇ ಅಲ್ಲ ಆಟ-ಪಾಠದಲ್ಲೂ ತುಂಬಾ ಚೂಟಿಯಾಗಿದ್ದ ಹುಡುಗಿ ಅನ್ನುವುದು ಬೇಗನೇ ಎಲ್ಲರಿಗೂ ಅರಿವಾಯಿತು. ಕೆಲ ಕಾಲದ ತಾರೀಫಿನಿಂದಲೇ ಅವಳು ಇಡೀ ಕ್ಲಾಸ್‌ಗೆ ಫಸ್ಟ್ ಬರುವಂತಾಯಿತು.

ಆಹ್ವಾನಿತ ಕಥೆ

ಗಂಗಾಳಿಗೆ ನನ್ನವ್ವ ಇವತ್ತು ಬರ್ತಾಳೆ, ನಾಳೆ ಬರ್ತಾಳೆ ಎಂದು ಕಾದು ಕಾದು ಸಾಕಾಗಿತ್ತು. ಅವಳವ್ವ ಮಾತ್ರ ಬರಲೇ ಇಲ್ಲ. ಹೀಗೆ ದಿನ, ವಾರ, ತಿಂಗಳು ವರ್ಷಗಟ್ಟಲೆ ಕಾದ ಗಂಗಾಳಿಗೆ ಕೊನೆಗೆ ತನ್ನ ತಾಯಿಯ ಮುಖವೇ ಸ್ಮೃತಿ ಪಟಲದಿಂದ ಮೆಲ್ಲಗೆ ಮಾಸಿ ಹೋದಂತಾಯಿತು. ದಿನಕಳೆದಂತೆ ತನ್ನ ತಾಯಿಯನ್ನು ಮರೆತು ಗೆಳತಿಯರೊಡನೆ ಸಂತೋಷವಾಗಿ ಕಾಲ ಕಳೆಯಲು ಆರಂಭಿಸಿದಳು. ಓದಿನಲ್ಲಿ ಮುಳುಗಿಹೋದಳು.

ಅವಳು ಈಗ ಹೈಸ್ಕೂಲ್ ಮುಗಿಸಿದಳು. ಗಂಗಾ ಆ ಸಂಸ್ಥೆಗೆ ಮೊದಲ ರ್‍ಯಾಂಕ್ ತಂದುಕೊಟ್ಟಿದ್ದಳು. ಕಾಲೇಜು ಕಟ್ಟೆ ಹತ್ತುವ ಸಮಯ ಬಂತು. ಮೇಡಂ ಅವಳನ್ನು ಕರೆದು "ನಿನ್ನ ಮನಸ್ಸಿನ ಆಸೆಯೇನು" ಎಂದು ಕೇಳಿದ್ದರು. ಸೈನ್ಸ್

ಮಾಡಿ ಮುಂದೆ ಡಾಕ್ಟರ್ ಆಗಿ ಬಡ ರೋಗಿಗಳ ಸೇವೆ ಮಾಡೋ ಕನಸು ಹೊತ್ತಿದ್ದಳು ಅವಳು. ಅದನ್ನೇ ಮೇಡಂ ಹತ್ತಿರ ನಿವೇದಿಸಿಕೊಂಡಳು. ಗಂಗಾ ಸೈನ್ಸ್ ಆಯ್ಕೆ ಮಾಡಿ ಕಾಲೇಜು ಮೆಟ್ಟಿಲೇರಿದಳು. ಮೇಡಂ ಡೋನರ್‌ಗಳ ಸಹಾಯದಿಂದ, ಕಾಲೇಜು ಆಡಳಿತ ಮಂಡಳಿಯ ಸಹಕಾರದಿಂದ ಪ್ರತಿಷ್ಠಿತ ಕಾಲೇಜನ್ನೇ ಸೇರಿದ್ದಳು. ಒಳ್ಳೆಯ ಶ್ರದ್ಧಾವಂತ ಗೆಳತಿಯರ ಒಡನಾಟ, ಉತ್ತಮ ಪಾಠ ಪ್ರವಚನಗಳಿಂದ ಗಂಗಾ ಸೈನ್ಸ್‌ನಲ್ಲಿ ರಾಜ್ಯಕ್ಕೆ ಮೊದಲ ರ್‍ಯಾಂಕ್ ಪಡೆದು ಸೈ ಎನಿಸಿಕೊಂಡಳು. ಸಿಇಟಿಯಲ್ಲಿ ಅವಳು ಮೊದಲ ಐವತ್ತರಲ್ಲಿ ಜಾಗ ಪಡೆದು ಬೆಂಗಳೂರಿನಲ್ಲಿ ಉಚಿತ ವೈದ್ಯಕೀಯ ಸೀಟು ಸಿಕ್ಕಿತ್ತು. ತಾನು ಬೆಳೆದ ಶಾಲೆ, ಡಾರ್ಮಿಟರಿ ಮಾತ್ರವಲ್ಲ ಮೇಡಂ ಹಾಗೂ ತನ್ನ ಸಹಪಾಟಿಗಳಾದ ಹೇಮಾ, ಸಾವಿತ್ರಿ, ಮಂಜು ಎಲ್ಲರನ್ನೂ ತೊರೆದು ಬೆಂಗಳೂರಿಗೆ ಹೋಗಬೇಕಾಗಿ ಬಂದು ಗಂಗಾ ನೋವು, ಆತಂಕ, ಕಳವಳಗೊಂಡು ಒಬ್ಬಳೇ ಕುಳಿತು ಅಳಲಾರಂಭಿಸಿದಳು. ಸುದ್ದಿ ತಿಳಿದ ಮೇಡಂ ಗಂಗಾಳನ್ನು ಸಮಾಧಾನಪಡಿಸಿದರು, “ಹೆದರಬೇಡ. ನೀನು ಸಾಧಕಿಯಾಗಬೇಕು. ಬೆಂಗ್ಳೂರಿನಲ್ಲಿ ನಮ್ದೊಂದು ಬ್ರಾಂಚ್ ಇದೆ. ಅಲ್ಲಿ ಮೇರಿ ಅಂತ ನನ್ನ ಫ್ರೆಂಡ್ ಒಬ್ರು ಇದ್ದಾರೆ. ನಾನು ಕಾಗ್ದ ಬರ್ದು ಕೊಡ್ತೇನಿ. ಅವರು ನಿನಗೆ ಹೆಲ್ಪ್ ಮಾಡ್ತಾರೆ. ಆರಾಮಾಗಿ ಓದಿ ಡಾಕ್ಟರ್ ಆಗಿ ಬಂದು ಇಲ್ಲೇ ರೋಗಿಗಳ ಸೇವೆ ಮಾಡೊಂತಿ, ಅಳ್ಬಾರ್ದು” ಎಂದು ಸಮಾಧಾನ ಮಾಡಿದರು.

ಗಂಗಾಳನ್ನ ಮೇಡಂ ಮತ್ತು ಎಲ್ಲ ಗೆಳತಿಯರು ಕಣ್ತುಂಬಿ ಹಾರೈಸಿದರು. ಗಂಗಾ ಕಾಲೇಜಿಗೆ ಹಾಜರಾದಳು. ತುಂಬಾ ಮೌನಿಯಾದ ಗಂಗಾ, ಕಾಲೇಜಿಗೆ ಮೊದಲ ದಿನ ಹೋದಾಗ ಎಲ್ಲರೂ ಇವಳನ್ನು ಗೋಳು ಹೋಯ್ದುಕೊಂಡಿದ್ದೂ ಇದೆ. ಆನಂತರ ಇವಳ ಸರಳತೆ, ಜಾಣ್ಮೆಗೆ ಶರಣಾಗಿ ಗಂಗಾಳ ಸ್ನೇಹ ಸಂಪಾದಿಸಲು ಒಬ್ಬೊರಾಗಿ ಬಯಸಿದರು. ಆದರೆ ಗಂಗಾ ತಾನಾಯಿತು ತನ್ನ ಓದಾಯಿತು ಎಂದುಕೊಂಡಿದ್ದಳು.

ಕಾಲ ಉರುಳುತ್ತಿತ್ತು. ಅವಳ ಸರಳತೆ, ಸ್ನಿಗ್ಧ ಸೌಂದರ್ಯಕ್ಕೆ ಹಲವರಂತೆ ತಾನೂ ಮರುಳಾಗಿದ್ದ ಸಹಪಾಠಿ ಮಹೇಶ ಅವಳಿಗೆ ಹತ್ತಿರವಾಗಲು ಹೆಣಗಿದ್ದ. ತನ್ನ ಪ್ರೀತಿಯನ್ನು ನಿವೇದಿಸಿಕೊಂಡ ಕೂಡ. ಗಂಗಾ ನಯವಾಗಿ ತಿರಸ್ಕರಿಸಿದ್ದಳು. ಮಹೇಶ್ ಯತ್ನಿಸಿ ಯತ್ನಿಸಿ ಹುಚ್ಚನಂತಾದ. ಸೂಸೈಡ್ ಮಾಡಿಕೊಂಡುಬಿಡುವುದಾಗಿ ಹೆದರಿಸಿದ. ಅವಳು ಅಂತಹ ದುರ್ಬಲ ಮನಸ್ಸಿನವನಿಗೆ ಏನೂ ಸಾಧ್ಯವಿಲ್ಲ ಎನ್ನಿಸಿದೆಯೆಂದು ಹೇಳಿಯೇ ಬಿಟ್ಟಳು. ಅವಳ ಓದು ಮುಗಿದು ಇಂಟರ್ನ್‌ಶಿಪ್ ಶುರುವಾಗಿತ್ತು.

ಹೀಗೆ ಹಲವಾರು ತಿಂಗಳು ಹತಾಶನಾಗಿ ಬೆನ್ನಿಗಂಟಿದ ಮಹೇಶ್ ಎಂಥದೋ ಹರಾಕಿರಿ ಮಾಡಿಕೊಂಡು ಆಸ್ಪತ್ರೆಗೆ ದಾಖಲಾದ. ವಿಷಯ ತಿಳಿದ ಗಂಗಾ ಮಹೇಶ್‌ನನ್ನು ನೋಡಲು ಬಂದಳು. ಆತ ಐಸಿಯುನಲ್ಲಿದ್ದ. ಅವಳ ಮನಸ್ಸು ಅವನ ಈ ಸ್ಥಿತಿಗೆ ನಾನೆ ಕಾರಣವೆ ಎಂಬ ಸುಳಿಗೆ ಸಿಲುಕಿತು. ಅವನು ಗುಣಮುಖನಾಗಿ ವಾರ್ಡಿಗೆ ಶಿಫ್ಟ್ ಆಗುವವರೆಗೂ ಪ್ರತಿದಿನ ಬೆಳಿಗ್ಗೆ, ಸಂಜೆ ಅವನನ್ನು ನೋಡಿ ಹೋಗುತ್ತಿದ್ದಳು. ಯಾಕೋ ಅವಳಲ್ಲಿ ಮೂಡಿದ್ದ ಅವನು ಹೇಡಿಯೆಂಬ ಭಾವ ದೂರಸರಿದು ಅವನ ಪ್ರೀತಿಯ ಉತ್ಕಟತೆ ಮಾತ್ರ ಮನಸ್ಸಿನಲ್ಲಿ ಉಳಿಯುವುದಾಯಿತು. ಆ ಮುಂಜಾನೆ ಅವಳು ವಾರ್ಡ್‌ಗೆ ಭೇಟಿಯಿತ್ತಾಗ ಮಹೇಶ್ ನಿದ್ರೆಯಲ್ಲಿದ್ದ. ಅವಳ ಮನಸ್ಸು ತುಂಬಿ ಬಂತು. ಅವನ ಹಣೆಗೆ ಹೂಮುತ್ತು ನೀಡಿ ಅಲ್ಲಿಂದ ಹೊರಟು ಹೋದಳು.

ಅವಳ ಇಂಟರ್ನ್‌ಶಿಪ್ ಮುಗಿದು ಅವಳಿಗೆ ಪದವಿ ದೊರೆಯಿತು. ಕೆಎಂಸಿಯಲ್ಲಿ ನೊಂದಾಯಿಸಿಕೊಂಡು ಆಳಂದಕ್ಕೆ ಹೊರಡುವ ಸನ್ನಾಹದಲ್ಲಿ ಅವಳಿದ್ದಳು. ಮಹೇಶ್ ಏನು ಮಾಡುವನೋ? ನಮ್ಮಿಬ್ಬರ ನಡುವೆ ಪ್ರೇಮಾಂಕುರವಾಗಿದೆಯೇ ಎಂಬ ಶಂಕೆ ಅವಳಲ್ಲಿ ಮೊಳೆದಿತ್ತು. ಒಮ್ಮೊಮ್ಮೆ ಅವನ ಕಡೆಗೆ ಸೆಳೆತವೊಂದು ಬಲವಾಗಿ ಸೆಳೆಯುವುದು. ಅವನಾದರೋ ದಿನಕ್ಕೆ ಹತ್ತು ಕಾಲ್ ಮಾಡುವ. ಆಗೀಗೊಮ್ಮೊಮ್ಮೆ ಅವರು ಒಂದೆಡೆ ಮೀಟ್ ಆಗುವರು. ಎಲ್ಲಿಯಾದರೂ ಕಾಫಿ ತಿಂಡಿ. ಅಷ್ಟೊಂದು ದೀರ್ಘ ಮಾತು. ಯಾವ್ಯಾವುದೋ ವಿಚಾರ.

ಪ್ರೀತಿ ಗಟ್ಟಿಯಾಗಿ ಗೆಳೆಯರ ಸಮ್ಮುಖ ಮಹೇಶ ಗಂಗಾಳನ್ನು ಮದುವೆಯಾಗಿ ತನ್ನೂರಿಗೆ ಕರೆದುಕೊಂಡು ಹೋಗಲು ರೆಡಿಯಾದ. ಬಳಿಕ ತಂದೆ ತಾಯಿಗೆ ವಿಚಾರ ತಿಳಿಸಿ ಶ್ರಮ ಪಟ್ಟು ಅವರನ್ನು ಸಮಾಧಾನಪಡಿಸಿದ. ಅವರು ಕೇಳಿದ್ದ ಮೊದಲ ಪ್ರಶ್ನೆ ಹುಡುಗಿಯ ಕುಲ ಗೋತ್ರ, ಜಾತಿ, ಇತ್ಯಾದಿ. ಮಹೇಶನಿಗೆ ಆ ಪ್ರಶ್ನೆ ಮೂಡಿದ್ದು ಆಗಲೇ ಮೊದಲು. ಇಷ್ಟೂ ದಿನ ಅವನು ಆ ಕುರಿತು ಯೋಚಿಸಿಯೇ ಇರಲಿಲ್ಲ. ಮನುಷ್ಯ ಜಾತಿ ಅಂದಿದ್ದ.

ಗಂಗಾ ಇಲ್ಲಿನ ಸಿಸ್ಟರ್‌ಗೆ ಮತ್ತೆ ಮೇಡಂಗೆ ಮಾತ್ರ ವಿಷಯ ತಿಳಿಸಬೇಕಿತ್ತು. ತಿಳಿಸಿದಾಗ ಸಂತೋಷಪಟ್ಟರು. ಅವರ ಮುಂದೆ ಜಾತಿಯ ಪ್ರಶ್ನೆಗಳಿರಲಿಲ್ಲ.

ಮಹೇಶನೂರಿಗೆ ಇಬ್ಬರೂ ಬಸ್ ಹತ್ತಿದರು. ಗಂಗಾ ಮಾತ್ರ ಮಹೇಶನ ಮನೆಯವರು ತನ್ನನ್ನು ಒಪ್ಪಿಕೊಳ್ತಾರೋ ಇಲ್ಲವೋ ಎಂಬ ಆತಂಕದಲ್ಲಿಯೇ ಇದ್ದಳು. ಇಬ್ಬರೂ ಬಸ್‌ನಲ್ಲಿ ಕುಂತಲ್ಲಿಯೇ ಆಲೋಚನೆಗೆ ಜಾರಿದರು. ಆನಂತರ ಮಹೇಶ ಕಿಟಕಿಯ ಅಕ್ಕಪಕ್ಕ ಕೈ ತೋರಿಸಿ ಏನೇನೋ ಮಾತಾಡುತ್ತಿದ್ದ. ಗಂಗಾಳಿಗೆ ವಾಸ್ತವ ಜಗದ ಅರಿವೇ ಇರಲಿಲ್ಲ. ಮಹೇಶ ಅವಳ ಭುಜ ತಟ್ಟಿ ಎಚ್ಚರಿಸಿ ಕಾರಣ ಕೇಳಿದ. ತನ್ನ ಮನಸ್ಸಿನ ಆತಂಕ ಹೇಳಿದರೆ ಎಲ್ಲಿ ಅವನಿಗೆ ನೋವಾಗುತ್ತೋ ಎಂದು ಕಾರಣ ಹೇಳದೆ ಮರೆಮಾಚಿದಳು. ಗಂಗಾಳಿಗೆ ಉಂಟಾದ ಚಿಂತೆಯಿಂದಾಗಿ ಮನಸ್ಸಿನಲ್ಲಿ ಯಾವುದೇ ಉಲ್ಲಾಸವೂ ಇರಲಿಲ್ಲ. ಮಹೇಶ ಅದೂ ಇದು ಅಂತ ಮಾತನಾಡುತ್ತಲೇ ಇದ್ದ. ಗಂಗಾ “ಆಹಾ, ಊಂ...” ಎಂದು ಚುಟುಕಾಗಿಯೇ ಉತ್ತರಿಸುತ್ತಿದ್ದಳು. ದೂರದಲ್ಲಿ ಎಲ್ಲೋ ಮಳೆ ಕಾಲುಬಿಟ್ಟಿತ್ತು. ಆ ಕಡೆಯಿಂದ ಬೀಸಿದ ಗಾಳಿ ತಂಪಾಗಿದ್ದು ಸ್ವಲ್ಪ ಹಿತವೆನಿಸಿತು. ಬಸ್ ನಿಲ್ದಾಣ ಬಂದೇಬಿಟ್ಟಿತು. ಅಲ್ಲಿ ಇಳಿದು ಇಬ್ಬರೂ ಟೀ ಕುಡಿದು ಬಸ್ ಕಾದರು.

ಗುಲ್ಬರ್ಗಾದಿಂದ ಆಳಂದ ಕೇವಲ 45 ನಿಮಿಷದ ದಾರಿ. ಗಂಗಾಳ ಮನಸ್ಸು ಭಾರೀ ಹೊಯ್ದಾಟದಲ್ಲೇ ಇತ್ತು. ಯೋಚನೆಯಲ್ಲೇ ಅವಳು ಬೆದರಿ ಬಾಯಾರಿದ್ದಳು. ಮಹೇಶ್ ನೀರಿನ ಬಾಟಲ್ ತಂದ. ಬಾಟಲ್ ಮುಚ್ಚಳ ತೆಗೆದು ನೀರು ಕುಡಿದಳು. ಮೈಯ್ಯಲ್ಲಾ ಬೆವರಿದ್ದಳು. ಮಹೇಶ ಇದನ್ನು ಗಮನಿಸಿ “ಹೇ, ಯಾಕೆ ಹಿಂಗೆ ಹೆದರಿದ್ದೀಯ? ನಿನ್ ಜೊತೆ ನಾನಿಲ್ವಾ... ಇಡೀ ಪ್ರಪಂಚವೇ ಎದುರಾದ್ರೂ ನಾನು ನಿನ್ನ ಕೈ ಬಿಡೊಲ್ಲ. ಅಪ್ಪ-ಅಮ್ಮ-ಮಾವ ಎಲ್ರೂ ಚನ್ನಾಗಿದ್ದಾರೆ. ನನ್ನ ನಂಬು ಎಂದ. ಅವಳಿಗೆ ಸಮಾಧಾನವಾಗಲಿಲ್ಲ. ಮನಸ್ಸು ಮಾತ್ರ ಕಡಲ ತೆರೆಗೆ ಸಿಕ್ಕ ದೋಣಿಯಂತೆ, ಸೂತ್ರವಿಲ್ಲದ ಗಾಳಿಪಟದಂತೆ ಅಲೆಮಾರಿಯಾಗಿತ್ತು.

ಬಸ್ ನಿಂತಾಗ ಮಹೇಶ್ ಗಂಗಾಳನ್ನು ಊರು ಬಂತು ಇಳಿ ಎಂದ. ಕಿಟಕಿಯಿಂದ ಹೊರ ನೋಡಿದಳು. “ಆಳಂದ ಬಸ್ ಸ್ಟ್ಯಾಂಡ್” ಎಂದು ಬರೆದಿತ್ತು. ದೀರ್ಘವಾದ ಉಸಿರೆಳೆದುಕೊಂಡು ಬಸ್‌ನಿಂದ ಇಳಿದಳು. ಇಬ್ಬರೂ ಆಟೋ ಹತ್ತಿದರು. ಮಹೇಶ ತೋರಿದಂತೆ ಗಲ್ಲಿ ಸುತ್ತಿ ಒಂದು ಮನೆ ಮುಂದೆ ಬಂದು ಆಟೋ ನಿಂತಿತು. ಮಹೇಶ್ ಆಟೋದಿಂದ ಇಳಿದು ಹಣ ನೀಡಿ ಗಂಗಾಳನ್ನು ಕರೆದುಕೊಂಡು ಮನೆಯ ಒಳಗೆ ಹೋದ.

ಗಂಗಾಳನ್ನು ಮನೆಯ ಹಾಲ್‌ನಲ್ಲಿ ಕೂರಿಸಿದ. ಯಾರೂ ಇವರ ಹಾದಿ ಕಾಯುತ್ತಿರಲಿಲ್ಲ. ಮಹೇಶ ಒಬ್ಬ ವಯಸ್ಸಾದ ವ್ಯಕ್ತಿಯನ್ನು ಕರೆದು ಪರಿಚಯ ಕೂಡಾ ಮಾಡಿಸದೆ ಒಂದು ಕೋಣೆ ಸೇರಿದ. ಇಬ್ಬರೂ ಬಾಗಿಲು ಹಾಕಿಕೊಂಡರು. ಸ್ವಲ್ಪ ಸಮಯದ ನಂತರ ಇಬ್ಬರೂ ಹೊರ ಬಂದರು. ಆ ವ್ಯಕ್ತಿ ಸೋಫಾದಲ್ಲಿ ಕೂತು ಗಂಗಾಳನ್ನು ನೀನು ಯಾರವ್ವಾ? ಯಾವ ಊರು? ನಿನ್ನ ತಂದೆ ತಾಯಿ ಹೆಸರೇನು ಎಂದು ಪ್ರಶ್ನೆಗಳ ಮಳೆ ಸುರಿಸಿದ. ಗಂಗಾ ಅಳುಕುತ್ತಲೇ ತನ್ನ ಪ್ರವರ ಹೇಳಿದಳು. ಶಂಕಾದೃಷ್ಟಿಯಲ್ಲಿಯೇ ಅವಳನ್ನು ನೋಡುತ್ತಿದ್ದ ಆ ವ್ಯಕ್ತಿ “ಹಾಗಾದ್ರೆ ನಿನ್ ಹೆಸ್ರು ಗಂಗಾ ಅಲ್ವಾ...!?” ಕೇಳಿದ.

ತಕ್ಷಣ ಗಂಗಾಳಿಗೂ ಶಾಕ್!! ಅವಳು “ಹೌದು...” ಎಂದು ತಲೆಯಲ್ಲಾಡಿಸಿದಳು. ರೋಷ ಉಕ್ಕಿದಂತಾದ ಆ ವ್ಯಕ್ತಿ ಎದ್ದು ಮಹೇಶನಿಗೆ ಎರಡೇಟು ಬಾರಿಸಿದ. ಫೋನ್ ಹಚ್ಚಿ ಮಹೇಶನ ತಂದೆ ತಾಯಿಯನ್ನು ಅವರ ಮನೆಗೆ ಕರೆಸಿದ. ಮಹೇಶನನ್ನು ಎಲ್ಲರೂ ಬೈತಿದ್ದರು. ಗಂಗಾ ಮಾತ್ರ ಅಪರಾಧಿಯಂತೆ ಸುಮ್ಮನಿದ್ದಳು. ಮಹೇಶನ ತಂದೆ ತಾಯಿ ಅವರ ಮಾವನ ಮನೆಗೆ ಬಂದರು. ಅವರಿನ್ನೂ ಬಾಗಿಲತಲುಪಿರಲಿಲ್ಲ. ಆಗಲೇ “ಬಾ ಅಕ್ಕ ಬಾ, ನಿನ್ನ ಮಗ ಬಹಳಾ ಘನಂದಾರಿ ಕೆಲ್ಸ ಮಾಡ್ಕೊಂಡ್ ಬಂದಾನ... ಡಾಕ್ಟರ್ ಓದಿ ಬಾ ಅಂದ್ರ ನಿಂಗ ಸೊಸಿ ತಂದಾನ. ಯಾರ್‍ನಾಂತಿ? ದೇವ್ದಾಸಿ ಮಗಳನ್ನ...”

ಗಂಗಾ ಸಿಡಿಲು ಬಿದ್ದಂಗೆ ಹಾರಿಬಿದ್ದಳು. ತನ್ನ ಜನ್ಮದ ರಹಸ್ಯ ಇಲ್ಲಿಯವರೆಗೂ ಅವಳಿಗೆ ಗೊತ್ತಿರಲಿಲ್ಲ! ಅವಳು ಮನೆ ಬಿಟ್ಟಾಗ ಅವಳಷ್ಟು ಚಿಕ್ಕವಳು.

“ಇವನ್ಯಾರು? ನನಗಿಂತ ಇವನಿಗೆ ನನ್ನ ಬಗ್ಗೆ ಗೊತ್ತಿದೆ.” ಎಂದು ಅಬ್ಬರಿಸಿದಳು. ಸದಾ ಮೌನಿಯಾಗಿ ಹಸನ್ಮುಖಿಯಾಗಿದ್ದ ಗಂಗಾಳನ್ನು ಮಾತ್ರ ನೋಡುತ್ತಿದ್ದ ಮಹೇಶ, ಅಲ್ಲಿ ಅಬ್ಬರಿಸಿದ ಸಿಡಿಲಮರಿಯಂತಾದ ಗಂಗಾಳನ್ನು ನೋಡಿ ಒಂದು ಕ್ಷಣ ಸ್ಥಂಭೀಭೀತನಾದ. ಆ ವ್ಯಕ್ತಿ “ಅದ್ಯಾಕವ್ವಾ ಹಂಗೆ ಹಾರತಿ. ನಾನಾ ನಿನ್ನ ಸ್ಕೂಲಿಗೆ ಕರ್‍ಕೊಂಡು ಹೋಗಿ ಸೇರ್‍ಸಿದೋನು.” ಎಂದ. ಗಂಗಾಳಿಗೆ ಆಕಾಶವೇ ತಲೆ ಮೇಲೆ ಬಿದ್ದಂತಾಯಿತು. “ಹಂಗಾದ್ರ ನೀವು ತಿಮ್ಮಪ್ಪ ಸಾವ್ಕಾರ್‍ರಾ?. ನನ್ ತಾಯಿ ಯಾರು? ಅವಳನ್ನು ನೀವು ಹೆಂಗೆ ದೇವದಾಸಿ ಅನ್ತೀರಿ” ಅಂತ ಕೊರಳುದುಂಬಿ ಕೇಳಿದಳು.

ತಿಮ್ಮಪ್ಪ ಅಬ್ಬರಿಸುತ್ತ "ಸಾಕ್ಷಿ ಕೇಳ್ತೀಯಾ ಸಾಕ್ಷಿ... ನಾನೇನೇ ದಂತ ಸಾಕ್ಷಿ... ನಿಮ್ಮವ್ವ ದಲಿತ ಜಾತೇಳ್ವು, ರಾಧಮ್ಮ ಅಂತ ಅವಳ್ ಹೆಸ್ರು. ಅವ್ವು ದೇವ್ದಾಸಿಯಾದಾಗ ನಾನೇ ಅವಳನ್ನು ಇಟ್ಟುಕೊಂಡಿದ್ದೆ. ನೀನು ದೇವದಾಸಿ ಆಗೋದು ಬ್ಯಾಡಾ. ಏನರಾ ಮಾಡಿ ಈಕಿನ ಸಾಲಿಗೆ ಹಾಕ್ರಿ ಸಾವ್ಕಾರ್ರ ಅಂತ ಕಾಡಿ ಬೇಡಿದ್ಲು. ನಾನೇ ಹೋಗ್ಲಿ ಪಾಪ ಅಂತ ನಿನ್ನನ್ನ ಸಿಟಿಲಿರೋ ಕಿರಿಸ್ತಾನದವರ ಧರ್ಮದ ಸಾಲಿಗೆ ಸೇರ್ಸಿದ್ದೆ. ಆಮೇಲೆ ನಿಮ್ಮವ್ವ ಅದೇನೋ ರೋಗ ಹತ್ತಿ ಸತ್ತೋದ್ಲು. ಆದ್ರ ಈಗ್ ನೀ ಬಂದು ನಮ್ ಹುಡ್ಗನ್ ಮದ್ವೆಯಾಗಿ ನಮ್ ಮಾನ ಮರ್ವಾದಿ ಕಳೀಯಾಕ್ ಹೊಂಟಿಯಾ..." ಎಂದ. ಬಳಿಕ ಮಹೇಶ ತಾಯ ಕಡೆ ತಿರುಗಿ "ಇವ್ಳೇ ನಿಮ್ಮ ಸೊಸಿ, ಇವ್ಳನ್ನ ಮನಸಾರೆ ಇಷ್ಟಪಟ್ಟು ಮದ್ವಿಯಾಗಿದೀನಿ. ದಯಮಾಡಿ ಮನಿ ಸೇರಿಸ್ಕೋ ..." ಎಂದ ಗೋಗರೆದ. ಅವನಪ್ಪ ಬುಸುಬುಸು ಕಾವಿನಂತೆ ಕೆರಳಿ ದಮ್ಮು ಹೆಚ್ಚಾದವನಂತೆ ಏದುಸಿರು ಬಿಡತಿದ್ದ. ಮಹೇಶ ಎಂಥದಂದರೂ "ನೀ ಬೇಕಾದ್ರೆ ಇವ್ಳ ಜತಿ ಹಾಳಾಗಿ ಹೋಗು, ಈ ದೇವ್ದಾಸಿ ಹೆಣ್ಣನ್ನ ಸೊಸಿ ಅಂತ ಒಪ್ಕೊಳ್ಳೊದಿಲ್ಲ." ಎಂದು ಕಡ್ಡಿ ಮುರ್ದಂಗ ಹೇಳಿಬಿಟ್ಟರು ಅವರು.

ಮಹೇಶ ಗಂಗಾಳ ಕೈ ಹಿಡಿದು "ಈ ಮನ್ಯಾಗ ಒಂದು ಕ್ಷಣ ಇರೋದ್ ಬ್ಯಾಡ, ನಾವೆಲ್ಲಾದ್ರೂ ಹೋಗಿ ಹಾಯಾಗಿ ಬದ್ಕೋಣ ಬಾ" ಎಂದು ಕರೆದುಕೊಂಡು ಹೋದ. ಗಂಗಾಳ ಮನಸ್ಸು ಒಂದುಕಡೆ ತನ್ನ ಅವ್ವನ ಬದುಕನ್ನು ಕೆದಕಿದವನ ಮೇಲೆ ಬೆಂಕಿ



ಉಗುಳುವಂತಾಗಿತ್ತಾದರೂ ಮಹೇಶ ತನ್ನ ಬೆಂಬಲಕ್ಕೆ ನಿಂತಿದ್ದು ಕಂಡುಉಮ್ಮಳ ಕಡಿಮೆಯಾದಂತೆನಿಸಿತು. ಅವನ ಹಿಂದ ಹೊರಟಳು. ಆಳಂದದಲ್ಲೇ ಜನಸೇವಾ ಮಾಡಬೇಕಂತ ಒಂದು ಮನೆ ಮಾಡಿ ಇಬ್ಬರೂ ಉಳಿದರು. ಮಹೇಶನ ಮಾವ, ತಂದೆ ತಾಯಿ ಮಾತ್ರ ಮಗನ ಮಮಕಾರವನ್ನೂ ತೊರೆದು ಊರಲ್ಲೆಲ್ಲ ಇವಳು ದೇವದಾಸಿ... ದೇವದಾಸಿ... ಎಂದು ಹಬ್ಬಿಸಿದರು. ಕೆಲವ್ರು ಪೋಕರಿಗಳು ಮಹೇಶನಿಗೆ "ನಿನ್ನ ಹೆಂಡ್ತಿ ದೇವ್ದಾಸಿಯಂತ... ಎಷ್ಟು ದುಡ್ ಬೇಕಾದ್ರೂ ಕೇಳು ನಮ್ ಹತ್ರಾನು ಒಂದ್ ಸರಿ ಕಳ್ಸು..." ಎಂದು ಮುಖಕ್ಕೆ ಹೊಡೆದಂತೆ ಕೇಳ್ತಿದ್ರು.

ಇದೆಲ್ಲರಿಂದ ಬೇಸತ್ತ ಮಹೇಶ ಈಚೆಗೆ ಗಂಗಾಳ ಮೇಲೆ ಸಿಡಿಮಿಡಿಗೊಳ್ತಿದ್ದ. ಗಂಗಾಳಿಗೂ ಸಹ ಅಕ್ಕಪಕ್ಕದವ್ರು "ನಿಮ್ಮವ್ವ ದೇವ್ದಾಸಿಯಂತ, ನೀನೂ ದೇವ್ದಾಸಿಯಂತ, ಖರೇನಾ...?" ಎಂದು ಕೇಳುತ್ತಿದ್ದರು. ಹಂದೆ ಮುಖಕ್ಕೆ ಸೆರಗು ಹಚ್ಚಿ ನಗುತ್ತಿದ್ದರು. ಇದರಿಂದ ಮನನೊಂದ ಗಂಗಾ ಇದನ್ನೆಲ್ಲ ಮಹೇಶನ ಬಳಿ ತೋಡಿಕೊಂಡಳು. ಮಹೇಶ ಕೋಪದಿಂದ "ನನ್ ಕರ್ಮ ನಿನ್ನಂತವ್ಳನ್ನ ಕಟ್ಕೊಂಡು ನಾನ್ ಅನ್ಬವಿಸ್ಬೇಕಾಗಿದೆ. ಪ್ರೀತಿ ಪ್ರೇಮ ಅಂತ ನಿನ್ ಜತಿ ಬಾಳ್ವೆ ಮಾಡೋಕೆ ಬಂದೆ ನೋಡು, ನಂಗೆ ನಾನ್ ಹೊಡ್ಕೊಬೇಕು. ಎಲ್ಲಿಗಾದ್ರೂ ಹೋಗಿ ಸಾಯಿ, ಆಗ್ಲೆ ನಂಗೆ ನೆಮ್ಮದಿ. ಆಮೇಲಾದ್ರೂ ನೆಮ್ಮದಿ ಸಿಕ್ತೈತಿ. ತಲೆ ಎತ್ತಿ ಬಾಳಾಕ್ ಆಗ್ತಿಲ್ಲ ನಿನ್ನಿಂದ. ಥೂ... ದೇವ್ದಾಸಿ ಮಗಳು ಅಂತ ಮೊದ್ಲೇ ಗೊತ್ತಿದ್ರೆ ನಿನ್ ಮೂಸಿಕೂಡ ನೋಡ್ತಿರ್ಲಿಲ್ಲ..." ಎಂದು ಹೊರನಡೆದಿದ್ದ.


ಅಷ್ಟೊಂದು ಪ್ರೀತಿಸಿ ನನಗೋಸ್ಕರ ಸಾಯಲೂ ಕೂಡ ಮುಂದಾಗಿದ್ದ ಮಹೇಶ್ ಇವನೇನಾ ಎಂದು ಗಂಗಾ ದಂಗುಬಡಿದು ಹೋದಳು. ಗಂಗಾ ಹಾಸ್ಟೆಲ್‌ನಲ್ಲಿ ಓದಿದ ಹುಡುಗಿ, ಈ ಜಗತ್ತಿನ ಎಲ್ಲ ಆಯಾಮಗಳ ಅರಿವು ಕೂಡ ಅವಳಿಗಿತ್ತು. ಆದರೂ ಅವನ ಮಾತಿನ ಬಾಣ ಅವಳ ಎದೆಯಲ್ಲಿ ಹೊಕ್ಕು ರಕ್ತಕಾರುವಂತೆ ಚುಚ್ಚುತ್ತಿತ್ತು. "ಮಹೇಶ ನಿಜಕ್ಕೂ ನನ್ನ ಪ್ರೀತಿಸಿದ್ನಾ..? ಅಥವಾ ನನ್ನ ರೂಪ ಪಡಿಯೋಕೆ ನಾಟ್ಕಾ ಆಡಿದ್ನಾ? ನನ್ನ ಮನಸ್ಸನ್ನ ಅರ್ಥ ಮಾಡಿಕೊಳ್ಳದೇ ಹೋದ ಇವನೆಂಥ ಗಂಡ? ಇದೆಂಥ ಪ್ರೀತಿ. ಹೌದು ನಾನು ಇವನ ಪ್ರೀತಿಯನ್ನ ಒಪ್ಪಿಕೊಂಡು ತಪ್ಪು ಮಾಡಿದ್ನಾ? ಯಾರೋ ಆಡಿದ ಮಾತಿಗೆ ಇಷ್ಟು ತಲೆಕೆಡಿಸಿಕೊಂಡು ಸಾಯಿ ಎನ್ನುವ ಮಟ್ಟಕ್ಕೆ ಮಾತನಾಡಬೇಕಾದ್ರೆ ಇದೂ ಒಂದು ಪ್ರೀತಿನಾ? ನನ್ನ ಬದುಕು ಅಂಬಿಗನಿಲ್ಲದ ದೋಣಿಯಾಯಿತಾ?" ಪ್ರಶ್ನೆ ಕಾಡತೊಡಗಿದವು. ಯಾವುದಕ್ಕೂ ಉತ್ತರವಿರಲಿಲ್ಲ. ಬಾಲ್ಯ ನೆನಪಿಗೆ ಬಂತು. ಮಹದಾಕಾಂಕ್ಷೆಯ ಅವ್ವ, ಹಾಸ್ಟೆಲ್‌ಗೆ ಬಂದು ತನ್ನನ್ನ ಬಿಟ್ಟು ಹೋದ ಸಾವ್ಕಾರ, ಮೇಡಂ ಹಾಗೂ ತನ್ನ ಗೆಳತಿಯರು ಎಲ್ಲರೂ ಸ್ಮೃತಿಪಟಲದಲ್ಲಿ ಹಾದು ಹೋದರು. ಅವಳಿಗೆ ಮಹೇಶ್‌ನ ವ್ಯಕ್ತಿತ್ವ ತುಂಬಾನೇ ಕಾಡತೊಡಗಿತು. "ಇಷ್ಟು ದಿನ ನನ್ನ ಬದುಕಿಗೆ ಮಹೇಶನೇ ಇದ್ನಾ...! ಇಲ್ಲವಲ್ಲ, ಅವನಿಲ್ಲದೆ ಇದ್ದಾಗ ಆಗದ ನೋವು ಅವನು ಬಂದಮೇಲೆ ಶುರುವಾಯಿತು. ಅದೂ ಮದ್ವೆಯಾದಮೇಲೆ. ನನ್ನ ನೆಮ್ಮದಿ, ಶಾಂತಿ ಎಲ್ಲವನ್ನೂ ಇಡಿ ಇಡೀಯಾಗಿ ನುಂಗಿ ಹಾಕಿದ ಮದುವೆ ಹಾಗೂ ತಾಳಿ ಕಟ್ಟಿದ ಇವನು ನನ್ನ ಬಾಳಿಗೆ ಇದ್ದು ಪ್ರಯೋಜನವೇನು? ನಾನು ಹೆಣ್ಣಾದ ಮಾತ್ರಕ್ಕೆ, ದೇವ್ದಾಸಿ ಹೊಟ್ಟೇಲಿ ಹುಟ್ಟಿದ ಮಾತ್ರಕ್ಕೆ ಬದುಕುವ ಯಾವ ಅರ್ಹತೆಯೂ ಇಲ್ವಾ?"ಕೊನೆಗೆ ಏನೋ ನಿರ್ಧಾರ ಮಾಡಿ ಒಂದು ಹಾಳೆಯಲ್ಲಿ ಏನೋ ಗೀಚಿದಳು. ಬಟ್ಟೆ ಬರೆ ಎತ್ತಿಕೊಂಡು ಬಾಗಿಲು ಮುಂದು ಮಾಡಿ ಹೊರನಡೆದಳು.

ಹೊರಗೆ ಹೋದ ಮಹೇಶ್ ಮನೆಗೆ ಬಂದಾಗ ಬಾಗಿಲು ಮುಚ್ಚಿತ್ತು. ಎಷ್ಟೇ ಬಡಿದರೂ ಬಾಗಿಲು ತೆಗೆಯಲೇ ಇಲ್ಲ. ಕೂಗಿ ಕೂಗಿ ಸಾಕಾಗಿ ಬಾಗಿಲು ಜೋರಾಗಿ ದೂಡಿದಾಗ ಚಿಲಕ ಹಾಕಿಲ್ಲದಿದ್ದರಿಂದ ಅದು ತಾನಾಗಿಯೇ ತೆರೆದುಕೊಂಡಿತು. ಒಳಗೆ ಹೋಗಿ ನೋಡಿದರೆ ಗಂಗಾ ಇರಲಿಲ್ಲ! ಮಹೇಶ ಅವಳಿಗಾಗಿ ಮನೆಯೆಲ್ಲಾ ಹುಡುಕಾಡಿದ. ಕೊಂಚ ಗಾಬರಿಯಾಯಾಯಿತು. ಅವಳು ಬರೆದಿಟ್ಟ ಕಾಗದ ಕಣ್ಣಿಗೆ ಬಿತ್ತು. ತೆಗೆದು ನೋಡಿದ, "ಮಹೇಶ್, ಇನ್ನು ನಿನ್ನ ಜೊತೆ ಬದುಕಲು ನನಗಾಗದು. ನನ್ನಿಂದ ನಿನಗೆ ಇನ್ಯಾವುದೇ ತೊಂದರೆ ಬರೋದಿಲ್ಲ. ನೆಮ್ಮದಿಯಿಂದಿರು. ನಾನು ನಿನ್ನಿಂದ ದೂರ ಹೋಗುತ್ತಿದ್ದೇನೆ. ಹಾಗಂತ ಈ ಸಮಾಜಕ್ಕೆ ಹೆದರಿ ಸಾಯುವ ಹೆಣ್ಣು ನಾನಲ್ಲ. ಸಾಯಲು ನಾನ್ಯಾವ ತಪ್ಪೂ ಮಾಡಿಲ್ಲ. ಆದರೆ ಇಂಥ ಹೇಸಿ ಜನರ ಮಧ್ಯೆ ನಾನು ಬದುಕಲಾರೆ. ಈ ಜನರ ಅಗತ್ಯ ಕೂಡ ನನಗಿಲ್ಲ. ಅಗಸನ ಮಾತಿಗೆ ರಾಮ ಸೀತೆಯನ್ನು ಕಾಡಿಗಟ್ಟಿದಂಥ ಆದರ್ಶಗಳನ್ನು ಇಟ್ಟುಕೊಂಡ ರಾಜ್ಯ ನಮ್ಮದು. ನೀನು ನನ್ನ ಈ ಜನರ ಮಾತಿನಿಂದಾಗಿ ನಡುನೀರಿನಲ್ಲಿ ಕೈ ಬಿಡುವುದಿಲ್ಲ ಎನ್ನುವ ನಂಬಿಕೆ ನನ್ನಲ್ಲಿ ಸತ್ತೋಯ್ತು. ಹಾಗಾಗಿ ನಿನ್ನಿಂದ ದೂರ ಹೋಗುತ್ತಿದ್ದೇನೆ. ನನ್ನ ಪಾಡಿಗೆ ನಾನು ಬದುಕುತ್ತೇನೆ. ನಿಮ್ಮ ಕುಟುಂಬದ ಜತೆ ನೀನು ಚೆನ್ನಾಗಿರು. ನನ್ನ ಹುಡುಕುವ ಪ್ರಯತ್ನ ಮಾಡಬೇಡ. ಪ್ಲೀಸ್..." ಎಂದು ಬರೆದಿತ್ತು.

ರಾಮನಿಗೆ ಸೀತೆಯನ್ನು ಕಾಡಿಗಟ್ಟಲು ಕಾರಣವಾದರೂ ಇತ್ತು. ಆದ್ರೆ ಗಂಗಾಳನ್ನು ಕಾರಣವಿಲ್ಲದೆ ಕೇವಲ ಯಾರೋ ಆಡಿದ ಮಾತಿಗೆ ಅವಳ ಮನಸ್ಸು ನೋಯಿಸಿದೆ. ಅವಳ ಬದುಕಿನ ಜತೆಗೆ ನನ್ನ ಬದುಕೂ ದಾರಿ ತಪ್ಪಿ ಹೋಯ್ತು ಎಂದುಕೊಂಡ ಮಹೇಶ ಮೂಕನಾದ. □



# ನಾಡು-ನುಡಿ: ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ

ಮೇಟಿ ಮಲ್ಲಿಕಾರ್ಜುನ ಅವರು ಕೆ.ವಿ.ನಾರಾಯಣ, ಶಂಕರಭಟ್ಟರ ಹಾಗೆ ದೇಶೀವಾದದ ನೆಲೆಯಲ್ಲಿ ಭಾಷೆ, ಪ್ರಭುತ್ವ, ಸಂಸ್ಕೃತಿ ಕುರಿತು ಚಿಂತನೆ ಮಾಡುತ್ತಿರುವವರು. ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಭಾಷಾಶಾಸ್ತ್ರದ ಅಧ್ಯಾಪಕರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಬಾಲ್ಟರ್ನ್ ಸಂಪುಟಗಳನ್ನು ಸಂಪಾದಿಸಿದ್ದಾರೆ. ‘ಶಾಸ್ತ್ರೀಯ ಭಾಷೆ ಮತ್ತು ಕನ್ನಡ ಜಗತ್ತು’ ‘ಸಬಾಲ್ಟರ್ನ್ ಸ್ಟಡೀಸ್’ ‘ಆಟ ನೋಟ’ ‘ತೆಂಕಣ ನುಡಿಗಳು ಮತ್ತು ಇಂಗ್ಲೀಷ್’ ‘ನುಡಿಗಳ ಅಳಿವು’ ಒಳಗೊಂಡಂತೆ ಈಚೆಗೆ ‘ಭಾರತದ ಭಾಷಿಕ ಸನ್ನಿವೇಶ: ಅಂಬೇಡ್ಕರ್ ಭಾಷಿಕ ಚಿಂತನೆಗಳು’ ಕೃತಿಯನ್ನು ಪ್ರಕಟಿಸಿದ್ದಾರೆ.

**ಮೇಟಿ ಮಲ್ಲಿಕಾರ್ಜುನ**

**Email: meti.mallikarjun@gmail.com**


ಅಂಬೇಡ್ಕರ್ ಅವರ ‘ಭಾಷಾವಾರು ರಾಜ್ಯಗಳ ಸಮಸ್ಯೆಗಳು’ ಎನ್ನುವ ಬರಹವು ಇಂದಿಗೂ ಹಲವು ನೆಲೆಗಳಿಂದ ಅತ್ಯಂತ ಕುತೂಹಲಕಾರಿ ಮತ್ತು ವಿಶಿಷ್ಟವಾಗಿದೆ. 1956ರ ರಾಜ್ಯಗಳ ಪುನರ್ರಚನೆಯ ಕಾಯ್ದೆಯನ್ನು ಕುರಿತು ವಿಮರ್ಶಿಸುತ್ತ, “ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಲು ಏಕಭಾಷಿಕ ರಾಜ್ಯಗಳಕ್ಕಿಂತ ಬಹುಭಾಷಿಕ ರಾಜ್ಯಗಳನ್ನು ಹೊಂದುವುದು ಹೆಚ್ಚು ಪ್ರಯೋಜನಕಾರಿ ಆಗುತ್ತದೆ” ಎಂದು ತಮ್ಮ ಅಭಿಪ್ರಾಯಗಳನ್ನು ಅಂಬೇಡ್ಕರ್ ಹೀಗೆ ದಾಖಲಿಸುತ್ತಾರೆ. ಸಂಯುಕ್ತ ಭಾರತ ಎನ್ನುವ ಕಲ್ಪನೆಯೇ ಮರಣಗಂಟೆಯ ಸೂಚಕವಾಗಿದೆ ಎಂದು ಅವರು ಬಲವಾಗಿ ನಂಬಿದ್ದರು. ರಾಜ್ಯಗಳ ಮರುರಚನೆಯಲ್ಲಿ ಜನಸಂಖ್ಯೆಯ ಗಾತ್ರ ಮತ್ತು ಪ್ರಮಾಣವನ್ನು ರೂಪಿಸುವಲ್ಲಿ ಸಂವಿಧಾನ ಸೋಲುತ್ತದೆ ಎನ್ನುವ ಬೇಸರವನ್ನೂ ಇವರು ವ್ಯಕ್ತಪಡಿಸಿದ್ದರು. ಪ್ರಜೆಗಳ ಸಮಾನ ಪ್ರತಿನಿಧೀಕರಣವನ್ನು ಕಾಯ್ದುಕೊಳ್ಳುವುದು ಕೂಡ ಅತ್ಯಂತ ದುಸ್ತರವಾಗುತ್ತದೆ ಎಂಬ ನಿಲುವು

**‘ಅಂಬೇಡ್ಕರ್ ಅವರ ವಿಚಾರಗಳನ್ನು ಮತ್ತು ತಾತ್ವಿಕ ವಿನ್ಯಾಸಗಳನ್ನು ವಿಶ್ಲೇಷಿಸುವುದಕ್ಕೆ ನಾವು ಹೊಸ ನೋಟಕ್ರಮ ಹಾಗೂ ವಿಶ್ಲೇಷಣಾ ಪರಿಕರಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಅಂಬೇಡ್ಕರ್ ಅವರು ಕೇವಲ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ಸಂಗತಿಗಳಲ್ಲಿ ಹುದುಗಿರುವ ಏರುಪೇರುಗಳನ್ನು ಮಾತ್ರ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ ‘ಹೊಸ ಪ್ರಜಾಪ್ರಭುತ್ವ’ದ ವಿನ್ಯಾಸಗಳನ್ನು ನೆಲೆಗೊಳಿಸುವ ಚಿಂತನೆಗಳನ್ನು ರೂಪಿಸುತ್ತಿದ್ದರು. ಒಟ್ಟಿನಲ್ಲಿ ‘ವಿಚಾರ ಕ್ರಾಂತಿ ಮತ್ತು ಅರಿವಿನ ಪಲ್ಲಟ’ಗಳನ್ನು ಒಂದೇ ತಾತ್ವಿಕ ಚೌಕಟ್ಟಿನಲ್ಲಿ ರೂಪಿಸುವ ಇರಾದೆಯನ್ನು ಇವರು ಹೊಂದಿದ್ದರು’**

ಇವರದಾಗಿತ್ತು.

ಅಂಬೇಡ್ಕರ್ ಅವರ ಅಭಿಪ್ರಾಯದಲ್ಲಿ, 1956ರ ರಾಜ್ಯಗಳ ಪುನರ್‌ರಚನೆಯ ಕಾಯಿದೆಯು ಉತ್ತರದ ರಾಜ್ಯಗಳನ್ನು ಬಲಪಡಿಸುವ ಹಾಗೂ ದಕ್ಷಿಣದ ರಾಜ್ಯಗಳನ್ನು ಬಾಲ್ಕನೈಸ್ ಮಾಡುವ ನಿಲುವುಗಳನ್ನು ಕಾಣುತ್ತಾರೆ. ಪರಿಣಾಮವಾಗಿ ದಕ್ಷಿಣದಲ್ಲಿ ಚಿಕ್ಕ ಚಿಕ್ಕ ರಾಜ್ಯಗಳು ತಲೆಯೆತ್ತಿದರೆ, ಮುಂಬೈ, ಪಂಜಾಬ್, ಉತ್ತರಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದಂತಹ ದೊಡ್ಡ ಪ್ರದೇಶಗಳು ಹಾಗೇ ಅಸ್ತಿತ್ವದಲ್ಲಿ ಉಳಿಯುತ್ತವೆ. ಆದರೆ, ಈ ಎಲ್ಲಾ ರಾಜ್ಯಗಳು ಕೂಡ ಈ ಹೊತ್ತಿಗೆ ಮರುವಿಂಗಡಣೆಯಾಗಿರುತ್ತವೆ ಎಂಬ ಭವಿಷ್ಯವನ್ನೂ ಇವರು ನುಡಿದಿದ್ದರು. ಅಂಬೇಡ್ಕರ್ ಅವರ ಪ್ರಮುಖ ಆದ್ಯತೆ ಏನಾಗಿತ್ತೆಂದರೆ, ಒಂದೇ ಭಾಷೆಯನ್ನು ಮಾತ್ನಾಡುವ ಜನರು ಅನೇಕ ರಾಜ್ಯಗಳಲ್ಲಿ ವರ್ಗೀಕರಿಸಿರಬಹುದಿತ್ತು. ಏಕೆಂದರೆ, ಪ್ರತಿಯೊಂದು ರಾಜ್ಯವು ಕೂಡ ಒಂದೊಂದು ಭಾಷೆಯನ್ನು ಮಾತ್ನಾಡುವ ಜನರ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಇನ್ನೂ ಮುಂದುವರೆದು ಇವರು ಹೇಳುವುದೇನೆಂದರೆ, ‘ಒಂದು ಭಾಷೆ ಒಂದು ರಾಜ್ಯ’ ಎಂಬ ಸೂತ್ರವಿರಕೂಡದು. ಬದಲಾಗಿ, ‘ಒಂದು ರಾಜ್ಯ ಒಂದು ಭಾಷೆ’ ಎಂಬ ಸೂತ್ರವನ್ನು ಅಳವಡಿಸಿಕೊಳ್ಳಬೇಕು. ಈ ಸೂತ್ರದ ಜೊತೆಗೆ ಒಂದು ಭಾಷೆ ಒಂದು ರಾಜ್ಯ ಎಂಬ ಸೂತ್ರವನ್ನು ತಳಕುಹಾಕಿ ಗೊಂದಲವನ್ನುಂಟು ಮಾಡಬಾರದು. ಇಲ್ಲಿ ಅಂಬೇಡ್ಕರ್ ಅವರ ಒಟ್ಟು ತಾತ್ವಿಕತೆ ಏನನ್ನು ಪ್ರಸ್ತಾಪ ಮಾಡುತ್ತದೆ ಎನ್ನುವುದು ಮುಖ್ಯವಾಗುತ್ತದೆ.

ಅಂಬೇಡ್ಕರ್ ಅವರು ಭಾರತದ ಸಂವಿಧಾನವನ್ನು ರೂಪಿಸಿದವರು, ಸಾಮಾಜಿಕ ನ್ಯಾಯದ ಆದ್ಯಪ್ರವರ್ತಕ, ಪ್ರಜಾಪ್ರಭುತ್ವವು ಸಾಕಾರಗೊಳ್ಳಲು, ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಎಷ್ಟೊಂದು ಮುಖ್ಯ ಎಂಬುದನ್ನು ಚಿಂತಿಸಿದವರು. ಆದ್ದರಿಂದ ಇವರು ಪ್ರಸ್ತಾಪಿಸುತ್ತಿರುವ ‘ಒಂದು ರಾಜ್ಯ ಒಂದು ಭಾಷೆ’ ಎಂಬೀ ಸೂತ್ರದ ಹಿಂದಿನ ತಾತ್ವಿಕತೆಯು ಕೂಡ ಅತ್ಯಂತ ಪ್ರಜಾಸತ್ತಾತ್ಮಕವಾದ್ದು. ಅಂದರೆ ಅಂಬೇಡ್ಕರ್ ಅವರು ಚಿಂತಿಸುತ್ತಿದ್ದ ಒಂದು ಬಹುಮುಖ್ಯ ವಿನ್ಯಾಸ ಯಾವುದೆಂದರೆ, ಎಲ್ಲ ಸಾಮಾಜಿಕ, ರಾಜಕೀಯ, ಆರ್ಥಿಕ, ಭಾಷಿಕ ಹಾಗೂ ಧಾರ್ಮಕ ವಿನ್ಯಾಸಗಳನ್ನೂ ಕೂಡ ಸಂವಿಧಾನದ ಪ್ರಜಾಸತ್ತಾತ್ಮಕ ನೀತಿಗಳನ್ನಾಗಿ ರೂಪಿಸುತ್ತಿದ್ದರು. ಹಾಗಾಗಿ ಇವರು ಪ್ರಸ್ತಾಪಿಸಿದ ಈ ಮೇಲಿನ ಸೂತ್ರವು ಇಂತಹದೇ ಒಂದು ವಿನ್ಯಾಸವಾಗಿದೆ. ಕೇವಲ ರಾಜಕೀಯ ಕಣ್ಣೋಟದಿಂದ ಈ ಸೂತ್ರವನ್ನು ವಿಶ್ಲೇಷಣೆ ಮಾಡಿದರೆ ಇದರಲ್ಲಿ ಹಲವು ಬಗೆಯ ಕೊರತೆಗಳು ಕಾಣುತ್ತವೆ. ಈ ರಾಜಕೀಯ ಕಣ್ಣೋಟವೆನ್ನುವುದು ಕೇವಲ ರಾಜಕೀಯ ನಿಲುವುಗಳಿಂದ ಇಲ್ಲವೇ ನೀತಿಗಳಿಂದ ಕೂಡಿರುವ ಅಗತ್ಯವಿಲ್ಲ. ಇದು ಸಾಮಾಜಿಕ ಭಾಷಾಶಾಸ್ತ್ರೀಯ ಕಣ್ಣೋಟವು ಆಗಿರಬಹುದು ಅಥವಾ ಯಾವುದೇ ಸಾಮಾಜಿಕ ಮೀಮಾಂಸೆಯ ನಿಲುವುಗಳಿಂದ ಪ್ರೇರಿತವಾದ ಕಣ್ಣೋಟವು ಆಗಿರಬಹುದು. ಆದರೆ ಈ ಎಲ್ಲ ನಿಲುವುಗಳು ಬೈನರಿ ಇಲ್ಲವೇ ಡೈಕಾಟಮಿಗಳನ್ನು ಮುಂದಿಟ್ಟುಕೊಂಡು ವಿಶ್ಲೇಷಣೆ ಮಾಡುತ್ತವೆ.

ಸಹಜವಾಗಿ, ಅಧಿಕಾರ ಸಂಬಂಧ ಇಲ್ಲವೇ ಯಜಮಾನಿಕೆ



ವಿನ್ಯಾಸಗಳು ಇಲ್ಲಿ ಗೋಚರಿಸುತ್ತವೆ. ಈ ವಿನ್ಯಾಸಗಳನ್ನೇ ಅಂಬೇಡ್ಕರ್ ಅವರ ‘ಒಂದು ರಾಜ್ಯ ಒಂದು ಭಾಷೆ’ಎಂಬೀ ಸೂತ್ರಕ್ಕೂ ಅನ್ವಯಿಸುವ ಅಪಾಯಗಳಿವೆ. ಇದು ಆಗಕೂಡದು ಎಂಬುದು ನನ್ನ ಬಯಕೆ. ಮತ್ತೊಂದು ಮಹತ್ವದ ಸಂಗತಿಯನ್ನು ಇಲ್ಲಿ ಉಲ್ಲೇಖಿಸಲೇ ಬೇಕು, ಅದೇನೆಂದರೆ ಅಂಬೇಡ್ಕರ್ ಅವರ ವಿಚಾರಗಳನ್ನು ಮತ್ತು ತಾತ್ವಿಕ ವಿನ್ಯಾಸಗಳನ್ನು ವಿಶ್ಲೇಷಿಸುವುದಕ್ಕೆ ನಾವು ಹೊಸ ನೋಟಕ್ರಮ ಹಾಗೂ ವಿಶ್ಲೇಷಣಾ ಪರಿಕರಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ಅಂಬೇಡ್ಕರ್ ಅವರು ಕೇವಲ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ಸಂಗತಿಗಳಲ್ಲಿ ಹುದುಗಿರುವ ಏರುಪೇರುಗಳನ್ನು ಮಾತ್ರ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಿಲ್ಲ. ಬದಲಾಗಿ ‘ಹೊಸ ಪ್ರಜಾಪ್ರಭುತ್ವ’ದ ವಿನ್ಯಾಸಗಳನ್ನು ನೆಲೆಗೊಳಿಸುವ ಚಿಂತನೆಗಳನ್ನು ರೂಪಿಸುತ್ತಿದ್ದರು. ಒಟ್ಟಿನಲ್ಲಿ ‘ವಿಚಾರ ಕ್ರಾಂತಿ ಮತ್ತು ಅರಿವಿನ ಪಲ್ಲಟ’ಗಳನ್ನು ಒಂದೇ ತಾತ್ವಿಕ ಚೌಕಟ್ಟಿನಲ್ಲಿ ರೂಪಿಸುವ ಇರಾದೆಯನ್ನು ಇವರು ಹೊಂದಿದ್ದರು.

ಭಾರತದ ಸಂವಿಧಾನದ ಪೀಠಿಕೆಯಲ್ಲಿ ಭಾರತವನ್ನು ‘ರಾಜ್ಯಗಳ ಒಕ್ಕೂಟ’ (ಸ್ಟೇಟ್ಸ್ ಆಫ್ ಯ್ಯೂನಿಯನ್ಸ್) ಎಂದು ಉಲ್ಲೇಖಿಸಲಾಗಿದೆ. ಅಂಬೇಡ್ಕರ್ ಅವರ ಸಾಮಾಜಿಕ ತತ್ವಶಾಸ್ತ್ರಕ್ಕೂ ಮತ್ತು ರಾಜ್ಯಗಳ ಒಕ್ಕೂಟದ ಕಲ್ಪನೆಯ ನಡುವೆ ಅತರ್ಸಂಬಂಧಗಳಿವೆ. ಭಾರತ ಎನ್ನುವುದು ಸರ್ವ ಜನಾಂಗದ ಶಾಂತಿಯ ತೋಟವಾಗಬೇಕಾದರೆ, ಅದು ಖಂಡಿತವಾಗಿಯೂ ಸ್ವಾತಂತ್ರ್ಯ, ಸಮಾನತೆ ಮತ್ತು ಬಾಂಧವ್ಯ ಎಂಬ ಈ ಮೂರು ಪರಿಕಲ್ಪನೆಗಳನ್ನು ತನ್ನ ಗುರಿಗಳನ್ನಾಗಿ ರೂಪಿಸಿಕೊಳ್ಳಬೇಕು. ಹಲವು ರಾಜ್ಯಗಳು ಒಂದು ಒಕ್ಕೂಟವಾಗಿ ನೆಲೆಗೊಳ್ಳಬೇಕೆಂದರೆ ಈ ಗುರಿಗಳು ಅವಶ್ಯವಾಗಿ ಬೇಕಾಗುತ್ತವೆ. ಅಂಬೇಡ್ಕರ್ ಅವರ ಚಿಂತನೆಗಳ ಆಶಯವಿರುವುದು ಭಾರತವನ್ನು ಕೇವಲ ಬಹುಭಾಷಿಕ, ಬಹುಸಾಂಸ್ಕೃತಿಕ, ಬಹುಧರ್ಮೀಯ ಹಾಗೂ ಬಹುಜಾತಿಗಳಿಂದ ಕೂಡಿದ ರಾಷ್ಟ್ರವನ್ನಾಗಿ ನೋಡುವುದಾಗಿರಲಿಲ್ಲ. ಬದಲಾಗಿ ಈ ಎಲ್ಲ ಭಿನ್ನ-ಅಸ್ಮಿತೆಗಳ ಆಚೆಗೂ ಭಾರತವು ಒಂದು ಒಕ್ಕೂಟವಾಗಿ ರೂಪುಗೊಳ್ಳಬೇಕು ಹಾಗೂ ಈ ಒಕ್ಕೂಟದೊಳಗೆ ನೆಲೆಗೊಳ್ಳುವ ಎಲ್ಲ ಸಮೂಹಗಳು ತಮ್ಮ ವೈಶಿಷ್ಟ್ಯತೆಗಳನ್ನು ಗುರುತಿಸಿಕೊಂಡರೂ, ಅವುಗಳು ಭೇದದ ಬೇರುಗಳಾಗದೇ, ಸಾಮಾಜಿಕ-ರಾಜಕೀಯ ಗಡಿಗಳನ್ನು ನಿರ್ಮಿಸದೇ, ಹೂದೋಟದ (ಫ್ಲಾವರ್ಸ್ ಪಾಟ್) ಸ್ವರೂಪದಲ್ಲಿ ನೆಲೆಗೊಳ್ಳಬೇಕು ಎಂಬುದು ಇವರ ಉದ್ದೇಶವಾಗಿತ್ತು.


ಯಾವತ್ತಿಗೂ ಭಾರತವನ್ನು ಒಂದು ಮೆಲ್ಟಿಂಗ್ ಪಾಟ್‌ನ್ನಾಗಿ ರೂಪಿಸುವ ಕನಸು ಕಂಡವರಲ್ಲ ಇವರು. ಆದರೆ, ಧಾರ್ಮಿಕ ಕುರುಡತನದಿಂದ ರಾಜ್ಯಭಾರವನ್ನು ಮಾಡುವರು ರಾಜ್ಯಗಳ ಒಕ್ಕೂಟವೆಂದರೆ, ಅದೊಂದು ಮೆಲ್ಟಿಂಗ್ ಪಾಟ್‌ನ

ಸ್ವರೂಪದಲ್ಲಿ ದೇಶವನ್ನು ಕಟ್ಟುವುದು ಎಂದು ತಿಳಿದುಕೊಂಡಿದ್ದಾರೆ. ಈ ಎಲ್ಲ ಅಪಚಾರಗಳಿಂದ ವಿಮೋಚನೆಗೊಳಿಸಿ, ಒಂದು ಅಪ್ಪಟ ವೈಚಾರಿಕ, ಪ್ರಜಾಸತ್ತಾತ್ಮಕ ಹಾಗೂ ಸಾಮಾಜಿಕ ಐಕ್ಯತೆಯಿಂದ ಕೂಡಿಬಾಳುವ ಒಕ್ಕೂಟವನ್ನಾಗಿ ರೂಪಿಸುವ ಕನಸನ್ನು ಅಂಬೇಡ್ಕರ್ ಅವರು ಕಂಡಿದ್ದರು. ದೇಶ, ರಾಷ್ಟ್ರ, ಒಕ್ಕೂಟ ಹಾಗೂ ರಾಜ್ಯ ಎಂಬಿತ್ಯಾದಿ ಕಲ್ಪನೆಗಳ ನಡುವಣ ಅತರ್ಸಂಬಂಧ ಹಾಗೂ ತಾತ್ವಿಕತೆಯನ್ನು ಅರಿಯದೇ ಹೋದದ್ದರಿಂದ, ಇವತ್ತು ಹಲವು ಬಗೆಯ ಸವಾಲುಗಳನ್ನು ಎದುರಿಸುವ ಇಕ್ಕಟ್ಟಿಗೆ ನಾವು ಸಿಲುಕಿದ್ದೇವೆ. ಪರಿಣಾಮವಾಗಿ ಭಾರತ (ಇಂಡಿ–ಯಾ) ಹಾಗೂ ಭಾರತೀಯ (ಇಂಡಿಯನ್) ಎಂಬೀ ನಾಮಪದ ಮತ್ತು ನಾಮವಿಶೇಷಣಗಳ ನಡುವಣ ನಂಟು ಕಳಚಿಹೋಗಿ, ಇವುಗಳು ಪರಸ್ಪರ ವಿರೋಧಿಗಳಾಗಿ ವರ್ತಿಸುತ್ತವೆ. ಅಂದರೆ, ಭಾರತ ಒಂದು ರಚನಾತ್ಮಕ ನೆಲೆಯಾದರೆ, ಭಾರತೀಯ ಎಂಬುದು ಈ ರಚನೆಯನ್ನು ವಿವರಿಸುವ ಬಗೆಯಾಗಿದೆ. ಆದ–ರೆ ಇವತ್ತು ಭಾರತದ ರಚನೆಯೊಳಗೆ ಇರುವವನು/ಳು ಭಾರತೀಯನಾಗಿಯೇ ಕಾಣುವುದಿಲ್ಲ. ಏಕೆಂದರೆ, ಭಾರತದ ಪ್ರತಿಯೊಬ್ಬ ಪ್ರಜೆಯೂ ಕೂಡ ಹಿಂದೂ ಧರ್ಮದ ವಕ್ತಾರರು ಮಂಡಿಸುವ ಎಲ್ಲ ಬಗೆಯ ನಿಲುವುಗಳನ್ನು ಒಪ್ಪಿದರೇ ಮಾತ್ರ ಅವನು/ಳು ಭಾರತೀಯನಾಗಿ ಒಪ್ಪಿಗೆಯನ್ನು ಪಡೆಯುತ್ತಾರೆ. ಯಾವುದೇ ಒಂದು ದೇಶದ ರಚನೆ ಅದು ಕೇವಲ ಯಾವುದೇ ಒಂದು ಧರ್ಮದ ವಿನ್ಯಾಸಕ್ಕೆ ಮಾತ್ರ ಸೀಮಿತಗೊಂಡರೆ, ಇಂತಹ ಅಪಾಯಗಳು ಎದುರಾಗುತ್ತವೆ. ಇಂತಹ ಅಪಾಯಗಳನ್ನು ಗ್ರಹಿಸಿದ ಅಂಬೇಡ್ಕರ್ ಅವರು, ಯಾವುದೇ ಒಂದು ಭಾಷೆಯನ್ನು ಮಾತ್ನಾಡುವ ಜನರು ಒಂದು ನಿರ್ದಿಷ್ಟ ರಾಜ್ಯದೊಳಗೆ ನೆಲೆಗೊಂಡರೆ, ಅದು ಜಾತಿ, ಧರ್ಮದ ಕೋಮು ಸ್ವರೂಪವನ್ನು ಪಡೆದುಕೊಳ್ಳುತ್ತದೆ ಹಾಗೂ ಒಕ್ಕೂಟದ ತಾತ್ವಿಕತೆಗೆ ಎದುರಾಗಿ, ತಮ್ಮದೇ ಆಶೋತ್ತರಗಳನ್ನು ರೂಪಿಸಿಕೊಳ್ಳುತ್ತರೆ. ಪರಿಣಾಮವಾಗಿ ಸಾಮಾಜಿಕ, ರಾಜಕೀಯ ಹಾಗೂ ಭಾಷಿಕ ಅಂತರಗಳು ಮತ್ತಷ್ಟು ಬಿಗಡಾಯಿಸುವುದಕ್ಕೆ ಪೂರಕವಾಗಿ ವರ್ತಿಸುತ್ತಾರೆ ಎಂಬುದನ್ನು ಮನಗಂಡಿದ್ದರು. ಅದಕ್ಕಾಗಿಯೇ ರಾಜ್ಯಗಳ ಒಕ್ಕೂಟ ಮತ್ತು ಒಂದು ರಾಜ್ಯ ಒಂದು ಭಾಷೆ ಎಂಬ ಸೂತ್ರವನ್ನು ಅವರು ಪ್ರಸ್ತಾಪ ಮಾಡಿದ್ದು.

ಈ ಮೇಲಿನ ಚರ್ಚೆಗಳು ಸೂಕ್ಷ್ಮವಾಗಿ ಪ್ರಸ್ತಾಪಿಸುವ ಎಲ್ಲ ಬಗೆ–ಯ ಅಪಾಯಗಳನ್ನು ನಾವು ಇವತ್ತು ಭಾರತದಲ್ಲಿ ನೋಡುತ್ತಿದ್ದೇವೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಹಲವು ದಶಕಗಳ ನಂತರವೂ ಕೂಡ ನಮ್ಮ ಭಾರತ ರಾಜ್ಯಗಳ ಒಕ್ಕೂಟದಂತೆ ಕೆಲಸವನ್ನು ಮಾಡದೇ, ಹಲವು ರಾಜ್ಯಗಳು ಹಲವು ಕಾರಣಗಳಿಗಾಗಿ ಶತ್ರು ಪಾಳ್ಯಗಳಂತೆ ವರ್ತಿಸುತ್ತವೆ. ಈ ಎಲ್ಲ ಶತ್ರುಗಳನ್ನು ಗಾಳಗಳನ್ನಾಗಿ ಬಳಸುವ ಕುತಂತ್ರದಂತೆ, ಕೇಂದ್ರ ಸರಕಾರ ಕೆಲಸವನ್ನು ನಿರ್ವಹಿಸುತ್ತಿದೆ. ಗಡಿ, ನೀರು, ನೈಸರ್ಗಿಕ ಸಂಪತ್ತು, ಭಾಷೆ ಮೊದಲಾದ ಹಲವು ನೆಪಗಳನ್ನು ಮುಂದಿಟ್ಟುಕೊಂಡು ರಾಜ್ಯ ರಾಜ್ಯಗಳ ನಡುವೆ ಜಗಳಗಳು ಏರ್ಪಡುತ್ತವೆ. ಇಂತಹ ಜಗಳಗಳನ್ನು ರಾಜಕೀಯ ಲಾಭಕ್ಕಾಗಿಯೇ ಕೇಂದ್ರ ಸರಕಾರ ತನ್ನ ಪಕ್ಷಪಾತಿ ಗುಣವನ್ನು ನಿರಂತರವಾಗಿ ಪ್ರದರ್ಶಿಸುತ್ತ ಬಂದಿದೆ. ಸಮಾನತೆ, ಸ್ವಾತಂತ್ರ್ಯ ಮತ್ತು ಬಾಂಧವ್ಯದಂತಹ ಮೌಲ್ಯಗಳು ಇವತ್ತು ಕೇವಲ ಘೋಷಣೆಗಳಾಗಿ ಮಾತ್ರ ಅಸ್ತಿತ್ವದಲ್ಲಿವೆ. ಈ ಎಲ್ಲ ಚರ್ಚೆಗಳು ನಮಗೆ ಖಾತ್ರಿಪಡಿಸುವುದೇನೆಂದರೆ, ರಾಜ್ಯಗಳ ಪುನರ್ರಚನೆಯ ಆಸಕ್ತಿಗಳು ಬಹುತೇಕವಾಗಿ ರಾಜಕೀಯ ಪ್ರೇರಿತವಾಗಿವೆ. ಹಾಗಾಗಿಯೇ, ಇವುಗಳನ್ನು ವಿರೋಧಿಸುವ ಚರ್ಚೆಗಳು ಎಷ್ಟೇ ತೀವ್ರವಾಗಿ ಮುಂಚೂಣೆಗೆ ಬಂದರೂ ಅವುಗಳನ್ನು ಮೌನಗೊಳಿಸುವ ಹುನ್ನಾರವನ್ನು ಮಾಡಲಾಯಿತು. ಸಾಮಾನ್ಯವಾಗಿ, ಪ್ರಿನ್ಸ್ಲಿ ಸ್ಟೇಟ್‌ಗಳನ್ನು ಏಕತ್ರಗೊಳಿಸುವ ಹಾಗೂ ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಿಗೆ 'ವಿಶೇಷ ಸ್ಥಾನ'ವನ್ನು ಕಲ್ಪಿಸುವುದಕ್ಕೆ ವಿಶೇಷ ಗಮನವನ್ನು ನೀಡಲಾಯಿತು ಎಂದೂ ರಾಜ್ಯಗಳ ಪುನರ್ರಚನೆಯ ಹಿಂದಿನ ಉದ್ದೇಶಗಳನ್ನು ವ್ಯಾಖ್ಯಾನಿಸಲಾಗುತ್ತದೆ.

ಇರಲಿ, 2000ನೇ ಇಸ್ವಿಯಲ್ಲಿ ಛತ್ತೀಸ್ಘಡ್, ಜಾರ್ಖಂಡ್ ಹಾಗೂ ಉತ್ತರಾಂಚಲ್ ಹಾಗೂ ಈಚೆಗೆ ತೆಲಾಂಗಣ ಎಂಬೆಲ್ಲ ರಾಜ್ಯಗಳನ್ನು ಪುನರ್ರಚಿಸಲಾಯಿತು. ಈ ಎಲ್ಲ ರಾಜ್ಯಗಳನ್ನು ಭಾಷೆಯೇತರ ನೆಲೆಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಇಲ್ಲಿ ಅತ್ಯಂತ ಸ್ಪಷ್ಟವಾಗಿರುವ ಅಂಶ ಏನೆಂದರೆ, ರಾಜ್ಯಗಳ ರಚನೆಯ ರಾಜಕಾರಣ–ಕ್ಕೆ ಒತ್ತಾಸೆಯಾಗಿ ಈ ಎಲ್ಲ ಹೊಸ ರಾಜ್ಯಗಳು ಮೈದೆರದವು. ಆದರೆ ಉತ್ತಮ ಆಡಳಿತವನ್ನು ನೀಡುವ ಕಾರಣವನ್ನು ಮುಂದಿಟ್ಟುಕೊಂಡು ಏನೇ ವಾದವನ್ನು ಮಾಡಿದರೂ, ಇದರ ಹಿಂದಿನ ರಾಜಕೀಯ ನಿಲುವುಗಳು ಮಾತ್ರ ಕಣ್ಣಿಗೆ ರಾಚುತ್ತವೆ. ಜೊತೆಗೆ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರ ನಡುವಣ ನಂಟಸ್ತಿಕೆ, ಕೇಂದ್ರ–ರಾಜ್ಯಗಳ ಸಂಬಂಧ ಹಾಗೂ ಸಾಮಾಜಿಕ ಅಸ್ಮಿತೆಯ ಪ್ರಶ್ನೆಗಳು ನಿರಂತರವಾಗಿ ರಾಜಕೀಯ ಸಂಕಥನದ ಭಾಗಗಳಾಗಿಯೇ ಚರ್ಚೆಗೆ ಒಳಪಡುತ್ತವೆ. ಹೊರತು ಸಮೂಹಗಳ ಏಳ್ಗೆಯ ಪ್ರಶ್ನೆಗಳನ್ನಾಗಿ ಅವುಗಳನ್ನು ಚರ್ಚಿಸುವುದಿಲ್ಲ. ವಿಭಜನೆಯ ನಂತರದ ಭಾರತದಲ್ಲಿ, ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಗಳು ಒಂದುಕಡೆ ಹಾಗೂ ಸಾಂಸ್ಕೃತಿಕ ಭಿನ್ನತೆಗಳನ್ನು ಗುರುತಿಸುವ ತುಡಿತಗಳು ಮತ್ತೊಂದು ಕಡೆ ತೀವ್ರವಾಗಿ ನಮ್ಮನ್ನು ಕಾಡುತ್ತಿದ್ದರು, ನಾವು ಅವುಗಳನ್ನು ಭಾರತೀಯ–ರಾಷ್ಟ್ರೀಯ ಚೌಕಟ್ಟಿಗೆ ಸೀಮಿತಗೊಳಿಸಿ ನೋಡುವ ಪ್ರಯತ್ನವನ್ನೇ ಮಾಡುತ್ತ ಬಂದಿದ್ದೇವೆ. ರಾಜ್ಯಗಳ

**ಅಂಬೇಡ್ಕರ್ ಭಾಷಾವಾರು ರಾಜ್ಯಗಳ ರಚನೆಯ ಮುಖ್ಯ ಪ್ರತಿಪಾದಕರು. ಆದರೆ ಈ ಭಾಷಾವಾರು ರಾಜ್ಯಗಳು ತಮ್ಮ ತಮ್ಮ ರಾಜ್ಯ ಭಾಷೆಗಳಿಗೆ ಬದಲಾಗಿ ಹಿಂದಿಯನ್ನು ಆಡಳಿತ ಭಾಷೆಯನ್ನಾಗಿ ಬಳಸಬೇಕು ಎಂಬ ನಿಲುವನ್ನು ಹೊಂದಿದ್ದರು. ಭಾರತವು ಮಧ್ಯಕಾಲೀನ ಭಾರತದ ಮರುರೂಪವನ್ನು ಪಡೆಯುವ ಅಪಾಯದಿಂದ ತಪ್ಪಿಸಲು, ಅಂಬೇಡ್ಕರ್ ಅವರು ಈ ನಿಲುವನ್ನು ತಾಳುತ್ತಾರೆ. ಏಕೆಂದರೆ, "ನಮ್ಮ ಭಾರತ ಆಧುನಿಕ ಭಾರತವಾಗಿ ಉಳಿಯದೇ ಪರಸ್ಪರ ವೈರತ್ವ ಮತ್ತು ಯುದ್ಧಗಳಲ್ಲಿ ಮುಳುಗಿರುವ ಅನೇಕ ದೇಶಗಳನ್ನೊಳಗೊಂಡ ಮಧ್ಯಕಾಲೀನ ಭಾರತವಾಗಿ ಅದು ಪರಿಣಮಿಸುತ್ತದೆ" ಎಂಬ ಅಭಿಪ್ರಾಯ ಅವರದಾಗಿತ್ತು.**



ಸ್ವಾಯತ್ತತೆಯ ಪ್ರಶ್ನೆಗಳನ್ನೂ ಕೂಡ ಇದೇ ಚೌಕಟ್ಟಿಗೆ ಒಳಪಡಿಸಿದ್ದು ಮಾತ್ರ ವಿಪರ್ಯಾಸ. ಜನಾಂಗ–ಪ್ರಾದೇಶಿಕ ಅಸ್ಮಿತೆ ಹಾಗೂ ಉತ್ತಮ ಆಡಳಿತದ ನಡುವಣ ಸಂಬಂಧಗಳನ್ನು ಕುರಿತು ಮಾತ್ರ ಚಿಂತಿಸುವ ಕಡೆಗೆ ಇವತ್ತಿನ ಬೆಳವಣಿಗೆಗಳು ನಮ್ಮನ್ನು ಒತ್ತಾಯಿಸುತ್ತವೆ.

ಭಾಷಾವಾರು ಪ್ರಾಂತಗಳ ಪುನರ್‌ರಚನೆಯನ್ನು ಕುರಿತ ಅಂಬೇಡ್ಕರ್ ಅವರ ವಿಶ್ಲೇಷಣೆಗಳಿಗೆ ಚಾರಿತ್ರಿಕ ಸನ್ನಿವೇಶವಿದೆ. ಈ ಚಾರಿತ್ರಿಕ ಸನ್ನಿವೇಶದಿಂದ ಹೊರಗಿಟ್ಟು ನೋಡಿದರೂ ಇವತ್ತಿಗೂ ಈ ವಿಶ್ಲೇಷಣೆಗಳು ನಮ್ಮ ಸಾಮಾಜಿಕ–ರಾಜಕೀಯ ಬಿಕ್ಕಟ್ಟುಗಳನ್ನು ಅರಿಯಲು ಒತ್ತಾಸೆಯಾಗುತ್ತವೆ. ರಾಜ್ಯಾಡಳಿತವನ್ನು ಪ್ರಾದೇಶೀಕರಣಗೊಳಿಸುವ ಇರಾದೆಯಿಂದ ರಾಜ್ಯಗಳ ಪುನರ್‌ರಚನೆಯನ್ನು ಕೈಗೊಳ್ಳಲಾಗಿದೆ. ಪ್ರಾದೇಶಿಕ ಅಸ್ಮಿತೆಯನ್ನು ಹೊಂದುವ ತುಡಿತಕ್ಕೆ ಮುಖ್ಯವಾಗಿ ಈ ಮೂರು ಕಾರಣಗಳನ್ನು ಇಲ್ಲಿ ಗುರುತಿಸಬಹುದು.




1. ಮತದಾರರ ಪ್ರಾತಿನಿಧ್ಯದಲ್ಲಿ ಬದಲಾವಣೆಯನ್ನು ತರುವ ಮೂಲಕ ಈಗಾಗಲೇ ರಾಜಕೀಯವಾಗಿ ನಿಷ್ಕ್ರಿಯಗೊಂಡಿದ್ದ ಇಲ್ಲವೇ ಆಯಾ ಪ್ರದೇಶದ ಜನರಲ್ಲಿ ಸುಪ್ತವಾಗಿದ್ದ ಪ್ರಾದೇಶಿಕತೆಯ ಹಪಾಹಪಿತನವನ್ನು ಪುನರುಜ್ಜೀವನಗೊಳಿಸುವುದಾಗಿತ್ತು. ಜಾತಿ, ಜನಾಂಗ, ಭಾಷೆಗಳನ್ನೇ ನೆಲೆಯಾಗಿಸಿಕೊಂಡ ರಾಜಕೀಯ ಪ್ರೇರಿತ ಅಭಿವ್ಯಕ್ತಿಯನ್ನು ಸಜ್ಜುಗೊಳಿಸುವ ಮೂಲಕ ಹೊಸದಾಗಿ ಮೈಪಡೆದ ರಾಜ್ಯಗಳು, ಸಾಮಾಜಿಕ ಒಡಕುಗಳಿಗೆ ನಾಂದಿ ಹಾಡಿದವು. ಪ್ರಾದೇಶಿಕ ಇಲ್ಲವೇ ರಾಷ್ಟ್ರೀಯ ಪಕ್ಷಗಳೆಂಬ ಯಾವುದೇ ಭೇದಗಳನ್ನು ಹೊಂದದೆ ಪ್ರಾದೇಶಿಕ ಕೇಂದ್ರಿತವಾದ ಚುನಾವಣೆಯ ಪ್ರಚಾರ ಮತ್ತು ನೀತಿಗಳನ್ನು ಹುಟ್ಟು ಹಾಕಲಾಗುತ್ತದೆ.
2. ಆದಾಯ ಮತ್ತು ಬಳಕೆ–ಯ ವಿನ್ಯಾಸದಲ್ಲಿ ಪ್ರಾದೇಶಿಕ ಅಸಮಾನತೆಯ ಪ್ರಮಾಣವು ದಿನದಿಂದ ದಿನಕ್ಕೆ ತಲೆದೋರುತ್ತಿದೆ. ಪರಿಣಾಮವಾಗಿ ಸುಧಾರಣೋತ್ತರ ಕಾಲದಲ್ಲಿ ನಿರ್ಲಕ್ಷ್ಯ ಮತ್ತು ತಾರತಮ್ಯ ಧೋರಣೆಗಳು ಉಲ್ಬಣಿಸುತ್ತಿವೆ ಎಂಬ ಗ್ರಹಿಕೆಗೆ ಇದು ಇಂಬು ನೀಡುತ್ತಿದೆ. ಕರಾವಳಿ ಮತ್ತು ಇತರೆ ಅಭಿವೃದ್ಧಿ ಹೊಂದಿದ ಪ್ರದೇಶಗಳು ನಿಸ್ಸಂಶಯವಾಗಿ, ನಿರಂತರವಾಗಿ ಸಮಗ್ರ ಬೆಳವಣಿಗೆಯನ್ನು ಹೊಂದುತ್ತಿವೆ. ಹಾಗೂ ಇಂತಹ ಅವಕಶಾಗಳಿಂದ ವಂಚಿತವಾಗಿರುವ ಇನ್ನಿತರೆ ಪ್ರಾದೇಶಿಕ ಹೊರ ವಲಯಗಳಿಗೆ ಹೋಲಿಸಿದರೆ ಖಾಸಗಿ ಬಂಡವಾಳದ ಅಪಾರ ಹೂಡುವಿಕೆಯಿಂದಲೂ ಅಭಿವೃದ್ಧಿ ಹೊಂದಿದ ಈ ಪ್ರದೇಶಗಳೇ ಮತ್ತೆ ಮತ್ತೆ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಿವೆ. ಆದರೆ ಈ ಪ್ರಾದೇಶಿಕ ಅಭಿವೃದ್ಧಿಯಿಂದ ಹೊರಗುಳಿದ ಪ್ರಾದೇಶಿಕ ವಲಯಗಳು ಕಾನೂನು ಮತ್ತು ಸುವ್ಯವಸ್ಥೆಯಿಂದಲೂ ಬಾಧಿಸಲ್ಪಟ್ಟಿವೆ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಮೂಲಭೂತ ಸೌಕರ್ಯಗಳ ಕೊರತೆಯಿಂದಲೂ ಬಳಲುತ್ತಿವೆ.
3. ಸಂವಿಧಾನ ರಾಜ್ಯಗಳೊಳಗೆಯೇ ಸಂಪತ್ಭರಿತ ಪ್ರದೇಶಗಳು ಇದ್ದು, ಅಗಾಧ ಪ್ರಮಾಣದಲ್ಲಿ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುತ್ತಿದ್ದು ಮತ್ತು ಪರಿಣಾಮಕಾರಿ ಬೆಳವಣಿಗೆಯನ್ನು ಹೊಂದುತ್ತಿದ್ದಾಗಲೂ, ಈ ಪ್ರದೇಶಗಳ ಮೇಲೆ ನಿರಂತರವಾಗಿ ಅವಲಂಬಿತವಾಗಿದ್ದ ಇತರೆ ಹಿಂದೂಳಿದ ಪ್ರದೇಶಗಳಿಗೆ ಯಾವುದೇ ಬಗೆಯ ಆದಾಯವನ್ನು ವರ್ಗಾಯಿಸುವುದನ್ನು ಈ ಸಂಪತ್ಭರಿತ ಪ್ರದೇಶಗಳು ನಿರಾಕರಿಸುತ್ತವೆ. ಈ ಧೋರಣೆಗಳನ್ನು ವ್ಯಂಗವಾಗಿ 'ಶ್ರೀಮಂತಿಕೆಯನ್ನು ಹಿಂಪಡೆಯುವ' ಬಗೆಯನ್ನಾಗಿ ಇಲ್ಲಿ ನೋಡುತ್ತೇವೆ. ಇಲ್ಲಿಯ ಸ್ಥಳೀಯ ಮೇಲ್ವರ್ಗಗಳ ಆರೋಪ ಏನೆಂದರೆ, ರಾಜಕೀಯವಾಗಿ ಪ್ರಾಬಲ್ಯವನ್ನು ಹೊಂದಿರುವ ಇತರೆ ಪ್ರದೇಶದ ಮೇಲ್ವರ್ಗಗಳು ಆರ್ಥಿಕವಾಗಿ, ಆಡಳಿತಾತ್ಮಕವಾಗಿ ತಾರತಮ್ಯ ಧೋರಣೆಗಳನ್ನು ಹೊಂದುತ್ತವೆ ಎಂಬುದಾಗಿದೆ.

ಈ ಮೇಲಿನ ಪ್ರಕ್ರಿಯೆಯ ಪರಿಣಾಮವಾಗಿ ಭಾರತದ ಫೆಡರಲ್ ತಾತ್ವಿಕತೆಯಲ್ಲಿ ಗಮನಾರ್ಹವಾದ ಪಲ್ಲಟಗಳು ಏರ್ಪಟ್ಟಿರುತ್ತವೆ. ಈ ಪಲ್ಲಟಗಳು ಹಲವು ಸ್ವರೂಪದಲ್ಲಿ ಪ್ರತಿಫಲಿಸಿರುವುದನ್ನು ಈ ಮುಂದಿನ ಬೆಳವಣಿಗೆಗಳ ಮೂಲಕ ನೋಡುತ್ತೇವೆ. ಅಂದರೆ;

1. ಪ್ರಾದೇಶಿಕ ಅಸ್ಮಿತೆ, ಸಂಸ್ಕೃತಿ ಹಾಗೂ ಭೌಗೋಳಿಕ ಭಿನ್ನತೆಗಳು, ರಾಜಕೀಯ ಪ್ರಾತಿನಿಧ್ಯ ಹಾಗೂ ಆಡಳಿತಾತ್ಮಕ ವಲಯಗಳನ್ನಾಗಿ ರೂಪಿಸುವುದಕ್ಕೆ ಇವುಗಳು ಮಹತ್ವದ ಮಾನದಂಡಗಳಾಗಿರುತ್ತವೆ.
2. ಪ್ರತ್ಯೇಕ ರಾಜ್ಯಗಳ ಕೋರಿ ನಡೆಸುವ ಚಳವಳಿಗಳು ಇವತ್ತು ಯಾವುದೇ ಬಗೆಯ ಭಾಷಾ ದುರಾಭಿಮಾನ ಇಲ್ಲವೇ ಪ್ರಾಂತೀಯ ಕಳಂಕಗಳನ್ನಾಗಿ ನೋಡುವ ಕಾಲವಲ್ಲವಿದು. ದಿಟ, ಹಿಂದೊಂದು ಕಾಲದಲ್ಲಿ ಇದನ್ನು ರಾಷ್ಟ್ರ ವಿರೋಧಿ ನಿಲುವನ್ನಾಗಿ ನೋಡುವ ಕ್ರಮವೊಂದಿತ್ತು.
3. ಇವತ್ತು ಹೊಸ ರಾಜ್ಯಗಳ ಪ್ರಸ್ತಾಪವು ಭಾಷಾ ತತ್ವಗಳ ಆಧಾರದ ಮೇಲೆ ಆಗುತ್ತಿಲ್ಲ. ಬದಲಾಗಿ ಅಭಿವೃದ್ಧಿ ಮತ್ತು ಉತ್ತಮ ಆಡಳಿತವನ್ನು ಕೊಡುವ ನೆಪದಲ್ಲಿ ಮುಂಚೂಣೆಗೆ ಬರುತ್ತಿವೆ. ಅದರೆ ಮೊದಲ ಹಂತದ ರಾಜ್ಯಗಳ ಪುನರ್‌ರಚನೆಯು ಭಾಷೆಗಳನ್ನೇ ಆಧಾರವಾಗಿಟ್ಟುಕೊಂಡು ನಡೆದಿತ್ತು ಎಂಬುದು ಗಮನಾರ್ಹ.
4. ಆದರೆ ವೈರುಧ್ಯವೇನಂದರೆ, ಉತ್ತರ ಪ್ರದೇಶ, ಮಧ್ಯಪ್ರದೇಶ ಹಾಗೂ ಬಿಹಾರ ಪ್ರದೇಶಗಳಲ್ಲಿ ನೆಲೆಗೊಂಡಿದ್ದ ಬೇರೆ ಬೇರೆ ಒಳನುಡಿಗಳು ತಮ್ಮದೆಯಾದ ತಾಯ್ನೆಲವನ್ನು ಹೊಂದುವ ಇರಾದೆಯನ್ನೂ ತಾಳಿದ್ದವು. ಬುಂದೆಲ್ಖಂಡ, ರುಹೆಲ್ಖಂಡ ಹಾಗೂ ಮಿಥಿಲಾಂಚಲ್ ಪ್ರದೇಶಗಳು ತಮ್ಮ ಒಳನುಡಿಗಳಲ್ಲಿ ಹುದುಗಿರುವ ಸಂಸ್ಕೃತಿ ಹಾಗೂ ಸಾಹಿತ್ಯದ ವೈಶಿಷ್ಟ್ಯ ಮತ್ತು ಶ್ರೀಮಂತಿಕೆಯನ್ನು ಕಂಡರಿಸುವ ಹಂಬಲವೂ ಇಂತಹ ಇರಾದೆಗಳಲ್ಲಿ ಅಡಕವಾಗಿದ್ದವು. ಕಳೆದ ದಶಕದಲ್ಲಿ ಅಂದರೆ ನವೆಂಬರ್ 2000ನೇ ಇಸ್ವಿಯಲ್ಲಿ ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ಬಿಹಾರ ರಾಜ್ಯಗಳಿಂದ ಛತ್ತೀಸ್ಘಢ್, ಉತ್ತರಾಂಚಲ್ ಹಾಗೂ ಜಾರ್ಖಂಡ್ ಎಂಬ ಹೊಸ ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಈ ಮೂರು ರಾಜ್ಯಗಳು ಮೈದಾಳಲು ಕಾರಣ, ಫೆಡರಲ್ ಚಿಂತನೆಯಲ್ಲಿ ಏರ್ಪಟ್ಟ ಸಾಂಸ್ಕೃತಿಕ–ರಾಜಕೀಯ ಪಲ್ಲಟಗಳೇ ಎಂದು ಹೇಳಬೇಕು. ಈ ಹೊಸ ರಾಜ್ಯಗಳ ಪುನರ್‌ರಚನೆಗೆ ಎಲ್ಲ ರಾಜಕೀಯ ಪಕ್ಷಗಳು ಬೆಂಬಲಿಸಿರುವುದನ್ನು ಮುಖ್ಯವಾಗಿ ಇಲ್ಲಿ ನೋಡಬಹುದು. ರಾಷ್ಟ್ರೀಯ ಪಕ್ಷಗಳ ಏಕಮುಖಿ ನಿಲುವುಗಳಿಂದ ಹಾಗೂ ತೀವ್ರವಾಗಿ ಬೆಳೆಯುತ್ತಿರುವ ರಾಜಕೀಯ ಸ್ಪರ್ಧಾತ್ಮಕ ವಾತಾವರಣದಿಂದ ತಪ್ಪಿಸಿಕೊಳ್ಳುವ ತಂತ್ರಗಳನ್ನೂ ಇಲ್ಲಿ ಕಾಣಬಹುದು. ಅಂದರೆ ಯಾವುದೇ ಒಂದು ರಾಷ್ಟ್ರೀಯ ಪಕ್ಷವು ಕೇಂದ್ರದಲ್ಲಿ ಅಧಿಕಾರವನ್ನು ಪಡೆಯುವುದರಿಂದ, ಪ್ರಾದೇಶಿಕ ಕಾಳಜಿಗಳನ್ನು ಈ ರಾಷ್ಟ್ರೀಯ ಪಕ್ಷಗಳು ಹೊಂದಿರಲಾರವು ಎಂಬ ಅನುಮಾನವೂ ಇಲ್ಲಿದೆ. 2009 ಡಿಸೆಂಬರ್‌ನಲ್ಲಿ ಪ್ರತ್ಯೇಕ ತೆಲೆಂಗಾಣ ರಾಜ್ಯದ ಹೊಸ ಬೇಡಿಕೆಯು ತೀವ್ರ ಸ್ವರೂಪವನ್ನು ಪಡೆದುಕೊಂಡಾಗ, ಕೇಂದ್ರ ಸರಕಾರವು ಈ ಬೇಡಿಕೆಯನ್ನು ಪರಿಗಣಿಸುವಾಗ, ಇನ್ನೂ ಹಲವಾರು ಹೊಸ ಮತ್ತು ಹಳೆ ಬೇಡಿಕೆಗಳು ಮುಂಚೂಣೆಗೆ ಬಂದವು. ಉದಾ.ಗೆ ಕರ್ನಾಟಕದಲ್ಲಿ ಕೂರ್ಗ್, ಬಿಹಾರದಲ್ಲಿ ಮಿಥಿಲಾಂಚಲ್, ಗುಜರಾತಿನಲ್ಲಿ

(72ನೇ ಪುಟಕ್ಕೆ)

# ಸಂವಿಧಾನ ಅಂಬೇಡ್ಕರ್ ಮತ್ತು ಪೌರತ್ವ




**‘ಈಗಿನ ಕೇಂದ್ರ ಸರ್ಕಾರವು ಒಂದು ಫ್ಯಾಸಿಷ್ಟ್ ಆಡಳಿತವನ್ನು ಹಾಗು ಸರ್ವಾಧಿಕಾರಿ ಧೋರಣೆಯನ್ನು ಅಳವಡಿಸಿಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಸಂವಿಧಾನವನ್ನು ರಚನೆ ಮಾಡುವಾಗ ಸಂವಿಧಾನ ಸಭೆಯಲ್ಲಿ ಪೌರತ್ವವನ್ನು ಕುರಿತು ನಡೆದಂತಹ ಸಂಬಾಷಣೆಗಳನ್ನು ಹಾಗು ವಿಶೇಷವಾಗಿ ಡಾ॥ ಅಂಬೇಡ್ಕರ್ ರವರ ಒಂದು ಪಾತ್ರವನ್ನು ನಾವು ಅರಿಯಬೇಕಾಗಿದೆ’**

ಭಾರತ ಸಂವಿಧಾನ ರಚನಾ ಸಭೆಯು ಅಸ್ಥಿತ್ವಕ್ಕೆ ಬರುವ ಸಂದರ್ಭ ಎರಡನೆಯ ಪ್ರಪಂಚ ಯುದ್ಧ ಮುಗಿದು ಸ್ಟ್ಯಾಲಿನ್ ರೆಡ್ ಆರ್ಮಿ ಹಿಟ್ಲರ್‌ನನ್ನು ಸೋಲಿಸಿದ ನಂತರ ಬ್ರಿಟನ್‌ನಲ್ಲಿ ಸರ್ಕಾರ ರಚನೆ ಮಾಡಿದ ಲೇಬರ್ ಪಾರ್ಟಿಯ ಪ್ರಧಾನಿ **Atlee** (ಅಟಲೀ) ಯವರು, ಲಾರ್ಡ್ ಪೆತಿಕ್-ಲಾರ್ನೆಸ್, ಸರ್ ಸ್ಟ್ಯಾಂಪೋರ್ಡ್ ಕ್ರಿಪ್ಸ್ ಮತ್ತು ಎ.ಬಿ. ಅಲ್ಕೇಜಾಂಡರ್ ರವರ ಮೂರು ಕ್ಯಾಬಿನೆಟ್ ಮಂತ್ರಿಗಳ ಸಮಿತಿಯನ್ನು ರಚನೆ ಮಾಡಿದರು. ಈ ಕ್ಯಾಬಿನೆಟ್ ಮಿಷನ್ 23.03.1946 ರಂದು ಭಾರತಕ್ಕೆ ಬಂತು ಮತ್ತು ಭಾರತದಲ್ಲಿ ಸಂವಿಧಾನ ರಚನಾ ಸಭೆಯ ಸದಸ್ಯರನ್ನು ಚುನಾಯಿಸುವ ಬಗ್ಗೆ ಹಾಗೂ ಸಂವಿಧಾನವನ್ನು ರಚನೆ ಮಾಡಲು ಕೆಲವು ಸೂಚನೆಗಳನ್ನು 16.05.1946 ರಂದು ಕೊಟ್ಟಿತು. ಈ ಸಂದರ್ಭದಲ್ಲಿ ಇಂದಿನ ಭಾರತ ದೇಶ ಇರಲಿಲ್ಲ ಬದಲಿಗೆ ಬ್ರಿಟೀಷ್ ಆಳ್ವಿಕೆಯಲ್ಲಿರುವ ಪ್ರೆಸಿಡೆಂಸಿಗಳು ಹಾಗೂ ರಾಜರ ಆಳ್ವಿಕೆಯಲ್ಲಿರುವ ಸುಮಾರು 544 ರಾಜ್ಯಗಳಿದ್ದವು. ಭಾರತ ಸಮಾಜದಲ್ಲಿರುವ ಶ್ರೇಣೀಕೃತ ಜಾತಿವ್ಯವಸ್ಥೆ ಅಸಮಾನತೆಯನ್ನು ಹರಡಿದೆ, ಜಾತಿ ತಾರತಮ್ಯವು ಬ್ರಾತೃತ್ವವನ್ನು ಕೊಂದಿದೆ ಹಾಗೂ ಭಾರತದ ಜನರಿಗೆ ಸ್ವಾತಂತ್ರ ಸಹಜಗುಣವಲ್ಲ ಏಕೆಂದರೆ ಅವರು ಶತಮಾನಗಳಿಂದ ರಾಜರಿಗೆ ಅಥವಾ ಬ್ರಿಟೀಷರಿಗೆ ಗುಲಾಮರಾಗಿ ಜೀವಿಸಿದವರು. ಆದರೆ ರಾಷ್ಟ್ರೀಯ ಸ್ವಾತಂತ್ರ ಸಂಗ್ರಾಮದ ಪರಿಣಾಮವಾಗಿ ಭಾರತೀಯರಲ್ಲಿ ಸ್ವಾತಂತ್ರ ಸಮಾನತೆ ಮತ್ತು ಬ್ರಾತೃತ್ವದ ಭಾವನೆಗಳು ಮೂಡಿ, ಸ್ವಾತಂತ್ರ ದೇಶವಾದಾಗ ಸಾಮ್ರಾಜ್ಯಶಾಹಿ ಬದಲಿಗೆ ಸಾರ್ವಭೌಮ ಗಣತಂತ್ರವನ್ನು, ಸಾಮಂತಶಾಯಿಯ ಬದಲಿಗೆ ಪ್ರಜಾಪ್ರಭುತ್ವವನ್ನು ಆಯ್ದುಕೊಂಡು ಸ್ವಾತಂತ್ರ ದೇಶವಾಗಿ ತನ್ನ ಸಂವಿಧಾನವನ್ನು ತಾನೆ ರಚನೆ ಮಾಡಿಕೊಂಡಿತು.

ಭಾರತ ದೇಶದಲ್ಲಿ ಸಂವಿಧಾನ ರಚನೆ ಮತ್ತು ಪ್ರಜಾಪ್ರಭುತ್ವೀಕರಣ ಏಕಕಾಲದಲ್ಲಿ ನಡೆಯುತ್ತದೆ. ಪ್ರಜಾಪ್ರಭುತ್ವಕ್ಕೆ ವಿರೋಧವಾದ ವಾತಾವರಣದಲ್ಲಿ ಪ್ರಜಾಪ್ರಭುತ್ವನ್ನು ಅನುಷ್ಠಾನಕ್ಕೆ ತರಲಾಗಿದೆ. ಇದೇ ಸಂದರ್ಭದಲ್ಲಿ ಮೊದಲನೆಯ ಪ್ರಪಂಚ ಯುದ್ಧದ ನಂತರ ಹೊಸದಾಗಿ ಪ್ರಜಾಪ್ರಭುತ್ವ ಸರ್ಕಾರಗಳನ್ನು ರಚನೆ ಮಾಡಿದ ಹದಿನೇಳು ದೇಶಗಳ ಪೈಕಿ 1930ರ ದಶಕದ ವೇಳಗೆ ಇಟಲಿ, ಪೋರ್ಚುಗಲ್, ಪೋಲ್ಯಾಂಡ್, ಬ್ರೆಜಿಲ್, ಆರ್ಜಂಟೆನ, ಉರುಗುವೆ, ಜಪಾನ್ ಮತ್ತು ಜರ್ಮನಿ ಒಟ್ಟು ಎಂಟು ದೇಶಗಳ ಪ್ರಜಾಪ್ರಭುತ್ವದಿಂದ ಸರ್ವಾಧಿಕಾರಕ್ಕೆ ಜಾರಿದ್ದವು. ಈ ಎಲ್ಲಾ ದೇಶಗಳು ಭಾರತ ದೇಶಕ್ಕಿಂತ ಹೆಚ್ಚು ಸಾಕ್ಷರತೆಯನ್ನು ಹಾಗೂ ಆಧುನಿಕತೆಯನ್ನು ಹೊಂದಿರುವಂತಹ ದೇಶಗಳು, ಆದರೆ ಭಾರತ ದೇಶದಲ್ಲಿ ಬಡತನ ಮತ್ತು ಅನಕ್ಷರತೆ, ಶ್ರೇಣೀಕೃತ ಜಾತಿವ್ಯವಸ್ಥೆ, ಜಾತಿ ತಾರತಮ್ಯ ಬಹು ಭಾಷೆ, ಬಹುಧರ್ಮ ಹಾಗು ಶತಮಾನಗಳ ಪರಂಪರೆಯ ಹೊರೆ, ಇವೆಲ್ಲವೂ ಪ್ರಜಾಪ್ರಭುತ್ವಕ್ಕೆ ವಿರೋಧವಾದವು, ಹೀಗಾಗಿ ವಿಶ್ವದ ಬಹಳಷ್ಟು ತತ್ವಜ್ಞಾನಿಗಳ ಮತ್ತು ಸಂವಿಧಾನ ತಜ್ಞರ ಒಂದು ಅಭಿಪ್ರಾಯವೇನೆಂದರೆ, ಭಾರತದಂತಹ ದೇಶಕ್ಕೆ ಪ್ರಜಾಪ್ರಭುತ್ವವು ಹೊಂದುವುದಿಲ್ಲ ಎಂದಾಗಿತ್ತು. ಎನ್ನುವ ಬ್ರಿಟೀಷ್ ಚಿಂತಕ “ಭಾರತ ಸಂವಿಂಧಾನವು ಬಹಳ ಪ್ರಗತಿಪರ ಹಾಗೂ ಉದಾರವಾದ ಸಂವಿಧಾನ, ಆದರೆ ಭಾರತ ಸಮಾಜವು ಒಂದು ಉದಾರ ಸಮಾಜವಲ್ಲ ಹಾಗೂ ಶತಶತಮಾನಗಳಿಂದ ಶೋಷಣೆಗೆ ಹಾಗೂ ಗುಲಾಮಗಿರಿಗೆ ಗುರಿಯಾಗಿರುವ ಸಮಾಜ. ಇಂತಹ ಸಮಾಜದಲ್ಲಿ ಈ ಪ್ರಗತಿಪರ ಸಂವಿಂಧಾನವನ್ನು ಅನುಷ್ಟಾನಗೊಳಿಸಲು ಕಷ್ಟ” ಎಂದಿದ್ದರು, ಆದರೆ ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಹೊರ ಹೊಮ್ಮಿದ ಅನೇಕ ನಾಯಕರು ಭಾರತ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಒಂದು ಸಂವಿಂಧಾನವನ್ನು ರಚನೆ ಮಾಡುವ ಮೂಲಕ ಹಾಗು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ನಿರ್ಮಿಸುವ ಮೂಲಕ ಅನುಷ್ಠಾನಕ್ಕೆ ತಂದು, ಆ ಮೂಲಕ ಭಾರತ ದೇಶದ ಪ್ರಜೆಗಳನ್ನು ಹಾಗು ಸಮಾಜವನ್ನು ಪ್ರಜಾಪ್ರಭುತ್ವೀಕರಣಗೊಳಿಸುವ ಕಾರ್ಯವನ್ನು ಮಾಡುತ್ತಾರೆ. ಈ ಪ್ರಕ್ರಿಯೆಯಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್, ಪಂಡಿತ ಜವಹರಲಾಲ್ ನೆಹರು, ಡಾ॥ ರಾಜೇಂದ್ರ ಪ್ರಸಾದ್ ಮೊದಲಾದವರ ಪಾತ್ರ ಹೆಚ್ಚಿದೆ. ಡಾ॥ಬಿ.ಆರ್.ಅಂಬೇಡ್ಕರ್ ರವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಅವರೊಬ್ಬರೆ ಸಂವಿಂಧಾನ ಕರುಡನ್ನು ಸಿದ್ಧಪಡಿಸಿದ್ದರೆಂದರೆ ಅದು ಅತಿಶಯೋಕ್ತಿಯಲ್ಲ. ಶ್ರೀ ಟಿ.ಟಿ.ಕೃಷ್ಣಮಾಚಾರಿ ನವಂಬರ್ 5, 1948 ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣವನ್ನು ಓದಿದರೆ ತಿಳಿಯುತ್ತದೆ.




ಬಾಗೇಪಲ್ಲಿಯ ಪೀಪಲ್ಸ್ ಆಸ್ಪತ್ರೆಯಲ್ಲಿ ಜನರಲ್ ಸರ್ಜನ್ ಆಗಿ ಕೆಲಸ ಮಾಡುವ ಡಾ॥ ಎ.ಅನಿಲ್ ಕುಮಾರ್ ಅವರು ಸಂವಿಧಾನ, ಪ್ರಜಾಪ್ರಭುತ್ವ, ಬಾಬಾ ಸಾಹೇಬರ ಚಿಂತನೆಗಳನ್ನು ಸೂಕ್ಷ್ಮವಾಗಿ ಓದಿಕೊಂಡವರು. ಹವ್ಯಾಸಿ ಬರಹಗಾರರಾಗಿ 'ಸಮಾಜಮುಖಿ' ಮಾಸಿಕ ಒಳಗೊಂಡಂತೆ ಬೇರೆ ಬೇರೆ ಪತ್ರಿಕೆಗಳಿಗೆ ಬಿಡಿ ಬರಹಗಳನ್ನು ಬರೆಯುತ್ತಿರುತ್ತಾರೆ. ಸಂವಾದ ವಿಶೇಷ ಸಂಚಿಕೆಗೆ ಬಾಬಾಸಾಹೇಬರ ಪೌರತ್ವದ ಚರ್ಚೆಯ ಹಿನ್ನೆಲೆಯಲ್ಲಿ ವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ.

**ಡಾ॥ ಎ ಅನಿಲ್ ಕುಮಾರ್**
**Email: dranilkumar@yahoo.co.in**

ಸಂವಿಧಾನ ರಚನಾ ಸಭೆಯು ಡಿಸೆಂಬರ್ 9, 1946 ರಂದು ಮೊದಲ ಸಭೆ ನಡೆಸಿತು. 11.12.1946 ರಂದು ಡಾ.ರಾಜೇಂದ್ರ ಪಸಾದ್ ರವರನ್ನು ಸಂವಿಧಾನ ರಚನಾ ಸಭೆಯ ಖಾಯಂ ಅಧ್ಯಕ್ಷರಾಗಿ ಚುನಾಯಿತರಾಗುತ್ತಾರೆ. ಆಗ ಸಭೆಯಲ್ಲಿ 'ಇನ್‌ಕ್ವಿಲಾಬ್ ಜಿಂದಾಬಾದ್ ಮತ್ತು ಜೈಹಿಂದ್'* ಎಂಬ ಘೋಷಣೆ ಪ್ರತಿಧ್ವನಿಸುತ್ತದೆ. ನಂತರ 13.12.1946 ರಂದು ಜವಹರ್‌ಲಾಲ್ ನೆಹರು ರವರು ಸಂವಿಧಾನದ 'ಗುರಿ ಮತ್ತು ಉದ್ದೇಶಗಳ' ವರದಿಯನ್ನು ಮಂಡಿಸುತ್ತಾರೆ. ನಮ್ಮ ಸಂವಿಧಾನದಲ್ಲಿ ಯಾವ ಅಂಶಗಳನ್ನು ಒಳಗೊಳ್ಳಬೇಕು ಎನ್ನುವುದು ಈ ವರದಿಯ ಸಾರಾಂಶ, ನೆಹರುರವರು ಮಾತನಾಡುತ್ತಾ ಇದು ದೇಶದ ಕನಸು ಮತ್ತು ಆಕಾಂಕ್ಷೆ ಎಂದು ಹೇಳುತ್ತಾರೆ, ಈ ವರದಿಯಲ್ಲಿ ದೇಶವನ್ನು ಸ್ವಾತಂತ್ರ ಸಾರ್ವಭೌಮ, ಗಣತಂತ್ರ ದೇಶವಾಗಿ ಕಟ್ಟಬೇಕು, ನಾವು ಪ್ರಜಾಪ್ರಭುತ್ವವನ್ನು ಮತ್ತು ಸಮಾಜವಾದವನ್ನು ನಮ್ಮ ದೇಶದಲ್ಲಿ ಅನುಷ್ಠಾನಕ್ಕೆ ತರಬೇಕು ಎಂದು ಹೇಳುತ್ತಾರೆ, ಈ ವರದಿಯನ್ನು ಅನುಮೋದಿಸುತ್ತಾ ಪುರುಷೋತ್ತಮ್ ದಾಸ್ ಟ್ಯಂಡನ್ ರವರು ಮಾತನಾಡಿ, ಹಿಂದು ಮತ್ತು ಮುಸ್ಲಿಂರು ಒಂದೇ ನಾಗರೀಕತೆಯನ್ನು ಹೊಂದಿದ್ದಾರೆ ಹಾಗೂ ಒಟ್ಟಿಗೆ ಸೌಹಾರ್ದತೆಯಿಂದ ಭಾರತದಲ್ಲಿ ಜೀವಿಸುತ್ತಿದ್ದಾರೆ. ಈ ಸಂವಿಧಾನವನ್ನು ರಚನೆ ಮಾಡುವ ನಾವು ನಮ್ಮ ದೇಶವನ್ನು ವಿಭಜಿಸುವ ಯಾವುದೇ ಸಲಹೆಗಳಿಗೆ ಒಪ್ಪಬಾರದು, ನಮ್ಮ ನಾಗರೀಕತೆಯನ್ನು ನಾವು ಕಾಪಾಡಿಕೊಂಡು ಮುಂದುವರಿದು ಜಗತ್ತಿಗೆ ಶಾಂತಿಯನ್ನು ಹರಡಬೇಕು ಎಂದು ಹೇಳುತ್ತಾರೆ.

ಎಂ.ಆರ್. ಜಯಕರ್ ರವರು ಮುಸ್ಲಿಂ ಲೀಗ್ ಸದಸ್ಯರು ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಳ್ಳದೇ ಇರುವುದರಿಂದ ಈ ಸಭೆಯನ್ನು ಮುಂದೂಡಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಡಾ.ಶಾಮ್ ಪ್ರಸಾದ್ ಮುರ್ಖಜಿ** ರವರು 17.12.1946 ರಂದು ಮಾತನಾಡುತ್ತ ನಾವು ಬ್ರಿಟೀಷರಿಗೆ ಸ್ಪಷ್ಠ ಉತ್ತರ ನೀಡಬೇಕು, ನಾವು ಅವರಿಗೆ ಹೇಳಬೇಕು, ನೀವು ವ್ಯಾಪಾರಕ್ಕಾಗಿ ಬಂದಿರಿ, ಮೋಸ ವಂಚನೆ ಮತ್ತು ಬಲದಿಂದ ನಿಮ್ಮ ಸರ್ಕಾರವನ್ನು ಸ್ಥಾಪಿಸಿ, ನಮ್ಮವರ ಸಹಕಾರ ಇಲ್ಲದೆಯೇ ನಮ್ಮನ್ನು ಆಳಿದಿರಿ, ನೀವು ಪ್ರತ್ಯೇಕ ಮತದಾನವನ್ನು, ಭಾರತದ ರಾಜಕೀಯದಲ್ಲಿ ದರ್ಮವನ್ನು ಪರಿಚಯಿಸಿದಿರಿ, ನೀವು ಇದನ್ನು ಕೇವಲ ನಿಮ್ಮ ಆಳ್ವಿಕೆಯನ್ನು ಮುಂದುವರಿಸಲು ಮಾಡಿದಿರಿ. ನಮಗೆ ಅನೇಕ ಆಂತರಿಕ ಸಮಸ್ಯೆಗಳಿವೆ, ಈ ಸಮಸ್ಯೆಗಳ ನಡುವೆಯೇ ನಾವು ಒಗ್ಗಟ್ಟಿನ ಹಾಗು ಸದೃಢವಾದ ಬೃಹತ್ ಭಾರತವನ್ನು ಕಟ್ಟೋಣ, ಈ ಭಾರತ ಎಲ್ಲಾ ದರ್ಮಗಳ, ಎಲ್ಲಾ ಜನರ, ಪುರುಷ, ಮಹಿಳೆ ಮತ್ತು ಮಗುವಿನ ಯಾವುದೇ ವರ್ಣ, ಜಾತಿ, ಪಂಗಡ ಹಾಗು ಕೋಮುವಿನ ಬೇಧವಿಲ್ಲದೆ ಎಲ್ಲರಿಗೂ ಸಮಾನ ಹಕ್ಕುಗಳು ಸಮಾನ ಸ್ವಾತಂತ್ರ್ಯ ಸಮಾನ ಸ್ಥಾನಮಾನ ಹಾಗು ಸಮಾನ ಅವಕಾಶಗಳು ಸಿಗುವಂತಹ ನಾಡಾಗಬೇಕು ಎಂದು ಹೇಳಿದರು.




ನಂತರ ಇದೇ ಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರು ಮಾತನಾಡುತ್ತ, ನಾನು ಈ ವರದಿಯಿಂದ ಅಸಂತೃಪ್ತನಾಗಿದ್ದೇನೆ, ಅದರಲ್ಲೂ ನೆಹರು ರವರಿಂದ ಈ ವರದಿ ಮಂಡನೆಯಾದ್ದರಿಂದ ಇನ್ನಷ್ಟು ಅಸಂತೃಪ್ತಿಗೆ ತುತ್ತಾಗಿದ್ದೇನೆ, ಏಕೆಂದರೆ, ಈ ವರದಿಯಲ್ಲಿ ಪ್ರೆಂಚ್ ಸಂವಿಧಾನ ಸಭೆಯ ಮಾನವ ಹಕ್ಕುಗಳ ಘೋಷಣೆಯ ನೆನಪಾಗುತ್ತದೆ, ಈ ಮಾನವ ಹಕ್ಕುಗಳ ಘೋಷಣೆಯು 450 ವರ್ಷಗಳ ನಂತರ ಇಂದಿನ ಆಧುನಿಕ ನಾಗರೀಕತೆಯಲ್ಲಿ ನಮ್ಮೆಲ್ಲರ ವಿಚಾರಧಾರೆಯಾಗಿಬಿಟ್ಟಿದೆ, ಅದರಲ್ಲೂ ಸಂಪ್ರದಾಯಿಕ, ಪುರಾತನ ಸಮಾಜ ರಚನೆ ಮತ್ತು ಆಲೋಚನೆಗಳಿರುವ ಭಾರತ ದೇಶಕ್ಕೆ ಇಂತಹ ಪ್ರಗತಿಪರ ಮಾನವ ಹಕ್ಕುಗಳ ಘೋಷನೆಯು ಅತ್ಯವಶಕ, ಆದರೆ ಸಂವಿಧಾನ ಗುರಿ ಮತ್ತು ಉದ್ದೇಶಗಳ ವರದಿಯಲ್ಲಿ ಹಕ್ಕುಗಳನ್ನು ಘೋಷಿಸಿದ್ದಾರೆಯೇ ಹೊರತು, ಆ ಹಕ್ಕುಗಳು ಧಮನವಾದಾಗ ಅದಕ್ಕೆ ರಕ್ಷಣೆ ಹಾಗು ಪರಿಹಾರಗಳನ್ನು ಸೂಚಿಸಿಲ್ಲ. ಹಾಗು ಈ ಮೂಲಭೂತ ಹಕ್ಕುಗಳು, ಕಾನೂನು ಹಾಗು ನೈತಿಕತೆಯನ್ನು ಆಧರಿಸಿರುತ್ತವೆ. ಈ ಕಾನೂನು ಮತ್ತು ನೈತಿಕತೆಯನ್ನು ಕಾರ್ಯಾಂಗವು (ಅಂದರೆ ಸರ್ಕಾರ) ನಿರ್ದರಿಸುತ್ತದೆ ಹಾಗಾಗಿ ಕಾರ್ಯಾಂಗವು ಬದಲಾದ ಹಾಗೆ ಕಾನೂನು ಮತು ನೈತಿಕತೆ ಬದಲಾಗುತ್ತದೆ. ಅದರಂತೆ ಮೂಲಭೂತ ಹಕ್ಕುಗಳ ಧಮನಗೊಳ್ಳುತ್ತವೆ. ಈ ವರದಿಯನ್ನು ಮಂಡಿಸುವವರು ಪ್ರಮಾಣಿಕವಾಗಿ ಆರ್ಥಿಕ, ಸಾಮಾಜಿಕ ಹಾಗು ರಾಜಕೀಯ ಸಮಾನತೆ ಮತ್ತು ನ್ಯಾಯವನ್ನು ಕೊಡಬೇಕೆಂದರೆ ಈ ವರದಿಯಲ್ಲಿ ಸಮಾಜವಾದ ಆರ್ಥಿಕತೆಯನ್ನು ಅಳವಡಿಸಬೇಕಾಗಿತ್ತು ಹಾಗೂ ಭೂಮಿಯ ರಾಷ್ಟ್ರೀಕರಣ ಮತ್ತು ಕೈಗಾರಿಕೆಗಳ ರಾಷ್ಟ್ರೀಕರಣವನ್ನು ಪ್ರಸ್ತಾಪಿಸಬೇಕಾಗಿತ್ತು, ಇವೆಲ್ಲ ಇಲ್ಲದಿದ್ದರೂ ನನ್ನ ಅನಿಸಿಕೆಯನ್ನು ಇಲ್ಲಿ ಹೇಳಿದ್ದೇನೆ. ನಮಗೆಲ್ಲರಿಗೂ ಇಂದು ಗೊತ್ತಿದೆ, ನಾವು ರಾಜಕೀಯವಾಗಿ, ಸಾಮಾಜಿಕವಾಗಿ ಹಾಗು ಆರ್ಥಿಕವಾಗಿ ವಿಭಜನೆಗೊಂಡಿದ್ದೇವೆ. ನಾವು ವಿವಿಧ ಗುಂಪುಗಳಾಗಿದ್ದೇವೆ, ಈ ಗುಂಪುಗಳು ಪರಸ್ಪರ ಸಂಘರ್ಷದಲ್ಲಿವೆ. ಅಂತಹ ಒಂದು ಗುಂಪಿಗೆ ನಾನೂ ಕೂಡ ಒಬ್ಬ ನಾಯಕ, ಹೀಗಿದ್ದರೂ ಸಮಯ ಕಳೆದಂತೆ ಪರಿಸ್ಥಿತಿಗಳ ಪ್ರಭಾವದಿಂದ ನಾವು ಒಗ್ಗಟ್ಟಿನಿಂದ ಒಂದು ದೇಶವಾಗಿ ಹೊರಹೊಮ್ಮುವುದಕ್ಕೆ ಏನು ಅಡ್ಡಿ ಮಾಡಲಾರದು. ನಮ್ಮಲ್ಲಿ ಎಷ್ಟೋ ಜಾತಿ ಪಂಗಡಗಳಿದ್ದರೂ ನಾವು ಒಂದಾಗಿ ಹೊರಹೊಮ್ಮುತ್ತೇವೆ ಎನ್ನುವುದರಲ್ಲಿ ನನಗೇನು ಸಂಶಯವಿಲ್ಲ. ನನಗೆ ಅಂತ್ಯದ ಬಗ್ಗೆ ಆತಂಕವಿಲ್ಲ ಬದಲಿಗೆ ನನ್ನ ಸಮಸ್ಯೆ ಪ್ರಾರಂಭದ ಬಗ್ಗೆ, ಹಾಗೆ ಮುಂದುವರೆದು ಮಾತನಾಡುತ್ತಾ.

ಯಾರಾದರು ಹಿಂದು ಮತ್ತು ಮುಸ್ಲಿಂ ಸಮಸ್ಯೆಯನ್ನು ಬಲ ಪ್ರಯೋಗಿಸಿ ಬಗೆಹರಿಸಬಹುದು ಎಂದುಕೊಂಡಿದ್ದರೆ ಅದು ಅಸಾಧ್ಯ. ಮುಸ್ಲಿಂ ಒಪ್ಪಿಗೆ ಇಲ್ಲದೆ ಅಥವ ಅವರಿಗೆ ರಕ್ಷಣೆ ಇಲ್ಲದೆ ಸಂವಿಧಾನವನ್ನು ರಚಿಸಿ ಆ ಸಂವಿಧಾನವನ್ನು ಉಪಯೋಗಿಸಿ ಮುಸ್ಲಿಂರನ್ನು ಅಧೀನಗೊಳಿಸಬಹುದು ಅಥವ ಶರಣಾಗತಿ ಗೊಳಿಸಬಹುದು ಎಂದುಕೊಂಡಿದ್ದರೆ ಅದು ನಮ್ಮ ದೇಶದಲ್ಲಿ ನಿರಂತರ

**ಭಾರತದಲ್ಲಿ ಅಲ್ಪಸಂಖ್ಯಾತರು ತಮ್ಮ ಆಸ್ತಿತ್ವವನ್ನು ಬಹುಸಂಖ್ಯಾತರ ಕೈಯಲ್ಲಿಟ್ಟಿದ್ದಾರೆ. ಅಲ್ಪಸಂಖ್ಯಾತರು ಬಹುಸಂಖ್ಯಾತರ ಆಳ್ವಿಕೆಯನ್ನು ನಿಷ್ಠೆಯಿಂದ ಒಪ್ಪಿಕೊಂಡಿದ್ದಾರೆ. ಭಾರತದಲ್ಲಿ ಬಹುಮತವು ರಾಜಕೀಯ ಬಹುಮತವಲ್ಲ ಬದಲಿಗೆ ಒಂದು ಧರ್ಮದ (ಕೋಮುವಿನ) ಬಹುಮತ ಎಂದು ತಿಳಿದಿದ್ದರೂ ಒಪ್ಪಿಕೊಂಡಿದ್ದಾರೆ. ಹೀಗಾಗಿ ಈಗ ಬಹುಸಂಖ್ಯಾಂತರು ಅಲ್ಪಸಂಖ್ಯಾತರ ವಿರುದ್ಧ ಪೌರುಶತ್ವವನ್ನು ತೋರಿಸಬಾರದೆಂದು ಅರಿತುಕೊಳ್ಳಬೇಕಾಗಿದೆ. ಎಲ್ಲಿಯವರೆಗೂ ಬಹುಸಂಖ್ಯಾತರು ಅಲ್ಪಸಂಖ್ಯಾತರಿಗೆ ತಾರತಮ್ಯವನ್ನು ತೋರಿಸುತ್ತಾರೋ, ಅಲ್ಲಿಯವರೆಗೆ ಅಲ್ಪಸಂಖ್ಯಾತರು ಅಸ್ತಿತ್ವದಲ್ಲಿರುತ್ತಾರೆ. ಯಾವಾಗ ಬಹುಸಂಖ್ಯಾತರು ಈ ತಾರತಮ್ಯವನ್ನು ತೋರಿಸುವುದಿಲ್ಲವೋ, ಆ ದಿನದಿಂದ ಅಲ್ಪಸಂಖ್ಯಾತರು ಅಸ್ತಿತ್ವದಲ್ಲಿರುವುದಿಲ್ಲ**

ಅಂತರ್ಯುದ್ಧವನ್ನು ಸೃಷ್ಟಿಸುತ್ತದೆ ಎಂದು ಹೇಳಿದರು. ಕೊನೆಯಲ್ಲಿ ಅವರು ಮಾತನಾಡುತ್ತಾ, ಎಡ್‌ಮಂಡ್ ಬ್ರೂಕ್ ಎನ್ನುವ ತತ್ವಜ್ಞಾನಿ ಹೇಳಿರುವ ಹಾಗೆ, ಅಧಿಕಾರವನ್ನು ಅಥವ ಬಲವನ್ನು ಸುಲಭವಾಗಿ ಕೊಡಬಹುದು ಆದರೆ ವಿವೇಕವನ್ನು ಕೊಡುವುದು ಕಷ್ಟ, ನಾವು ಈಗ ನಮಗೆ ಈ ಜನರು ಕೊಟ್ಟಿರುವ ಸಾರ್ವಭೌಮ ಅಧಿಕಾರವನ್ನು ವಿವೇಕದಿಂದ ಬಳಸುವ ಮೂಲಕ ನಾವು ದೇಶದ ಎಲ್ಲಾ ವರ್ಗಗಳನ್ನು ಒಟ್ಟಿಗೆ ತೆಗೆದುಕೊಂಡು ಮುಂದುವರಿಯಬೇಕು. ನಾವು ಒಟ್ಟಿಗೆ ಸಾಗಲು ಇದೊಂದೇ ದಾರಿ. ಈ ಬಗ್ಗೆ ಯಾರಿಗೂ ಸಂಶಯ ಬೇಡ ಎಂದು ಹೇಳಿದ್ದಾರೆ. ಮುಸ್ಲಿಂ ಲೀಗ್‌ನ ಸದಸ್ಯರು ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಳ್ಳದೆ ತಮಗೆ ಪ್ರತ್ಯೇಕ ದೇಶ ಬೇಕು ಎನ್ನುವ ಬೇಡಿಕೆಯನ್ನು ಮುಂದಿಟ್ಟು ಪ್ರತಿಭಟಿಸುತ್ತಾರೆ. ಆಗ ಎಲ್ಲಾ ಸಂದಾನಗಳು ವಿಫಲವಾದಾಗ ಬ್ರಿಟನ್ನಿನ ಪಾರ್ಲಿಮೆಂಟನಲ್ಲಿ 18.07.1947 ರಂದು ಇಂಡಿಯನ್ ಇಂಡಿಪೆಂಡೆಂಸ್ ಆಕ್ಟ್ **(Independence act)** 1947 ಅನ್ನು ಅನುಮೋದಿಸಿ ಭಾರತವನ್ನು ಎರಡು ಆಡಳಿತ ಪ್ರದೇಶಗಳನ್ನಾಗಿ ವಿಭಜನೆ ಮಾಡುತ್ತಾರೆ. ಅವು ಭಾರತ ಮತ್ತು ಪಾಕಿಸ್ತಾನ. ಪಾಕಿಸ್ತಾನ ಅಂದರೆ ಆಗ ಬಾಂಗ್ಲದೇಶ ಕೂಡ ಪಾಕಿಸ್ತಾನದ ಒಂದು ಭಾಗ, 1971ರಲ್ಲಿ ಬಾಂಗ್ಲದೇಶ ಪ್ರತ್ಯೇಕಗೊಂಡ ನಂತರವೇ ಪಾಕಿಸ್ತಾನಕ್ಕೆ 1973ರಲ್ಲಿ ಸಂವಿಧಾನವನ್ನು ರಚನೆ ಮಾಡಲು ಸಾಧ್ಯವಾಯಿತು, 1947ರಲ್ಲಿ ಪಾಕಿಸ್ತಾನ ಸ್ವತಂತ್ರವಾದ ನಂತರ, ಮೂರು ಬಾರಿ ಸಂವಿಧಾನವನ್ನು ರಚನೆ ಮಾಡಿ ತಿರಸ್ಕರಿಸಲ್ಪಟ್ಟಿದೆ, ಇದಕ್ಕೆ ಮುಖ್ಯ ಕಾರಣ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಪ್ರಶ್ನೆ ಅಲ್ಲಿಯ ಅಲ್ಪಸಂಖ್ಯಾತರಲ್ಲಿ ನಂಬಿಕೆ ಮೂಡಿಸಲು ವಿಫಲವಾದದ್ದು. ಆದರೆ ಭಾರತದಲ್ಲಿ ಹಾಗೆ ಆಗಲಿಲ್ಲ ನಾವು 2ವರ್ಷ, 11ತಿಂಗಳು, 17ದಿವಸಗಳಲ್ಲಿ ಸಂವಿಧಾನವನ್ನು ರಚಿಸಿ, 26.11.1949 ರಂದು ಅಂಗೀಕಾರ ಮಾಡಿ 26.01.1950 ರಂದು ಜಾರಿಗೊಳಿಸಿದೆವು,

ಸಂವಿಧಾನ ಸಭೆಯಲ್ಲಿ, ಪೌರತ್ವ ವಿಷಯ ಕುರಿತ ಮೂಲಭೂತ ಹಕ್ಕುಗಳ ಉಪಸಮಿತಿಯ ವರದಿಯನ್ನು 29.04.1947 ರಂದು ಮೊದಲ ಬಾರಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ರವರು ಮಂಡಿಸುತ್ತಾರೆ, ನಂತರ ಚರ್ಚೆ ನಡೆದು ಒಮ್ಮತಕ್ಕೆ ಬರೆದೆ ಇರುವುದರ ಕಾರಣ ಅದನ್ನು ಐದು ಸದಸ್ಯರ ಒಂದು ಸಮಿತಿಗೆ ಸೂಚಿಸುತ್ತಾರೆ. ಎರಡನೆಯ ಬಾರಿಗೆ 02.05.1947ರಂದು ಚರ್ಚೆಗೆ ತೆಗೆದುಕೊಂಡಂತಹ ಸಂದರ್ಭದಲ್ಲಿ ಒಮ್ಮತ ಬರಲು ಸಾಧ್ಯವಾಗದೆ, ಡಾ.ಅಂಬೇಡ್ಕರವರ ಸಲಹೆ ಮೇರೆಗೆ ಅದನ್ನು ಪುನಃ ಸಮಿತಿಗೆ ಕಳುಹಿಸುತ್ತಾರೆ, ನಂತರ 29.08.1947 ರಂದು ಸಂವಿಧಾನ ಕರಡು ರಚನಾ ಸಮಿತಿಯ ರಚನೆಯಾಗಿ, ಡಾ.ಬಿ.ಆರ್ ಅಂಬೇಡ್ಕರವರು ಅದರ ಅಧ್ಯಕ್ಷರಾಗುತ್ತಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರು 04.11.1948 ರಂದು ಸಂವಿಧಾನದ ಕರಡನ್ನು ಸಂವಿದಾನ ರಚನಾ ಸಭೆಯ ಮುಂದೆ ಮಂಡಿಸುತ್ತಾರೆ, ಸಂವಿಧಾನದ ಕರಡು 315 ಅನುಛೇದಗಳನ್ನು ಮತ್ತು 8 ಖಿಛಿಜಜಣಟಜಗಳನ್ನು ಒಳಗೊಂಡಿರುತ್ತದೆ. ಬೇರೆ ಯಾವ ದೇಶದ ಸಂವಿಧಾನ ಇಷ್ಟು ಗಾತ್ರದಲ್ಲಿಲ್ಲ. ಈ ಕರಡು ವರದಿ ಸಾರ್ವಜನಿಕ ವಲಯದಲ್ಲಿ ಕಳೆದ ಎಂಟು ತಿಂಗಳುಗಳ ಕಾಲ ಇದ್ದು, ಆನೇಕ ತಿದ್ದುಪಡಿಗಳು ಹಾಗೂ ಟೀಕೆಗಳು ಬರುತ್ತವೆ. ಡಾ॥ ಬಿ.ಆರ್ ಅಂಬೇಡ್ಕರ್ ರವರು ಮಾತನಾಡುತ್ತಾ ಈ ಕೆಳಕಂಡಂತೆ ಹೇಳುತ್ತಾರೆ

ಯಾವುದೇ ಒಬ್ಬ ಕಾನೂನಿನ ವಿದ್ಯಾರ್ಥಿಯ ಕೈಯಲ್ಲಿ ಸಂವಿಧಾನವನ್ನು ಕೊಟ್ಟರೆ ಆತ ಎರಡು ಪ್ರಶ್ನೆಗಳನ್ನು ಕೇಳುತ್ತಾರೆ.

1. ಈ ಸಂವಿಧಾನದಲ್ಲಿ ಉಲ್ಲೇಖಿಸಿರುವ ಸರ್ಕಾರದ ರೂಪ ಯಾವುದು?
2. ಸಂವಿಧಾನದ ರೂಪ ಯಾವುದು?

ಮೊದಲನೆಯ ಪ್ರಶ್ನೆಗೆ ಉತ್ತರ, ಈ ಕರುಡು ಸಂವಿಧಾನದಲ್ಲಿ ಉಲ್ಲೇಖಿಸಿರುವ ಸರ್ಕಾರದ ರೂಪ ಸಂಸದೀಯ ವ್ಯವಸ್ಥೆ. ಕರಡು ಸಂವಿಧಾನದ ಪ್ರಕಾರ, ರಾಷ್ಟ್ರಪತಿಗಳು ದೇಶದ ಮುಖ್ಯಸ್ಥ ಆದರೆ ಕಾರ್ಯಾಂಗಕ್ಕೆ ಅಲ್ಲ, ಅವರು ದೇಶವನ್ನು ಪ್ರತಿನಿಧಿಸುತ್ತಾರೆ. ಆದರೆ ದೇಶವನ್ನು ಆಳುವುದಿಲ್ಲ. ರಾಷ್ಟ್ರಪತಿಗಳು ದೇಶದ ಚಿಹ್ನೆ. ಆಡಳಿತದಲ್ಲಿ ಅವರ ಒಂದು ಸ್ಥಾನ ಕೇವಲ ಔಪಚಾರಿಕವಾದುದು. ಸರ್ಕಾರದ ತೀರ್ಮಾನಗಳನ್ನು ದೇಶಕ್ಕೆ ತಿಳಿಸುವುದು. ರಾಷ್ಟ್ರಪತಿಗಳು ಮೋಹರು ಹಾಕಿದ ರಾಜ್ಯಪತ್ರದ ಮೂಲಕ ರಾಷ್ಟ್ರಪತಿಗಳು ಸಾಮಾನ್ಯವಾಗಿ ಮಂತ್ರಿಗಳ ಸಲಹೆಯ ಮೇರೆಗೆ ನಡೆದುಕೊಳ್ಳುತ್ತಾರೆ. ಅವರು ಮಂತ್ರಿಗಳ ಸಲಹೆಯ ವಿರುದ್ಧ ನಡೆದುಕೊಳ್ಳಲು ಸಾಧ್ಯವಿಲ್ಲ ಹಾಗೂ ಮಂತ್ರಿಗಳ ಸಲಹೆ ಇಲ್ಲದೆ ಏನನ್ನು ಮಾಡಲು ಸಾಧ್ಯವಿಲ್ಲ. ಯಾವುದೇ ಮಂತ್ರಿಯನ್ನು ವಜಾಗೊಳಿಸಲು ಅಧಿಕಾರವಿರುವುದಿಲ್ಲ. ಎಲ್ಲಿಯವರೆಗೆ ಮಂತ್ರಿಗಳು ಸಂಸತ್ತಿನಲ್ಲಿ ಬಹುಮತವನ್ನು ಹೊಂದಿರುತ್ತಾರೆಯೋ ಅಲ್ಲಿಯ ವರೆಗೆ ರಾಷ್ಟ್ರಪತಿಗಳು ಯಾವುದೇ ಮಂತ್ರಿಯನ್ನು ವಜಾಗೊಳಿಸಲು ಅಧಿಕಾರವಿರುವುದಿಲ್ಲ. ಭಾರತದಲ್ಲಿ ಮಂತ್ರಿಗಳು ಸಂಸತ್ತಿನ ಸದಸ್ಯರು. ಹಾಗೂ ಸಂಸತ್ತಿನ ಸದಸ್ಯರು ಮಾತ್ರ ಮಂತ್ರಿಗಳಾಗಲು ಸಾಧ್ಯ. ಮಂತ್ರಿಗಳಿಗೆ ಸಂಸತ್ತಿನ ಇತರ ಸದಸ್ಯರಂತೆ ಎಲ್ಲಾ ಹಕ್ಕುಗಳು ಇರುತ್ತವೆ. ಸಂಸತ್ತಿನ ಅಧಿವೇಶನಗಳಲ್ಲಿ ಸಂಸತ್ತಿನ ಚರ್ಚೆಗಳಲ್ಲಿ ಪಾಲ್ಗೊಳ್ಳುವುದು ಹಾಗೂ ಸಂಸತ್ತಿನ ಕಲಾಪಗಳಲ್ಲಿ ಮತದಾನದ ಹಕ್ಕು ಚಲಾಯಿಸುವುದು ಅವರ ಹಕ್ಕಾಗಿರುತ್ತಾದೆ.




ಒಂದು ಪ್ರಜಾಸ್ತಾತ್ಮಕ ಕಾರ್ಯಾಂಗವು ಎರಡು ಲಕ್ಷಣಗಳನ್ನು ಪೂರೈಸುತ್ತದೆ. 1) ಅದು ಸ್ಥಿರವಾದ ಕಾರ್ಯಾಂಗವಾಗಿರಬೇಕು 2) ಇನ್ನೊಂದು ಜವಬ್ದಾರಿಯುತ ಕಾರ್ಯಾಂಗವಾಗಿರಬೇಕು. ದುರದೃಷ್ಟ ಏನೆಂದರೆ, ಇಲ್ಲಿಯವರೆಗೂ ಈ ಎರಡು ಗುಣಗಳು ಸಮವಾಗಿವುಳ್ಳ ಕಾರ್ಯಾಂಗವನ್ನು ರಚಿಸುವ ಒಂದು ವ್ಯವಸ್ಥೆಯನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಕರಡು ಸಂವಿಧಾನವು ಸಂಸದೀಯ ವ್ಯವಸ್ಥೆಯ ಕಾರ್ಯಾಂಗವನ್ನು ಸೂಚಿಸುವ ಮೂಲಕ ಅದು ಜವಾಬ್ದಾರಿಯುತವಾಗಿರುವುದಕ್ಕೆ ಆದ್ಯತೆಯನ್ನು ಕೊಟ್ಟಿದೆ. ಹಾಗಾಗಿ ಈ ವ್ಯವಸ್ಥೆಯು ಆಸ್ಥಿರವಾಗಿರಬಹುದು. ಇದು ಯಾವ ರೀತಿಯ ಸರ್ಕಾರ ಎನ್ನುವುದಕ್ಕೆ ಉತ್ತರ.

ಈಗ ಯಾವ ವಿಧವಾದ ಸಂವಿಧಾನ ಎನ್ನುವುದನ್ನು ನೋಡೋಣ. ಕರಡು ಸಂವಿಧಾನವು ಫೆಡೆರಲ್ ಅಥವಾ ಸಂಯುಕ್ತ ರಾಷ್ಟ್ರ ವ್ಯವಸ್ಥೆಯ ಸಂವಿಧಾನವನ್ನು ಸೂಚಿಸುತ್ತದೆ. ಇದರಲ್ಲಿ ಕೇಂದ್ರದಲ್ಲಿ ಸುಸಂಘಟಿತ ರಾಷ್ಟ್ರ ಹಾಗೂ ಆಂಗ ಸಂಸ್ಥೆ ರಾಜ್ಯಗಳು ಇರುತ್ತವೆ. ಈ ಎರಡು ಅಂದರೆ ಕೇಂದ್ರದ ಸುಂಸಂಘಟಿತ ರಾಷ್ಟ್ರ

ಹಾಗೂ ಅಂಗ ಸಂಸ್ಥೆ ರಾಜ್ಯಗಳು ತಮಗೆ ನಿಯೋಜಿಸಲಾಗಿರುವ ಕ್ಷೇತ್ರಗಳಲ್ಲಿ ಸಾರ್ವಭೌಮವನ್ನು ಹೊಂದಿರುತ್ತವೆ. ಫೆಡರೇಷನ್ ಅಥವಾ ರಾಷ್ಟ್ರಗಳ ಒಕ್ಕೂಟ ಎಂದರೆ ಉಭಯ ರಾಜಕೀಯ (Dual polity) ಪದ್ಧತಿಯನ್ನು ಸ್ಥಾಪಿಸುವುದು.

ಈ ಸಂವಿಧಾನವು ಉಭಯ ರಾಜಕೀಯ ಪದ್ಧತಿಯನ್ನು ಪ್ರತಿಪಾದಿಸುತ್ತದೆ ಹಾಗೂ ಒಂದೇ ಪೌರತ್ವವನ್ನು ಪ್ರತಿಪಾದಿಸುತ್ತದೆ. ಇಂದು ಇಡೀ ಭಾರತದಲ್ಲಿರುವ ಎಲ್ಲರಿಗೂ ಒಂದೇ ಪೌರತ್ವವನ್ನು ಕೊಡುತ್ತೇವೆ ಅದು ಭಾರತದ ಪೌರತ್ವ. ವಿವಿಧ ರಾಜ್ಯಗಳ ಪೌರತ್ವ ಇರುವುದಿಲ್ಲ. ಅಂದರೆ ಜನರು ಭಾರತದ ಯಾವುದೇ ರಾಜ್ಯದಲ್ಲಿ ವಾಸವಿದ್ದರು ಅಥವಾ ಹುಟ್ಟಿದ್ದರು ಅವರಿಗೆ ಒಂದೇ ಪೌರತ್ವವನ್ನು ಕೊಡಲಾಗುವುದು ಅದು ಭಾರತದ ಪೌರತ್ವ (ಉದಾ: ಕರ್ನಾಟಕ ಪೌರತ್ವ ಅಥವಾ ಆಂಧ್ರ ಪೌರತ್ವ ಎಂದು ಇರುವುದಿಲ್ಲ) ಹೀಗಾಗಿ ಭಾರತದ ಜನರಿಗೆ ಒಂದೇ ಪೌರತ್ವ ಹಕ್ಕುಗಳು ಇರುತ್ತವೆ ಅವರು ಯಾವುದೇ ರಾಜ್ಯದವರಾಗಿದ್ದರು ಅವರಿಗೆ ಸಮಾನ ಹಕ್ಕುಗಳು ಇರುತ್ತವೆ.

ಕರಡು ಸಂವಿಧಾನವು ಬೇರೆ ಬೇರೆ ವಿಧಾನಗಳನ್ನು ಒಗ್ಗೂಡಿಸಿ, ಭಾರತವು ಸಂಯುಕ್ತರಾಷ್ಟ್ರ ಪದ್ಧತಿಯನ್ನು ಅಳವಡಿಸುವ ಸಮಯದಲ್ಲೇ ದೇಶದ ಐಕ್ಯತೆಯನ್ನು ಕಾಪಾಡುವುದರ ಸಲುವಾಗಿ ಮೂಲಭೂತ ವಿಷಯಗಳಲ್ಲಿ ಏಕರೂಪತೆಯನ್ನು




ಅಳವಡಿಸುತ್ತದೆ.

ಕರಡು ಸಂವಿಧಾನವು ಇದನ್ನು ಸಾಧಿಸಲು ಈ ಕೆಳಕಂಡ ಮೂರು ವಿಧಾನಗಳನ್ನು ಅಳವಡಿಸಿತು.

1. ಏಕರೂಪ ನ್ಯಾಯಾಂಗ.
2. ಮೂಲಭೂತ ಕಾನೂನುಗಳಲ್ಲಿ (ಸಿವಿಲ್ ಮತ್ತು ಕ್ರಿಮಿನಲ್) ಏಕರೂಪತೆ ಮತ್ತು
3. ಪಾಲನೆಯಲ್ಲಿ ಮುಖ್ಯವಾದ ಸ್ಥಾನಗಳನ್ನು ತುಂಬಲು ಸಾಮಾನ್ಯ ಅಖಿಲ ಭಾರತ ನಾಗರೀಕ ಸೇವೆಗಳನ್ನು ಅಳವಡಿಸುವುದು.

ಮುಂದುವರೆದು ಮಾತನಾಡುತ್ತಾ ಡಾ॥ ಬಿ.ಆರ್. ಅಂಬೇಡ್ಕರ್ ರವರು ಕರುಡಿನ ಟೀಕೆಗಳನ್ನು ಉತ್ತರಿಸುತ್ತಾರೆ.

ಒಂದು ಟೀಕೆ ಏನೆಂದರೆ, ಈ ಸಂವಿಧಾನವು **(Government of Indian act 1935)** 1935ರ ಭಾರತ ಸರ್ಕಾರದ ಕಾಯ್ದೆಯಿಂದ ಅರ್ಧ ಮತ್ತು ಇನ್ನೊಂದು ಅರ್ಧವನ್ನು ಇತರೆ ದೇಶಗಳ ಸಂವಿಧಾನಗಳಿಂದ ತೆಗೆದುಕೊಂಡಿದೆ, ನಮ್ಮದೇ ಮೂಲ ಎಂದು ಹೇಳಲು ಬಹಳ ಕಡಿಮೆ ಇದೆ ಎಂದು ಟೀಕಿಸಿದ್ದಾರೆ. ಈ ಕಾಯ್ದೆಯಿಂದ ನಮ್ಮ ಸಂವಿಧಾನದಲ್ಲಿ ಅಳವಡಿಸಿರುವ ವಿಷಯಗಳ ಬಗ್ಗೆ ನನಗೇನು ನಾಚಿಕೆ ಇಲ್ಲ. ಹಾಗೂ ಇದು ಯಾವುದೇ ಬಗೆಯ ಸಾಹಿತ್ಯದ ಕಳ್ಳತನವಲ್ಲ. ನಾನು ಈ 1935ರ ಕಾಯ್ದೆಯಿಂದ ಆಡಳಿತ ವಿವರಗಳನ್ನು ತೆಗೆದುಕೊಂಡು ನಮ್ಮ ಕರಡು ಸಂವಿಧಾನದಲ್ಲಿ ಅಳವಡಿಸಿದ್ದೇನೆ. ಈ ರೀತಿ ಆಡಳಿತ ವಿವರಗಳನ್ನು ಸಂವಿಧಾನದಲ್ಲಿ ಅಳವಡಿಸುವುದನ್ನು ನಾನು ಒಪ್ಪುವುದಿಲ್ಲ. ಆದರೆ ಭಾರತದ ಸಮಾಜವು ಮೂಲಭೂತವಾಗಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದದ್ದೂ, ಭಾರತದ ಮಣ್ಣಲ್ಲಿ ನಮ್ಮ ಸಂವಿಧಾನದ ಮೂಲಕ ನಿರ್ಮಿಸಿಸುವ ಪ್ರಜಾಪ್ರಭುತ್ವವು ಕೇವಲ ಮೇಲ್ಪದರು ಮಾತ್ರ. ನಮ್ಮ ಜನರಲ್ಲಿ ಸಂವಿಧಾನಿಕ ನೈತಿಕತೆ **(Constitutional Morality)** ಒಂದು ನೈಜ ಗುಣವಲ್ಲ. ಬದಲಿಗೆ ಅದನ್ನು ಪ್ರಜ್ಞಾ ಪೂರ್ವಕವಾಗಿ ರೂಢಿಸಬೇಕಾಗುತ್ತದೆ. ಈ ಸಂವಿಧಾನಿಕ ನೈತಿಕತೆ ಎಂದರೆ ಸಂವಿಧಾನದ ಆಶಯಗಳನ್ನು ಗೌರವಿಸುವುದು ಹಾಗೂ ಸಂವಿಧಾನದ ವಿಧಾನಗಳನ್ನು ತಿಳಿದು ಅದರಂತೆ ನಡೆಯುವುದು. ಇದನ್ನು ಒಂದು ಬಹು ಸಂಖ್ಯಾತ ಸಮುದಾಯ ಮಾತ್ರವಲ್ಲ, ಅಲ್ಪಸಂಖ್ಯಾಂತ ಸಮುದಾಯದವರು ಅನುಸರಿಸಬೇಕು. ಅಂದರೆ ಎಲ್ಲಾ ಜನರಲ್ಲಿ ಈ ಸಂವಿಧಾನ ನೈತಿಕತೆಯ ಗುಣವು ಸಹಜ ಗುಣವಾಗಿರಬೇಕು. ಆಗ ಬಹುಮತದ ಹೆಸರಲ್ಲಿ ಆಡಳಿತ ನಡೆಸುವವರು ಸಂವಿಧಾನ ನೈತಿಕತೆಗೆ ಧಕ್ಕೆ ತರುವ ರೀತಿಯಲ್ಲಿ ವ್ಯವಹರಿಸಿದರೆ ಸಾಮಾನ್ಯ ಜನರು ಅಂತಹ ಸರ್ಕಾರಗಳಿಗೆ ಗೌರವವನ್ನು ತೋರಿಸುತ್ತಲೇ ಬಹಿರಂಗವಾಗಿ ಸರ್ಕಾರದ ವಿಧಾನಗಳ ಬಗ್ಗೆ ಮಾತನಾಡುವ ಹಾಗೆ ಇರಬೇಕು. ಇದರಿಂದ ಸರ್ಕಾರಗಳು ಸರಿಪಡಿಸಿಕೊಳ್ಳುವಂತಾಗಬೇಕು. ಜನಸಾಮಾನ್ಯರಲ್ಲಿ ಈ ರೀತಿಯಾದ ಸಂವಿಧಾನ ನೈತಿಕತೆ ಇರುವುದು ಒಂದು ಪ್ರಜಾಸತ್ತಾತ್ಮಕ ಸಂವಿಧಾನವು ಕಾರ್ಯನಿರ್ವಹಿಸಲು ಅತ್ಯವಶ್ಯಕ. ಆದರೆ ಇದರೊಡನೆ ಎರಡು ವಿಚಾರಗಳು ಹೊಂದಿ ಕೊಂಡಿವೆ. ಒಂದನೆಯದು ಆಡಳಿತ ವಿಧಾನಗಳು ಸಂವಿಧಾನದ ವಿಧಾನಗಳೊಡನೆ ಹೊಂದಿಕೊಂಡಿರುತ್ತದೆ. ಎರಡನೆಯದು ಆಡಳಿತ ವಿಧಾನಗಳನ್ನು ಬದಲಾಯಿಸುವ ಮೂಲಕ ಸಂವಿಧಾನದ ರೂಪವನ್ನು ಬದಲಾಯಿಸದೆ ಸಂವಿಧಾನವನ್ನು ವಿಕೃತಗೊಳಿಸಬಹುದು ಹಾಗೂ ಆಡಳಿತ ವಿಧಾನಗಳು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿಯು ಇರಬಹುದು. ಹಾಗಾಗಿ ನಮ್ಮ ಕರಡು ಸಂವಿಧಾನದಲ್ಲೇ ಆಡಳಿತ ರೂಪ ಹಾಗೂ ವಿಧಾನಗಳನ್ನು ಆಳವಡಿಸಿರುವುದರಿಂದ ಅದಕ್ಕೆ ಸಂವಿಧಾನ ಬದ್ಧತೆಯನ್ನು ಕೊಡಲಾಗಿದೆ.

ಇನ್ನೊಂದು ಟೀಕೆ ಹೊಂದಿರುವುದು ಹೊಸ ಸಂವಿಧಾನವು ಪ್ರಾಚೀನ ಹಿಂದೂ ರಾಜ್ಯದ ಪರಿಕಲ್ಪನೆಯ ಮೇಲೆ ರಚನೆಯಾಗಬೇಕಾಗಿತ್ತು. ಪಾಶ್ಚತ್ಯ ಸಿದ್ಧಾಂತಗಳನ್ನು ನಮ್ಮ ಹೊಸ ಸಂವಿಧಾನದಲ್ಲಿ ಅಳವಡಿಸುವ ಬದಲಿಗೆ ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ತಳಹದಿಯ ಮೇಲೆ ನಮ್ಮ ಸಂವಿಧಾನವನ್ನು ರಚಿಸಬೇಕಾಗಿತ್ತು. ಇನ್ನು ಕೆಲವರು ಈ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಬೇಡ ಕೇವಲ ಗ್ರಾಮ ಸರ್ಕಾರಗಳನ್ನು ರೂಪಿಸುವಂತೆ ಸಂವಿಧಾನ ಇರಬೇಕಾಗಿತ್ತು ಎಂದು ಟೀಕಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಗ್ರಾಮಗಳೆಂದರೆ ಭಾರತದಲ್ಲಿ ಸ್ಥಳೀಯತೆಯ ತೊಟ್ಟಿ, ಅಜ್ಞಾನದ ಸಂಕುಚಿತ ಮನೋಭಾವನೆ ಮತ್ತು ಕೋಮುವಾದದ ಗುಹೆ. ಇಂತಹ ಗ್ರಾಮಗಳನ್ನು ಅಲ್ಲದೆ ಒಬ್ಬ ವ್ಯಕ್ತಿಯನ್ನು ಮೂಲಭೂತ ಅಂಶವಾಗಿ ಇಟ್ಟುಕೊಂಡು ಸಂವಿಧಾನ ರಚನೆ ಮಾಡಿದ ಸಂವಿಧಾನ ಕರಡು ರಚನಾ ಸಮಿತಿಗೆ ಅಭಾರಿಯಾಗಿರುತ್ತೇನೆ ಎಂದು ಹೇಳುತ್ತಾರೆ. ನಂತರ ಮಾತನಾಡುತ್ತಾ,

ಕರಡು ವರದಿಯಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆಗಳನ್ನು ಕಲ್ಪಿಸಿರುವುದಕ್ಕಾಗಿ ಟೀಕೆಗೆ ಗುರಿಯಾಗಿದೆ. ನಾನು ಅಲ್ಪಸಂಖ್ಯಾತರ ರಕ್ಷಣೆಗಳನ್ನು ಕಲ್ಪಿಸಿರುವುದರ ವಿರುದ್ಧ ಮತಾಂಧ ಭಾವನೆಗಳನ್ನು ಬೆಳಸಿಕೊಂಡಿರುವರಿಗೆ ಎರಡು ವಿಷಯಗಳನ್ನು ಹೇಳಲು ಇಚ್ಛಿಸುತ್ತೇನೆ.

1) ಅಲ್ಪಸಂಖ್ಯಾತರು ಒಂದು ಬೃಹತ್ ಸ್ಫೋಟಕ ಶಕ್ತಿ, ಒಮ್ಮೆ ಅದು ವಿಸ್ಫೋಟಕೊಂಡರೆ ಇಡೀ ಸಮಾಜದ ರೂಪುರೇಖೆಯನ್ನೇ ಚೂರುಚೂರು ಮಾಡುತ್ತದೆ. ಇನ್ನೊಂದು 2) ಭಾರತದಲ್ಲಿ ಅಲ್ಪಸಂಖ್ಯಾತರು ತಮ್ಮ ಆಸ್ತಿತ್ವವನ್ನು ಬಹುಸಂಖ್ಯಾತರ ಕೈಯಲ್ಲಿಟ್ಟಿದ್ದಾರೆ. ಅಲ್ಪಸಂಖ್ಯಾತರು ಬಹುಸಂಖ್ಯಾತರ ಆಳ್ವಿಕೆಯನ್ನು ನಿಷ್ಠೆಯಿಂದ ಒಪ್ಪಿಕೊಂಡಿದ್ದಾರೆ. ಭಾರತದಲ್ಲಿ ಬಹುಮತವು ರಾಜಕೀಯ ಬಹುಮತವಲ್ಲ ಬದಲಿಗೆ ಒಂದು ಧರ್ಮದ (ಕೋಮುವಿನ) ಬಹುಮತ ಎಂದು ತಿಳಿದಿದ್ದರೂ ಒಪ್ಪಿಕೊಂಡಿದ್ದಾರೆ. ಹೀಗಾಗಿ ಈಗ ಬಹುಸಂಖ್ಯಾಂತರು ಅಲ್ಪಸಂಖ್ಯಾತರ ವಿರುದ್ಧ ಪೌರುಶತ್ವವನ್ನು ತೋರಿಸಬಾರದೆಂದು ಅರಿತುಕೊಳ್ಳಬೇಕಾಗಿದೆ. ಎಲ್ಲಿಯವರೆಗೂ ಬಹುಸಂಖ್ಯಾತರು ಅಲ್ಪಸಂಖ್ಯಾತರಿಗೆ ತಾರತಮ್ಯವನ್ನು ತೋರಿಸುತ್ತಾರೋ, ಅಲ್ಲಿಯವರೆಗೆ ಅಲ್ಪಸಂಖ್ಯಾತರು ಅಸ್ತಿತ್ವದಲ್ಲಿರುತ್ತಾರೆ. ಯಾವಾಗ ಬಹುಸಂಖ್ಯಾತರು ಈ ತಾರತಮ್ಯವನ್ನು ತೋರಿಸುವುದಿಲ್ಲವೋ, ಆ ದಿನದಿಂದ ಅಲ್ಪಸಂಖ್ಯಾತರು ಅಸ್ತಿತ್ವದಲ್ಲಿರುವುದಿಲ್ಲ ಎಂದು ಹೇಳುತ್ತಾರೆ, ಕೊನೆಯಲ್ಲಿ ಅವರು ಮಾತನಾಡುತ್ತಾ ಹೇಳುತ್ತಾರೆ "ನಾನು ಈ ಸಂವಿಧಾನವನ್ನು ಕಾರ್ಯರೂಪಕ್ಕೆ ತರಬಹುದು ಹಾಗೂ

**ಭಾರತ ದೇಶದಲ್ಲಿ ಸಂವಿಧಾನ ರಚನೆ ಮತ್ತು ಪ್ರಜಾಪ್ರಭುತ್ವೀಕರಣ ಏಕಕಾಲದಲ್ಲಿ ನಡೆಯುತ್ತದೆ. ಪ್ರಜಾಪ್ರಭುತ್ವಕ್ಕೆ ವಿರೋಧವಾದ ವಾತಾವರಣದಲ್ಲಿ ಪ್ರಜಾಪ್ರಭುತ್ವನ್ನು ಅನುಷ್ಠಾನಕ್ಕೆ ತರಲಾಗಿದೆ. ಇದೇ ಸಂದರ್ಭದಲ್ಲಿ ಮೊದಲನೆಯ ಪ್ರಪಂಚ ಯುದ್ಧದ ನಂತರ ಹೊಸದಾಗಿ ಪ್ರಜಾಪ್ರಭುತ್ವ ಸರ್ಕಾರಗಳನ್ನು ರಚನೆ ಮಾಡಿದ ಹದಿನೇಳು ದೇಶಗಳ ಪೈಕಿ 1930ರ ದಶಕದ ವೇಳಗೆ ಇಟಲಿ, ಪೋರ್ಚುಗಲ್, ಪೋಲ್ಯಾಂಡ್, ಬ್ರೆಜಿಲ್, ಆರ್ಜಂಟೆನ, ಉರುಗುವೆ, ಜಪಾನ್ ಮತ್ತು ಜರ್ಮನಿ ಒಟ್ಟು ಎಂಟು ದೇಶಗಳ ಪ್ರಜಾಪ್ರಭುತ್ವದಿಂದ ಸರ್ವಾಧಿಕಾರಕ್ಕೆ ಜಾರಿದ್ದವು. ಈ ಎಲ್ಲಾ ದೇಶಗಳು ಭಾರತ ದೇಶಕ್ಕಿಂತ ಹೆಚ್ಚು ಸಾಕ್ಷರತೆಯನ್ನು ಹಾಗೂ ಆಧುನಿಕತೆಯನ್ನು ಹೊಂದಿರುವಂತಹ ದೇಶಗಳು, ಆದರೆ ಭಾರತ ದೇಶದಲ್ಲಿ ಬಡತನ ಮತ್ತು ಅನಕ್ಷರತೆ, ಶ್ರೇಣೀಕೃತ ಜಾತಿವ್ಯವಸ್ಥೆ, ಜಾತಿ ತಾರತಮ್ಯ ಬಹು ಭಾಷೆ, ಬಹುಧರ್ಮ ಹಾಗು ಶತಮಾನಗಳ ಪರಂಪರೆಯ ಹೊರೆ, ಇವೆಲ್ಲವೂ ಪ್ರಜಾಪ್ರಭುತ್ವಕ್ಕೆ ವಿರೋಧವಾದವು, ಹೀಗಾಗಿ ವಿಶ್ವದ ಬಹಳಷ್ಟು ತತ್ವಜ್ಞಾನಿಗಳ ಮತ್ತು ಸಂವಿಧಾನ ತಜ್ಞರ ಒಂದು ಅಭಿಪ್ರಾಯವೇನೆಂದರೆ, ಭಾರತದಂತಹ ದೇಶಕ್ಕೆ ಪ್ರಜಾಪ್ರಭುತ್ವವು ಹೊಂದುವುದಿಲ್ಲ ಎಂದಾಗಿತ್ತು.**

ಇದು ಮೆದುವಾದ ಸಂವಿಧಾನವಾದರೂ, ದೇಶವನ್ನು ಶಾಂತಿ ಹಾಗೂ ಯುದ್ಧ ಸಮಯದಲ್ಲೂ ಒಗ್ಗಟ್ಟಿನಿಂದ ವ್ಯವಹರಿಸುವಂತೆ ಮಾಡುವಷ್ಟು ಸದೃಢವಾಗಿದೆ ಎಂದು ನಂಬಿದ್ದೇನೆ. ಮುಂದುವರೆಸಿ ಹೇಳುವುದಾದರೆ ಮುಂದೆ ಈ ಸಂವಿಧಾನದ ಅಡಿಯಲ್ಲಿ ವ್ಯವಸ್ಥೆ ಕೆಟ್ಟುಹೊದರೆ ಅದಕ್ಕೆ ಕಾರಣ ಸಂವಿಧಾನವಲ್ಲ. ಬದಲಿಗೆ ಸಂವಿಧಾನವನ್ನು ಜಾರಿ ಮಾಡುವವರು". ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿ ಸಂವಿಧಾನದ ಕರುಡನ್ನು ಚರ್ಚೆಗೆ ಇಡುತ್ತಾರೆ.

ಡಾ॥ ಬಿ.ಆರ್ ಅಂಬೇಡ್ಕರವರು ಸಂವಿಧಾನ ರಚನಾ ಸಭೆಯಲ್ಲಿ ಪೌರತ್ವ ಕುರಿತಾದ ಅನುಛೇದಗಳನ್ನು ಮಂಡಿಸುತ್ತಾರೆ, 1949 ರ ಆಗಸ್ಟ್ 10, 11 ಮತ್ತು 12 ರ ಮೂರು ದಿನಗಳ ಕಾಲ ಸುದೀರ್ಘ ಚರ್ಚೆಗಳನ್ನು ನಡೆಸಿ ಒಂದು ಒಮ್ಮತಕ್ಕೆ ಬರುತ್ತಾರೆ ಹಾಗು ಸಂವಿಧಾನದಲ್ಲಿ ಈಗ ಇರುವ ಅನುಛೇದ 5 ರಿಂದ ಅನುಛೇದ 11 ರವರೆಗೆ ಪೌರತ್ವ ಕುರಿತಾದ ರಚನೆಯಾಗುತ್ತದೆ, ಈ ಮಧ್ಯೆ ಭಾರತ ಹಾಗು ಪಾಕಿಸ್ತಾನ ಬೇರೆಯಾಗುತ್ತವೆ ಎನ್ನುವ ಪರಿಸ್ಥಿತಿಯಲ್ಲಿ ಕೋಮು ಧಂಗೆಗಳು ಹೆಚ್ಚಿ, ಭಾರತದಿಂದ ಪಾಕಿಸ್ತಾನಕ್ಕೆ ಹಾಗೂ ಪಾಕಿಸ್ತಾನದಿಂದ ಭಾರತಕ್ಕೆ 1947 ಮಾರ್ಚ್ 01 ರಂದು ಮೊದಲ ವಲಸೆ ಶುರುವಾಗುತ್ತದೆ. ಕೆಲ ತಿಂಗಳುಗಳ ನಂತರ ಪಾಕಿಸ್ತಾನಕ್ಕೆ ಹೋಗಿದ್ದವರು ಮರಳಿ ಭಾರತಕ್ಕೆ ಬರಲು ಇಚ್ಛಿಸುತ್ತಾರೆ, ಅವರಿಗೆ ಪಾಕಿಸ್ತಾನ ಹಿಡಿಸಿರುವುದಿಲ್ಲ. ಆಗ ಒಂದು ಸಮಸ್ಯೆ ಉಂಟಾಗುತ್ತದೆ. ಭಾರತವನ್ನು ಬಿಟ್ಟು ಜನರು ಪಾಕಿಸ್ಥಾನಕ್ಕೆ ಹೋದಾಗ, ಅವರ ಭಾರತದಲ್ಲಿರುವ ಆಸ್ತಿಗಳನ್ನು ಬಿಟ್ಟು ಹೋಗಿರುತ್ತಾರೆ. ಅಂತಹ ಆಸ್ತಿಗಳನ್ನು "ಸ್ಥಳಾಂತರಿಗಳ ಆಸ್ತಿ" ಎಂದು ಘೋಷಿಸಿ ಅವುಗಳನ್ನು ಭಾರತಕ್ಕೆ ಪಾಕಿಸ್ತಾನದಿಂದ ಬಂದಂತಹ ವಲಸಿಗರಿಗೆ ಆಸ್ತಿಗಳನ್ನು ಪಾಲನೆ ಮಾಡುವ ಅಧಿಕಾರಿಯ ಮೂಲಕ ನೀಡುವ ವ್ಯವಸ್ಥೆ ಇರುತ್ತದೆ, ಆದರೆ ಪಾಕಿಸ್ತಾನಕ್ಕೆ ಹೋದವರು ಮರಳಿ ಭಾರತಕ್ಕೆ ಬಂದಾಗ ಈ ಆಸ್ತಿಯನ್ನು ಯಾರಿಗೆ ಕೊಡುವುದು ಎನ್ನುವ ಪ್ರಶ್ನೆ ಬರುತ್ತದೆ. ಇಂತಹ ಸಂದರ್ಭದಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್‌ರವರು ಆಗಸ್ಟ್ 10, 1949 ರಂದು ಪೌರತ್ವದ ಬಗೆಗಿನ ಅನುಛೇದಗಳನ್ನು ಮಂಡಿಸಿ ಭಾಷಣವನ್ನು ಮಾಡುತ್ತಾರೆ, ಆ ಭಾಷಣದಲ್ಲಿ ಅವರು ಈ ಪೌರತ್ವ ಕರಡನ್ನು ಸಿದ್ಧಪಡಿಸಲು ಪಟ್ಟಂತಹ ಕಷ್ಟದ ಬಗ್ಗೆ ವಿವರಿಸುತ್ತಾರೆ, ಸಂವಿಧಾನ ರಚನಾ ಸಮಿತಿಯ ತಲೆ ಕೆಡಿಸಿದ ಅತ್ಯಂತ ಕಷ್ಟವಾದ ಅನುಛೇದ ಈ ಪೌರತ್ವ ಕುರಿತಾದ ಅನುಛೇದ ಎಂದು ಹೇಳಿದ್ದಾರೆ.

ಐದು ವಿವಿಧ ವರ್ಗಗಳ ಜನರಿಗೆ ಈ ಅನುಛೇದದಲ್ಲಿ ವಿವರಿಸಿರುವ ಷರತ್ತುಗಳನ್ನು ಪೂರೈಸಿದರೆ ಪೌರತ್ವವು ಸಿಗುತ್ತದೆ.

(1) ಭಾರತದಲ್ಲೇ ವಾಸವಿರುವ ಹಾಗು ಹುಟ್ಟಿರುವ ಎಲ್ಲಾ ಜನರಿಗೆ ಪೌರತ್ವ ಸಿಗುತ್ತದೆ. ಭಾರತದಲ್ಲಿರುವ ಅತೀ ಹೆಚ್ಚು ಜನರಿಗೆ ಸಂವಿಧಾನದ ಅಡಿಯಲ್ಲಿ ಪೌರತ್ವ ಸಿಗುತ್ತದೆ.

(2) ಭಾರತದಲ್ಲಿ ವಾಸವಿರುವ ಆದರೆ ಭಾರತದಲ್ಲಿ ಹುಟ್ಟಿರದ ಜನರಿಗೂ ಪೌರತ್ವ ಸಿಗುತ್ತದೆ. ಉದಾಹರಣೆಗೆ, ಪೋರ್ಚುಗೀಸ್ ಸ್ಥಾವರಗಳಲ್ಲಿ ವಾಸವಿರುವ ಜನರು, ಫ್ರೆಂಚ್ ಸ್ಥಾವರಗಳಲ್ಲಿರುವ ಜನರು (ಚಂದ್ರನಗರ್, ಪುದುಚೆರಿ) ಅಥವ ಪಾರ್ಸಿಗಳು, ಇರಾನಿನಿಂದ ಬಂದಿದ್ದರು ಬಹಳ ವರ್ಷಗಳ ಕಾಲದಿಂದ ಇಲ್ಲೇ ಇರುವುದರಿಂದ ಅವರಿಗೂ ಪೌರತ್ವ ಸಿಗುತ್ತದೆ.

ಇನ್ನುಳಿದ ಮೂರು ವರ್ಗಗಳ ಜನರನ್ನು ಸಂವಿಧಾನ ರಚನಾ ಸಮಿತಿ (ಅಂದರೆ ಡಾ॥ ಬಿ.ಆರ್ ಅಂಬೇಡ್ಕರ್) ರವರು ಈ ಅನುಛೇದದ ಪರಿವಿಡಿ ಒಳಗೆ ತರುತ್ತಾರೆ.

(3) ಭಾರತದಲ್ಲೆ ವಾಸವಾಗಿದ್ದು ಆದರೆ ಪಾಕಿಸ್ತಾನಕ್ಕೆ ವಲಸೆ ಹೋದ ಜನರಿಗೆ ಪೌರತ್ವ ಸಿಗುತ್ತದೆ.


(4) ಪಾಕಿಸ್ತಾನದಲ್ಲಿ ವಾಸವಾಗಿದ್ದು ಭಾರತಕ್ಕೆ ವಲಸೆ ಬಂದಂತಹ ಜನರಿಗೆ.

(5) ಯಾವ ಜನರು ಅಥವ ಅವರ ತಂದೆ ತಾಯಂದಿರು ಭಾರತದಲ್ಲಿ ಹುಟ್ಟಿರುತ್ತಾರೆ ಆದರೆ ಭಾರತದ ಹೊರಗೆ ವಾಸವಿರುತ್ತಾರೆ ಅವರಿಗೂ ಪೌರತ್ವ ಸಿಗುತ್ತದೆ.

ಅನುಛೇದ 5 ಎ ಅಡಿಯಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ ಬದಂತಹ ಜನರ ಪೌರತ್ವ ಕುರಿತು ಇದೆ 19.07.1948ರ ಒಳಗೆ ಬಂದಂತಹ ಜನರಿಗೆ ಸಹಜವಾಗಿ ಪೌರತ್ವ ಸಿಗುತ್ತದೆ. ಆದರೆ 19.09.1948ರ ನಂತರ ಬಂದವರಿಗೆ ಪರವಾನಗಿ ವ್ಯವಸ್ಥೆ (Permit System) ಅಡಿಯಲ್ಲಿ **Permanent Settlement** ಪರವಾನಗೆ ಇದ್ದರೆ ಅವರಿಗೆ ಸಿಗುತ್ತದೆ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಈ ಅನುಛೇದಕ್ಕೆ ಅತ್ಯಂತ ಹೆಚ್ಚು ವಿರೋಧ ಬರುತ್ತದೆ. ಡಾ॥ ಪಿ.ಎಸ್.ದೇಶಮುಖ್ (ಮೊಟ್ಟ ಮೊದಲ ಕೃಷಿ ಮಂತ್ರಿ) ಶ್ರೀ ಜಸ್‌ಪತ್ ರಾಮ್ ಕಪೂರ್, ಶಿಬಾನ್ ಲಾಲ್ ಸಕ್ಸೇನ, ಪಂಡಿತ್ ಠಾಕುರ್ ದಾಸ್ ಭಾರ್ಗವ, ಇನ್ನು ಕೆಲವರು 'ಭಾರತದಿಂದ ಪಾಕಿಸ್ತಾನಕ್ಕೆ ವಲಸೆ ಹೋಗಿರುವವರು, ಭಾರತದಲ್ಲಿ ಇರಲು ಇಷ್ಟವಿಲ್ಲದೆ ಭಾರತವನ್ನು ತಿರಸ್ಕರಿಸಿ ಹೋದವರು ಮತ್ತೆ ಭಾರತಕ್ಕೆ ಮರಳಿ ಬಂದರೆ ಇವರಿಗೆ ಪೌರತ್ವವನ್ನು ಬೇರೆ ಶರಣಾರ್ತಿಗಳಿಗೆ ಯಾವ ರೀತಿ ಕೊಡುತ್ತೇವೆಯೋ ಹಾಗೆ ಪಾಕಿಸ್ತಾನದಿಂದ ಬಂದವರಿಗೆ ಕೊಡಬೇಕೆ ಎಂದು ವಾದಿಸಿದರು. ಹಾಗೂ ಪ್ರತ್ಯೇಕವಾಗಿ ಡಾ॥ ಪಿ.ಎಸ್. ದೇಶ್‌ಮುಖ್ ರವರು ಹಿಂದು ಮತ್ತು ಮತ್ತು ಸಿಖ್‌ರಿಗೆ ಅವರು ಎಲ್ಲೇ ಇದ್ದರೂ ಪೌರತ್ವ ಕೊಡಬೇಕೆಂದು ತಿದ್ದುಪಡಿಯನ್ನು ಸೂಚಿಸಿದರು. ಶ್ರೀ ರೋಹಿಣಿ ಕುಮಾರ್ ಚೌದರಿ ಅವರು ಬಾಂಗ್ಲದೇಶದಿಂದ ಅಸ್ಸಾಂಗೆ ಹೆಚ್ಚು ಮುಸ್ಲೀಮರು ಬರುತ್ತಿದ್ದಾರೆ. ಈ ಅನುಛೇದದಿಂದ ಇನ್ನಷ್ಟು ಹೆಚ್ಚು ಜನ ಬರಲಿದ್ದಾರೆ, ಇವರ ಬರುವಿಕೆಯಿಂದ ಅಸ್ಸಾಂನಲ್ಲಿ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಪಾಕಿಸ್ತಾನದಿಂದ ಮರಳಿ ಬಂದವರಿಗೆ ಪೌರತ್ವ ಕೊಡಬಾರದು ಎಂದು ಹೇಳಿದರು.

'ಭಾರತಕ್ಕೆ ಪಾಕಿಸ್ತಾನದಿಂದ ಮರಳಿ ಬಂದವರಿಗೆ ಸ್ಥಳಾಂತರ ಆಸ್ತಿಯನ್ನು ಹೇಗೆ ಕೊಡುವುದು ಏಕೆಂದರೆ ಭಾರತವನ್ನು ಬಿಟ್ಟು ಹೋಗುವಾಗ, ತಮ್ಮ ಆಸ್ತಿಯನ್ನು ಸ್ಥಳಾಂತರ ಅಸ್ತಿಯನ್ನು ಪಾಲನೆ ಮಾಡುವ ಅಧಿಕಾರಿಯು ಭಾರತಕ್ಕೆ ಪಾಕಿಸ್ತಾನದಿಂದ ಬಂದ ಶರಣಾರ್ಥಿಗಳಿಗೆ ಕೊಟ್ಟಿರುತ್ತಾರೆ'ಎಂದು ವಾದಿಸುತ್ತಾರೆ. ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಮಾತನಾಡುತ್ತಾ, ಆಸ್ತಿ ಹಕ್ಕು ಬೇರೆ, ಪೌರತ್ವ ಬೇರೆ, ಹಾಗಾಗಿ ಅದು ಸಮಸ್ಯೆ ಆಗಲಾರದು, ಇನ್ನು ಅಸ್ಸಾಂನ ವಿಚಾರ ಈ ಪರವಾನಿಗೆ ವ್ಯವಸ್ಥೆಯನ್ನು ಅಸ್ಸಾಂನಲ್ಲಿ ಅನುಷ್ಠಾನ ಗೊಳಿಸುವುದಕ್ಕೆ ಅಸ್ಸಾಂನ ಸರ್ಕಾರ ಮತ್ತು ಜನರ ವಿರೋಧವಿದೆ. ಹಾಗಾಗಿ ಅಸ್ಸಾಂ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಒಪ್ಪಂದದ ಪ್ರಕಾರ ಅಸ್ಸಾಂನಲ್ಲಿ ಪರವಾನಗಿ ವ್ಯವಸ್ಥೆ ಅನುಷ್ಠಾನಗೊಳ್ಳುವುದಿಲ್ಲ ಎಂದು ಹೇಳಿದರು.

ಜವಹರ್‌ಲಾಲ್ ನೆಹರು ರವರು ಮಾತನಾಡುತ್ತಾ ನಾವು ಹಿಂದುಗಳಿಗೊಂದು ಮುಸ್ಲೀಮರಿಗೊಂದು ಕಾನೂನನ್ನು ಮಾಡಲು ಸಾಧ್ಯವಿಲ್ಲ ಹಾಗೆ ಮಾಡುವುದು ಅಸಂಬದ್ಧ. ಪಾಕಿಸ್ತಾನದಿಂದ ಮರಳಿ ಬಂದಂತಹ ಜನರಿಗೆ ಪೌರತ್ವ ಕೊಡುವುದನ್ನು ವಿರೋಧಿಸುವುದು ಅನ್ಯಾಯ ಹಾಗೂ ತಾರತಮ್ಯವನ್ನು ತೋರಿಸಿದ ಹಾಗೆ. ನಾವು ಧರ್ಮ ನಿರಪೇಕ್ಷತೆಯನ್ನು ಪ್ರತಿಪಾದಿಸುವುದರಿಂದ ನಾವೇನೂ ಮಹತ್ಕಾರ್ಯ ಮಾಡಿದ ಹಾಗಾಯಿತು? ಇದು ಎಲ್ಲಾ ಅಧುನಿಕ ನಾಗರೀಕ ಪ್ರಜಾಪ್ರಭುತ್ವ ದೇಶಗಳ ಕರ್ತವ್ಯ ಎಂದು ಹೇಳುತ್ತಾರೆ.



ಡಾ॥ ಬಿ.ಆರ್.ಅಂಬೇಡ್ಕರ್ ಕೊನೆಯಲ್ಲಿ ಮಾತನಾಡುತ್ತಾ ಭಾರತ ಸರ್ಕಾರ ಮತ್ತು ಪಾಕಿಸ್ತಾನದ ಸರ್ಕಾರಗಳ ನಡುವಿನ ಸಂಧಾನದ ಭಾಗವಾಗಿ ಭಾರತ ಸರ್ಕಾರ, ಭಾರತದಿಂದ ಪಾಕಿಸ್ತಾನಕ್ಕೆ ಹೋಗಿದ್ದವರು ಮರಳಿ ಬರಬೇಕೆಂದರೆ ಅವರಿಗೆ ಪರವಾನಗಿ ವ್ಯವಸ್ಥೆಯನ್ನು ಒದಗಿಸಿ ಮರಳಿ ಬರಲು ಅವಕಾಶ ಕೊಟ್ಟಿದೆ. ನಾವು ಈಗ ಪಾಕಿಸ್ತಾನದಿಂದ ಮರಳಿ ಬಂದವರಿಗೆ ಪೌರತ್ವ ಕೊಡದಿದ್ದರೆ ನಮ್ಮ ಸರ್ಕಾರವನ್ನು ವಚನ ಭ್ರಷ್ಟ ಮಾಡಿದಂತೆ. ಅದರಲ್ಲೂ ಹೀಗೆ ಮರಳಿ ಬಂದವರ ಸಂಖ್ಯೆ 2000 ರಿಂದ 3000 ಅಷ್ಟೇ, ಇಷ್ಟೊಂದು ಕಡಿಮೆ ಇರುವ ಅವರು ನಮ್ಮ ಜನರು, ಅವರಿಗೆ ಪೌರತ್ವ ಕೊಡುವುದನ್ನು ವಿರೋಧಿಸುವುದು ಸಾರ್ವಜನಿಕ ಪ್ರಜ್ಞೆಗೆ ವಿರೋಧವಾದದ್ದು ಹಾಗೂ ಅಂತರಾಷ್ಟ್ರೀಯ ಕಾನೂನಿನ ಉಲ್ಲಂಘನೆಯಾಗುತ್ತದೆ. ಹಾಗಾಗಿ ನಾನು ಸದನದ ಎಲ್ಲಾ ಸದಸ್ಯರಲ್ಲಿ ಈ ಅನುಛೇದಗಳನ್ನು ಒಪ್ಪುವಂತೆ ಹಾಗೂ ತಮ್ಮ ಎಲ್ಲಾ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವಂತೆ ಮನವಿ ಮಾಡುತ್ತೇನೆ ಎಂದು ಹೇಳಿದರು.

ನಂತರ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದ್‌ರವರು ಒಂದೊಂದು ತಿದ್ದುಪಡಿಯನ್ನು ಮತಕ್ಕೆ ಹಾಕಿದರು ಎಲ್ಲಾ ತಿದ್ದುಪಡಿಗಳು ಸೋತು ಹೋದವು ಪ್ರಮುಖವಾಗಿ ಡಾ॥ ಪಿ.ಎಸ್.ದೇಶ್‌ಮುಖ್‌ರ ಹಿಂದು ಮತ್ತು ಸಿಖ್ಖರಿಗೆ ಪೌರತ್ವವನ್ನು ಕೊಡಬೇಕು ಎಂಬ ತಿದ್ದುಪಡಿಯನ್ನು ಇಡೀ ಸದನ ತಿರಸ್ಕರಿಸಿತು.

ದಿನಾಂಕ 12.08.1949ರಂದು ಅನುಛೇದ 5 ರಿಂದ 11 ರವರೆಗೆ ಸಂವಿಧಾನದಲ್ಲಿ ಪೌರತ್ವವನ್ನು ವಿವರಿಸಿರುವ ಅನುಛೇದಗಳನ್ನು ಅಂಗೀಕರಿಸುತ್ತಾರೆ. ಹಾಗೂ ಭಾರತದ ಸಂಸತ್ತಿಗೆ ಈ ಪೌರತ್ವವನ್ನು ನಿಯಂತ್ರಿಸಲು ಕಾನೂನನ್ನು ರೂಪಿಸಲು ಸ್ವಾತಂತ್ರವನ್ನು ಕೊಡುತ್ತಾರೆ.

ಸಂವಿಧಾನದ ಕರುಡನ್ನು ಅಂಗೀಕರಿಸುವ ಸಲುವಾಗಿ 25.11.1949 ರಂದು ಡಾ.ಬಿ.ಆರ್.ಅಂಬೇಡ್ಕರರು ತಮ್ಮ ಕೊನೆಯ ಭಾಷಣ ಮಾಡುತ್ತಾರೆ. ಅದನ್ನು ಓದಿದರೆ, ಅಂಬೇಡ್ಕರ್‌ರವರ ಅತಂಕ ಅರ್ಥವಾಗುತ್ತದೆ. ಅಂದು ಭಾಷಣವನ್ನು ಮಾಡುತ್ತಾ ಡಾ॥ ಬಿ.ಆರ್. ಅಂಬೇಡ್ಕರವರು ಈ ಕೆಳಕಂಡಂತೆ ಹೇಳಿದ್ದಾರೆ 26.01.1950 ರಂದು ಭಾರತ ದೇಶವು ಸ್ವಾತಂತ್ರ ದೇಶವಾಗುತ್ತದೆ. ಭಾರತದ ಸ್ವಾತಂತ್ರವು ಏನಾಗುವುದೋ? ತನ್ನ ಸ್ವಾತಂತ್ರವನ್ನು ಸಂರಕ್ಷಿಸಿಕೊಳ್ಳುವುದೋ ಅಥವಾ ಮತ್ತೆ ಸ್ವಾತಂತ್ರವನ್ನು ಕಳೆದುಕೊಳ್ಳುವುದೋ? ನನ್ನ ಮನವನ್ನು ಕಲುಕುವ ವಿಷಯವೇನೆಂದರೆ ಒಮ್ಮೆ ಭಾರತ ತನ್ನ ಸ್ವಾತಂತ್ರವನ್ನು ಕಳೆದುಕೊಂಡಿದೆ ಎನ್ನುವುದರ ಜೊತೆಗೆ, ಅ ಸ್ವಾತಂತ್ರವನ್ನು ಕಳೆದುಕೊಂಡಿರುವುದು ತನ್ನದೇ ಜನರ ವಿಶ್ವಾಸಘಾತುಕತನ ಹಾಗೂ ದ್ರೋಹದಿಂದ. ಮೋಹಮದ್ ಬಿನ್ ಕಾಸಿಮ್ ಸಿಂದ್ ಪ್ರಾಂತಕ್ಕೆ ಆಕ್ರಮಣ ಮಾಡಿದಾಗ, ದಹಿರ?? ರಾಜನ ಸೈನ್ಯಾಧಿಕಾರಿಗಳು ಮೊಹಮದ್ ಬಿನ್ ಕಾಸಿಮ್‌ನ ದಲ್ಲಾಳಿಗಳಿಂದ ಲಂಚವನ್ನು ಪಡೆದು ರಾಜನ ಪರ ಯುದ್ಧದಲ್ಲಿ ಹೋರಾಡುವುದಿಲ್ಲ. ಮೊಹಮದ್ ಘೋರಿಯನ್ನು ಭಾರತದ ಮೇಲೆ ದಂಡೆತ್ತಿ ಬರುವಂತೆ ಪೃತ್ವಿರಾಜ್‌ನ ವಿರುದ್ಧ ಯುದ್ಧವನ್ನು ಮಾಡುವಂತೆ ಆಹ್ವಾನಿಸಿದ್ದು ಜೈಚಂದ್ ಹಾಗೂ ಈ ಯುದ್ಧದಲ್ಲಿ ತನ್ನ ಹಾಗೂ ಸೋಲಂಕಿ ರಾಜರ ಬೆಂಬಲವನ್ನು ಕೊಡುವುದಾಗಿ ಮೊಹಮದ್ ಘೋರಿಗೆ ಆಶ್ವಾಸನೆಯನ್ನು ಕೊಡುತ್ತಾನೆ. ಶಿವಾಜಿ ಮಹರಾಜನು ಮೋಘಲರ ವಿರುದ್ಧ ಯುದ್ಧ ಮಾಡುತ್ತಿದ್ದರೆ, ಇತರೆ ಮರಾಠ ಸಾಮಾಂತರು ಹಾಗೂ ರಜಪೂತ ರಾಜರು ಮೊಗಲರ ಪರವಾಗಿ ಯುದ್ಧ ಮಾಡುತ್ತಿದ್ದರು. ಬ್ರಿಟೀಷರು ಸಿಖ್ ರಾಜರನ್ನು ನಾಶ ಮಾಡುತ್ತಿದ್ದರೆ, ಅವರ ಮುಖ್ಯ ಸೈನ್ಯಾಧಿಕಾರಿ ಸುಮ್ಮನಿದ್ದನು. ಹಾಗೆ 1857ರಲ್ಲಿ ಬ್ರಿಟೀಷರ ವಿರುದ್ಧ ಸ್ವಾತಂತ್ರ ಸಂಗ್ರಾಮವನ್ನು ನಡೆಸಿದರೆ ಸಿಖ್‌ರಾಜರು ಸುಮ್ಮನೆ ಇದ್ದು ನೋಡುತ್ತಿದ್ದರು. ಇತಿಹಾಸ ಮರುಕಳಿಸುವುದೇ? ಈ ಆಲೋಚನೆಗಳು ನನ್ನಲ್ಲಿ ತೀವ್ರ ಆತಂಕವನ್ನು ಮೂಡಿಸಿವೆ. ಇನ್ನು ಮುಂದೆ ನಮ್ಮ ಹಳೆಯ ವೈರಿಗಳಾದ ಜಾತಿ ವ್ಯವಸ್ಥೆ ಹಾಗೂ ವಿವಿಧ ಪಂಥಗಳ ಜೊತೆಗೆ ವಿವಿಧ ಹಾಗೂ ವೈರುದ್ಯವಾದ ರಾಜಕೀಯ ಪಂಥಗಳು ರಾಜಕೀಯ ಪಕ್ಷಗಳು ಇರುತ್ತವೆ. ಇದನ್ನು ಯೋಚಿಸಿದಾಗ ನನ್ನ ಆತಂಕ ಇನ್ನಷ್ಟು ತೀವ್ರವಾಗುತ್ತದೆ. ಮುಂದೆ ಮಾತನಾಡುತ್ತಾ ಅವರು 'ನಮ್ಮ ಮುಂದೆ ಇರುವ ಪ್ರಶ್ನೆ ಏನೆಂದರೆ, ಭಾರತಿಯರಾದ ನಾವು ನಮ್ಮ ದೇಶವನ್ನು ಪಂಥಕ್ಕಿಂತ ಎತ್ತರದ ಸ್ಥಾನದಲ್ಲಿಡುತ್ತಿವೆಯೋ ಅಥವಾ ಪಂಥಗಳನ್ನು ದೇಶಕ್ಕಿಂತ ಎತ್ತರದ ಸ್ಥಾನದಲ್ಲಿಡುತ್ತೇವೆಯೋ? ಒಂದಂತು ಸತ್ಯ, ರಾಜಕೀಯ ಪಕ್ಷಗಳು ತಮ್ಮ ಪಂಥಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು ಅವುಗಳನ್ನು ದೇಶಕ್ಕಿಂತ ಎತ್ತರದ ಸ್ಥಾನದಲ್ಲಿಟ್ಟರೆ, ನಾವು ನಮ್ಮ ಸ್ವಾತಂತ್ರ್ಯವನ್ನು ಎರಡನೆಯ ಬಾರಿಗೆ ಕಳೆದುಕೊಳ್ಳುವುದು ಖಚಿತ ಹಾಗಾದಾಗ ನಾವು ಶಾಶ್ವತವಾಗಿ ಸ್ವಾತಂತ್ರವನ್ನು ಕಳೆದುಕೊಳ್ಳುತ್ತೇವೆ. ನಾವೆಲ್ಲರೂ ಹೀಗೆ ಆಗದ ಹಾಗೆ ಜಾಗೃತಿಯಿಂದ ಇರಬೇಕು, ನಮ್ಮಲ್ಲಿ ಕೊನೆಯ ರಕ್ತದ ಬಿಂದು ಇರುವವರೆಗೆ ನಾವು ಸ್ವಾತಂತ್ರ್ಯವನ್ನು ರಕ್ಷಿಸಬೇಕು' ಎಂದು ಹೇಳಿದರು.

ನಂತರ ಮಾತನಾಡುತ್ತಾ 26.01.1950 ರಂದು ಭಾರತ ಪ್ರಜಾಪ್ರಭುತ್ವ ದೇಶವಾಗುತ್ತದೆ. ಅಂದರೆ ಅಂದಿನಿಂದ ಭಾರತದಲ್ಲಿ ಜನರಿಂದ, ಜನರಿಗಾಗಿ, ಜನರ ಸರ್ಕಾರವು ಅಸ್ಥಿತ್ವಕ್ಕೆ ಬರುತ್ತದೆ. ಭಾರತಕ್ಕೆ ಪ್ರಜಾಪ್ರಭುತ್ವವು ಹೊಸದಲ್ಲ, ಬುದ್ಧನ ಸಂಘಗಳಲ್ಲಿ ಪ್ರಜಾಪ್ರಭುತ್ವದ ಹಾಗೂ ಸಂಸದೀಯ ನಡವಳಿಕೆಗಳು ಇದ್ದವು, ಆದರೆ

**(71ನೇ ಪುಟಕ್ಕೆ)**



**‘ಭಾರತದಲ್ಲಿ ಡೆಮಾಕ್ರಸಿ ಅನ್ನುವುದು ಇದೆಯೇ? ಇದೆಯೆಂದರೆ ಯಾರಿಗಿದೆ ಎನ್ನುವ ಅರುಂಧತಿ ರಾಯ್ ಅವರ ಪ್ರಶ್ನೆ ಮತ್ತು ಅದರ ತಾತ್ವಿಕತೆಯ ಹಿನ್ನೆಲೆಯಲ್ಲಿಯೇ ನಾವು ಅಂಬೇಡ್ಕರ್ ಯೋಚನೆಯ ಸಮಾಜವಾದವನ್ನು ಚರ್ಚೆಗೆ ತರಬೇಕಾಗಿದೆ. ಅಂಬೇಡ್ಕರ್ ಅವರ ಸಮಾಜವಾದದ ಮೇಲಿನ ಡೆಮಾಕ್ರಸಿ ಎಲ್ಲರನ್ನು ಒಳಗೊಳ್ಳುವ (ಇನ್‌ಕ್ಲೂಸಿವ್), ಪ್ರತಿನಿಧೀಯ ಅಥವಾ ಪ್ರತಿನಿಧಿತಾತ್ಮಕ(ರೆಪ್ರಸೆಂಟೇಟಿವ್), ಕ್ರಾಂತಿಕಾರಕ, ರ್‍ಯಾಡಿಕಲ್ ಹಾಗೂ ಬಂಧುತ್ವ, ಸಮಾನತೆ, ಸ್ವಾತಂತ್ರ್ಯ ಮತ್ತಿತರ ಸಮಾಜೋ–ರಾಜಕೀಯ ಮೌಲ್ಯಗಳ ಆಧಾರದ ಮೇಲೆ ರೂಪುಗೊಂಡಿರುವಂತದ್ದು. ಬಹುಶ: ಅಂಬೇಡ್ಕರ್, ರಾಜಕೀಯ ಸಮಾನತೆ ಮತ್ತು ಸ್ವಾತಂತ್ರ್ಯಕ್ಕಿಂತಲೂ ಬಂಧುತ್ವ(ಫ್ರಟರ್ನಿಟಿ)ಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದರು’**

# ಸಮಾಜವಾದ, ಪ್ರಜಾಸತ್ತೆ ಮತ್ತು ಅಂಬೇಡ್ಕರ್

ಸುಮಾರು 1950 ಜನವರಿ 26 ದಾದಾಸಾಹೇಬ್ ಅಂಬೇಡ್ಕರ್ ಸಂವಿಧಾನ ಸಭೆಯಲ್ಲಿ ವಿದಾಯ ಕಾರ್ಯಕ್ರಮದಲ್ಲಿ ಅವರ ಆಲೋಚನೆಯ ಪ್ರಜಾಸತ್ತೆಯ ಬಗೆಗೆ ಸುಮಾರು ಒಂದು ತಾಸು ಭಾಷಣ ಮಾಡಿದ್ದರು. ಅಂಬೇಡ್ಕರ್ ಮಾಡಿದ ಈ ಭಾಷಣ ಮತ್ತು ವಿಚಾರ ಕೊನೆಗೆ ಮತಕ್ಕೆ ಹಾಕಲ್ಪಟ್ಟಿತು. ಬಾಬಾಸಾಹೇಬ್ ಕೇವಲ 5% ಮತಗಳನ್ನಷ್ಟೇ ಪಡೆದು ಹಿನ್ನಡೆ ಅನುಭವಿಸಿದ್ದರು. ಬಹುಶ: ಆಧುನಿಕ ಭಾರತದ ಚರಿತ್ರೆಯ ಅತ್ಯಂತ ದುರಂತ, ದಾರುಣ ಮತ್ತು ದು:ಖದ ದಿನವೆಂದೇ ಆ ದಿನವನ್ನು ಕರೆಯಬಹುದು. ಬಾಬಾಸಾಹೇಬ್ ತಮ್ಮ ಪ್ರಜಾಸತ್ತೆಯ ಸ್ವರೂಪವನ್ನು ಸಮಾಜವಾದೀ ನೆಲೆಗಳಲ್ಲಿ ಗುರುತಿಸಿದ್ದರು. ಅಂತೆಯೇ ಅದನ್ನು ಸೋಶಿಯಲಿಸ್ಟಿಕ್ ಡೆಮಾಕ್ರಸಿ ಎಂದೂ ಕೂಡಾ ಕರೆದಿದ್ದರು. ಅಂಬೇಡ್ಕರ್ ಆಲೋಚನೆಯು, ಒಳ್ಳೆಯ ಸಮಾಜದ ಪರಿಕಲ್ಪನೆಗೆ ಪೂರಕವಾಗಿತ್ತು. ಬಹುಶ: ಸದ್ಯದ ಕಾಲಮಾನದಲ್ಲಂತೂ ಅಂಬೇಡ್ಕರ್ ಅವರ ಈ ಆಲೋಚನೆಯನ್ನು ಪುನ: ಚರ್ಚಿಸಿ ಅದರ ಜಾರಿಗಾಗಿಯೂ ಆಗ್ರಹಿಸಬೇಕಾಗಿದೆ.

ಭಾರತದಲ್ಲಿ ಡೆಮಾಕ್ರಸಿ ಅನ್ನುವುದು ಇದೆಯೇ? ಇದೆಯೆಂದರೆ ಯಾರಿಗಿದೆ ಎನ್ನುವ ಅರುಂಧತಿ ರಾಯ್ ಅವರ ಪ್ರಶ್ನೆ ಮತ್ತು ಅದರ ತಾತ್ವಿಕತೆಯ ಹಿನ್ನೆಲೆಯಲ್ಲಿಯೇ ನಾವು ಅಂಬೇಡ್ಕರ್ ಯೋಚನೆಯ ಸಮಾಜವಾದವನ್ನು ಚರ್ಚೆಗೆ ತರಬೇಕಾಗಿದೆ. ಅಂಬೇಡ್ಕರ್ ಅವರ ಸಮಾಜವಾದದ ಮೇಲಿನ ಡೆಮಾಕ್ರಸಿ ಎಲ್ಲರನ್ನು ಒಳಗೊಳ್ಳುವ (ಇನ್‌ಕ್ಲೂಸಿವ್), ಪ್ರತಿನಿಧೀಯ ಅಥವಾ ಪ್ರತಿನಿಧಿತಾತ್ಮಕ(ರೆಪ್ರಸೆಂಟೇಟಿವ್), ಕ್ರಾಂತಿಕಾರಕ, ರ್‍ಯಾಡಿಕಲ್ ಹಾಗೂ ಬಂಧುತ್ವ, ಸಮಾನತೆ, ಸ್ವಾತಂತ್ರ್ಯ ಮತ್ತಿತರ ಸಮಾಜೋ–ರಾಜಕೀಯ ಮೌಲ್ಯಗಳ ಆಧಾರದ ಮೇಲೆ




ಗಂಭೀರವಾದ ಓದು, ವಿಮರ್ಶೆ, ಚರ್ಚೆಗಳಲ್ಲಿ ತೊಡಗಿಕೊಂಡ ಹೊಸ ತಲೆಮಾರಿನಲ್ಲಿ ಗಮನಸೆಳೆಯುವ ಪ್ರತಿಭಾವಂತರಾದ ಪ್ರದೀಪ ಕೆಂಚನೂರು, ಸಿನಿಮಾ, ಚರಿತ್ರೆ, ರಾಜಕೀಯ ತತ್ವಶಾಸ್ತ್ರ, ಚಿತ್ರಕತೆ ರಚನೆ ಮತ್ತು ಕಲೆ ಇವರ ಆಸಕ್ತಿಗಳು. ಪ್ರಸ್ತುತ ಸರಕಾರಿ ಪದವಿ ಪೂರ್ವ ಕಾಲೇಜು ಬೈಂದೂರಲ್ಲಿ ಚರಿತ್ರೆ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರದೀಪ್ ಸಿನಿಮಾ ರಸಗ್ರಹಣ ಕುರಿತು ಪುಣೆಯ ಫಿಲ್ಮ್ ಆಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ಮೂಲಕ ಶಿಕ್ಷಣ ಪಡೆದಿದ್ದಾರೆ. ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ ಚರಿತ್ರೆ ಅಧ್ಯಯನ ವಿಭಾಗದಿಂದ ಪಿಹೆಚ್.ಡಿ ಪದವಿಗಾಗಿ 'ಕನ್ನಡ ಸಿನಿಮಾದ ಸೈಂದ್ಧಾಂತಿಕತೆ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು: ಒಂದು ಚಾರಿತ್ರಿಕ ರಚನೆ' ಎಂಬ ಸಂಶೋಧನೆಯನ್ನು ಸಲ್ಲಿಸಿದ್ದಾರೆ.

**ಪ್ರದೀಪ ಕೆಂಚನೂರು**

**Email: pradeephistory@gmail.com**




ರೂಪುಗೊಂಡಿರುವಂತದ್ದು. ಬಹುಶ: ಅಂಬೇಡ್ಕರ್, ರಾಜಕೀಯ ಸಮಾನತೆ ಮತ್ತು ಸ್ವಾತಂತ್ರ್ಯಕ್ಕಿಂತಲೂ ಬಂಧುತ್ವ(ಫ್ರಟರ್ನಿಟಿ)ಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದರು. ಬಂಧುತ್ವವಿಲ್ಲದ ಸಮಾಜವು ಯಾವುದೇ ರೀತಿಯ ಸಾಮಾಜಿಕ ಮತ್ತು ರಾಜಕೀಯ ಮೌಲ್ಯ ಮತ್ತು ಆಶಯಗಳನ್ನು ಸಾಧಿಸದು ಹಾಗೂ ಅಂತಹ ಸಮಾಜ ಮತ್ತು ಡೆಮಾಕ್ರಸಿಯು ಟೊಳ್ಳು–ಗಟ್ಟಿತನದ್ದು ಎನ್ನುವ ಪ್ರಬಲ ವಿಚಾರ ಮತ್ತು ನಂಬಿಕೆಯನ್ನು ಅಂಬೇಡ್ಕರ್ ಹೊಂದಿದ್ದರು. ಇದೇ ನೀತಿ ಮತ್ತು ತತ್ವಗಳ ಆಧಾರದ ಮೇಲೆ ಅಂಬೇಡ್ಕರ್ ಪ್ರಣೀತ ಸಮಾಜವಾದೀ ಪ್ರಜಾಪ್ರಭುತ್ವ ರೂಪುಗೊಂಡಿತ್ತು.

ಅಂಬೇಡ್ಕರ್ ಆಲೋಚನೆಯ ಸಮಾಜವಾದೀ ಪ್ರಜಾಪ್ರಭುತ್ವ, 'ಪ್ರಜೆಗಳ ಸರ್ಕಾರ, ಪ್ರಜೆಗಳಿಗಾಗಿ ಸರ್ಕಾರ ಹಾಗೂ ಪ್ರಜೆಗಳಿಂದ ಸರ್ಕಾರ' ಎಂಬ ತತ್ವ–ಕ್ಕೆ ಅನುರೂಪಿಯಾದುದು. ಆದರೆ ಪ್ರಜಾಸತ್ತೆಯು, ಸರ್ಕಾರವನ್ನು ಮೀರಿದ ಒಂದು ರೀತಿಯ ಪ್ರಾಥಮಿಕ ನೆಲೆಯ ಸಹಬಾಳ್ವೆಯ, ಅನುಭವವಾಗಿದೆ. ಒಂದು ರೀತಿಯಲ್ಲಿ ಇದು ಸಹ ನಿವಾಸಿ, ವ್ಯಕ್ತಿಗಳ ಬಗೆಗೆ ಇನ್ನೊಬ್ಬ ತೋರಿಸುವ ಗೌರವ ಮತ್ತು ನಮ್ರತೆಯ ಮನೋಭಾವವೂ ಆಗಿದೆ. ಇಂತಹ ಪ್ರಜಾಸತ್ತೆಯೆಂಬ ಅನುಭವವು ಸಮಗ್ರವಾದ ಸಾಮಾಜಿಕ ಸ್ಥಿತ್ಯಂತರ ಮತ್ತು ಮಾನವನ ಪ್ರಗತಿಯನ್ನು ಸಾಧಿಸುವುದು ತುಂಬಾ ಪ್ರಮುಖವಾದುದು. ಡೆಮಾಕ್ರಸಿಯ ಸಾಂಪ್ರದಾಯಿಕ ನಂಬಿಕೆಯಾದ, 'ಕೆಟ್ಟ ಜನರು ಅಧಿಕಾರವನ್ನು ಹೊಂದದಿರುವುದೇ ಪ್ರಮುಖವಾದ ಪ್ರಜಾಸತ್ತೆ' ಎಂಬ ನಿಲುವಿಗಿಂತ ಇದು ತುಂಬಾ ಭಿನ್ನವಾದುದಾಗಿತ್ತು. ಅಂಬೇಡ್ಕರ್ ಒಂದು ಸಂದರ್ಭದಲ್ಲಿ ಪ್ರಜಾಸತ್ತೆಯನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ ಕೂಡಾ, 'ರಕ್ತಕ್ರಾಂತಿ ರಹಿತವಾಗಿ, ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಮಹತ್ತರ ಬದಲಾವಣೆಯನ್ನು ತರುವ ಸರ್ಕಾರದ ವಿಧವೇ ಡೆಮಾಕ್ರಸಿ' ಎಂದು.

ಸಮಾಜವಾದೀ ಪ್ರಜಾಸತ್ತೆಯ ಮೂಲ ಆಶಯವೇ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತೆಗೆ ಸಿಗಬೇಕಾದ ಆದ್ಯತೆ. ಅಂಬೇಡ್ಕರ್ ಪ್ರಕಾರ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತೆಯು ಯಶಸ್ವಿಯಾಗುವುದೇ ನಿಜವಾದ ಡೆಮಾಕ್ರಸಿಯು ಯಶಸ್ವಿಯಾಗುವ ಪರಿ. ರಾಜಕೀಯ ಪ್ರಾತಿನಿಧ್ಯತೆ, ಮತದಾನ ಮಾಡುವ ಹಕ್ಕು ಇರುವ ರಾಜಕೀಯ ಪ್ರಜಾಸತ್ತೆಯ ನೆಲೆಯು ಈ ರೀತಿಯ ಸಾಮಾಜಿಕ ಪ್ರಜಾಸತ್ತೆಯ ಅಥವಾ ಸಮಾಜವಾದೀ ನೆಲೆಯನ್ನು ಹೊಂದದಿದ್ದರೆ ಯುರೋಪ್‌ನಲ್ಲಿ ಡೆಮಾಕ್ರಸಿಯು ಸೋತ ಸ್ಥಿತಿಯನ್ನು ಭಾರತದಲ್ಲಿಯೂ ಕಾಣಬೇಕಾಗುತ್ತದೆ ಎನ್ನುವುದು ಅಂಬೇಡ್ಕರ್ ಆಲೋಚನೆಯಾಗಿತ್ತು. ಬಹುಶ: ಭಾರತದಲ್ಲಿ ಇಂದು ರಾಜಕೀಯ ಪ್ರಜಾಸತ್ತೆ ಸೋತ ಸ್ಥಿತಿ, ಅದು ಸಮಾಜೋ–ಆರ್ಥಿಕ ಪ್ರಜಾಸತ್ತೆಯ ಜತೆ ಸಾಧಿಸದ ಸಮನ್ವಯದ ಕಾರಣ, ಹೊಂದಿದ ವಿಫಲತೆ ಅರುಂಧತಿ ರಾಯ್ ಕೇಳುವ, 'ಭಾರತದಲ್ಲಿ ಪ್ರಜಾಸತ್ತೆ ಇದೆಯೇ? ಯಾರಿಗಿದೆ? ಎನ್ನುವ ಸ್ಥಿತಿಯನ್ನು ನಿರ್ಮಿಸಿ, ಪುನ: ಬಾಬಾಸಾಹೇಬ್ ಆಲೋಚನೆಯ ಪರಿಸ್ಥಿತಿಯನ್ನು ಪ್ರತ್ಯಕ್ಷೀಕರಿಸುವ ಅವಕಾಶವನ್ನು ನಿರ್ಮಿಸಿರುವುದು.

ಅಂಬೇಡ್ಕರ್ ಪ್ರಕಾರ, 'ಸಾಮಾಜಿಕ ಮತ್ತು ಆರ್ಥಿಕ ಪ್ರಜಾಸತ್ತೆಯು ರಾಜಕೀಯ ಪ್ರಜಾಸತ್ತೆಯ ಪ್ರಭಾವೀ ಟಿಸಿಲುಗಳು. ಆದರೆ ಇದರ ಅರಿವನ್ನು ಹೊಂದದಿರುವುದೇ ರಾಜಕೀಯ ಪ್ರಜಾಸತ್ತೆಯ ದುರಂತ ವೈಫಲ್ಯತೆಗೆ ಕಾರಣ. ಪ್ರತೀ ಐದು ವರ್ಷಕ್ಕೊಮ್ಮೆ ಚುನಾವಣೆ, ಆಶ್ವಾಸನೆ, ಕೈಗೆ ಶಾಯಿಹಾಕಿ ಮತದಾನಮಾಡುವ ಜನ, ಅಧಿಕಾರಕ್ಕೆ ಬಂದ ಮೇಲೆ ಎಲ್ಲವನ್ನೂ ಮರೆಯುವ ರಾಜಕೀಯ ವ್ಯವಸ್ಥೆಯೇ ಇದರ ಪ್ರತೀಕಗಳು. ಇಂತಹ ರಾಜಕೀಯ ಪ್ರಜಾಸತ್ತೆಯು ಲಿಬರ್ಟಿಯ ಬಗೆಗೆ ಯೋಚನೆ ಮಾಡುತ್ತದೆಯೇ ಹೊರತು ಸಮಾನತೆಯ ಕುರಿತಲ್ಲ. ಭಾರತದ ರಾಜಕೀಯ ಪ್ರಜಾಸತ್ತೆಯು ಕನಿಷ್ಠ ಪಕ್ಷ ಸಮಾನತೆ ಮತ್ತು ಲಿಬರ್ಟಿಯ ಸಂತುಲನವನ್ನೂ ಕೂಡಾ ಸಾಧಿಸುತ್ತಿಲ್ಲ. ಬಹುಶ: ಯುರೋಪಿನಲ್ಲಿ ರಾಜಕೀಯ ಪ್ರಜಾಸತ್ತೆಯು ಅನುಭವಿಸಿದ ಸೋಲನ್ನೇ ಭಾರತದ ಪ್ರಜಾಸತ್ತೆಯು ಇಂದಿಲ್ಲಿ ಅನುಭವಿಸುತ್ತಿದೆ. ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಪ್ರಜಾಪ್ರಭುತ್ವ ವೈಚಾರಿಕವಾಗಿರಬೇಕೆಂದರು. ಒಂದು ವೇಳೆ ಪ್ರಜಾಪ್ರಭುತ್ವದ ಬಹುಮುಖ್ಯ ಸಾರ್ವಜನಿಕ ಚರ್ಚೆ ಮತ್ತು ಅಭಿಪ್ರಾಯವು ವೈಚಾರಿಕವಾಗಿರದಿದ್ದರೆ ಪ್ರಜಾಸತ್ತೆಯು ಸೋಲುತ್ತದೆ ಎನ್ನುವುದು ಇವರ ನಿಲುವಾಗಿತ್ತು.

ಸಾರ್ವಜನಿಕ ಚರ್ಚೆ ಮತ್ತು ಅಭಿಪ್ರಾಯವು ಒಂದು ನೆಲೆಯ ಕಾಮನ್ ಸೆನ್ಸ್, ತಾರ್ಕಿಕವಾದ ಮತ್ತು ವಿಮರ್ಶೆಯ ನೆಲೆಯ ವಿಚಾರಣೆಯ ಮನಸ್ಥಿತಿಯಿಲ್ಲದಿದ್ದರೆ ಸಾಧಿತವಾಗುವುದಿಲ್ಲ ಎನ್ನುವುದು ಅಂಬೇಡ್ಕರ್ ಇಂಗಿತವಾಗಿತ್ತು. ಉದಾಹರಣೆಗೆ ಭಾರತದಲ್ಲಿನ ಬದುಕು ಮತ್ತು ಸಾಮಾಜಿಕ ಅನುಭವದಲ್ಲಿ ಜಾತಿಯಂತಹ ಅವೈಚಾರಿಕ ವಿಚಾರವನ್ನು ಮುಖಾಮುಖಿಯಾಗಿ ವಿರೋಧಿಸುವುದೆಂದರೆ ವೈಚಾರಿಕರಾಗಿದ್ದಾಗ ಮಾತ್ರ ಎಂಬ ಅನುಭವ ನಮ್ಮದೂ ಕೂಡಾ ಆಗಿದೆ. ಬಂಧುತ್ವ, ಮನುಷ್ಯನ ಘನತೆಯ ಬಗೆಗಿನ ಮನ್ನಣೆ, ಸಮಾನತೆ ಮತ್ತಿತರ ಸಂಗತಿಗಳು ವೈಚಾರಿಕವಾದ ಆಯ್ಕೆ ಮತ್ತು ಅನುಭವಗಳೂ ಆಗಿವೆಯಾದ ಕಾರಣ ನಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಬದುಕನ್ನು ನಿಯಂತ್ರಿಸಬೇಕಾದರೆ ವೈಚಾರಿಕರಾಗಿರಲೇಬೇಕು. ಈ ವೈಚಾರಿಕತೆ ಮತ್ತು ಸಮಾನತೆ ಪರಸ್ಪರ ಸಂಬಂಧಿತವಾದವುಗಳು. ಇವುಗಳು ವಿಚಾರಶೀಲವಾಗಿ ಜಾತಿಯಂತಹ ಅವೈಚಾರಿಕ ಅನುಭವ ಮತ್ತು ಅಪ್ರಜಾಸತ್ತೆ ಸೋಲುವುದಿದ್ದರೆ ಪ್ರಜಾಸತ್ತೆ ಮತ್ತು ವೈಚಾರಿಕತೆಗೆ ಅವು ನಿಜವಾಗಿಯೂ ಶಕ್ತಿ ಒದಗಿಸಿದ ಹಾಗೆ. ಅಂಬೇಡ್ಕರ್ ನಿರೂಪಿಸುವ ವೈಚಾರಿಕತೆ ಯುರೋಪಿನ ಎರವಲಲ್ಲ. ಅದು ಯುರೋಪ್ ಹಾಗೂ ಡೆಕಾರ್ಟ್ ಪ್ರಣೀತ ವೈಚಾರಿಕತೆಗಿಂತಲೂ ಮೊದಲಿನ, ಬುದ್ಧ ತನ್ನ ಶಿಷ್ಯರಿಗೆ ಅನುಸರಿಸಲು




ಹೇಳಿದ್ದ, ಯಾವುದನ್ನು ಆಧಾರವಿರದೆ ನಂಬದಿರಿ' ಎಂಬ ಕ್ರಮದ ಪ್ರತೀಕ. ಬುದ್ಧನೇ ಹೇಳಿದ ಹಾಗೆ ಮಾನವ ಬದುಕಲು ಬೇಕಾದ ಪ್ರಮುಖ ಆಹಾರವೇ ಅರಿವು, ಪ್ರಶ್ನೆ ಹಾಗೂ ತಿಳುವಳಿಕೆ.

ಬಹುಶ: ಭಾರತದ ಇಂದಿನ ಪ್ರಜಾಸತ್ತೆಯ ಮೇಲೆ ಒದಗಿರುವ ದೊಡ್ಡ ಅಪಾಯವೇ, ಈ ವೈಚಾರಿಕತೆಯ ನಿರಾಕರಣೆಯ ಪ್ರಯತ್ನ ಮತ್ತು ಅನುಭವಗಳು. ವಿಶೇಷವಾಗಿ ಉಗ್ರ ಬಲಪಂಥದ ರಾಜಕಾರಣ ಹಾಗೂ ಅವುಗಳ ಗರ್ಭವಾದ ಜೀವ ವಿರೋಧವು ಇಂತಹ ಸಾಧ್ಯತೆಯನ್ನು ಸೃಷ್ಟಿಸುತ್ತಿದೆ. ಇವುಗಳು ಒಂದು ರೀತಿ ಉನ್ನತ ಜಾತಿಗಳೆಂದು ಕರೆಯಲ್ಪಡುವ ಸಮೂಹಗಳು ಸಾಧಿಸುತ್ತಿರುವ ಹಣಾಹಣಿ ಮತ್ತು ಮೇಲಾಟವೂ ಆಗಿದೆ. ಒಂದು ಸಾಂಪ್ರದಾಯಿಕ, ಊಳಿಗಮಾನ್ಯೀಯ ಸಮಾಜ ಹಾಗೂ ಅದರ ಅಸಮಾನೀಯ ಯಾಜಮಾನ್ಯೀಯ ಹಾಗೂ ಜೀವವಿರೋಧೀ ಕ್ರಮವನ್ನು ಕಾಪಿಡುವ ಕ್ರಮವಾಗಿಯೂ ಕೂಡಾ ಇದನ್ನು ಗಮನಿಸಬಹುದು. ಈ ರೀತಿಯಲ್ಲಿ ಬ್ರಾಹ್ಮಣೀಯ ಕ್ರಮಗಳು, ಧರ್ಮವನ್ನು ರಾಜ–ಕಾರಣಕ್ಕಾಗಿ ಬಳಸುವ ಮಾದರಿಗಳೂ ಕೂಡಾ ಈ ರೀತಿಯ ಸಮಸ್ಯೆಯನ್ನು ಸೃಷ್ಟಿಸುತ್ತವೆ. ಇಂತಹ ಪ್ರಯತ್ನಗಳು ಒಂದು ವಿಮರ್ಶೆಯ ಕೊರತೆಯ ಹಾಗೂ ವೈಚಾರಿಕ ಯೋಚನಾಕ್ರಮದ ದಿವಾಳಿತನವನ್ನೂ ತೋರಿಸುತ್ತವೆ. ಆಧುನಿಕ ಗೋಗ್ರಹಣಗಳೆಂದು ಕರೆಯಬಹುದಾದ ಗೋದಾಳಿ, ಲವ್‌ಜಿಹಾದ್, ರಾಮನ ಹುಟ್ಟಿದಸ್ಥಳ, ಜೋತಿಷ್ಯ, ಸಂಸ್ಕೃತ, ಕೇಸರೀಕರಣ, ಧರ್ಮದ ಹೆಸರಿನಲ್ಲಿ ಮಾರಣಹೋಮ ಮುಂತಾದುವು ಇಂತಹ ಪ್ರಯೋಗಗಳಾಗಿಯೂ ಕಾಣಿಸುತ್ತದೆ.

ಅಂಬೇಡ್ಕರ್ ಪ್ರತಿಪಾದಿಸಿದ ಸಮಾಜವಾದೀ ಪ್ರಜಾಸತ್ತೆಯ ಬಹುಮುಖ್ಯವಾದ ಇನ್ನೊಂದು ಅಂಶವೆಂದರೆ ನೈತಿಕತೆ ಹಾಗೂ ಅದರ ಮೇಲಿನ ಸಾಮಾಜಿಕ ಪ್ರಕ್ರಮ. ಇದನ್ನು ಅವರು ಶುದ್ಧ ಸಂಪ್ರದಾಯವಾದೀ ನೆಲೆಯಲ್ಲಿ ನಿರ್ವಚಿಸದೆ ಸಂವಿಧಾನದ ಚೌಕಟ್ಟು ಹಾಗೂ ತತ್ವಗಳೆಡೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಅಂತೆಯೇ ಇದನ್ನು 'ಸಾಂವಿಧಾನಿಕ ನೈತಿಕತೆ (ಕಾನ್‌ಸ್ಟಿಟ್ಯೂಶನಲ್ ಮೊರಾಲಿಟಿ) ಎಂದೂ ಕರೆಯುತ್ತಾರೆ. ಇಲ್ಲಿ ಮುಖ್ಯವಾಗಿ ನೈತಿಕತೆ ಎಂದರೆ ಸೋಶಿಯಲ್ ಎತಿಕ್ಸ್ ಎಂದೂ, ಅದು ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಚಾಲಿಸುವ ಶಕ್ತಿ ಎಂದೂ ಅಭಿಪ್ರಾಯಿಸುತ್ತಾರೆ. ಇಂತಹ ನೀತಿ ಅಥವಾ ನೈತಿಕತೆಯೇ ಸಾಮಾಜಿಕ ವೈಚಾರಿಕತೆಯಾಗಿದೆ. ಈ ನೈತಿಕತೆಯು ಸಾಮಾಜಿಕ ವಿಶ್ವಾಸದ ಭಾಗವೂ ಆಗಿ ಅವೈಚಾರಿಕತೆ, ವ್ಯಕ್ತಿಗತ ವೈಚಾರಿಕತೆ ಹಾಗೂ ಕೊನೆಯದಾಗಿ ಸಾಮಾಜಿಕ ವೈಚಾರಿಕತೆಯ ಸ್ಥಿತಿಯನ್ನು ಸಾಧಿಸುವುದಾಗಿದೆ. ಈ ಮೂರನೆಯ ವಿಧವು ಒಂದು ರೀತಿಯ, ' ಹ್ಯಾಬಿಟ್ ಆಫ್ ತಾಟ್' ಕೂಡಾ ಆಗಿದೆಯೆಂಬುದು ಇಲ್ಲಿ ಮುಖ್ಯವಾಗಿದೆ. ಅಂದರೆ ಸಮಾಜ ಅದನ್ನು ಒಂದು ಅಭ್ಯಾಸದ ಹಾಗೆ ರೂಢಿಸಿಕೊಳ್ಳಬೇಕೆಂಬುದು ಅವರ ಆಳೋಚನೆಯಾಗಿತ್ತು. ಈ ನೆಲೆಯಲ್ಲಿ ಅಂಬೇಡ್ಕರ್ ಅವರು ಮಾಡಿದ ಜಾತಿಯ ಬಗೆಗಿನ ಹೆಚ್ಚಿನ ಟೀಕೆಗಳು ಸಾಮಾಜಿಕ ವೈಚಾರಿಕತೆ ಹಾಗೂ ನೈತಿಕತೆಯ ಮೇಲೆಯೇ ರೂಪುತಳೆದಂತವುಗಳು. ಈ ನೆಲೆಯಲ್ಲಿ ಅಂಬೇಡ್ಕರ್ ಸಮಾಜವಾದ ನಿಂತಿರುವುದು ನೀತಿಯ ಮೇಲೆಯೇ ಎಂಬುದನ್ನು ನಾವು ಗ್ರಹಿಸಬಹುದಾಗಿದೆ. ಈ ಕಾರಣಕ್ಕಾಗಿಯೇ ಜಾತಿಯಂತಹ ಅನಿಷ್ಠ ಒಂದು ಒಳ್ಳೆಯ ಸಾರ್ವಜನಿಕ ಅಭಿಪ್ರಾಯವನ್ನೇ ಭಾರತದಲ್ಲಿ ಸೃಷ್ಟಿಸಲಿಲ್ಲವೆಂದೂ ಅಂಬೇಡ್ಕರ್ ಅಭಿಪ್ರಾಯಿಸುತ್ತಾರೆ.

ಅಂಬೇಡ್ಕರ್ ತಮ್ಮ ಸಮಾಜವಾದೀ ಪ್ರಜಾಸತ್ತೆಯನ್ನು, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳು ಸರಿಸಮವಾಗಿ ಸಮನ್ವಯ ಮತ್ತು ಪ್ರತಿನಿಧಿತಗೊಂಡ ಬಗೆ–ಯೊಂದೇ ತಿಳಿಯುತ್ತಾರೆ. ಇದರ ಮೂರೂ ನೆಲೆಗಳೂ ಅತಿ ಪ್ರಮುಖವೆಂದೂ, ರಾಜಕೀಯ ಪ್ರಜಾಸತ್ತೆಯ ವಿಕ್ರಮ, ಉಳಿದ ನೆಲೆಗಳನ್ನು ವೈಚಾರಿಕವಾಗಿ ಹಾಗೂ ಅನುಭವದ ನೆಲೆಯಿಂದ ಸೋಲಿಸುತ್ತದೆಯೆಂದೂ ಘಂಟಾಘೋಷವಾಗಿ ಹೇಳಿದ್ದರು. ಬಹುಶ ಅಂತಹ ಊಹೆ ಇಂದು ಸತ್ಯವಾಗಿದೆ. ಭಾರತದ ಪ್ರಜಾಸತ್ತೆ ಬರೀ ಒಂದು ಮತದಾನದ ದಿನದಂದು ಕೈ ಬೆರಳಿಗೆ ಶಾಯಿ ಹಾಕಿಸಿಕೊಂಡು ಸಂಭ್ರಮಿಸಿ, ನಂತರದ 5 ವರ್ಷಗಳಲ್ಲಿ ತಾವು ಆರಿಸಿದ ಪ್ರತಿನಿಧಿ ಮತ್ತು ಪ್ರಜಾಸತ್ತೆಯನ್ನೂ ನೋಡದ ಮತ್ತು ಅನುಭವ ಸಾಧಿಸದ ಸ್ಥಿತಿಯಾಗಿದೆ. ಸ್ವತಂತ್ರ ಭಾರತದಿಂದ ಹಿಡಿದು ಇಲ್ಲಿಯವರೆಗೂ ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆಗಳು ಪ್ರತಿನಿಧಿಸಿದ್ದು ಬಹುತೇಕ ಉಳ್ಳವರ, ಬಂಡವಾಳಶಾಹೀ ಮತ್ತು ನವ–ಊಳಿಗಮಾನ್ಯೀಯ ಪ್ರಭುಗಳನ್ನು. ಸ್ವತಂತ್ರಭಾರತವು ಮತದಾನ ಮತ್ತು ಶಾಯಿ ಹಾಕುವ ರಾಜಕೀಯ ಸಮಾನತೆ ಹಾಗೂ ಪ್ರಜಾಸತ್ತೆಯನ್ನಷ್ಟೇ ಇಲ್ಲಿಯ ಜನರಿಗೆ ನೀಡಿದೆ. ದಲಿತರು, ಬುಡಕಟ್ಟು ಜನ, ರೋಗಿಗಳು, ಭಿಕ್ಷುಕರು, ನಿರ್ಗತಿಕರು, ದರಿದ್ರರು, ನಿರ್ವಸಿತರು, ಚಿಂದಿ ಆಯುವ ಮಕ್ಕಳು ಮತ್ತಿತರರೆಂದು ಹೆಸರಿಸಬಹುದಾದ ಬಹುಸಂಖ್ಯೆಯ ಹತಭಾಗ್ಯರನ್ನು ಒಳಗೊಂಡಿಲ್ಲ. ಅಂಬೇಡ್ಕರ್ ಈ ಕಾರಣದಿಂದಲೇ, ಈ ವರ್ಗ ಮತ್ತು ಸಮುದಾಯಗಳನ್ನು ಪ್ರತಿನಿಧಿಸುವ ಸೋಶಿಯಲಿಸ್ಟ್ ತತ್ವ ಚಿಂತನೆಗಳನ್ನು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಅಳವಡಿಸಿದ್ದರು. ಬಹುಶ: ಅಂಬೇಡ್ಕರ್ ಅವರಿಗೆ ಅತಿ ಮೆಚ್ಚಿನ ಸಂವಿಧಾನದ ಒಂದು ಆಯಾಮದಲ್ಲಿ ಅದು ಒಂದಾಗಿತ್ತು. ಅವರೇ ಹೇಳಿದಂತೆ, 'ರಾಜ್ಯ ನಿರ್ದೇಶಕ ತತ್ವ ರಾಜಕೀಯ ಪ್ರಜಾಸತ್ತೆಯನ್ನು ನಿಯಂತ್ರಿಸುವ ಮತ್ತು ಪ್ರತೀ ಸರ್ಕಾರವೂ ಕೂಡಾ ಆರ್ಥಿಕ–ಸಾಮಾಜಿಕ ಪ್ರಜಾಸತ್ತೆಯನ್ನು ಸಾಧಿಸುವಲ್ಲಿನ ಕೀಲಿ ಕೈಯಾಗಿದೆ'.

ಆದರೆ ದುರಂತವೆಂದರೆ ಅಂಬೇಡ್ಕರ್ ಕನಸಾದ ಈ ಆಲೋಚನೆಯನ್ನು ಸ್ವತಂತ್ರ ಭಾರತದಲ್ಲಿ ಸಂಪೂರ್ಣ ಸೋಲಿಸಲಾಯ್ತು. ಘನ ಸೋಶಿಯಲಿಸ್ಟ್ ಹಿನ್ನೆಲೆಯಿಂದ ಬಂದಿದ್ದ ನೆಹರೂ ಕೂಡಾ ಇದಕ್ಕೆ ಅಪವಾದವಾಗಲಿಲ್ಲ. ನೆಹರೂ ಸಮಾಜವಾದ, ಭಾರತದಲ್ಲಿ ನಿಜವಾದ ಸಮಾಜವಾದೀ ಪ್ರಜಾಸತ್ತೆಯನ್ನು ಸೋಲಿಸಲು ಇದ್ದ ಪ್ರಮುಖ ಕಾರಣವೂ ಆಯಿತು. ಈ ಕಾರಣದಿಂದಲೇ ಭಾರತ, ಅತಿ ದೊಡ್ಡ ಡೆಮಾಕ್ರಸಿ ಎಂಬ ಆತ್ಮರತಿಯೊಂದಿಗೆ ಅರೆಬೆಂದಾವಸ್ಥೆಯನ್ನು ಹೊಂದಿತು. ಅಂಬೇಡ್ಕರ್ ತಮ್ಮ ಸಮಾಜವಾದೀ ಪ್ರಜಾಸತ್ತೆಯ ತಾತ್ವಿಕ ಆಶಯಗಳನ್ನು ಸಂವಿಧಾನ ಸಭೆಯಲ್ಲಿ ತಾವು ಮಂಡಿಸಿದ ಪ್ರಸಿದ್ಧ 'ಸ್ಟೇಟ್ಸ್ ಅಂಡ್ ಮೈನಾರಿಟೀಸ್' ಎಂಬ ಆಶಯ ಭಾಷಣದಲ್ಲಿ ಅದರ ಮುಖ್ಯ ಆಶಯವೇ ರಾಜ್ಯ ನಿರ್ದೇಶಕ ತತ್ವಗಳು ಎನ್ನುವ ರೀತಿಯಲ್ಲಿ ಮಂಡಿಸುತ್ತಾರೆ. ಆದರೆ ದುರಂತವೆಂದರೆ ಸ್ವತಂತ್ರ ಭಾರತದ ಯಾವ ರಾಜ್ಯವೂ ರಾಜಕೀಯ ವ್ಯವಸ್ಥೆಯೂ ಕೂಡಾ ಅಂಬೇಡ್ಕರ್ ಸಮಾಜವಾದೀ ಆಶಯದ ದ್ಯೋತಕವಾದ ನಿರ್ದೇಶಕ ತತ್ವಗಳನ್ನು ಮಾನ್ಯ ಮಾಡಲಿಲ್ಲ. ಸಾಮಾಜಿಕ ನ್ಯಾಯ ಮತ್ತು ಒಳಗೊಳ್ಳುವ ಪ್ರಜಾಸತ್ತೆಯನ್ನು ಈ ಮೂಲಕ ಸಾಧಿಸಬಹುದಾಗಿತ್ತಾದರೂ ಕೂಡಾ ಇವುಗಳನ್ನು ಯಾರೂ ನ್ಯಾಯಾಲಯಗಳ ಮೇಲೇರಿ ಪ್ರಶ್ನಿಸುವಂತಿಲ್ಲ. ಸಂವಿಧಾನ, ರಾಜಕೀಯ ಬದುಕು ಮತ್ತು ದೈನಂದಿನ ಪ್ರಜಾಸತ್ತೆಯ ಅನುಭವವಾಗಬೇಕಿದ್ದ ದೂರದರ್ಶಿತ್ವದ, ಮತ್ತು ಒಳಗೊಳ್ಳುವ ನೆಲೆಯ, ಒಂದು ನಿಜವಾದ ಪ್ರತಿನಧೀಯ ದೃಷ್ಟಿ ಮತ್ತು ಅನುಭವವನ್ನು ಈ ಮೂಲಕ ಭಾರತದಲ್ಲಿ ನಿರಾಕರಿಸಲಾಗಿದೆ. ಈ

**ಅಂಬೇಡ್ಕರ್ ತಮ್ಮ ಸಮಾಜವಾದೀ ಪ್ರಜಾಸತ್ತೆಯನ್ನು, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳು ಸರಿಸಮವಾಗಿ ಸಮನ್ವಯ ಮತ್ತು ಪ್ರತಿನಿಧಿತಗೊಂಡ ಬಗೆಯೊಂದೇ ತಿಳಿಯುತ್ತಾರೆ. ಇದರ ಮೂರೂ ನೆಲೆಗಳೂ ಅತಿ ಪ್ರಮುಖವೆಂದೂ, ರಾಜಕೀಯ ಪ್ರಜಾಸತ್ತೆಯ ವಿಕ್ರಮ, ಉಳಿದ ನೆಲೆಗಳನ್ನು ವೈಚಾರಿಕವಾಗಿ ಹಾಗೂ ಅನುಭವದ ನೆಲೆಯಿಂದ ಸೋಲಿಸುತ್ತದೆಯೆಂದೂ ಘಂಟಾಘೋಷವಾಗಿ ಹೇಳಿದ್ದರು. ಬಹುಶ ಅಂತಹ ಊಹೆ ಇಂದು ಸತ್ಯವಾಗಿದೆ. ಭಾರತದ ಪ್ರಜಾಸತ್ತೆ ಬರೀ ಒಂದು ಮತದಾನದ ದಿನದಂದು ಕೈ ಬೆರಳಿಗೆ ಶಾಯಿ ಹಾಕಿಸಿಕೊಂಡು ಸಂಭ್ರಮಿಸಿ, ನಂತರದ 5 ವರ್ಷಗಳಲ್ಲಿ ತಾವು ಆರಿಸಿದ ಪ್ರತಿನಿಧಿ ಮತ್ತು ಪ್ರಜಾಸತ್ತೆಯನ್ನೂ ನೋಡದ ಮತ್ತು ಅನುಭವ ಸಾಧಿಸದ ಸ್ಥಿತಿಯಾಗಿದೆ.**

ಕಾರಣದಿಂದಲೇನೇ ಸ್ವತಂತ್ರ ಭಾರತದಲ್ಲಿ ಪ್ರಜಾಸತ್ತೆ ಬೆಳೆಯಲೂ ಇಲ್ಲ ಮತ್ತು ಹಾಳಾಗಲೂ ಇಲ್ಲ. ಆದರೆ ಅದು ಟೋಪಿ–ಶಾಯಿ–ಆಶ್ವಾಸನೆಯ ದುರಂತ ಮತ್ತು ವ್ಯಂಗ್ಯದ ಪ್ರಕರಣ ಆಗಿ ಇಂದಿಗೂ ಮುಂದುವರಿಯುತ್ತಿದೆ. ಮತ್ತದೇ ಅಂಬೇಡ್ಕರ್ ಹೇಳಿರುವ ಪ್ರಜಾಸತ್ತೆಯ ವೈರುಧ್ಯ ಮತ್ತು ಬಿಕ್ಕಟ್ಟು ಮುಂದುವರಿಯುತ್ತಿದೆ.

ಇಷ್ಟಾಗ್ಯೂ ಕೂಡಾ ಭಾರತದಲ್ಲಿನ ಪ್ರಜಾಸತ್ತೆಯ ಭವಿಷ್ಯ ಸಂಪೂರ್ಣ ನಿರಾಶಾದಾಯಕ ಎನ್ನುವಂತಿಲ್ಲ. ಆದರೆ ಅದು ಸಮಾಜವಾದದ ಸಾಮಾಜಿಕ ಬದುಕನ್ನು ಸಾಧಿಸಿ ಪ್ರಜಾಸತ್ತೆಯನ್ನು ಸಾಧಿಸುತ್ತದೆ ಎನ್ನುವ ಹಾಗಿಲ್ಲವಾದರೂ ಕೂಡಾ ಕೆಲವು ಭರವಸೆಯ ಅನುಭವಗಳು ಮಿಂಚಾಗಿ ಮುಖ್ಯವಾಗುತ್ತವೆ. ಭಾರತದ ಪ್ರಜಾಸತ್ತೆಯು ಇಂದು ಹೊಸ ಸಮಸ್ಯೆಗಳನ್ನು ಕೂಡಾ ಎದುರಿಸುತ್ತದೆ. ಉಗ್ರ ಬಲಪಂಥತೆ, ಧರ್ಮರಾಜಕಾರಣ, ನವ ಬಂಡವಾಳಶಾಹೀ, ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ಮಿಲಿಟರಿಸಂನ ಏಳ್ಗೆ ಹಾಗೂ ರಾಜಕೀಯ ಪಕ್ಷಗಳ ಅಧಿಕಾರದಾಹ ಮತ್ತು ಭ್ರಷ್ಟಾಚಾರಗಳು ಅವುಗಳಲ್ಲಿ ಪ್ರಮುಖವಾದವುಗಳು. ಇದೇ ಹೊತ್ತಿಗೆ ಭಾರತದಲ್ಲಿ ಪ್ರಜಾಸತ್ತಾತ್ಮಕ ಕಾಲ–ದೇಶ ಮತ್ತು ಸಂದರ್ಭಗಳೂ ಹೆಚ್ಚುತ್ತಿವೆ. ಇದರ ಜತೆಯಲ್ಲಿಯೇ ವಿದ್ಯಾರ್ಥಿ, ರೈತ, ಕಾರ್ಮಿಕ ಮತ್ತು ಬುಡಕಟ್ಟು ಚಳುವಳಿಗಳಂತಹ ವೈವಿಧ್ಯದ ಸಾಮಾಜಿಕ ಚಳುವಳಿಗಳು, ಪಂಚಾಯತ್‌ರಾಜ್ ವ್ಯವಸ್ಥೆಯ ಸಕ್ರಿಯತೆ ಮತ್ತು ತಿದ್ದುಪಡಿಗಳು, ಆಧುನಿಕ ಸಂವಹನ ಸಾಧನಗಳು, ಸೋಶಿಯಲ್ ಮೀಡಿಯಾಗಳು ಮುಂತಾದವು ಇಂತಹ ಸಾಧ್ಯತೆಗಳಾಗಿ ನಮ್ಮ ಮುಂದೆ ಕಾಣಿಸುತ್ತದೆ. ಇದರ ಜತೆಗೆ ಮಾಹಿತಿ ಹಕ್ಕು ಕಾಯ್ದೆಯ ಸಕ್ರಿಯತೆ, ರಾಜಕಾರಣ ಮತ್ತು ಸಾರ್ವಜನಿಕ ಬದುಕಿನ ವಿಭಿನ್ನ ಆಯಾಮಗಳಲ್ಲಿ ಮಹಿಳೆಯ ಪ್ರತಿನಿಧಿತ್ವ, ಸ್ಥಳೀಯ ಸರ್ಕಾರಗಳಲ್ಲಿ ಸಮುದಾಯಗಳ ಭಾಗೀದಾರಿಕೆ, ಅಂಚಿಗೆ ಸರಿದ ಸಮುದಾಯಗಳಲ್ಲೂ ಇಳಿಯುತ್ತಿರುವ ಮೂಲಭೂತ ಅವಶ್ಯಕತೆಗಳು, ಶಿಕ್ಷಣ ಮತ್ತು ಇದೆಲ್ಲಕ್ಕಿಂತ ಹೆಚ್ಚಾಗಿ ಪ್ರಜಾತಂತ್ರೀಯ ಪ್ರಕ್ರಿಯೆಗಳಲ್ಲಿ ಸಾಮಾನ್ಯ ಜನರು ಹೆಚ್ಚು ಹೆಚ್ಚು ಭಾಗವಹಿಸುತ್ತಿರುವುದೇ ಮುಂತಾದ ಅನುಭವಗಳು ಭಾರತ ಒಂದು ಅಸಹಜ ರಾಷ್ಟ್ರ ಮತ್ತು ಆಶಾವಾದೀ ರಾಷ್ಟ್ರ ಎಂಬ ಅನುಭವವನ್ನೂ ಮನಗಾಣಿಸುತ್ತಿವೆ.

ಬಹುಶ: ಇವುಗಳೇ ಒಂದು ರೀತಿ ಭವಿಷ್ಯದ ಅಲೆಗಳಾಗಿ ಗೋಚರಿಸುತ್ತಿವೆ. ಬಹುಶ: ಅಂಬೇಡ್ಕರ್ ಅವರು ಯೋಚಿಸಿದ ಕ್ರಾಂತಿಕಾರಕ ಪ್ರಜಾಸತ್ತೆಯನ್ನು ಮಗದೊಮ್ಮೆ ಹೊಸ ಸ್ವರೂಪದಲ್ಲಿ ಅವಿಷ್ಕರಿಸಬೇಕಿದೆ. ವರ್ತಮಾನದ ವಿದ್ಯಮಾನಗಳೆಡೆಯಲ್ಲಿ ನಾವದನ್ನು ಪುನರ್‌ಶೋಧಿಸಬೇಕಿದೆ. ಅಂಬೇಡ್ಕರ್ ಅಂತೂ ನಾವಿರುವ ಸಮಯಕ್ಕಿಂತ ತೀರಾ ಮುಂದಿದ್ದರು. ನಮ್ಮ ಇಂದಿನ ಮತ್ತು ಮುಂದಿನ ಪ್ರಜಾಸತ್ತೆ ಬರೀ ಸಾಂವಿಧಾನಿಕ ಮತ್ತು ರಾಜಕೀಯ ಪ್ರಜಾಸತ್ತೆಯಷ್ಟೇ ಆಗಿರಬಾರದು. ಇದಕ್ಕಾಗಿ ನಾವು ಹೊಸ ರೀತಿಯ ಪ್ರಜಾತಾಂತ್ರಿಕ ಆಚರಣೆಗಳನ್ನು ಶೋಧಿಸಬೇಕಾಗಿದೆ, ಮತ್ತಂತಹ ಆಚರಣೆಗಳಲ್ಲಿ ಸಾಮಾನ್ಯ ಜನರು ಹೆಚ್ಚು ಭಾಗವಹಿಸಿ ಅದರ ಜತೆಗೆ ಆರ್ಥಿಕ ಪ್ರಜಾಸತ್ತೆಯ ಭಾಗಾಳುಗಳೂ ಕೂಡಾ ಆಗಬೇಕು. ಪುನ: ಇಂತಹ ಭಾಗವಹಿಸುವಿಕೆ ವ್ಯಕ್ತಿಗತ ನೆಲೆಯಿಂದ ಸಾಮುದಾಯಿಕ ಹಾಗೂ ಸಂಘಟಿತ ನೆಲೆಗೂ ವಿಸ್ತರಣೆ ಕಂಡುಕೊಳ್ಳಬೇಕು. ಅದು ಒಂದು ರೀತಿ ಸಾಂಸ್ಥಿಕ–ಸಂಘಟಿತ ಆ್ಯಕ್ಟಿವಿಸಂನ ನೆಲೆಯನ್ನೂ ಕೂಡಾ ಕಂಡುಕೊಳ್ಳಬೇಕಾಗಿದೆ. ಅದರ ವಾದಗಳು ಗಟ್ಟಿಯಾಗಬೇಕು, ಸಾರ್ವಜನಿಕ ಅಭಿಪ್ರಾಯದ ಶಕ್ತಿ ಸಂಚಯ ಹೆಚ್ಚಬೇಕು, ಸಂವಹನ ಸಾಧ್ಯತೆಗಳು ಮತ್ತದರ ಪರಿಣಾಮಕಾರಿತನಗಳೂ ಹೆಚ್ಚಬೇಕು. ಇದೆಲ್ಲದರ ಜತೆಗೆ ಅಂಬೇಡ್ಕರ್ ಅವರೇ ಹೇಳಿದ ನೀತಿ ಮತ್ತು ಸಾಮಾಜಿಕ ನೀತಿ ಕೂಡಾ ಹೆಚ್ಚಿ ಒದಗಬೇಕು. ಜನರ ಬದುಕಿನಲ್ಲೂ ಕೂಡಾ ಕ್ರಾಂತಿಕಾರಕ ಮನೋಭಾವ ಮೂಡಿ ಬಂದು ವಿಷಮತೆ ಮತ್ತು ತರತಮಗಳು ಸಾಯಬೇಕು. ಲಿಂಗಸಂವೇದನೆ ಮತ್ತು ಸಮಾನತೆ, ಕಾಶ್ಮೀರದ ಗಾಯ–ಕ್ಕೆ ಮದ್ದು ಶಾಂತಿ, ಸಾರ್ವತ್ರಿಕ ಶಿಕ್ಷಣ, ಭ್ರಷ್ಟಾಚಾರ ನಿರ್ಮೂಲನೆ, ನಿಶ್ಶಸ್ತ್ರೀಕರಣ, ಹಸಿವಿನ ವಿರುದ್ಧ ಸಮರ ಮುಂತಾದವೇ ಇಂತಹ ನಡೆಗಳಾಗಬೇಕು. ಒಂದು ದೇಶದ ಪ್ರಜಾಸತ್ತೆ ತೀರಾ ಡಬ್ಲ್ಯು.ಟಿ.ಒ, ಬ್ರೆಟ್ಟನ್ ವುಡ್ಸ್ ಮುಂತಾದ ಅಂತಾರಾಷ್ಟ್ರೀಯ ರಾಜಕಾರಣ ಮತ್ತು ಆರ್ಥಿಕತೆಯನ್ನು ನಿರಾಕರಿಸುತ್ತಾ, ಭಾರತದ್ದೇ ಆದ ಜನರ ಮತ್ತು ಸಮುದಾಯದ ಕಲ್ಯಾಣ ಮಾರ್ಗವಾದ ರಾಜ್ಯ ನಿರ್ದೇಶಕ ತತ್ವಗಳನ್ನೂ ರಾಷ್ಟ್ರದ, ಅತ್ಯಂತ ಮೂಲ ತತ್ವಗಳೆಂದು ಘೋಷಿಸುವ ನೆಲೆ ಮತ್ತು ಅನಿವಾರ್ಯತೆಯನ್ನು ಕಂಡುಕೊಂಡಾಗಲಷ್ಟೇ ಭಾರತ ಮತ್ತು ಪ್ರಜಾಸತ್ತೆ ಭವಿಷ್ಯವನ್ನು ಕಂಡುಕೊಂಡೀತು. □





‘ಆತ್ಮಹತ್ಯೆಯ ದಾರಿ ಹಿಡಿದಿರುವ/ಆತ್ಮಹತ್ಯೆ ಮಾಡಿಕೊಂಡಿರುವ ರೈತ ಮನೆತನಗಳನ್ನು ಅಧ್ಯಯನಕ್ಕೊಳಪಡಿಸಿದರೆ, ಹೆಚ್ಚಾಗಿ ಸಣ್ಣ ಸಣ್ಣ ರೈತರು ಅಂದರೆ ತುಂಡುಭೂಮಿ ಹೊಂದಿರುವವರು ಎಂಬುದು ಸ್ಪಷ್ಟವಾಗಬಹುದು. ರೈತರ ಸಾಲ ಮನ್ನಾದಂತ ಯೋಜನೆಗಳೂ ಕೂಡ ರೈತರಿಗೆ ಮುಂದಿನ ಭವಿಷ್ಯದ ಭದ್ರತೆಯನ್ನು ಒದಗಿಸಿಕೊಡುವ ಭದ್ರತೆಯ ಭಾವವನ್ನು ತುಂಬುತ್ತಿಲ್ಲ. ದೇಶಕ್ಕೆ ಅನ್ನ ನೀಡುವ ರೈತ ಆತಂಕದ ಸ್ಥಿತಿಯಲ್ಲಿರುವಾಗ ಅಂಬೇಡ್ಕರ್‌ರ “ರಾಜಕೀಯ ಪ್ರಜಾಪ್ರಭುತ್ವ ಸಹಿತವಾದ ಪ್ರಭುತ್ವ ನಿಯಂತ್ರಿತ ಸಮಾಜವಾದ” ಮುನ್ನೆಲೆಗೆ ಬಂದರೆ ಕೃಷಿಯೂ ಬದುಕೀತು; ಕೃಷಿಕನೂ ಬದುಕುವನು’

# ಭಾರತದ ಕೃಷಿ ಮತ್ತು ಡಾ.ಅಂಬೇಡ್ಕರ್



ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವ ಅನಸೂಯ ಕಾಂಬಳೆ ಅವರು, ಬೆಳಗಾವ ಜಿಲ್ಲೆ ರಾಯಬಾಗ ತಾಲೂಕು ಖೆಮಲಾಪುರದವರು. ಕನ್ನಡ ಕಾವ್ಯವನ್ನು ಅನುಲಕ್ಷಿಸಿ ‘ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ’ ಕುರಿತು ಸಂಶೋಧನೆ ಮಾಡಿದ್ದಾರೆ. ಮುಳ್ಳುಕಂಟಿಯ ನಡುವೆ, ಮತ್ಸ್ಯಗಂಧಿಯ ಹಾಡು ಕವನ ಸಂಕಲನಗಳು, ‘ಹರಿದ ಪತ್ರ’ ಕಥಾ ಸಂಕಲನವನ್ನು ಒಳಗೊಂಡಂತೆ ಐದು ಪುಸ್ತಕಗಳು ಪ್ರಕಟಿಸಿದ್ದಾರೆ. ಅಂಬೇಡ್ಕರ್ ಚಿಂತನೆಯನ್ನು ಹೆಣ್ಣಿನ ಕಣ್ಣೋಟದ ಮೂಲಕ ಪ್ರಖರವಾಗಿ ವಿಶ್ಲೇಷಿಸಬಲ್ಲರು.

**ಅನಸೂಯ ಕಾಂಬಳೆ**
**Email: kanasuya70@gmail.com**

ದೇಶವನ್ನೇ ಬೆಚ್ಚಿ ಬೀಳಿಸುವ ಸಂಗತಿಗಳಲ್ಲಿ ಪ್ರಮುಖವಾದವು ದಿನ ಬೆಳಗಾದರೆ ಕೇಳುವ ರೈತರ ಆತ್ಮಹತ್ಯೆಗಳು. ನಮ್ಮ ದೇಶದ ಅತ್ಯಂತ ದೊಡ್ಡ ಕ್ಷೇತ್ರವೊಂದರಲ್ಲಿ ನಡೆಯುತ್ತಿರುವ ದೊಡ್ಡ ಪ್ರಮಾಣದ ಆತ್ಮಹತ್ಯೆಗಳು ಎಂದು ವಿಶ್ಲೇಷಿಸಲ್ಪಡುತ್ತಿದ್ದರೂ ಅದರ ವಿರುದ್ಧ ಅಂತ ಪ್ರತಿರೋಧದ ಧ್ವನಿಗಳೇನೂ ಕೇಳುತ್ತಿಲ್ಲ. ಬರಬರುತ್ತ ಅದು ಸಾಮಾನ್ಯವೆಂಬಂತೆ ಪಕ್ಕಕ್ಕೆ ಸರಿಯುತ್ತಿದೆ. ಅನ್ನದಾತ, ನೇಗಿಲಯೋಗಿ ಎಂಬೆಲ್ಲ ವಿಶೇಷಣಗಳು ಎದೆಭಾರದ ಪದಕದಂತೆ ಅನಿಸಿದರೂ ಅದರೊಳಗಿನ ಸಾಂಸ್ಕೃತಿಕ ಅನನ್ಯತೆಯನ್ನು ಮರೆಯಬಾರದು. ಕೃಷಿ ಪ್ರಧಾನವಾದ ದೇಶದಲ್ಲಿ ಕೃಷಿಕನ ಬದುಕುವ ಹಕ್ಕನ್ನು ಕಿತ್ತುಕೊಳ್ಳುತ್ತಿರುವ ಮೂಲದ ಶೋಧವನ್ನು ಮಾಡಬೇಕಿದೆ. ಸಾಲದ ಹಿಂದಿನ ತಂತ್ರಗಳನ್ನು ಅರಿಯಬೇಕಿದೆ. ರೈತನ ಸಾವು ಕೃಷಿಯ ಸಾವಾಗದಂತೆ ನೋಡಿಕೊಳ್ಳುವ ಬಹುದೊಡ್ಡ ಜವಾಬ್ದಾರಿ ಇಂದಿನದಾಗಿದೆ.

ಸ್ವಾತಂತ್ರ್ಯಾನಂತರದ ಭಾರತ ಹೇಗಿರಬೇಕಿತ್ತು ಎಂದು ಮಾತನಾಡುತ್ತ ಕುವೆಂಪುರವರು–“ಕೃಷಿ ಪ್ರಧಾನವಾದ ಭಾರತಕ್ಕೆ ಕೃಷಿ ಪ್ರಧಾನವಾದ ಯೋಜನೆಗಳಿಗೆ ಆಧ್ಯತೆ ನೀಡದೆ ಪಾಶ್ಚಾತ್ಯೀಕರಣದಿಂದಾಗಿ ಕೈಗಾರಿಕೆಗಳನ್ನಾಧರಿಸಿ ಯೋಜನೆಗಳು ರೂಪುಗೊಂಡವು. ಹಾಗೂ ಪಂಚವಾರ್ಷಿಕ ಯೋಜನೆಗಳು ಎತ್ತ ಸಾಗಿದವು... ದೇಶದ ಇಂದಿನ ಸ್ಥಿತಿಗೆ ಅಂದಿನ ಯೋಜನೆಗಳು ಹೇಗೆ ಅಭಿವೃದ್ಧಿಗೆ ಮಾರಕವಾದವು” ಎಂದು ಆತಂಕ ವ್ಯಕ್ತಪಡಿಸಿದ್ದು, ಇಂದಿನ ಸ್ಥಿತಿಗೆ ಅಂದಿನ ರಾಷ್ಟ್ರದ ಅಧಿಕಾರ ವಹಿಸಿಕೊಂಡವರ ಹಾಗೂ ನೀತಿ ನಿರೂಪಕರ ಮುಂದಾಲೋಚನೆಗಳಿಲ್ಲದ ನೀತಿಯಲ್ಲಿವೆ ಎಂಬುದರತ್ತ ಬೆರಳು ಮಾಡುತ್ತವೆ. ಆದರೂ ರೈತರ ಆತ್ಮಹತ್ಯೆಯ ಅಂಕಿಸಂಖ್ಯೆಗಳು ಬೆಚ್ಚಿ ಬೀಳಿಸುತ್ತಿವೆಯಾದರೂ ಇವು ಜನ ಬದುಕಿನ ಸಮಸ್ಯೆಗಳಾಗಿ ಮುನ್ನಲೆಗೆ ಬರುತ್ತಿಲ್ಲ.

ಇಂದಿನ ಜಾಗತೀಕರಣದ ಸಂದರ್ಭದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿರುವಾಗ ನಗರದತ್ತ ಮುಖಮಾಡಿರುವ ಯುವಪಡೆ ಕೃಷಿಯ ಕಡೆ ವಹಿಸಿರುವ ನಿರ್ಲಕ್ಷ್ಯವೂ ಬಹುದೊಡ್ಡ

ಕಾರಣಗಳಲ್ಲಿ ಒಂದಾಗಿರಬಹುದು. ಜೊತೆಗೆ ಕೃಷಿ ಮತ್ತು ಕೃಷಿಕನ ಕುರಿತ ಅವಜ್ಞತೆಯ ಈ ಸಮಯದಲ್ಲಿ ಕೃಷಿಯ ಇತಿಹಾಸ ಮತ್ತು ಕೃಷಿಯ ಕುರಿತಾದ ವೈಜ್ಞಾನಿಕ ಚಿಂತನೆಗಳ ಅರಿವು ಕೂಡ ಮಹತ್ವದ್ದಾಗಿದೆ.

**ಕೃಷಿ ಮತ್ತು ಮನುಷ್ಯನ ಸಾತತ್ಯ ಸಂಬಂಧ:**

ನಾಗರಿಕತೆಯ ವಿಕಾಸದಲ್ಲಿ ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಯತ್ತ ಮುನ್ನಡೆದ ಹಂತವನ್ನು ಬಹುದೊಡ್ಡ ವೈಜ್ಞಾನಿಕ ಆವಿಷ್ಕಾರದ ಯುಗವೆಂದೇ ಪರಿಗಣಿಸಲಾಗಿದೆ. ಮನುಷ್ಯ ತನ್ನ ಆಹಾರಕ್ಕಾಗಿ ಬಳಸುತ್ತಿದ್ದ ಪ್ರಾಣಿಗಳಲ್ಲಿ ಕೆಲವನ್ನು ಪಳಗಿಸಿಕೊಂಡು ಆಹಾರೋತ್ಪನ್ನ ಬೆಳೆಗಳನ್ನು ಬೆಳೆಯಲು ಭೂಮಿಯನ್ನು ಹದಗೊಳಿಸಿಕೊಳ್ಳಲು ಬಳಕೆ ಮಾಡತೊಡಗಿದ. ಮನುಷ್ಯನ ಶ್ರಮದ ಜೊತೆ ಈ ಪ್ರಾಣಿಗಳ ಬಳಕೆ ಬುದ್ಧನ ಕಾಲದಲ್ಲಿ ಆರಂಭವಾಯಿತು ಎಂದು ಖಚಿತವಾಗಿ ಹೇಳಲಾಗುತ್ತಿದೆ. ಬೆಟ್ಟ-ಗುಡ್ಡ-ಕಣಿವೆಗಳನ್ನು ಕಡಿದು, ಮರಗಿಡ-ಮುಳ್ಳುಕಂಟಿಗಳನ್ನು ಕಡಿದು ಸಮಮಾಡಿ ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಿದ್ದು ಕೂಡ ಅಂದಿನ ನವ ತಂತ್ರಜ್ಞಾನವೇ ಅನಿಸಿಕೊಂಡಿದೆ.

ಕೃಷಿಗೆ ಮಾನವನ ಅಪಾರವಾದ ದೈಹಿಕ ಶ್ರಮ ಬೇಕಾದಂತೆ ಅಪಾರವಾದ ವಿಜ್ಞಾನದ ಅಗತ್ಯವೂ ಇದೆ. ಹೀಗಾಗಿ ಕೃಷಿ ಸಂಬಂಧಿತವಾದ "ಅಗತ್ಯವಾದ ಉಪಕರಣಗಳು, ಸಾಧನಗಳು, ತಾಂತ್ರಿಕ ಪರಿಜ್ಞಾನವನ್ನು ಅಭಿವೃದ್ಧಿ ಮಾಡಿಕೊಳ್ಳುವುದು ಕೂಡಾ ಇದರ ಒಂದು ಭಾಗವೇ ಆಗಿತ್ತು. ಹೀಗೆ ಭೂಮಿಯನ್ನೇ ಆಹಾರ ಬೆಳೆಸುವುದಕ್ಕೆ ಅನುಕೂಲಕರವಾಗಿ ಪರಿವರ್ತಿಸುವುದಕ್ಕೆ, ಬೆಳೆಗಳನ್ನು ಬೆಳೆಸುವುದಕ್ಕೆ ಉಪಕರಿಸುವ ಶಾಸ್ತ್ರವನ್ನೇ ನಾವು ವ್ಯವಸಾಯ ಅನ್ನುತ್ತಿದ್ದೇವೆ. ನಾಗರಿಕತೆಗಳೆಲ್ಲವುಗಳಲ್ಲೂ ಲಿಪಿಗಿಂತಲೂ ಮೊದಲೇ ಈ ವ್ಯವಸಾಯ ಹುಟ್ಟಿದೆ. ವ್ಯವಸಾಯವೆಂಬುದು ಸಹಜವಾಗಿ, ಪ್ರಕೃತಿ ಸಿದ್ಧವಾಗಿ ಅಭಿವೃದ್ಧಿ ಹೊಂದಿದ್ದೇ ಅಲ್ಲ. ಖಚಿತವಾಗಿ ಇದೊಂದು ಮಾನವನು 'ಕಂಡು ಹಿಡಿದ ಕ್ರಮ'. ಕ್ರಿ.ಪೂ.8000-3500ರ ನಡುವೆ ಮಾನವರು ಜೀವನೋಪಾಯಕ್ಕಾಗಿ ಹೆಚ್ಚಾಗಿ ಬೆಳೆಗಳನ್ನು ಬೆಳೆಯುವುದು, ಪ್ರಣಿಗಳನ್ನು ಸಾಕುವುದರ ಕಡೆ ಹೊರಳಿದರು. ಇದು ನೇಗಿಲಿನಿಂದ ಉಳುವ ವಿಜ್ಞಾನ" ಎಂದು ಕೆಂಚ ಐಲಯ್ಯನವರು ಕರೆದಿದ್ದಾರೆ. ಹೀಗಾಗಿ ಮನುಷ್ಯ ಮತ್ತು ಪ್ರಾಣಿಗಳನ್ನೇ ಅವಲಂಬಿಸಿದ್ದ ಕೃಷಿ ಮಾನವನ ಸ್ವಾವಲಂಬಿ, ಸ್ವಾಯುತ್ತತೆಯ ಜೀವನದ ಮಾರ್ಗವಾಗಿತ್ತು.

ನೇಗಿಲನ್ನು ಕಂಡುಹಿಡಿದದ್ದೇ ಕೃಷಿಕ್ರಾಂತಿಗೆ ಅಂದಿನ ವಿಜ್ಞಾನ ನೀಡಿದ ಕೊಡುಗೆ ಆಗಿತ್ತು. ನೇಗಿಲಿನ ಚರಿತ್ರೆಯೊಂದಿಗೆ ಮಾನವ ಇತಿಹಾಸದ ಚರಿತ್ರೆಯೂ ತೆರೆದು-ಕೊಂಡಿದೆ. ಯುರೋಪಿನಂತ ಪಾಶ್ಚಾತ್ಯ ರಾಷ್ಟ್ರಗಳು ಕುದುರೆಗಳನ್ನು ಕೃಷಿಗೆ ಬಳಸಿದರೆ ಭಾರತದಲ್ಲಿ ಎತ್ತು ಮತ್ತು ಕೋಣಗಳನ್ನು ಬಳಸುವ ಮೂಲಕ ಪಶುಪಾಲನಾ ಸಂಸ್ಕೃತಿಯೂ ಬೆಳೆದುಬಂತು. ಬರಬರುತ್ತಾ ಆಹಾರೋತ್ಪನ್ನ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಮಾರ್ಪಟ್ಟಾಗ ಕೃಷಿಕರ ಬದುಕು ಬಿಕ್ಕಟ್ಟುಗಳನ್ನು ಎದುರಿಸತೊಡಗಿತು.

**ಮಾರುಕಟ್ಟೆ ಆಧಾರಿತ ಕೃಷಿ ನೀತಿ:**

ಕೃಷಿಯ ಬದುಕು ಮಾನವನ ಅಂತಸ್ತುಗಳಲ್ಲಿ ಬದಲಾವಣೆಯನ್ನು ತಂದಿತು. ತಂತ್ರಜ್ಞಾನ ಬದಲಾದಂತೆ ಆಹಾರದ ಮೂಲವಾಗಿದ್ದ ವ್ಯವಸಾಯವು ವಾಣಿಜ್ಯೀಕರಣದತ್ತ ಮುಖಮಾಡಿತು. ಅದು 1990ರ ದಶಕವು ಮಾರುಕಟ್ಟೆ ಆಧಾರಿತ ಯೋಜನೆಗಳನ್ನು ಅನುಷ್ಠಾನಕ್ಕೆ ತಂದ ಹಂತ. ಕೃಷಿಯು ಸಹ ಈ ಜಾಗತಿಕ ದಾಳಿಗೆ ಒಳಗಾಗದೇ ಇರಲು ಸಾಧ್ಯವಾಗಲಿಲ್ಲ. ಮಾನವನ ಆಹಾರದ ಬೆಳೆಗಳು ವಾಣಿಜ್ಯ ಬೆಳೆಗಳಾಗಿ ಮಾರ್ಪಾಡಾದವು. ರೈತನ ಎರಡು ತೋಳುಗಳಾಗಿದ್ದ ಕೃಷಿ ಕೂಲಿಕಾರರು ಮತ್ತು ಎತ್ತು (ಪ್ರಾಣಿಗಳು) ಗಳನ್ನು ಏಕಕಾಲಕ್ಕೆ ದೂರ ಇಡಲಾಯಿತು. ಮುಂದಿನ ಬೆಳೆಗಳಿಗಾಗಿ ಬೀಜಗಳನ್ನು ಹಿಡಿದಿಡುತ್ತಿದ್ದ ರೈತ "ಅಧಿಕ ಬೆಳೆ ಮತ್ತು ಸಮೃದ್ಧ ಫಸಲು" ಎಂದು ಸಾರಿಕೊಂಡ ಜಾಹೀರಾತುಗಳ ಬೆನ್ನು ಹತ್ತಿ ಬೀಜಗಳನ್ನು ಕೊಳ್ಳಲು ಮಾರುಕಟ್ಟೆಯತ್ತ ಮುಖ ಮಾಡಿದ. ರೈತ ಹಿಡಿದ ಬೀಜಗಳಿಗೆ ಮರುಉತ್ಪತ್ತಿ (ಪ್ರಜನನ ಶಕ್ತಿ) ಶಕ್ತಿ ಇದ್ದರೆ ಮಾರುಕಟ್ಟೆಯ ಬೀಜಗಳಿಗೆ ಪ್ರಜನನಶಕ್ತಿ ಇಲ್ಲ. ಪ್ರತಿ ವರ್ಷವೂ ಬೀಜಕ್ಕಾಗಿ ಮಾರುಕಟ್ಟೆಯನ್ನೇ ಅವಲಂಬಿಸಬೇಕು. ಅಷ್ಟೇ ಅಲ್ಲದೆ ಎತ್ತು-ಕೋಣಗಳ ಜಾಗದಲ್ಲಿ ಟ್ರ್ಯಾಕ್ಟರ್‌ನಂತ ಕೃಷಿಯೋಪಯೋಗಿ ಯಂತ್ರೋಪಕರಣಗಳು ಬಂದವು. ಮೇವು ತಿಂದು ಸೆಗಣಿ ಕೊಡುವ ಪ್ರಾಣಿಗಳು (ಕೊಟ್ಟಿಗೆ ಗೊಬ್ಬರ), ಹಾಲು-ಹೈನು ಕೊಡುವ ಆಕಳು, ಕಡಿಮೆ ಕೂಲಿಗೆ ದುಡಿಯುವ ಕೃಷಿ ಕೂಲಿಕಾರರು ಇವರನ್ನು ರೈತನಿಂದ ದೂರ ಸರಿಸುವ ಮೂಲಕ ಆಧುನಿಕ ತಂತ್ರಜ್ಞಾನ ರೈತನನ್ನು ಸ್ವಾವಲಂಬಿ ಬದುಕಿನಿಂದ ಮಾರುಕಟ್ಟೆ ಅವಲಂಬಿತ ಬದುಕಿನತ್ತ ಪಲ್ಲಟಗೊಳಿಸುವ ಮೂಲಕ ಕೃಷಿಯನ್ನು ಅಸಹಾಯಕ ಸ್ಥಿತಿ (ಐ.ಸಿ.ಯು) ಯಲ್ಲಿ ಇಟ್ಟಿತು. ಮಾರುಕಟೆಗಳಲ್ಲಿ ದಲ್ಲಾಳಿಗಳ ಹಾವಳಿಯಿಂದ ದುಡಿದ ಬೆವರಿನ ಬೆಲೆಯೂ ದಕ್ಕದಂತಾಗಿದೆ. ಇಂದು ಆಧುನಿಕ ತಂತ್ರಜ್ಞಾನದ ಅವಶ್ಯಕತೆ ಇದ್ದರೂ ತಂತ್ರಜ್ಞಾನದ ಅತಿ ಬಳಕೆ ಮಾನವನ ದೈಹಿಕ ಶ್ರಮವನ್ನು ನಿರಾಕರಿಸಿದ್ದಲ್ಲದೆ ಭೂಮಿಯ (ಮಣ್ಣಿನ) ಸತ್ವವನ್ನು ನಾಶಗೊಳಿಸುತ್ತಿರುವುದನ್ನು ಗಮನಿಸಬೇಕಿದೆ.

ಕೃಷಿಯ ಈ ಬಿಕ್ಕಟ್ಟಿನ ಸಂದರ್ಭವು ರೈತರನ್ನು ಬದುಕಿಸುವ ಚಿಂತಕರ ಚಿಂತನೆಗಳತ್ತ ಹೊರಳಬೇಕಿದೆ. ಅನೇಕ ಕೃಷಿ ತಜ್ಞರು ಅಧಿಕ ಉತ್ಪನ್ನದ ಬಗ್ಗೆ ಚಿಂತಿಸುತ್ತಿದ್ದಾರೆ ಹೊರತು ಪ್ರತಿನಿತ್ಯವೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಅನ್ನದಾತನತ್ತ ಹೆಚ್ಚಾಗಿ ಚಿಂತಿಸುತ್ತಿಲ್ಲ ಅನಿಸುತ್ತದೆ. ರೈತರ ಕುರಿತಾಗಿ ರೂಪುಗೊಳ್ಳುತ್ತಿರುವ ಯೋಜನೆಗಳು, ಬಜೆಟ್ ಕೇವಲ ಪ್ರಥಮ ಚಿಕಿತ್ಸೆಯಂತೆ ಕಾಣುತ್ತಿವೆ ಹೊರತು ಪೂರ್ಣ ಪ್ರಮಾಣದಲ್ಲಿ ಬದುಕುವ ದಾರಿಗಳನ್ನು ತೆರೆಯುತ್ತಿಲ್ಲ. ಇಳುವರಿಯೇ ಮುಖ್ಯವಾಗದೇ ಜೀವವೂ ಮುಖ್ಯವಾಗುವ ಯೋಜನೆಗಳನ್ನು ರೂಪಿಸಬೇಕಿದೆ. ಇಂಥ ಸಂದರ್ಭದಲ್ಲಿ ರೈತರನ್ನು ಮತ್ತು ಕೃಷಿಯನ್ನು ಕುರಿತ ಡಾ.ಅಂಬೇಡ್ಕರ್‌ರ ಚಿಂತನೆಗಳನ್ನು ಗಮನಿಸುವುದೊಳಿತು.

**ಕೃಷಿಯ ಕುರಿತು ಅಂಬೇಡ್ಕರ್‌ರ ಚಿಂತನೆಗಳು**

(ಪ್ರಭುತ್ವ ನಿಯಂತ್ರಿತ ಸಮಾಜವಾದ)

ದೇಶದ ಕಟ್ಟಕಡೆಯ ಶೋಷಿತ ಮನುಷ್ಯನಿಂದ ಹಿಡಿದು ಅತ್ಯಂತ ಮೇಲಿರುವ ಮನುಷ್ಯನ ಅಭಿವೃದ್ಧಿಯ ಕುರಿತು ಚಿಂತಿಸಿದ ಆಧುನಿಕ ಚಿಂತಕರಲ್ಲಿ ಡಾ. ಅಂಬೇಡ್ಕರ್ ಮೊದಲಿಗರು. ಎಲ್ಲ ಮನುಷ್ಯರಿಗೂ ಸಮಾನವಾದ ವ್ಯಕ್ತಿ ಗೌರವ ಮತ್ತು ಸಾಮಾಜಿಕ ಸ್ಥಾನಮಾನಗಳು ಇರಬೇಕೆಂದು ತಮ್ಮ ಬದುಕಿನುದ್ದಕ್ಕೂ ಹೋರಾಡಿದ, ಚಿಂತಿಸಿದ ಸಾಮಾಜಿಕ ನ್ಯಾಯದ ಪ್ರತಿಪಾದಕ, ಸಂವಿಧಾನದ ಶಿಲ್ಪಿ ಡಾ.ಅಂಬೇಡ್ಕರ್‌ರ ಕನಸಿನ ಸಂವಿಧಾನವೂ ಒಂದಿದೆ. ಅದು ಅವರ "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು" ಅನ್ನುವ ಕೃತಿಯಲ್ಲಿ ಪ್ರಕಟಗೊಂಡಿವೆ. "ಆರ್ಥಿಕ ಶೋಷಣೆಯ ವಿರುದ್ಧ ರಕ್ಷಣೆ" ಎಂದು ಕರೆದಿರುವ ಬಾಬಾಸಾಹೇಬರು 'ದೇಶದ ಕೃಷಿ, ಕೈಗಾರಿಕೆ, ಸೇವಾವಲಯಗಳ ಉತ್ಪಾದನೆ ಹಾಗೂ ವಿವರಣೆಯ ಸ್ವಾಮ್ಯವನ್ನು ಸಬಲೀಕರಿಸುವ ಪ್ರಕ್ರಿಯೆ. ಅದನ್ನು 'ರಾಜಕೀಯ ಪ್ರಜಾಪ್ರಭುತ್ವ ಸಹಿತವಾದ ಪ್ರಭುತ್ವ ನಿಯಂತ್ರಿತ ಸಮಾಜವಾದ' ಎಂದು ಕರೆದು ತಮ್ಮ ಸಾಮಾಜಿಕ ಆರ್ಥಿಕ ರಚನೆಯ ಮಾದರಿಯನ್ನು ಸಮರ್ಥಿಸಿದರು. ಖಾಸಗೀಕರಣವನ್ನು ತೀವ್ರವಾಗಿ ವಿರೋಧಿಸಿ ಅದು ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ ಎಂದರು.



ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸಬೇಕು

ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸಬೇಕು ಎಂಬುದು ಅಂಬೇಡ್ಕರ್‌ರ ಚಿಂತನೆಯಾಗಿತ್ತು. ಏಕೆಂದರೆ ಅದಕ್ಕೆ ಆರ್ಥಿಕ ಸ್ವರೂಪವನ್ನು ತಂದುಕೊಡುವ ಮೂಲಕ ದೇಶದ ಬಹುದೊಡ್ಡ ಕ್ಷೇತ್ರವೊಂದನ್ನು ಬಲಪಡಿಸುವಲ್ಲಿ ಸರ್ಕಾರದ ಆರ್ಥಿಕ ಯೋಜನೆಗಳು ಈ ವಲಯಕ್ಕೆ ದಕ್ಕಿ ರಾಷ್ಟ್ರ ಮತ್ತು ಕೃಷಿ ಕೃಷಿಕನ ಅಭಿವೃದ್ಧಿಗೆ ಪೂರಕವಾಗುವಂತಿರಬೇಕು ಎಂಬ ಕನಸಾಗಿತ್ತು. ಹೀಗಾಗಿ ಕೃಷಿ ಭೂಮಿ ಸರ್ಕಾರದ ಒಡೆತನದಲ್ಲಿರಬೇಕು. ಅದನ್ನು ಸರ್ಕಾರ ಇಲ್ಲವೆ ಸರ್ಕಾರ ಸ್ಥಾಪಿಸುವ ನಿಗಮಗಳಿಂದ ನಡೆಸತಕ್ಕದ್ದು. ಆದ್ದ-ರಿಂದ ಕೃಷಿ ಒಂದು ಸರ್ಕಾರಿ ಕೈಗಾರಿಕೆ-

**ಕೃಷಿ ಬಿಕ್ಕಟ್ಟಿನ ಈ ದುರಿತ ಕಾಲದಲ್ಲಿ ರೈತ ಮತ್ತು ಕೃಷಿಯ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅಂಬೇಡ್ಕರ್‌ರ ಈ ಚಿಂತನೆಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸುವ ಮತ್ತು ಸರ್ಕಾರಿ ಯೋಜನೆಗಳ ಅಡಿಯಲ್ಲಿ ವಿಸ್ತರಿಸಿ ಜಾರಿಗೆ ತರುವ ದಿಶೆಯಲ್ಲಿ ಹೆಚ್ಚು ಗಮನಹರಿಸಬೇಕಿದೆ. ಮೇಲ್ನೋಟಕ್ಕೆ ರೈತನ/ವ್ಯಕ್ತಿಯ ಖಾಸಗಿ ಆಸ್ತಿ (ಭೂಮಿಯ) ಹಕ್ಕನ್ನು ಸರ್ಕಾರಕ್ಕೆ ವರ್ಗಾಯಿಸುವಂತೆ ಕಂಡರೂ ಆತ್ಮಹತ್ಯೆಯ ದಾರಿ ಹಿಡಿದ ರೈತನ "ಜೀವ"ದ ಜೀವಪರ ನೆಲೆಯಲ್ಲಿ ಯೋಚಿಸಿದಾಗ ಆರ್ಥಿಕವಾಗಿ ಶೋಷಣೆಗೆ ಒಳಗಾಗಿರುವ ಕೃಷಿಕ್ಷೇತ್ರಕ್ಕೆ ಪುನಶ್ಚೇತನ ನೀಡಲು ಅಂಬೇಡ್ಕರ್‌ರ ಚಿಂತನೆಗಳು ಸಹಾಯಕವಾಗಬಲ್ಲವು. ಆರ್ಥಿಕ-ಸಾಮಾಜಿಕ ಸಮಾನತೆ ತರಲು ಸಹಕಾರಿಯಾಗಬಲ್ಲವು. ಆತ್ಮಹತ್ಯೆಯ ದಾರಿ ಹಿಡಿದಿರುವ/ಆತ್ಮಹತ್ಯೆ ಮಾಡಿಕೊಂಡಿರುವ ರೈತ ಮನೆತನಗಳನ್ನು ಅಧ್ಯಯನಕ್ಕೊಳಪಡಿಸಿದರೆ, ಹೆಚ್ಚಾಗಿ ಸಣ್ಣ ಸಣ್ಣ ರೈತರು ಅಂದರೆ ತುಂಡುಭೂಮಿ ಹೊಂದಿರುವವರು ಎಂಬುದು ಸ್ಪಷ್ಟವಾಗಬಹುದು. ರೈತರ ಸಾಲ ಮನ್ನಾದಂತ ಯೋಜನೆಗಳೂ ಕೂಡ ರೈತರಿಗೆ ಮುಂದಿನ ಭವಿಷ್ಯದ ಭದ್ರತೆಯನ್ನು ಒದಗಿಸಿಕೊಡುವ ಭದ್ರತೆಯ ಭಾವವನ್ನು ತುಂಬುತ್ತಿಲ್ಲ.**

ಯಾಗಿರತಕ್ಕದ್ದು ಅವಶ್ಯಕವಾಗಿದೆ ಎಂದು ಪ್ರತಿಪಾದಿಸಿದರು.

ಖಾಸಗಿಯವರ ಅಧೀನದಲ್ಲಿರುವ ಕೈಗಾರಿಕೆ, ವಿಮೆ, ಕೃಷಿಭೂಮಿಯನ್ನು ಯಾವುದೇ ಅವರ ಸ್ವಂತದ್ದಾಗಲಿ, ಗೇಣಿಯಾಗಿರಲಿ, ಬೋಗ್ಯದಲ್ಲಿರಲಿ-ಸರ್ಕಾರ ಡಿಬೆಂಚರ್ ರೂಪದಲ್ಲಿ ಯೋಗ್ಯ ಪರಿಹಾರ ನೀಡಿ ಅವುಗಳ ಮೇಲೆ ಸೂಕ್ತ ಹಕ್ಕು ಪಡೆಯಬೇಕು. ಆದರೆ ಭೂಮಿಗೆ ಕೊಡುವ ಪರಿಹಾರದ ಮೊತ್ತವನ್ನು ನಿಗದಿ ಮಾಡುವಾಗ ಅದರ ಪ್ರಾಮುಖ್ಯ, ಏರಬಹುದಾದ ಬೆಲೆ ಮುಂತಾದವುಗಳಿಗೆ ವಿಶೇಷ ಗಮನ ಕೊಡತಕ್ಕದ್ದಲ್ಲ. ಹಣವನ್ನು ಡಿಬೆಂಚರ್ ಮೂಲಕ ಸರ್ಕಾರವೇ ಹಂಚಬೇಕು. ಆದರೆ ಈ ಡಿಬೆಂಚರ್ ರೂಪದ ಪರಿಹಾರವನ್ನು ನಗದು ರೂಪದಲ್ಲಿ ಡಿಬೆಂಚರ್‌ದಾರ ಯಾವಾಗ ಪಡೆಯಬೇಕೆನ್ನುವುದನ್ನು ಸರ್ಕಾರವೇ ತೀರ್ಮಾನಿಸತಕ್ಕದ್ದು.

- ಈ ಡಿಬೆಂಚರ್‌ಗಳ ವರ್ಗಾವಣೆಗೆ ಮತ್ತು ವಾರಸುದಾರಿಕೆಗೆ ಆಸ್ಪದವಿರತಕ್ಕದ್ದು. ಆದರೆ ರಾಷ್ಟ್ರೀಕೃತ ಕೈಗಾರಿಕೆಗಳಿಂದ ಡಿಬೆಂಚರ್ ವರ್ಗಾವಣೆ ಪಡೆದುಕೊಂಡವರಿಗಾಗಲಿ, ವಾರಸುದಾರಿಕೆ ಪಡೆದುಕೊಂಡವರಿಗಾಗಲಿ, ಭೂಮಿಯನ್ನು ಪಡೆಯುವ, ಬಡ್ಡಿ ಪಡೆಯುವ ಅಥವಾ ಅದರ ಮೇಲೆ ಯಾವುದೇ ರೀತಿಯ ಹಕ್ಕು ಚಲಾಯಿಸುವ ಅಧಿಕಾರವಿರುವುದಿಲ್ಲ.
- ಸರ್ಕಾರಿ ಕಾನೂನಿನ್ವಯ ಡಿಬೆಂಚರ್‌ದಾರ ನಿಗದಿತ ಬಡ್ಡಿಯನ್ನು ನಗದು ರೂಪದಲ್ಲಿ ಅಥವಾ ಸರ್ಕಾರದ ತೀರ್ಮಾನದಂತೆ ಇನ್ನಾವುದೇ ರೂಪದಲ್ಲಿ ಪಡೆಯಬಹುದು.

ಮುಂದುವರಿದು, ಕೃಷಿ ಕೈಗಾರಿಕೆಯನ್ನು ವ್ಯವಸ್ಥೆಗೊಳಿಸುವ ವಿಧಾನಗಳನ್ನು ಸ್ಪಷ್ಟಪಡಿಸಿದರು.

1. ಬೇಸಾಯ ಮಾಡಲು ಬಿಟ್ಟು ಕೊಡತಕ್ಕದ್ದು.
   ಅ) ಸಾಮೂಹಿಕ ವ್ಯವಸಾಯ ಪದ್ಧತಿಯಂತೆ ಆ ಭೂಮಿಯನ್ನು ಸಾಗುವಳಿ ಮಾಡತಕ್ಕದ್ದು.
   ಆ) ಸರ್ಕಾರದ ಕಾನೂನು ಮತ್ತು ನಿರ್ದೇಶನದಂತೆ ಭೂ ಸಾಗುವಳಿ ಪಡೆ-ಯತಕ್ಕದ್ದು.
   ಇ) ಉತ್ಪಾದನೆಯ ಖರ್ಚು ಮುಂತಾದ್ದನ್ನು ಬಿಟ್ಟು ಗೇಣಿದಾರರು ಉತ್ಪನ್ನದಲ್ಲಿ ನಿಗದಿಯಾಗಿ ಪಾಲು ಪಡೆಯತಕ್ಕದ್ದು.
2. ಭೂಮಾಲೀಕ, ಗೇಣಿದಾರ, ಭೂಹೀನ ಕೃಷಿಕಾರ್ಮಿಕ ಎಂಬ ವ್ಯತ್ಯಾಸವಿಲ್ಲದಂತೆ, ಜಾತಿ ಆಧಾರಿತ ತಾರತಮ್ಯವಿಲ್ಲದಂತೆ, ಎಲ್ಲ ಗ್ರಾಮಸ್ಥರಿಗೂ ಭೂಮಿಯನ್ನು ಕೃಷಿ ಮಾಡಲು ಬಿಟ್ಟುಕೊಡತಕ್ಕದ್ದು.
3. ಸಾಮೂಹಿಕ ಕೃಷಿಗೆ ಬೇಕಾದ ಹಣ, ಮತ್ತಿತರ ಅನುಕೂಲತೆಗಳಿಂದ ನೀರು, ದನ, ಉಪಕರಣಗಳು, ಗೊಬ್ಬರ, ಬೀಜ ಇತ್ಯಾದಿಗಳನ್ನು ಒದಗಿಸುವುದು ಸರ್ಕಾರದ ಹೊಣೆ.
4. ಸಾಮೂಹಿಕ ಕೃಷಿಭೂಮಿಯ ಉತ್ಪನ್ನದ ಮೇಲೆ ಸರ್ಕಾರಕ್ಕೆ ಈ ಕೆಳಕಂಡ ಅಧಿಕಾರವಿರುತ್ತದೆ.
   ಎ) ಭೂ ಕಂದಾಯಕ್ಕಾಗಿ ಒಂದು ಪಾಲು ತೆಗೆದಿಡತಕ್ಕದ್ದು.
   ಬಿ) ಸರ್ಕಾರಿ ಡಿಬೆಂಚರ್ ಹೊಂದಿದವರಿಗೆ ಸಾಲ ತೀರಿಸುವ ಸಲುವಾಗಿ ಮತ್ತೊಂದು ಪಾಲು ತೆಗೆದಿಡತಕ್ಕದ್ದು.
   ಸಿ) ಸರ್ಕಾರ ತಾನು ಒದಗಿಸಿದ ಬಂಡವಾಳವನ್ನು ವಾಪಸ್ಸು ಪಡೆಯುವಂತಿರಬೇಕು
   ಡಿ) ಕಾನೂನುಗಳನ್ನು ಧಿಕ್ಕರಿಸಿದವರಿಗೆ, ಗೇಣಿಯ ನಿಬಂಧನೆಗಳನ್ನು ಮುರಿದು ಸರ್ಕಾರ ಕೊಟ್ಟ ಬಂಡವಾಳವನ್ನು ಸದುಪಯೋಗಪಡಿಸಿಕೊಳ್ಳದೆ ಸಾಮೂಹಿಕ ಕೃಷಿಯ ವಿರುದ್ಧ ನಡೆದುಕೊಳ್ಳುವರಿಗೆ ದಂಡನೆ ವಿಧಿಸಲು ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು.

ಅಂಬೇಡ್ಕರ್‌ರ ಈ ಚಿಂತನೆಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಮಾನತೆಯನ್ನು ತರುವ ಮೂಲಕ ದಮನಿತರ ಮೂಲಭೂತ ಹಕ್ಕುಗಳನ್ನು ರಕ್ಷಿಸುತ್ತವೆ. ಕೃಷಿಯನ್ನು ಕೈಗಾರಿಕೆಯೆಂದು ಪರಿಗಣಿಸಿ, ಅದರ ಮೇಲೆ ಜೀವ ವಿಮೆ ಮಾಡಿಸಬೇಕೆಂಬ ಪರಿಕಲ್ಪನೆ ದುಡಿಯುವವರ ಆರ್ಥಿಕ ಅಸಮಾನತೆಯನ್ನು ತಡೆಗಟ್ಟುವ ಕೃಷಿ ನೀತಿಯಾಗಿದೆ. ಇದು ಇಂದಿನ 'ಬೆಳೆವಿಮೆ' (ಬೆಳೆಹಾನಿ) ಎಂಬ ತತ್ಕಾಲದ ಪರಿಹಾರಗಿಂತಲೂ ದೀರ್ಘಕಾಲೀನ ಮುಂದಾಲೋಚನೆಯ ರೈತ/ಶ್ರಮಜೀವಿಗಳ ಸಬಲೀಕರಣದ ಯೋಜನೆಯಾಗಿದೆ. ಮುಂದುವರಿದು ಜೀವವಿಮೆ ಸರ್ಕಾರಿ ಸ್ವಾಮ್ಯದಲ್ಲಿದ್ದು ಶಾಸಕಾಂಗ ನಿಗದಿಪಡಿಸಿದಂತೆ ಪ್ರತಿಯೊಬ್ಬ ವಯಸ್ಕನಿಂದಲೂ ಅವನ ದುಡಿಮೆಯನ್ನನುಸರಿಸಿ ಸರ್ಕಾರ ಜೀವವಿಮೆ ಮಾಡಿಸತಕ್ಕದೆಂದು ಒತ್ತಾಯಿಸಿದ್ದಾರೆ.

ಸಹಕಾರಿ ಸಾಮೂಹಿಕ ಬೇಸಾಯವು ಯಶಸ್ವಿಯಾಗಬೇಕಾದರೆ, ಅತ್ಯಂತ ಹೆಚ್ಚಿನ ಉತ್ಪಾದನೆ ಸಾಧಿಸುವುದು ಮತ್ತು ಅದನ್ನು ಸಮಾನವಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸರ್ಕಾರಕ್ಕೆ ವಹಿಸುತ್ತಾರೆ. ಅಲ್ಲದೇ ಕೃಷಿ ಮತ್ತು ಕೈಗಾರಿಕೆಗಳಿಗೆ ಬೇಕಾದ ಬಂಡವಾಳ ಒದಗಿಸುವುದು ಸರ್ಕಾರದ ಹೊಣೆ ಎಂದಿದ್ದಾರೆ. ಏಕೆಂದರೆ ಬಂಡವಾಳವಿಲ್ಲದೆ ಭೂಮಿ, ಕೈಗಾರಿಕೆಗಳು ಒಳ್ಳೆಯ ಉತ್ಪನ್ನ ಕೊಡಲು ಸಾಧ್ಯವಿಲ್ಲವಾದ್ದರಿಂದ ಈ ಎರಡೂ ಉದ್ದೇಶಗಳನ್ನು ಸರ್ಕಾರಿ ಸ್ವಾಮ್ಯದಲ್ಲಿರಬೇಕೆಂದು ಬಯಸಿದ್ದಾರೆ.

ಕೃಷಿ ಬಿಕ್ಕಟ್ಟಿನ ಈ ದುರಿತ ಕಾಲದಲ್ಲಿ ರೈತ ಮತ್ತು ಕೃಷಿಯ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅಂಬೇಡ್ಕರ್‌ರ ಈ ಚಿಂತನೆಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸುವ ಮತ್ತು ಸರ್ಕಾರಿ ಯೋಜನೆಗಳ ಅಡಿಯಲ್ಲಿ ವಿಸ್ತರಿಸಿ ಜಾರಿಗೆ ತರುವ ದಿಶೆಯಲ್ಲಿ ಹೆಚ್ಚು ಗಮನಹರಿಸಬೇಕಿದೆ. ಮೇಲ್ನೋಟಕ್ಕೆ ರೈತನ/ವ್ಯಕ್ತಿಯ ಖಾಸಗಿ ಆಸ್ತಿ (ಭೂಮಿಯ) ಹಕ್ಕನ್ನು ಸರ್ಕಾರಕ್ಕೆ ವರ್ಗಾಯಿಸುವಂತೆ ಕಂಡರೂ ಆತ್ಮಹತ್ಯೆಯ ದಾರಿ ಹಿಡಿದ ರೈತನ "ಜೀವ"ದ ಜೀವಪರ ನೆಲೆಯಲ್ಲಿ ಯೋಚಿಸಿದಾಗ ಆರ್ಥಿಕವಾಗಿ ಶೋಷಣೆಗೆ ಒಳಗಾಗಿರುವ ಕೃಷಿಕ್ಷೇತ್ರಕ್ಕೆ ಪುನಶ್ಚೇತನ ನೀಡಲು ಅಂಬೇಡ್ಕರ್‌ರ ಚಿಂತನೆಗಳು ಸಹಾಯಕವಾಗಬಲ್ಲವು. ಆರ್ಥಿಕ-ಸಾಮಾಜಿಕ ಸಮಾನತೆ ತರಲು ಸಹಕಾರಿಯಾಗಬಲ್ಲವು. ಆತ್ಮಹತ್ಯೆಯ ದಾರಿ ಹಿಡಿದಿರುವ/ಆತ್ಮಹತ್ಯೆ ಮಾಡಿಕೊಂಡಿರುವ ರೈತ ಮನೆತನಗಳನ್ನು ಅಧ್ಯಯನಕ್ಕೊಳಪಡಿಸಿದರೆ, ಹೆಚ್ಚಾಗಿ ಸಣ್ಣ ಸಣ್ಣ ರೈತರು ಅಂದರೆ ತುಂಡುಭೂಮಿ ಹೊಂದಿರುವವರು ಎಂಬುದು ಸ್ಪಷ್ಟವಾಗಬಹುದು. ರೈತರ ಸಾಲ ಮನ್ನಾದಂತ ಯೋಜನೆಗಳೂ ಕೂಡ ರೈತರಿಗೆ ಮುಂದಿನ ಭವಿಷ್ಯದ ಭದ್ರತೆಯನ್ನು ಒದಗಿಸಿಕೊಡುವ ಭದ್ರತೆಯ ಭಾವವನ್ನು ತುಂಬುತ್ತಿಲ್ಲ. ದೇಶಕ್ಕೆ ಅನ್ನ ನೀಡುವ ರೈತ ಆತಂಕದ ಸ್ಥಿತಿಯಲ್ಲಿರುವಾಗ ಅಂಬೇಡ್ಕರ್‌ರ "ರಾಜಕೀಯ ಪ್ರಜಾಪ್ರಭುತ್ವ ಸಹಿತವಾದ ಪ್ರಭುತ್ವ ನಿಯಂತ್ರಿತ ಸಮಾಜವಾದ" ಮುನ್ನೆಲೆಗೆ ಬಂದರೆ ಕೃಷಿಯೂ ಬದುಕೀತು; ಕೃಷಿಕನೂ ಬದುಕುವನು. ಕೃಷಿಯ ಬದುಕಲಿ ದೇಶದ ಬದುಕಿದೆ. ಅನ್ನದ ಮೂಲಗಳಾದ ಭೂಮಿ ಮತ್ತು ಶ್ರಮಿಕರನ್ನು ಮರೆಯಬಾರದು. □

# ಸಂವಿಧಾನ ಅಂಬೇಡ್ಕರ್ ಮತ್ತು ಪೌರತ್ವ

(63ನೇ ಪುಟದಿಂದ)

ಈಗ ಭಾರತ ಜನರು ಪ್ರಜಾಪ್ರಭುತ್ವವು ತಮಗೆ ಹೊಸದೆಂದು ಭಾವಿಸುತ್ತಿದ್ದಾರೆ.

ಈಗ ಮತ್ತೊಮ್ಮೆ ಎರಡನೆಯ ಬಾರಿಗೆ ಈ ಪ್ರಜಾಪ್ರಭುತ್ವವನ್ನು ಕಳೆದುಕೊಳ್ಳುತ್ತೇವೆಯೇ? ಈಗ ಹೊಸದಾಗಿ ರೂಪುಗೊಳ್ಳುತ್ತಿರುವ ಪ್ರಜಾಪ್ರಭುತ್ವವು ತನ್ನ ಸ್ವರೂಪದಲ್ಲಿ ಪ್ರಜಾಪ್ರಭುತ್ವವಾಗಿದ್ದರೂ, ವಾಸ್ತವವಾಗಿ ಸರ್ವಾಧಿಕಾರಿಯೂ ಆಗಬಲ್ಲದು. ಒಂದೇ ರಾಜಕೀಯ ಪಕ್ಷಕ್ಕೆ ಭಾರಿ ಬಹುಮತದ ಗೆಲುವನ್ನು ಕೊಟ್ಟರೆ ಈ ಊಹೆ ನಿಜವಾಗಬಲ್ಲದು. ಹಾಗಾಗಿ ನಾವು ಪ್ರಜಾಪ್ರಭುತ್ವವನ್ನು ಸ್ವರೂಪದಲ್ಲಿ ಮಾತ್ರವಲ್ಲದೇ ವಾಸ್ತವದಲ್ಲೂ ನಿರ್ವಹಿಸಬೇಕಾದರೆ ನಾವೇನು ಮಾಡಬೇಕು.




ಮೊದಲಿಗೆ, ನಾವು ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಉದ್ದೇಶಗಳನ್ನು ಸಾಧಿಸಬೇಕಾದರೆ ನಾವು ಸಂವಿಧಾನಾತ್ಮಕ ಪದ್ಧತಿಗಳನ್ನೇ ಅನುಸರಿಸಬೇಕು.

ಎರಡನೆಯದು, ಎಝುಟಿ ಖಣಣಚಿಡಿಣ ಒಟಟಟ ರವರು ಕೊಟ್ಟಿರುವ ಎಚ್ಚರಿಕೆಯನ್ನು ಪಾಲಿಸಬೇಕು. ಅದು ಏನೆಂದರೆ ಜನರು ತಮ್ಮ ಸ್ವಾತಂತ್ರವನ್ನು ಯಾವ ಒಬ್ಬ ಮಹಾ ಪುರುಷನ ಪಾದದ ಅಡಿಯಲ್ಲಿಡಬಾರದು ಹಾಗೂ ಸಾರ್ವಜನಿಕ ಸಂಸ್ಥೆಗಳ ಶಕ್ತಿಯನ್ನು ಕುಗ್ಗಿಸವಷ್ಟು ಅಧಿಕಾರವನ್ನು ಆ ಮಹಾ ಪುರುಷನಿಗೆ ಕೊಡಬಾರದು. ಭಾರತದಲ್ಲಿ ಭಕ್ತಿ ಎಂಬುದು ಬೇರೆ ದೇಶಗಳಿಗಿಂತ ಹೆಚ್ಚಾಗಿ ರಾಜಕೀಯದಲ್ಲಿ ಪಾತ್ರ ವಹಿಸುತ್ತದೆ. ಧರ್ಮದಲ್ಲಿ ಭಕ್ತಿಯು ಮೋಕ್ಷವನ್ನು ಪಡೆಯುವ ದಾರಿಯಾಗಬಹುದು ಆದರೆ ಅದೇ ಭಕ್ತಿ ಅಥವಾ ವ್ಯಕ್ತಿ ಪೂಜೆಯು ರಾಜಕೀಯದಲ್ಲಿದ್ದರೆ ಅದು ಅವನತಿಗೆ ಹಾಗೂ ಸರ್ವಾಧಿಕಾರಕ್ಕೆ ದಾರಿ (ಉದಾ: ಮೋದಿ ಭಕ್ತರಿಂದ ಇಂದು ಭಾರತದಲ್ಲಿ ಸರ್ವಾಧಿಕಾರವು ತಾಂಡವವಾಡುತ್ತಿದೆ)

ಮೂರನೆಯದು, ನಾವು ರಾಜಕೀಯ ಸ್ವಾತಂತ್ರಕ್ಕೆ ತೃಪ್ತಿಪಡಬಾರದು, ನಾವು ನಮ್ಮ ರಾಜಕೀಯ ಸ್ವಾತಂತ್ರವನ್ನು ಸಾಮಾಜಿಕ ಸ್ವಾತಂತ್ರ್ಯವನ್ನಾಗಿ ಪರಿವರ್ತಿಸಬೇಕು. ಹಾಗಾದರೆ ಸಾಮಾಜಿಕ ಸ್ವಾತಂತ್ರ್ಯ ಎಂದರೇನು? ಸಾಮಾಜಿಕ ಸ್ವಾತಂತ್ರವು ಒಂದು ಜೀವನ ವಿಧಾನ, ಈ ವಿಧಾನದಲ್ಲಿ ಸ್ವಾತಂತ್ರ್ಯ ಸಮಾನತೆ ಹಾಗೂ ಭ್ರಾತೃತ್ವವನ್ನು ಜೀವನದ ಮೌಲ್ಯಗಳಾಗಿ ಗುರುತಿಸಿ ಅವುಗಳನ್ನು ಅಳವಡಿಸಿಕೊಳ್ಳುವುದು. ಈ ಮೂರು ತತ್ವಗಳನ್ನು ಬೇರೆ ಬೇರೆಯಾಗಿ ಅಲ್ಲದೆ ಒಟ್ಟಿಗೆ ಅವುಗಳನ್ನು ಅಳವಡಿಸುವುದು ಏಕೆಂದರೆ ಒಂದರಿಂದ ಒಂದನ್ನು ಬೇರ್ಪಡಿಸಿದರೆ ಪ್ರಜಾಪ್ರಭುತ್ವದ ಸೋಲಿಗೆ ಕಾರಣವಾಗುತ್ತದೆ. ಏಕೆಂದರೆ ಸಮಾನತೆ ಇಲ್ಲದ ಸ್ವಾತಂತ್ರ್ಯ, ಬಹುಸಂಖ್ಯಾಂತ ಜನರ ಮೇಲೆ ಕೆಲವರ ಆಧಿಪತ್ಯಕ್ಕೆ ದಾರಿ ಮಾಡಿಕೊಡುತ್ತದೆ. ಅದೇ ಸ್ವಾತಂತ್ರವಿಲ್ಲದ ಸಮಾನತೆಯು ವೈಯಕ್ತಿಕ ಉಪಕ್ರಮವನ್ನು ಕೊಲ್ಲುತ್ತದೆ. (Individual initiative) ಹಾಗೆಯೆ ಭ್ರಾತೃತ್ವವಿಲ್ಲದ ಸಮಾನತೆ ಹಾಗೂ ಸ್ವಾತಂತ್ರವು ಸಹಜ ಜೀವನ ಮೌಲ್ಯಗಳಾಗುವುದಕ್ಕೆ ಸಾದ್ಯವಿಲ್ಲ. ಭಾರತೀಯ ಸಮಾಜದಲ್ಲಿ ಎರಡು ಅಂಶಗಳು ಸಂಪೂರ್ಣವಾಗಿ ಇಲ್ಲದೆ ಇರುವುದನ್ನು ನಾವು ಅಂಗೀಕರಿಸಬೇಕಾಗುತ್ತದೆ.

**ಒಂದು: ಸಮಾನತೆ.**

ಸಾಮಾಜಿಕವಾಗಿ ಭಾರತದ ಸಮಾಜವು ಶ್ರೇಣೀಕೃತ ಅಸಮಾನತೆಯನ್ನು ಹೊಂದಿದೆ. ಆರ್ಥಿಕವಾಗಿಯೂ ಸಹಾ ಅಸಮಾನತೆಯು ಇದೆ. 25.01.1950 ರಂದು ಭಾರತ ಒಂದು ವೈರುಧ್ಯ ಜೀವನಕ್ಕೆ ಪ್ರವೇಶಿಸುತ್ತದೆ. ಅದು ರಾಜಕೀಯವಾಗಿ ಸಮಾನತೆಯನ್ನು ತಂದುಕೊಟ್ಟರೂ, ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯನ್ನು ಪ್ರಾತಿಪಾದಿಸುತ್ತದೆ. ರಾಜಕೀಯವಾಗಿ ಒಬ್ಬ ಮನುಷ್ಯ ಒಂದು ಮತ ಹಾಗೂ ಒಂದು ಮತ ಒಂದು ಮೌಲ್ಯ ಎನ್ನುವ ತತ್ವವನ್ನು ಒಪ್ಪುತ್ತೇವೆ. ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಒಬ್ಬ ಮನುಷ್ಯ ಒಂದು ಮೌಲ್ಯ ಎನ್ನುವುದನ್ನು ಒಪ್ಪುವುದಿಲ್ಲ. ಈ ವೈರುಧ್ಯವನ್ನು ನಾವು ಆದಷ್ಟು ಬೇಗ ಬಗೆಹರಿಸಬೇಕು. ಇದು ತಡವಾದಷ್ಟು ಅಸಮಾನತೆಯಿಂದ ಶೋಷಣೆಗೆ ಗುರಿಯಾಗುವವರು ಈ ರಾಜಕೀಯ ಪ್ರಜಾಪ್ರಭುತ್ವದ ರಚನೆಯನ್ನು ಧ್ವಂಸ ಮಾಡುತ್ತಾರೆ.

**ಎರಡು: ಭ್ರಾತೃತ್ವವನ್ನು ನಾವು ಗುರುತಿಸುವುದು ಹಾಗೂ ಅಳವಡಿಸುವುದು.**

ಭ್ರಾತೃತ್ವವೆಂದರೆ ಎಲ್ಲಾ ಭಾರತೀಯರ ಮಧ್ಯೆ ಅಣ್ಣತಮ್ಮಂದಿರ ಭಾವನೆ ಅಥವಾ ಸಹೋದರತ್ವದ ಭಾವನೆಯನ್ನು ಮೂಡಿಸುವುದು. ಭಾರತವು ಒಂದು ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬರಬೇಕಾದರೆ ಭಾರತ ದೇಶದಲ್ಲಿರುವ ಜನರ ನಡುವೆ ಭ್ರಾತೃತ್ವದ ಮೌಲ್ಯವು ಸಹಜವಾಗಿ ಇರಬೇಕು. ಆದರೆ ಭಾರತದ ಸಮಾಜದಲ್ಲಿರುವ ಶ್ರೇಣಿಕೃತ ಜಾತಿ ವ್ಯವಸ್ಥೆಯು ಈ ಭ್ರಾತೃತ್ವ ಭಾವನೆಗೆ ತಡೆಗೋಡೆಯಾಗಿರುವುದು. ಜಾತಿ ವ್ಯವಸ್ಥೆಯು ರಾಷ್ಟ್ರೀಯತೆಗೆ ವಿರುದ್ಧವಾದುದು. ಈ ಜಾತಿ ವ್ಯವಸ್ಥೆಯು ಜಾತಿ ಜಾತಿಗಳ ನಡುವೆ ವೈಶಮ್ಯ ಹಾಗೂ ಅಸೂಯೆಗಳನ್ನು ಬಿತ್ತುವುದು. ಆದ್ದರಿಂದ ಭ್ರಾತೃತ್ವದ ಭಾವನೆ ಮೂಡುವುದು ಅಸಾಧ್ಯವಾದ್ದರಿಂದ ಭ್ರಾತೃತ್ವವಿಲ್ಲದ ಸಮಾನತೆ ಹಾಗೂ ಸ್ವಾತಂತ್ರ್ಯ ಬಲಹೀನವಾದ್ದದು ಹಾಗೂ ನಿಷ್ಪ್ರಯೋಜಕ. ಇವೆಲ್ಲವನ್ನು ಗಮನಿಸಿದ ನಂತರ ಡಾ॥ ಬಿ.ಆರ್.ಅಂಬೇಡ್ಕರವರು ಸಂವಿಧಾನ ಕರಡನ್ನು ರಚಿಸಿದಲ್ಲದೆ ಸಂವಿಧಾನ ಕರಡಿನ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಮ್ಮ ಈ ಸಂವಿಧಾನವನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ಕೂಡ ಹೇಳಿದ್ದಾರೆ.

ಇಂದು ಭಾರತ ದೇಶದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ, ಓಕಖ ಮತ್ತು ಓಖಅ (ರಾಷ್ಟ್ರೀಯ ಜನಸಂಖ್ಯೆ ನೊಂದಾಣಿ ಮತ್ತು ರಾಷ್ಟ್ರೀಯ ಪೌರತ್ವ ನೊಂದಾಣಿ)ಯನ್ನು ಕುರಿತು ವಿದ್ಯಾರ್ಥಿಗಳು, ಮಹಿಳೆಯರು, ಜನಪರ ಹೋರಾಟಗಾರರು, ಪ್ರಗತಿಪರ ಸಂಘಟನೆಗಳು, ಎಡಪಂಥೀಯ ರಾಜಕೀಯ ಪಕ್ಷಗಳು ಹಾಗು ಸಂಘಟನೆಗಳು ತೀವ್ರ ಪ್ರತಿರೋಧವನ್ನು ವ್ಯಕ್ತಿಪಡಿಸುತ್ತಿವೆ. ಆದರೆ ಇಂದಿನ ಭಾರತ ದೇಶದ ಕೋಮುವಾದಿ ಕಾರ್ಪೋರೇಟ್ ಸರ್ಕಾರ ತನ್ನ ನಿಲುವುಗಳಿಂದ ಹಿಂಜರಿಯುವಂತೆ ಕಾಣುತ್ತಿಲ್ಲ, ಈ ಸರ್ಕಾರವು ಒಂದು ಪಾಸಿಸ್ಟ ಆಡಳಿತವನ್ನು ಹಾಗು ಸರ್ವಾಧಿಕಾರಿ ಧೋರಣೆಯನ್ನು ಅಳವಡಿಸಿಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಸಂವಿಧಾನವನ್ನು ರಚನೆ ಮಾಡುವ ಸಂದರ್ಭದಲ್ಲಿ, ಸಂವಿಧಾನ ಸಭೆಯಲ್ಲಿ ಪೌರತ್ವವನ್ನು ಕುರಿತು ನಡೆದಂತಹ ಸಂಬಾಷಣೆಗಳನ್ನು ಹಾಗು ವಿಶೇಷವಾಗಿ ಡಾ॥ ಅಂಬೇಡ್ಕರ್ ರವರ ಒಂದು ಪಾತ್ರವನ್ನು ನಾವು ಅರಿಯಬೇಕಾಗಿದೆ. ಈ ಮೂಲಕ ಇಂದಿನ ಸರ್ಕಾರದ ಹಾಗೂ ಈ ಸರ್ಕಾರವನ್ನು ಬೆಂಬಲಿಸುತ್ತಿರುವವರ ಉದ್ದೇಶವನ್ನು ಅರಿಯಲು ಹಾಗು ಅಂಬೇಡ್ಕರವರು ಹಾಗು ನಂತರ ಬಂದಂತಹ ನೆಹರು ಸರ್ಕಾರ ಹೇಗೆ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಸಮಾನತೆ, ಸ್ವಾತಂತ್ರ ಮತ್ತು ಪ್ರಾತೃತ್ವವನ್ನು ಅನುಷ್ಠಾನಕ್ಕೆ ತಂದರು ಎಂದು ತಿಳಿಯುತ್ತದೆ.

* * *

**ಟಿಪ್ಪಣಿಗಳು:**

- * ಇನ್‌ಕ್ವಿಲಾಬ್ ಜಿಂದಾಬಾದ್ ಎನ್ನುವ ಘೋಷಣೆಯನ್ನು ಹಜರತ್ ಮೊಹಾನಿಯವರು ಕೊಟ್ಟರೆ ಅದನ್ನು ಪ್ರಚಲಿತ ಮಾಡಿದ್ದು ಭಗತ್‌ಸಿಂಗ್ ಜೈ-ಹಿಂದ್ ಘೋಷಣೆ ಸುಭಾಸ್‌ಚಂದ್ರ ಭೋಸ್‌ರವರ ಕೊಡುಗೆ.
- * ಶ್ಯಾಮ್ ಪ್ರಸಾದ್ ಮುರ್ಖಜಿಯವರು ಹಿಂದು ಮಹಾಸಭದ ಅಧ್ಯಕ್ಷರು ಹಾಗು ಭಾರತಿಯ ಜನಸಂಘ, ಇಂದಿನ ಭಾರತೀಯ ಜನತಾ ಪಾರ್ಟಿಯ ಮೂಲಪಕ್ಷದ, ಸಂಸ್ಥಾಪಕರು ಇವರು ನೆಹರು ಕ್ಯಾಬಿನೆಟ್‌ನಲ್ಲಿ ಕೈಗಾರಿಕ ಮಂತ್ರಿಯಾಗಿರುತ್ತಾರೆ ನಂತರ 370 **Article** ವಿವಾದದಲ್ಲಿ ಬಿನ್ನಭಿಪ್ರಾಯ ಬಂದು ಸರ್ಕಾರದಿಂದ ಹಾಗು **Congress** ನಿಂದ ಹೊರಗೆ ಒಂದು ಜನ ಸಂಘವನ್ನು ಸ್ಥಾಪಿಸುತ್ತಾರೆ, ಇಂದಿನ **BJP** ಪಕ್ಷ, ಇವರು ಹೇಳಿರುವ ಮಾತುಗಳಿಗೆ ತದ್ವಿರುದ್ದವಾಗಿ ನಡೆದುಕೊಳ್ಳುತ್ತಿದೆ

□

# ಅಂಬೇಡ್ಕರ್ ಚಿಂತನೆಗಳ ಪ್ರಸ್ತುತತೆ

(57ನೇ ಪುಟದಿಂದ)


ಸೌರಾಷ್ಟ್ರ, ಪಶ್ಚಿಮ ಬಂಗಾಳದಲ್ಲಿ ಗೋರ್ಖಲ್ಯಾಂಡ್ ಹಾಗೂ ಕಾಮ್ತಪೂರ್ ಮತ್ತು ಮಹಾರಾಷ್ಟ್ರದಲ್ಲಿ ವಿದರ್ಭ ಮೊದಲಾದ ಪ್ರದೇಶಗಳು ಪ್ರತ್ಯೇಕ ರಾಜ್ಯಗಳ ಬೇಡಿಕೆಗಳನ್ನು ಮುಂದಿಟ್ಟಿರುವುದು ಈಗ ಇತಿಹಾಸ. ತಮ್ಮ ತಾಯ್ನೆಲದಿಂದ ಪ್ರತ್ಯೇಕತೆಯನ್ನು ಬಯಸುವುದರ ಹಿಂದೆ ಕೇವಲ ಭಾಷಿಕ ಕಟ್ಟಾಭಿಮಾನ ಮಾತ್ರ ಇರಲಾರದು ಎಂಬುದು ಇಲ್ಲಿ ಅತ್ಯಂತ ನಿಚ್ಚಳವಾಗಿದೆ.

ಭಾರತವನ್ನು ಜಗತ್ತಿನ ಅತ್ಯಂತ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರವೆಂದು ಈಗಾಗಲೇ ಪರಿಗಣಿಸಿದ್ದರೂ, ಆಳವಾಗಿ ವಿಶ್ಲೇಷಿಸಿ ನೋಡಿದಾಗ ಈ ನೆಲೆ ಇನ್ನೂ ಭ್ರೂಣಾವಸ್ಥೆಯಲ್ಲಿಯೇ ಇರುವುದನ್ನು ನಾವು ಯಾರಾದರೂ ಮನಗಾಣುತ್ತೇವೆ. ಪ್ರಜಾಸತ್ತಾತ್ಮಕ ಅರಿವು ಮತ್ತು ಕ್ರಿಯೆಗಳು ಇನ್ನೂ ಪಕ್ವಗೊಳ್ಳುವ ಜರೂರಿದೆ. ಭಾಷೆಗಳ ಬಗೆಗೆ ಭಾರತವು ತಾಳಿರುವ ನಿಲುವುಗಳೇ ಇದಕ್ಕೆ ಸ್ಪಷ್ಟ ನಿದರ್ಶನ. ಹಾಗಾಗಿ ಭಾರತದ ಇವತ್ತಿನ ಭಾಷಿಕ ಸನ್ನಿವೇಶವನ್ನು ಅರಿಯಲು, ಅಂಬೇಡ್ಕರ್ ಅವರ ಭಾಷಿಕ ಚಿಂತನೆಗಳನ್ನು ಮರುಪರಿಶೀಲಿಸುವುದು ಅತ್ಯಂತ ಅಗತ್ಯವಾಗಿದೆ. ಭಾರತದ ಭಾಷಾ ನೀತಿಗಳು ಹಲವು ಬಗೆಯ ಬದಲಾವಣೆಗೆ ಒಳಪಟ್ಟಿವೆ. ಭಾಷಾವಾರು ಪ್ರಾಂತಗಳ ಪುನರ್ರಚನೆಯೇ ಇದಕ್ಕೆ ಅತ್ಯಂತ ಮಹತ್ವದ ಸಾಕ್ಷಿಯಾಗಿದೆ. ಭಾರತವು ಒಂದು ಅಪ್ಪಟ ಬಹುಭಾಷಿಕ ದೇಶವಾಗಿದೆ. ಈ ದಿಟ ಬಹುಭಾಷಿಕತೆಯನ್ನು ಅರಿಯಲು ಸಾಕಷ್ಟು ಚಿಂತಕರು ತಮ್ಮ ಚಿಂತನೆಗಳನ್ನು ಬೆಳೆಸಿದ್ದಾರೆ. ಇಂತಹ ಪ್ರಖ್ಯಾತ ಚಿಂತಕರು ಮತ್ತು ನೀತಿ ನಿರೂಪಕರನ್ನು ಬದಿಗಿಟ್ಟು, ಹೊಸ ಬಗೆಯ ಬಹುಭಾಷಿಕತೆಗೆ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಏಕೆಂದರೆ ಭಾಷಾವಾರು ಪ್ರಾಂತಗಳ ಪುನರ್ರಚನೆಯ ಬಗೆಗೆ ಈ ಚಿಂತಕರ ನಿಲುವುಗಳು ಅತ್ಯಂತ ವ್ಯತಿರಿಕ್ತವಾಗಿದ್ದವು.

ಅಂಬೇಡ್ಕರ್ ಅವರು ಭಾಷಾವಾರು ರಾಜ್ಯಗಳ ರಚನೆಯ ಮುಖ್ಯ ಪ್ರತಿಪಾದಕರು. ಆದರೆ ಈ ಭಾಷಾವಾರು ರಾಜ್ಯಗಳು ತಮ್ಮ ತಮ್ಮ ರಾಜ್ಯ ಭಾಷೆಗಳಿಗೆ (ಉದಾ.ಗೆ ಕರ್ನಾಟಕದಲ್ಲಿ ಕನ್ನಡ, ತಮಿಳುನಾಡಿನಲ್ಲಿ ತಮಿಳು ಮತ್ತು ಆಂಧ್ರಪ್ರದೇಶ ಹಾಗೂ ತೆಲಾಂಗಣದಲ್ಲಿ ತೆಲುಗು ಇತ್ಯಾದಿ...) ಬದಲಾಗಿ ಹಿಂದಿಯನ್ನು ಆಡಳಿತ ಭಾಷೆಯನ್ನಾಗಿ ಬಳಸಬೇಕು ಎಂಬ ನಿಲುವನ್ನು ಹೊಂದಿದ್ದರು. ಭಾರತವು ಮಧ್ಯಕಾಲೀನ ಭಾರತದ ಮರುರೂಪವನ್ನು ಪಡೆಯುವ ಅಪಾಯದಿಂದ ತಪ್ಪಿಸಲು, ಅಂಬೇಡ್ಕರ್ ಅವರು ಈ ನಿಲುವನ್ನು ತಾಳುತ್ತಾರೆ. ಏಕೆಂದರೆ, "ನಮ್ಮ ಭಾರತ ಆಧುನಿಕ ಭಾರತವಾಗಿ ಉಳಿಯದೇ ಪರಸ್ಪರ ವೈರತ್ವ ಮತ್ತು ಯುದ್ಧಗಳಲ್ಲಿ ಮುಳುಗಿರುವ ಅನೇಕ ದೇಶಗಳನ್ನೊಳಗೊಂಡ ಮಧ್ಯಕಾಲೀನ ಭಾರತವಾಗಿ ಅದು ಪರಿಣಮಿಸುತ್ತದೆ". ಎಂಬ ಅಭಿಪ್ರಾಯ ಅವರದಾಗಿತ್ತು. ಮತ್ತು ಈ ಅಭಿಪ್ರಾಯವು ಇವತ್ತು ನಾವು ಭಾಷಿಕವಾಗಿ ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ವಿಶ್ಲೇಷಿಸಿ ನೋಡುವಂತೆ ನಮ್ಮನ್ನು ಒತ್ತಾಯಿಸುತ್ತದೆ. ಹೌದು, ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿಯೇ ರಚನೆಗೊಂಡ ಭಾರತದ ಸಂವಿಧಾನವು, ಅವರೇ ಊಹಿಸಿದ ಆತಂಕವನ್ನೂ ಲೆಕ್ಕಿಸದೇ ಇವತ್ತು ಸಂವಿಧಾನವು ಆಯಾ ರಾಜ್ಯಗಳ ಭಾಷೆಯನ್ನೇ ಅಧಿಕೃತ ಆಡಳಿತ ಭಾಷೆಯನ್ನಾಗಿ ಬಳಸುವ ಅವಕಾಶವನ್ನು ನಮಗೆ ಒದಗಿಸಿದೆ.

ಭಾಷಾವಾರು ರಾಜ್ಯಗಳನ್ನು ರಚಿಸುವ ಪ್ರಕ್ರಿಯೆಯಲ್ಲಿಯೇ ಅಪಾಯಗಳು ಅಡಗಿರುತ್ತವೆ ಎಂಬ ಈ ವಿಚಾರವು ಎಷ್ಟೊಂದು ಸುಸ್ಪಷ್ಟವಾದುದೋ, ನಾವು ಭಾಷಾವಾರು ರಾಜ್ಯಗಳನ್ನು ರಚಿಸದಿದ್ದರೂ ಅದಕ್ಕಿಂತ ಹೆಚ್ಚಿನ ಅಪಾಯಕ್ಕೆ ಈಡಾಗುತ್ತೇವೆ ಎಂಬುದು ಕೂಡ ಅಷ್ಟೇ ನಿಖರವಾದ ನಿಲುವಾಗಿದೆ. ಈ ವಿಶ್ಲೇಷಣೆಗಳನ್ನು ಅಂಬೇಡ್ಕರ್ ಅವರು ತಮ್ಮ ಭಾಷಾವಾರು ರಾಜ್ಯಗಳನ್ನು ಕುರಿತ ಚಿಂತನೆಗಳು (1955) ಅನ್ನುವ ಬರಹದಲ್ಲಿ ಮಂಡಿಸುತ್ತಾರೆ. ಭಾಷಾವಾರು ಪ್ರಾಂತಗಳ ಪುನರ್ರಚನೆಯಿಂದ ಏರ್ಪಡುವ ಪರಿಣಾಮಗಳನ್ನು ಒಂದಿಲ್ಲ ರೀತಿಯಲ್ಲಿ ನಿಭಾಯಿಸಲು ಸಾಧ್ಯವಾಗಬಹುದು. ಆದರೆ ಈ ಭಾಷಾವಾರು ಪ್ರಾಂತಗಳನ್ನು ರಚಿಸದ ಕಾರಣ ಎದುರಾಗುವ ಬಿಕ್ಕಟ್ಟುಗಳನ್ನು ನಿರ್ವಹಿಸುವುದು ಅತ್ಯಂತ ದುಸ್ತರ ಎಂಬ ಅಭಿಪ್ರಾಯವನ್ನೂ ಇವರು ವ್ಯಕ್ತಪಡಿಸುತ್ತಾರೆ.

ಇನ್ನೂ ಮುಂದುವರೆದು ಅಂಬೇಡ್ಕರ್ ಅವರು ಹೇಳುವುದೇನೆಂದರೆ, "ವಿವೇಕಶೀಲನೂ ದೃಢ ಮನೋಭಾವದವನೂ ಅದ ಯಾವುದೇ ಮುತ್ಸದ್ದಿ ರಾಜಕಾರಣಿ (ಸ್ಟೇಟ್ಸ್‌ಮನ್)ಯು ಭಾಷಾವಾರು ಪ್ರಾಂತಗಳ ಪುನರ್ರಚನೆಯಿಂದ ಉಂಟಾಗುವ ಅಪಾಯಗಳನ್ನು ತಪ್ಪಿಸಬಲ್ಲನು. ಆದರೆ ಈ ಭಾಷಾವಾರು ವಿಂಗಡಣೆಗೆ ಒಳಗಾಗದ ಸಂಕೀರ್ಣ ಭಾರತದಲ್ಲಿ ತಲೆದೋರುವ ಅಪಾಯಗಳು, ಎಷ್ಟೇ ಮುತ್ಸದ್ದಿ ರಜಕಾರಣಿಯಾಗಿದ್ದರೂ ಅವನ ನಿಯಂತ್ರಕ್ಕೆ ಈ ಅಪಾಯಗಳು ಸಿಗಲಾರವು" ಎಂಬ ಕಟು ಸತ್ಯವನ್ನು ಅಂಬೇಡ್ಕರ್ ಅವರು ನಮಗೆ ಇಲ್ಲಿ ಮನವರಿಕೆ ಮಾಡುತ್ತಾರೆ. ನಮ್ಮ ಗ್ರಹಿಕೆಗೆ ಹೊರತಾದ ಬಿಕ್ಕಟ್ಟುಗಳು ಸಂಕೀರ್ಣ ಬಹುಭಾಷಿಕ ಸನ್ನಿವೇಶದಲ್ಲಿ (ಮಧ್ಯಕಾಲೀನ ಭಾರತ) ಹುದುಗಿರುತ್ತವೆ ಎಂಬ ಕಟು ವಾಸ್ತವವನ್ನು ಅರಿಯುವುದರ ಜೊತೆಗೆ, ಪ್ರಜಾಪ್ರಭುತ್ವ (ಬಹುಭಾಷಿಕ) ಭಾರತದಲ್ಲಿ ಎದುರಾಗುವ ಭಾಷಿಕ ಬಿಕ್ಕಟ್ಟುಗಳನ್ನು ನಿರ್ವಹಿಸುವ ಕಾರ್ಯಯೋಜನೆಗಳನ್ನು ನೆಲೆಗೊಳಿಸುವ ಅಗತ್ಯವಿದೆ ಎಂಬ ಅನಿವಾರ್ಯತೆಯನ್ನೂ ಮನಗಾಣುತ್ತೇವೆ. 'ಯಾವುದೇ ಭಾಷಾವಾರು ರಾಜ್ಯ ತನ್ನ ಪ್ರಾದೇಶಿಕ ಭಾಷೆಯನ್ನು ಅಧಿಕೃತ ರಾಜ್ಯ ಭಾಷೆಯನ್ನಾಗಿ ಹೊಂದುವ ಮೂಲಕ ☐




ಸ್ವತಂತ್ರ ರಾಷ್ಟ್ರವಾಗಿ ಬೆಳೆಯಬಹುದು. ಸ್ವತಂತ್ರ ರಾಜ್ಯ ಮತ್ತು ಸ್ವತಂತ್ರ ರಾಷ್ಟ್ರಗಳ ನಡುವಣ ದಾರಿ ಅತ್ಯಂತ ಕಿರಿದಾದುದು. ಒಂದು ವೇಳೆ ಹೀಗಾದರೆ, ನಮ್ಮ ಭಾರತವು ಆಧುನಿಕ ಭಾರತವಾಗಿ ಉಳಿಯದೇ, ಹಲವು ದೇಶಗಳನ್ನೊಳಗೊಂಡು ನಿರಂತರವಾಗಿ ಪರಸ್ಪರ ವೈರತ್ವ ಮತ್ತು ಯುದ್ಧದಲ್ಲಿ ಮುಳುಗಿರುವ ಮಧ್ಯಕಾಲೀನ ಭಾರತವಾಗಿ ಮೈದಾಳುತ್ತದೆ'. ಭಾಷಾವಾರು ಪ್ರಾಂತಗಳ ಪುನರ್ರಚನೆಯ ಸಾಧಕ ಮತ್ತು ಬಾಧಕಗಳನ್ನು ಪರಿಶೀಲಿಸುವ ದಾರಿಗಳನ್ನು ಅಂಬೇಡ್ಕರ್ ಅವರು ಅತ್ಯಂತ ಖಚಿತವಾಗಿ ಇಲ್ಲಿ ತೋರಿಸಿರುತ್ತಾರೆ.

ಭಾಷಾವಾರು ಪ್ರಾಂತಗಳ ಪುನರ್ರಚನೆಯನ್ನು ಕೇವಲ ಭಾವನಾತ್ಮಕ ವಿದ್ಯಮಾನವನ್ನಾಗಿ ಪರಿಗಣಿಸದೇ ಅದನ್ನೊಂದು ವೈಜ್ಞಾನಿಕ ಮತ್ತು ತಾತ್ವಿಕ ನಿಲುವನ್ನಾಗಿ ನೋಡಿದರೆ, ಅಂಬೇಡ್ಕರ್ ಈ ಕುರಿತು ಏನನ್ನು ಸೂಚಿಸುತ್ತಿದ್ದಾರೆ, ಯಾಕೇ ಇವರ ವಿಶ್ಲೇಷಣೆಗಳು ನಮಗೆ ಇವತ್ತು ವ್ಯತಿರಿಕ್ತವಾಗಿ ಕಾಣುತ್ತವೆ ಎಂಬುದನ್ನು ಅರಿಯುವುದಕ್ಕೆ ಸಾಧ್ಯವಾಗುತ್ತದೆ. ಭಾಷಾವಾರು ಪ್ರಾಂತಗಳ ಪುನರ್ರಚನೆಯ ಪ್ರಕ್ರಿಯೆಯಲ್ಲಿ ಅಪಾಯಗಳು ಇರುವಂತೆ, ಭಾಷಾವಾರು ಪ್ರಾಂತಗಳನ್ನು ಪುನರ್ರಚಿಸದೇ ಹೋದರು ಅಪಾಯಗಳು ಹೇಗೆ ಅಡಕವಾಗಿರುತ್ತವೆ ಎಂಬ ವೈಜ್ಞಾನಿಕ ದಿಟವನ್ನು ಇಲ್ಲಿ ಮನಗಾಣುತ್ತೇವೆ. ಹಾಗಾದರೆ ಅಂಬೇಡ್ಕರ್ ಅವರು ಏನನ್ನು ಹೇಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಎಂಬ ಗೊಂದಲಕ್ಕೆ ಒಳಗಾಗುವ ಅಗತ್ಯವಿಲ್ಲ. ಇವರ ವಿಶ್ಲೇಷಣೆಗಳು ಅತ್ಯಂತ ನಿಚ್ಚಳವಾಗಿರುತ್ತವೆ. ಅಂದರೆ ಬಹುಭಾಷಿಕ ಸನ್ನಿವೇಶವನ್ನು ನಿಭಾಯಿಸುವ ದಾರಿಗಳನ್ನು ತೋರಿಸುವ ಜೊತೆಗೆ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವಿನ್ಯಾಸಗಳನ್ನು ಮರುರೂಪಿಸಿಕೊಳ್ಳುವ ಬಗೆಗಳನ್ನೂ ಇಲ್ಲಿ ಕಂಡರಿಸುತ್ತಾರೆ.

ಹಾಗಾಗಿ ಮಧ್ಯಕಾಲೀನ ಭಾರತದ ಸಂದರ್ಭಕ್ಕೆ ಈಡಾಗುವ ಅಪಾಯವನ್ನು ತಪ್ಪಿಸುವ ತಂತ್ರಗಳನ್ನು ಅಂಬೇಡ್ಕರ್ ಚಿಂತನೆಗಳಲ್ಲಿ ಕಾಣುತ್ತೇವೆ. ಹಾಗಾಗಿ ಪುನರ್ರಚಿತ ರಾಜ್ಯಗಳಲ್ಲಿ ಎದುರಾಗುವ ಭಾಷಿಕ ಅಪಾಯಗಳಿಂದ ತಪ್ಪಿಸಲು, ಆಯಾ ರಾಜ್ಯದ ಪ್ರಾದೇಶಿಕ ಭಾಷೆಯನ್ನೇ ಅಧಿಕೃತ ಆಡಳಿತ ಭಾಷೆಯನ್ನಾಗಿ ಬಳಸುವ ಬದಲಾಗಿ ಹಿಂದಿ ಇಲ್ಲವೇ ಇಂಗ್ಲಿಶು ಭಾಷೆಗಳನ್ನು ಬಳಸುವ ಪ್ರಸ್ತಾವನೆಯನ್ನು ಅಂಬೇಡ್ಕರ್ ಮಂಡಿಸುತ್ತಾರೆ. ಅಂದರೆ, "ಈ ಅಪಾಯಗಳನ್ನು ಬಗೆಹರಿಸುವುದು ಹೇಗೆ? ಇಂತಹ ಅಪಾಯಗಳನ್ನು ಬಗೆಹರಿಸಲು ಈ ಸದ್ಯ ನನಗೆ ಅನ್ನಿಸುವ ಏಕೈಕ ಉಪಾಯವೇನೆಂದರೆ, ಆಯಾ ರಾಜ್ಯದ ಪ್ರಾದೇಶಿಕ ಭಾಷೆಯನ್ನು ಅಧಿಕೃತ ಆಡಳಿತ ಭಾಷೆಯನ್ನಾಗಿ ಬಳಸುವ ಅವಕಾಶವನ್ನು ಸಂವಿಧಾನದಲ್ಲಿಯೇ ಒದಗಿಸಕೂಡದು. ರಾಜ್ಯದ ಅಧಿಕೃತ ಭಾಷೆಯನ್ನಾಗಿ ಹಿಂದಿಯನ್ನು ಬಳಸಬೇಕು. ಭಾರತವು ಈ ನಿಲುವಿಗೆ ಹೊಂದಿಕೊಳ್ಳುವರಿಗೆ ಇಂಗ್ಲಿಶನ್ನು ಈ ಉದ್ದೇಶಕ್ಕಾಗಿ ಬಳಸಬೇಕು. ಭಾರತೀಯರು ಈ ಪ್ರಸ್ತಾವನೆಯನ್ನು ಒಪ್ಪಿಕೊಳ್ಳುವವರೇ? ಒಂದುಪಕ್ಷ ಇಲ್ಲವಾದಲ್ಲಿ, ಭಾಷಾವಾರು ರಾಜ್ಯಗಳು ಸಹಜವಾಗಿಯೇ ಅಪಾಯಕ್ಕೆ ಈಡಾಗುತ್ತವೆ". ಹಾಗಾದರೆ ಅಂಬೇಡ್ಕರ್ ಅವರ ಈ ಮಾತುಗಳು ಏನನ್ನು ಸಾಬೀತಪಡಿಸುತ್ತವೆ ಎಂಬ ಅನುಮಾನವು ನಮ್ಮಲ್ಲಿ ಉಂಟಾಗದೇ ಇರಲಾರದು.

ಸಮಾನತೆ, ಸ್ವಾತಂತ್ರ ಮತ್ತು ಬಾಂಧವ್ಯ ಎಂಬೀ ತ್ರಿವಳಿ ತತ್ವಗಳನ್ನು ಮಂಡಿಸುವ ಅಂಬೇಡ್ಕರ್ ಹಾಗೂ ಹಿಂದಿಯನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಪ್ರಸ್ತಾಪಿಸುವ ಅಂಬೇಡ್ಕರ್ ಅವರ ನಿಲುವುಗಳ ನಡುವೇ ಯಾವುದೇ ಹೊಂದಾಣಿಕೆ ಕಾಣಿಸುತ್ತಿಲ್ಲ. ಇಲ್ಲಿ ಕೇವಲ ಏರುಪೇರುಗಳು ಇಲ್ಲವೇ ವಿರೋಧಭಾಸಗಳು ಇರುವಂತೆ ಭಾಸವಾಗುತ್ತದೆ. ಮೂಲಭೂತ ಹಕ್ಕುಗಳು (ಫಂಡಾಮೆಂಟಲ್ ರೈಟ್ಸ್) ಮತ್ತು ರಾಜ್ಯ ನಿರ್ದೇಶಕ ತತ್ವಗಳ (ಸ್ಟೇಟ್ ಡಿರೆಕ್ಟಿವ್ ಪ್ರಿನ್ಸಿಪಲ್ಸ್) ನಡುವೆ ತಾತ್ವಿಕ ಹಾಗೂ ಪ್ರ್ಯಾಗ್ಮಾಟಿಕ್ (ಪ್ರಯೋಜನಕಾರಿ ತತ್ವ) ನಂಟನ್ನು ಕಲ್ಪಿಸಿರುವ ಅಂಬೇಡ್ಕರ್ ಅವರಿಗೆ, ಹಿಂದಿಯನ್ನು ಅಧಿಕೃತ ರಾಜ್ಯ ಭಾಷೆಯನ್ನಾಗಿ ಒಪ್ಪಿಕೊಂಡರೆ ಏನೆಲ್ಲ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಶೈಕ್ಷಣಿಕ ಬಿಕ್ಕಟ್ಟುಗಳು ಎದುರಾಗುತ್ತವೆ ಎಂಬ ವಾಸ್ತವ ಗೊತ್ತಿರಲಿಲ್ಲವೇ? ದಿಟ, ಆಯಾ ರಾಜ್ಯದ ಪ್ರಾದೇಶಿಕ ಭಾಷೆಯನ್ನೇ ಅಧಿಕೃತ ರಾಜ್ಯ ಭಾಷೆಯನ್ನಾಗಿ ಒಪ್ಪಿಕೊಂಡಿದ್ದರಿಂದ, ಯಾವುದೇ ವ್ಯತ್ಯಾಸವನ್ನು ನಾವು ಇವತ್ತು ಕಾಣುತ್ತಿಲ್ಲ. ಅಂದರೆ ಕಲ್ಯಾಣ ರಾಜ್ಯಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಲಾರೆ. ಹಾಗಾದರೆ, ಅಂಬೇಡ್ಕರ್ ಅವರ ನಿಲುವುಗಳನ್ನು ಹೇಗೆ ವಿಶ್ಲೇಷಿಸಬೇಕು? ಯಾವ ತಾತ್ವಿಕ ವಿನ್ಯಾಸವನ್ನು ನೆಲೆಯಾಗಿಸಿಕೊಂಡು ಇವರ ಈ ನಿಲುವನ್ನು ಬಿಡಿಸಿ ನೋಡಬೇಕು? ಹಿಂದು ಧರ್ಮ ಮತ್ತು ಶಾಸ್ತ್ರಗಳಲ್ಲಿ ಹುದುಗಿರುವ ಜೀವವಿರೋಧಿ ಧೋರಣೆಗಳ ವಿರುದ್ಧ ತಮ್ಮ ಬದುಕಿನ ಉದ್ದಕ್ಕೂ ಹೋರಾಡಿದ ಅಂಬೇಡ್ಕರ್ ಅವರಿಗೆ, ಹಿಂದಿಯನ್ನು ಅಧಿಕೃತ ರಾಜ್ಯ ಭಾಷೆಯನ್ನಾಗಿ ಒಪ್ಪಿಕೊಳ್ಳುವುದರಿಂದ, ಏನೆಲ್ಲ ಸಾಮಾಜಿಕ ಭಾಷಾಶಾಸ್ತ್ರೀಯ ಅಪಾಯಗಳು (ಸೋಶಿಯೋಲಿಂಗ್ವಿಸ್ಟಿಕ್ ಥ್ರೆಟ್ಸ್) ಎದುರಾಗುತ್ತವೆ ಎಂಬ ಕಟು ವಾಸ್ತವ ಅಂಬೇಡ್ಕರ್ ಅವರಿಗೆ ಗೋಚರಿಸಲಿಲ್ಲವೇ? ನಿಶ್ಚಿತವಾಗಿಯೂ ನಾನು ಇಲ್ಲವೆಂದು ಹೇಳಲಾರೆ. ಅಂಬೇಡ್ಕರ್ ಅವರ ಕಣ್ಣೋಟದಲ್ಲಿ ಅಧಿಕೃತ ರಾಜ್ಯ ಭಾಷೆಯೆಂಬುದು ಅದೊಂದು ಸಂವಿಧಾನಾತ್ಮಕ ಕಾಯಿದೆ. ಕಾಯಿದೆಯ ಕಣ್ಣಲ್ಲಿ ಎಲ್ಲರೂ ಸಮಾನರೇ ಹಾಗಾಗಿ ಅಧಿಕೃತ ರಾಜ್ಯ ಭಾಷೆಯನ್ನು ಸಂವಿಧಾನದ ಚೌಕಟ್ಟಿನಲ್ಲಿ ಅಡಕಗೊಳಿಸಿದರೆ ಮಾತ್ರ ಸಾಲದು. ಬದಲಾಗಿ ಅದನ್ನೊಂದು ಸಾಮಾಜಿಕ ತತ್ವಶಾಸ್ತ್ರೀಯ ಚೌಕಟ್ಟನ್ನಾಗಿ ಗ್ರಹಿಸಬೇಕು.




ಆದ್ದರಿಂದ ಅಂಬೇಡ್ಕರ್ ಅವರು ಸಮಾನತೆ, ಸ್ವಾತಂತ್ರ್ಯ ಮತ್ತು ಬಾಂಧವ್ಯವನ್ನು ಸಾಮಾಜಿಕ ತತ್ವಶಾಸ್ತ್ರೀಯ ವಿನ್ಯಾಸಗಳನ್ನಾಗಿ ಮಂಡಿಸಿದರು. ಜೊತೆಗೆ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳ ನಡುವಣ ನಂಟಸ್ತಿಕೆ ಹೇಗಿರಬೇಕು ಮತ್ತು ಅಂತಹದೊಂದು ನಂಟಸ್ತಿಕೆಯನ್ನು ತರುವ ಮೂಲಕ ಮಾತ್ರ ಸಮಾನ ಸಮಾಜಗಳನ್ನು ಕಟ್ಟುವುದಕ್ಕೆ ಸಾಧ್ಯವೆಂಬ ತತ್ವವನ್ನು ಅತ್ಯಂತ ಖಚಿತವಾಗಿ ಮಂಡಿಸಿರುವುದಕ್ಕೂ ಇವರ ಈ ನಿಲುವೇ ಕಾರಣವಾಗಿದೆ. ಹೌದು ಈ ಎಲ್ಲ ಚರ್ಚೆಗಳು ಹಾಗೂ ಅಂಬೇಡ್ಕರ್ ಅವರು ಮಂಡಿಸಿದ ಪ್ರಸ್ತಾವನೆಯನ್ನೂ ಮೀರಿ ಇವತ್ತು ಭಾರತದ ರಾಜ್ಯಗಳು ತಮ್ಮ ಪ್ರಾದೇಶಿಕ ಭಾಷೆಗಳನ್ನೇ ಅಧಿಕೃತ ಭಾಷೆಗಳನ್ನಾಗಿ ಬಳಸುತ್ತಿವೆ. ಅಂದರೆ ಕರ್ನಾಟಕದಲ್ಲಿ ಕನ್ನಡ, ಆಂಧ್ರಪ್ರದೇಶ ಮತ್ತು ತೆಲಾಂಗಣದಲ್ಲಿ ತೆಲುಗು ಹಾಗೂ ತಮಿಳುನಾಡಿನಲ್ಲಿ ತಮಿಳು ಭಾಷೆಗಳನ್ನು ತಮ್ಮ ಅಧಿಕೃತ ರಾಜ್ಯ ಭಾಷೆಗಳನ್ನಾಗಿ ಅನುಷ್ಠಾನಗೊಳಿಸಲಾಗಿದೆ. ಆದರೆ ಈ ಯಾವ ರಾಜ್ಯಗಳಲ್ಲಿಯೂ ಕೂಡ ಇವತ್ತು ರಾಷ್ಟ್ರೀಯ ಅಪಐಕ್ಯತೆಯನ್ನಾಗಲೀ ಇಲ್ಲವೇ ಮಧ್ಯಕಾಲೀನ ಪರಿಸ್ಥಿತಿಯನ್ನು ಉಂಟು ಮಾಡುವ ಯಾವುದೇ ಅಪಾಯಗಳು ನಮಗೆ ಗೋಚರಿಸುತ್ತಿಲ್ಲ ಎಂಬ ವಾದಗಳೂ ಇವತ್ತು ಮುಂಚೂಣೆಯಲ್ಲಿವೆ.

ಹೌದು ರಾಜಕೀಯವಾಗಿ ಮಾತ್ನಾಡುವಾಗ ಈ ವಾದವು ಸರಿಯಾ–ಗಿಯೇ ಕಾಣುತ್ತದೆ. ಆದರೆ ಸಾಮಾಜಿಕ–ಆರ್ಥಿಕ ಸನ್ನಿವೇಶದಲ್ಲಿ ದಿನದಿಂದ ದಿನಕ್ಕೆ ತಲೆದೋರುತ್ತಿರುವ ಅಸಮಾನತೆಯ ಸವಾಲುಗಳನ್ನು ಪರಿಶೀಲಿಸಿ ನೋಡಿ–ದಾಗ, ಅಪಐಕ್ಯತೆಯ ಸ್ವರೂಪ ಮತ್ತು ಮಧ್ಯಕಾಲೀನ ಸಾಮಾಜಿಕ–ರಾಜಕೀಯ ಸನ್ನಿವೇಶದ ವಿನ್ಯಾಸಗಳು ನಿಚ್ಚಳಗೊಳ್ಳುತ್ತವೆ. ಮಧ್ಯಕಾಲೀನ ಸನ್ನಿವೇಶವನ್ನು ಕೇವಲ ಪರಸ್ಪರ ಯುದ್ಧ ಮಾಡುವುದಕ್ಕೆ ಮಾತ್ರ ಸೀಮಿತಗೊಳಿಸುವುದಲ್ಲ. ಇವತ್ತು ನಡೆಯುತ್ತಿರುವ ಧಾರ್ಮಿಕ ಸಾಮಾಜಿಕ ಸಂಘರ್ಷ ಹಾಗೂ ಅಸಹನೆಯ ವಿನ್ಯಾಸಗಳನ್ನು ಗಮನಿಸಿದಾಗ ನಮ್ಮ ಪ್ರಸ್ತುತ ಭಾರತವು ದಿಟವಾಗಿಯೂ ಆಧುನಿಕಗೊಂಡದೆಯೇ ಇಲ್ಲವೇ ಮಧ್ಯಕಾಲೀನ ಭಾರತವಾಗಿಯೇ ಇನ್ನೂ ಉಳದಿದೆ ಎನ್ನುವುದನ್ನು ಪತ್ತೆಹಚ್ಚಿ ನೋಡಬೇಕಿದೆ.

□



# ಹಂಗೇರಿಯಲ್ಲಿ ಬೇರುಬಿಟ್ಟ ಅಂಬೇಡ್ಕರ್

'ನಿರಂತರ ಹೋರಾಟಗಳಿಂದ ಮಾತ್ರ ನಾವು ಕಳೆದುಕೊಂಡ ಹಕ್ಕುಗಳನ್ನು ಮರಳಿ ಪಡೆಯುವುದು ಸಾಧ್ಯ; ಅವುಗಳ ಕಸಿದುಕೊಂಡವರ ಮನ ಪರಿವರ್ತನೆಯಾಗಲಿ ಎಂದು ಕಾಯುತ್ತಾ ಕೂರುವುದರಿಂದ ಯಾವುದೇ ಪ್ರಯೋಜನವಿಲ್ಲ'

**ಡಾ. ಬಿ . ಆರ್. ಅಂಬೇಡ್ಕರ್**

> **"ಅಂಬೇಡ್ಕರ್ ಚಿಂತನೆಗಳ ಪ್ರಭಾವದಿಂದ ಹಂಗೇರಿಯಾದ ತಿಬೋರ್ ಮತ್ತು ಜನೋಸ್ 2005 ಮತ್ತು 2007ರಲ್ಲಿ ಮಹಾರಾಷ್ಟ್ರಕ್ಕೆ ಭೇಟಿ ನೀಡುತ್ತಾರೆ. ಈ ಸಂದರ್ಭದಲ್ಲಿ ಭಾರತದಲ್ಲಿನ ದಲಿತರ ಸ್ಥಿತಿಗತಿ ಮತ್ತು ಅಂಬೇಡ್ಕರ್ ಅರಿವು ಆಳವಾಗಿ ಬೇರೂರಿರುವುದು ಅವರ ಗಮನಸೆಳೆಯುತ್ತದೆ. ಈ ಪ್ರಭಾವ ಎಷ್ಟು ಆಳವಾಗಿತ್ತು ಎಂದರೆ, ಹಂಗೇರಿಗೆ ಮರಳಿದ ನಂತರ, 2007ರಲ್ಲಿ ಅವರುಗಳು 'ಜೈ ಭೀಮ್ ನೆಟ್‌ವರ್ಕ' ಸ್ಥಾಪಿಸಿ, ಬೌದ್ಧದರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಅಷ್ಟೇ ಅಲ್ಲದೆ, ಅಂಬೇಡ್ಕರ್ ಹೆಸರಿನಲ್ಲಿ ರೊಮಾ ಮಕ್ಕಳಿಗಾಗಿ ಸುಜೊಕಾಜ್, ಓವಜ್ಡ ಮತ್ತು ಹೆಜಿಮಗ್‌ನಲ್ಲಿ ಶಾಲೆಗಳನ್ನು ತೆರೆಯುತ್ತಾರೆ"**

2008ರ ಏಪ್ರಿಲ್ ಹದಿನಾಲ್ಕರಂದು ಭಾರತದಾದ್ಯಂತ ಅಂಬೇಡ್ಕರ್ ಅವರ ಜನ್ಮದಿನ ಆಚರಿಸುವ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿ ಡೇರ್ಡಕ್ ತಿಬೋರ್ ಎಂಬುವವರಿಂದ ಒಂದು ಈ–ಮೇಲ್ ಬಂತು. ನಾನು ಬರೆದ "ಶಾಲೆಗಳು ಮತ್ತು ಶೌಚಾಲಯಗಳೋ.. ಅಥವಾ ದೇವಸ್ಥಾನಗಳೋ?" ಎಂಬ ಲೇಖನವನ್ನು 'ಈ–ಸಮೂಹ'(ಈ–ಗ್ರುಪ್) ಎಂಬಲ್ಲಿ ಓದಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. 'ಪ್ರತಿ ಬೀದಿಯ ಮೂಲೆಗೊಂದರಂತೆ ನಾವು ದೇವಾಲಯಗಳನ್ನು ಕಟ್ಟಿಸಿದ್ದೇವೆಯೇ ಹೊರತು, ಅಗತ್ಯವಿದ್ದಷ್ಟು ಶಾಲೆಗಳು ಮತ್ತು ಶೌಚಾಲಯಗಳನ್ನಲ್ಲ' ಎಂಬ ವಿಷಾದ ಈ ಬರಹದಲ್ಲಿತ್ತು. ತಿಬೋರ್ ತಾವೊಬ್ಬ ಸಮಾಜವಾದಿ ಮತ್ತು ಹಂಗೇರಿಯನ್ ಸಂಸತ್ತಿನ ಮಾಜಿ ಸದಸ್ಯ, ಸದ್ಯಕ್ಕೆ ರೊಮಾ (ಯುರೋಪಿನಾದ್ಯಂತ ಜಿಪ್ಸಿಗಳೆಂದೆ ಹೆಸರುವಾಸಿಯಾದ) ಸಮುದಾಯದ ಏಳ್ಗೆಗಾಗಿ ಶ್ರಮಿಸುತ್ತಿರುವ ಬಗ್ಗೆ ತಮ್ಮನ್ನು ಪರಿಚಯಿಸಿಕೊಂಡಿದ್ದರು. ನಂತರ ನಮ್ಮಿಬ್ಬರ ನಡುವೆ ನಿರಂತರವಾಗಿ ನಡೆದ ಈಮೇಲ್ ಸಂದೇಶಗಳಲ್ಲಿ ನಾನು ರೊಮಾ ಜನರ ಬದುಕು ಮತ್ತವರ ಬಿಕ್ಕಟ್ಟುಗಳ ಸೂಕ್ಷ್ಮತೆಗಳ ಬಗ್ಗೆ ತಿಳಿದುಕೊಂಡೆ, ಅಂತೆಯೇ ಭಾರತದಲ್ಲಿನ ದಲಿತರ ಸ್ಥಿತಿಗತಿಯ ಬಗ್ಗೆಯೂ ತಿಬೋರ್ ಅವರಿಗೆ ಸಾಧ್ಯವಾದಷ್ಟು ಅರ್ಥಮಾಡಿಸಿದ್ದೆ.

**ಗಮನಾರ್ಹ ಹೋಲಿಕೆಗಳು**

ಅಂಬೇಡ್ಕರರ ಸಾಮಾಜಿಕ ಸುಧಾರಣಾ ತತ್ವ ಮತ್ತು ದಲಿತಪರ ದೂರದೃಷ್ಟಿಯ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಓರ್ಸೋಸ್ ಜನೋಸ್ ಎಂಬ ಮತ್ತೊಬ್ಬ ರೊಮಾ ನಾಯಕನನ್ನು ತಿಬೋರ್ ಪರಿಚಯಿಸಿದರು. ಆತ ಅಂಬೇಡ್ಕರ್ ವಿಚಾರಧಾರೆಗಳ ಕಣ್ಣೋಟದಿಂದಲೆ ರೊಮಾ ಸಮುದಾಯದ ಸಮಾನ ಹಕ್ಕುಗಳ ಹೋರಾಟಗಳನ್ನು ರೂಪಿಸಿದ್ದ ಬಗ್ಗೆ ತಿಳಿದು ಅಚ್ಚರಿಯಾಯಿತು. ತಿಬೋರ್ ಅವರಿಗೆ ಪ್ಯಾರಿಸ್‌ನಲ್ಲಿ ಸಿಕ್ಕ ಅಂಬೇಡ್ಕರ್ ಕುರಿತ ಪುಸ್ತಕವೊಂದು ಅರಿವಿನ ಹೊಸ ಜಗತ್ತೊಂದನ್ನು ಪರಿಚಯಿಸಿತು. ಭಾರತದ ದಲಿತರು ಮತ್ತು ಯುರೋಪ್‌ನ ರೊಮಾಗಳು ಆಳದಲ್ಲಿ ಒಂದೇ ತೆರನಾದ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದಾರೆ ಎಂದು ಅರಿತರು.

ಮೂಲತಃ ಉತ್ತರ ಭಾರತದವರು ಎನ್ನಲಾಗುವ, ಯೂರೋಪಿನಲ್ಲಿ ಎಂಟು ಮಿಲಿಯನ್ನಿನಷ್ಟಿರುವ ರೊಮಾಗಳು ಅಥವಾ ಜಿಪ್ಸಿಗಳನ್ನು ಕಪ್ಪು ವರ್ಣದ ಯುರೋಪಿನ ಅಲೆಮಾರಿಗಳೆಂದು ಪರಿಗಣಿಸಲಾಗುತ್ತದೆ. ಬಾಹುಳ್ಯವುಳ್ಳ ಅಲ್ಪಸಂಖ್ಯಾತ ಬ್ಲಾಕ್‌ಗಳಾಗಿ ಇವರು ರೂಪಗೊಂಡಿದ್ದಾರೆ. ಹಂಗೇರಿಯಲ್ಲಿ ಶೇಕಡ ಏಳರಷ್ಟಿರುವ ರೊಮಾಗಳದ್ದು ಯೂರೋಪಿಯನ್ ಬಿಳಿಯರಿಂದ ಸತತ ಹಿಂಸೆ, ತಿರಸ್ಕಾರ, ತರತಮ, ಮತ್ತು ಕಳಂಕಕ್ಕೊಳಪಟ್ಟ ಇತಿಹಾಸವಾಗಿದೆ. ಅಂಬೇಡ್ಕರ್ ಚಿಂತನೆಗಳ ಪ್ರಭಾವದಿಂದ ತಿಬೋರ್ ಮತ್ತು ಜನೋಸ್ 2005 ಮತ್ತು 2007ರಲ್ಲಿ ಮಹಾರಾಷ್ಟ್ರಕ್ಕೆ ಭೇಟಿ ನೀಡುತ್ತಾರೆ. ಈ ಸಂದರ್ಭದಲ್ಲಿ ಭಾರತದಲ್ಲಿನ ದಲಿತರ ಸ್ಥಿತಿಗತಿ ಮತ್ತು ಅಂಬೇಡ್ಕರ್ ಅರಿವು ಆಳವಾಗಿ ಬೇರೂರಿರುವುದು ಅವರ ಗಮನಸೆಳೆಯುತ್ತದೆ.

ಈ ಪ್ರಭಾವ ಎಷ್ಟು ಆಳವಾಗಿತ್ತು ಎಂದರೆ, ಹಂಗೇರಿಗೆ ಮರಳಿದ ನಂತರ, 2007ರಲ್ಲಿ ಅವರುಗಳು 'ಜೈ ಭೀಮ್ ನೆಟ್‌ವರ್ಕ' ಸ್ಥಾಪಿಸಿ, ಬೌದ್ಧದರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಅಷ್ಟೇ ಅಲ್ಲದೆ, ಅಂಬೇಡ್ಕರ್ ಹೆಸರಿನಲ್ಲಿ ರೊಮಾ ಮಕ್ಕಳಿಗಾಗಿ ಸುಜೊಕಾಜ್, ಓವಜ್ಡ ಮತ್ತು ಹೆಜಿಮಗ್‌ನಲ್ಲಿ ಶಾಲೆಗಳನ್ನು



ಅಂಬೇಡ್ಕರ್ ಕಾರವಾನ್ ವೆಬ್ ಸೈಟನ್ನು ನಡೆಸುವ ಮೂಲಕ ಜಾತಿವಿರೋಧಿ ಚಳವಳಿಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡ ಪ್ರದೀಪ್ ಅತ್ರಿ, 2017 ರಲ್ಲಿ ಆರಂಭವಾದ 'ವೆಲಿವಾಡ' ಅಂತರ್ಜಾಲ ಸುದ್ದಿಮಾಧ್ಯಮದ ಸಂಸ್ಥಾಪಕ ಸಂಪಾದಕ. ಪ್ರದೀಪ್ ನಿರಂತರವಾಗಿ ದಲಿತಪರವಾದ ಬರಹಗಳನ್ನು ಆನ್‌ಲೈನ್ ಪೋರ್ಟಲ್‌ಗಳಿಗೆ ಬರೆಯುತ್ತಿರುತ್ತಾರೆ. ಪ್ರಸಕ್ತ ವಿದ್ಯಮಾನಗಳನ್ನು ದಲಿತ ಕಣ್ಣೋಟದಿಂದ ಪ್ರಖರವಾಗಿ ವಿಶ್ಲೇಷಿಸುವ ಭಾರತದ ಹೊಸ ತಲೆಮಾರಿನ ದಲಿತ ಚಿಂತಕರಲ್ಲಿ ಪ್ರಮುಖರು.

## ಮೂಲ: ಪ್ರದೀಪ್ ಅತ್ರಿ

Email:pardeepattri@gmail.com



ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಕರೀಕಟ್ಟಿ ಎಂಬ ಹಳ್ಳಿಯ ಪರಿಮಳ ಕಮತರ ಸದ್ಯಕ್ಕೆ ಕಲಬುರಗಿಯ ಖಾಜಾ ಬಂದೇನವಾಜ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ. 'ಈ ಹೂವ ಹೆಸರು ನಿಮ್ಮಿಚ್ಛೆಯಂತೆ' ಕವಿತಾ ಸಂಕಲನದ ಮೂಲಕ ಭರವಸೆಯ ಕವಯಿತ್ರಿಯಾಗಿ ಗಮನಸೆಳೆದಿದ್ದಾರೆ. ಟ್ರಾನ್ಸ್ ಜೆಂಡರ್ ಅನುಭವ ಕಥನಗಳ ಕುರಿತಂತೆ ಕರ್ನಾಟಕ ಕೇಂದ್ರೀಯ ವಿವಿಯಲ್ಲಿ ಪಿಹೆಚ್.ಡಿ ಪೂರೈಸಿದ್ದಾರೆ.


## ಅನುವಾದ: ಪರಿಮಳ ಕಮತರ

Email: pgkamatar@gmail.com

ತೆರೆಯುತ್ತಾರೆ. ಜಾಗತಿಕ ಯುವ ದಲಿತ ಹೋರಾಟಗಾರರನ್ನು ಹಂಗೇರಿಗೆ ಕರೆಸಿ ರೊಮಾ ಸಮುದಾಯದ ಜನರೊಂದಿಗೆ ಸಂವಾದ ಏರ್ಪಡಿಸುವುದು 'ಜೈ ಭೀಮ್ ನೆಟ್‌ವರ್ಕ'ನ ಮುಖ್ಯ ಗುರಿಯನ್ನಾಗಿಸಿಕೊಳ್ಳುತ್ತಾರೆ. ಇವರುಗಳು ಆಮಂತ್ರಣ ನೀಡಿದ ಮೂರು ಜನರ ನಿಯೋಗದಲ್ಲಿ ನಾನೂ ಒಬ್ಬನಾಗಿ ಹೋಗಿಬಂದೆ. ಸುಜೊಕಾಜ್ ಹಳ್ಳಿಯಲ್ಲಿ ಸುಮಾರು ಒಂದು ತಿಂಗಳವರೆಗೆ ರೊಮಾ ಸಮುದಾಯದ ಜನರೊಡನೆ ಬೆರೆತಿದ್ದೆ.

**ಸುಜೊಕಾಜ್‌ದಲ್ಲಿ ಬದುಕು**

ಹಂಗೇರಿಯ ಈಶಾನ್ಯದ ಮಿಶ್ಕೋಲ್ಟ್‌ದಿಂದ ಸುಮಾರು ಮೂವತ್ತು ಕಿಲೋಮೀಟರ್ ದೂರದಲ್ಲಿರುವ ಒಂದು ಸುಂದರ ಹಳ್ಳಿ ಸುಜೊಕಾಜ್. ಸುಮಾರು 3300 ಜನಸಂಖ್ಯೆ ಹೊಂದಿರುವ ಅಲ್ಲಿನ ಅರ್ಧದಷ್ಟು ಜನ ನೀರು, ಬೀದಿ ದೀಪ, ಒಳಚರಂಡಿ ವ್ಯವಸ್ಥೆ ಇಲ್ಲದ ಹಳ್ಳಿಯ ಹೊರಗಿರುವ ಕೇರಿಗಳಲ್ಲಿ ವಾಸವಾಗಿದ್ದಾರೆ. ಕೇರಿಯ ಪಕ್ಕವೆ ಇರುವ ಬೇರೆ ಜನರಿಗೆ ಈ ಎಲ್ಲಾ ಸೌಲಭ್ಯಗಳಿವೆ. ಬಹಳ ಹಿಂದೆ ಹತ್ತಿರದ ಗಣಿಗಾರಿಕೆಯಲ್ಲಿ ರೊಮಾಗಳು ದುಡಿಯುತ್ತಿದ್ದರು. ಆದರೀಗ ಬಹುಪಾಲು ನಿರುದ್ಯೋಗಿಗಳಾಗಿದ್ದು ಸರ್ಕಾರದ ಮಾಸಿಕ ವೇತನವನ್ನು ಆಶ್ರಯಿಸಿ ಬದುಕುತ್ತಿದ್ದಾರೆ. ಭಾರತದಲ್ಲಿನ ಜಾತಿಯ ಕಾರಣಕ್ಕೆ ದಲಿತರ ಶೋಷಣೆಗೂ, ಯುರೋಪ್‌ನಲ್ಲಿ ವರ್ಣದ ಕಾರಣಕ್ಕೆ ರೊಮಾಗಳ ಶೋಷಣೆಗೂ ವ್ಯತ್ಯಾಸವೇನಿರಲಿಲ್ಲ. ಸುಜೊಕಾಜ್‌ದಲ್ಲಿ ಮೂರು ಚರ್ಚುಗಳಿದ್ದರೂ, ರೊಮಾಗಳು ಚರ್ಚುಗಳಿಗೆ ಕಾಲಿಡುವಂತಿರಲಿಲ್ಲ. ಭಾರತದಲ್ಲಿ ದಲಿತರಿಗೆ ಹಿಂದೂ ದೇವಾಲಯಗಳ ಪ್ರವೇಶ ನಿಶಿದ್ಧದಂತೆ ಇಲ್ಲಿ ರೊಮಾಗಳಿಗೂ ಚರ್ಚುಗಳು ನಿಶಿದ್ಧ.



ರೊಮಾ ಮಕ್ಕಳು ಖಡ್ಡಾಯವಾಗಿ ಶಾಲೆಗಳ ಪ್ರತ್ಯೇಕ ಕೊಠಡಿಗಳಲ್ಲಿ ಕುಳಿತು ಕಲಿಯಬೇಕು. ಇದುವೆ ರೊಮಾಗಳ ಶಿಕ್ಷಣಕ್ಕೆ ಅಡ್ಡಿಯಾಗಿದೆ. ರೊಮಾಗಳ ಹೊರತುಪಡಿಸಿದ ಹಂಗೇರಿಯಾ ಮಕ್ಕಳು ಸುಸಜ್ಜಿತ ಸೌಕರ್ಯಗಳುಳ್ಳ ಶಾಲಾ ಕೊಠಡಿಗಳಲ್ಲಿ ಕುಳಿತರೆ, ರೊಮಾ ಮಕ್ಕಳು ಯಾವುದೇ ಮೂಲಭೂತ ಅವಶ್ಯಕತೆಗಳಿಲ್ಲದ ಶಿಥಿಲಗೊಂಡ ಶಾಲಾ ಕೊಠಡಿಗಳಲ್ಲಿ ಕಲಿಯುತ್ತಾರೆ. ಹತ್ತು ವರ್ಷಗಳ ಹಿಂದೆ ಶಾಲೆಗಳಲ್ಲಿ ರೊಮಾ ಮಕ್ಕಳಿಗೆ ಪ್ರತ್ಯೇಕ ತಟ್ಟೆ ಮತ್ತು ಚಹಾ ಕಪ್ಪುಗಳಿದ್ದವು. ಹೀಗೆ ರೊಮಾಗಳು ಅವಮಾನ, ಹಿಂಸೆ, ಬಹಿಷ್ಕಾರಗಳಂತಹ ಅಮಾನವೀಯ ವಾತಾವರಣದಲ್ಲಿ ಬದುಕುತ್ತಲೆ, 'ಮಾನಸಿಕ ಅಸ್ವಸ್ಥ'ರೆಂದು ಘೋಷಿಸಲ್ಪಟ್ಟು, ಇದಕ್ಕಾಗಿಯೇ ಪೂರ್ವನಿಯೋಜಿತ ವಿಶೇಷ ಶಾಲೆಗಳಿಗೂ ತಳ್ಳಲ್ಪಟ್ಟರು.

ಹಂಗೇರಿಯಾದ ಶೇಕಡ ತೊಂಬತ್ತರಷ್ಟು ವಿಶೇಷ ಶಾಲೆಯ ಮಕ್ಕಳು ರೊಮಾ ಸಮುದಾಯದವರಾಗಿದ್ದರು. ಈ ಪ್ರತ್ಯೇಕತೆ ಕೇವಲ ಶಾಲೆಗಳಿಗಷ್ಟೆ ಸೀಮಿತವಾಗಿರಲಿಲ್ಲ. ಅದು ಹೆರಿಗೆ ವಿಭಾಗ ಮತ್ತು ಕೋಣೆಗಳಿಗೂ ವಿಸ್ತರಿಸಿತ್ತು. ಯೂರೋಪಿನ ರೊಮಾ ಹಕ್ಕುಗಳ ಕೇಂದ್ರ (ಏ.ಆರ್.ಆರ್.ಸಿ) 2003 ರಲ್ಲಿ ಹಂಗೇರಿಯಲ್ಲಿ ನಡೆಸಿದ ಅಧ್ಯಯನ ವರದಿಯಲ್ಲಿ ಪ್ರತ್ಯೇಕಿತ ಹೆರಿಗೆ ವಾರ್ಡು/ಕೋಣೆಗಳ ನಲವತ್ನಾಕು 'ಜಿಪ್ಸಿ ರೂಮುಗಳ' ಬಗೆಗೆ ಕೇಸುಗಳು ದಾಖಲಾಗಿದ್ದವು.

ರೊಮಾಗಳ ಬಗೆಗಿನ ಬಿಳಿಯರ ಪೂರ್ವಾಗ್ರಹಗಳು ಅಸಂಖ್ಯ. ರೊಮಾಗಳು ದುಡಿಯಲಾರದ ಸೋಮಾರಿಗಳು, ಬಿಕ್ಷುಕರು, ಕಳ್ಳರು, ಮೋಸಗಾರರೆಂದೂ, ಜೇಬುಗಳ್ಳತನ ಮಾಡಲು ಅನುವಾಗಲೆಂದು ಜಿಪ್ಸಿಗಳು ತಮ್ಮ ತೋರು ಬೆರಳುಗಳನ್ನು ಕತ್ತರಿಸಿಕೊಳ್ಳುತ್ತಾರೆ ಮತ್ತು ಬೀದಿಗಳಲ್ಲಿ ಬಿಳಿ ರೈತರ ಕೋಳಿಗಳ ಕದಿಯಲೆಂದೆ ರೊಮಾ ಮಕ್ಕಳು ಉದ್ದನೆ ನಿಲುವಂಗಿ ತೊಡುತ್ತಾರೆಂದು ಭಾವಿಸುತ್ತಾರೆ.

ಯುರೋಪಿನ ಪ್ರವಾಸೋದ್ಯಮ ಉತ್ತೇಜಿಸುವ ಅಂತರ್ಜಾಲ ತಾಣಗಳಲ್ಲಿಯೂ ಬಿಳಿಯರು ಜಗತ್ತಿಗೆ ರೊಮಾಗಳ ಬಗೆಗಿನ ಪೂರ್ವಾಗ್ರಹಗಳನ್ನು ವಿಸ್ತರಿಸುತ್ತಾರೆ. 'ರೋಮ್‌ನಲ್ಲಿ ವಯಕ್ತಿಕ ಭದ್ರತೆ' ಎನ್ನುವ ಶೀರ್ಷಿಕೆಯಡಿ 'ಜಿಪ್ಸಿಗಳು ನಿಮ್ಮನ್ನು ಸುತ್ತುವರಿದು ಉಪಾಯದಿಂದ ನಿಮ್ಮ ವಸ್ತುಗಳನ್ನು ಕದ್ದು ರೊಮಾ ಹೆಣ್ಣುಮಕ್ಕಳಿಗೆ ಹಸ್ತಾಂತರಿಸಿ ತಪ್ಪಿಸಿಕೊಳ್ಳುತ್ತಾರೆ' ಎಂದು ಸೂಚಿಸಲಾಗಿದೆ. ಬಿಳಿಯರ ಪೂರ್ವಾಗ್ರಹ ಎಷ್ಟಿದೆಯೆಂದರೆ, ಹಂಗೇರಿಯಲ್ಲಿ ಎಲ್ಲಿಯೇ ಕಳ್ಳತನವಾದರೂ ಮೊದಲು ವಿಚಾರಿಸುವುದು ಸುತ್ತಮುತ್ತಣ ರೊಮಾ ಜನರನ್ನೆ.

ಬಿಳಿಯರು ರೊಮಾಗಳ ಬಗ್ಗೆ ಕಟ್ಟಿದ ಕತೆಗಳಲ್ಲಿ ಭಯಾನಕ ಸಂಗತಿಯೆಂದರೆ, ಅಲ್ಲಿನ ಗರ್ಭಿಣಿಯರ ಕುರಿತದ್ದು. ಈಶಾನ್ಯ ಹಂಗೇರಿಯ ಎಡೆಲೆನಿಯ ಪುರಸಭಾಧ್ಯಕ್ಷರಾದ ಒಸಜ್ಕರ್ ಮೊಲ್ನಾರ್ ಎಂಬಾತ 'ಹೆಚ್ಚುವರಿ ಮಕ್ಕಳಿಗೆ ದೊರೆಯುವ ಅವಕಾಶಕ್ಕಾಗಿ ರೊಮಾ ಗರ್ಭಿಣಿಯರು ಹೆರುವ ಮಕ್ಕಳು, ಹುಟ್ಟಲಿರುವ ಬಿಳಿಯರ ಮಕ್ಕಳ ಅವಕಾಶವನ್ನು ಕಿತ್ತುಕೊಳ್ಳುತ್ತಾರೆ' ಎಂದು ಅಭಿಪ್ರಾಯ ಪಟ್ಟಿದ್ದ. ಸಮಾನ ಹಕ್ಕುಗಳ ಆಯೋಗ ಮೊಲ್ನಾರ್ ಈ ಹೇಳಿಕೆ ವಿರುದ್ಧ ಕೇಸ್ ದಾಖಲಿಸಿತ್ತು. 2009 ರಲ್ಲಿ ಬುಡಾಪೆಸ್ಟ್‌ನಲ್ಲಿರುವ 'ಹೀರೋಸ್ ಸ್ಕ್ವೇರ್' ಎಂಬಲ್ಲಿ ಸುಮಾರು 1500 ರೊಮಾಗಳು ಮೊಲ್ನಾರ್ ವಿರುದ್ಧ ಪ್ರತಿಭಟಿಸಿದ್ದರು. ಹಾಗೆಯೇ ಬಿಳಿಯರ ಎಲ್ಲ ಬಗೆಯ ತಾರತಮ್ಯಗಳ ವಿರುದ್ಧ ಸಿಡಿದೆದ್ದಿದ್ದರು. ಈ ಚಳವಳಿಯಲ್ಲಿ ಒಂದು ಬರಹ ನನ್ನ ಗಮನ ಸೆಳೆಯಿತು. 'ರೊಮಾ ಮಕ್ಕಳ ತಲೆಗಳು ಏನನ್ನಾದರೂ ತುಂಬುವ ಖಾಲಿ ಗಡಿಗೆಗಳಲ್ಲ, ಬದಲಿಗೆ ಪ್ರಜ್ವಲಿಸುವ ದೀವಟಿಗೆಗಳು' ಎನ್ನುವುದಾಗಿತ್ತು.


'ಜೈ ಭೀಮ್ ನೆಟ್‌ವರ್ಕ' ಸ್ಥಾಪಕರಾದ ಜನೋಸ್ 'ನಾವು ಅಂಬೇಡ್ಕರವಾದಿ ಬೌದ್ಧಧರ್ಮಕ್ಕೆ ಹೊರಳಿದಾಗ, 'ನೀವು ಜಿಪ್ಸಿಗಳಿಗೆ ಬುದ್ದಿಸಂ ಹೇಗೆ ಕಲಿಸುತ್ತೀರೆಂದು? ಎಂದು ಬಿಳಿಯರು ಕೇಳಿದರು. ಕಾರಣ ಯುರೋಪಿನಲ್ಲಿ ಬುದ್ಧಿಜಂ ಎಂದರೆ, ಮಧ್ಯಮವರ್ಗದವರ ವಿರಾಮವೇಳೆಯ ಶೋಕಿಯಾಗಿದೆ. ಹಾಗಾಗಿ ಇದರಿಂದ ಜಿಪ್ಸಿಗಳಿಗೇನು ಲಾಭ ಎಂದು ಸಹಜವಾಗಿ ತಿಳಿದಿರಬೇಕು. ಆದರೆ ಅವರಿಗೆ ನಮ್ಮ ಉತ್ತರವಿಷ್ಟೇ, 'ನೀವು ಜಿಪ್ಸಿಗಳಿಗೆ ಸರಿಯಾದ ಪ್ರಾಥಮಿಕ, ಪ್ರೌಢ ಶಿಕ್ಷಣವನ್ನೂ ಕೊಡಲಿಲ್ಲ, ನಾವು ಈಗ ಇಂತಹ ಶಿಕ್ಷಣದ ಜೊತೆಗೇ ಸಮತೆಯ ಬುದ್ಧಿಜಂನ್ನೂ ಕಲಿಸುತ್ತೇವೆ' ಎನ್ನುತ್ತೇವೆ. ಜನಗಳು ಏನನ್ನಾದರೂ ಹೇಳಲಿ, ಅಂಬೇಡ್ಕರ್ ಚಿಂತನೆಯ ಪರಿಣಾಮ ನಮ್ಮ ಕೆಲಸದಲ್ಲಿ ನಮಗೆ ವಿಶ್ವಾಸ ಮೂಡಿದೆ, ನಾವದನ್ನು ದೃಢವಾಗಿ ಮುನ್ನಡೆಸುತ್ತೇವೆ. ಒಂದಲ್ಲಾ ಒಂದು ದಿನ ಗೆಲುವು ಸಾಧಿಸುತ್ತೇವೆ. □

**ಜಟಿಲ ಕಸ್ಸಪರು ಒಂದು ಮಟ್ಟದ ಸಾಧನೆಗೈದಿದ್ದಾರೆಂದೂ, ಪುಣ್ಯವನ್ನು ಗಳಿಸಿದ್ದಾರೆಂದೂ ಬುದ್ಧರಿಗೆ ತಿಳಿದಿರುತ್ತದೆ. ಅವರನ್ನು ನಿಬ್ಬಾಣದ ಹಾದಿಗೆ ತರಲು ಸಹಾಯ ಮಾಡಬೇಕೆಂದು ಮನಸ್ಸು ಮಾಡುತ್ತಾರೆ. ಎರಡನೆಯ ದಿನ ರಾತ್ರಿ ಚತುಮ್ಮಹಾರಾಜಿಕರೆಂಬ ನಾಲ್ಕು ದಿಕ್ಕುಗಳ ದೇವತೆಗಳು ಬುದ್ಧರ ದರ್ಶನಕ್ಕಾಗಿ ಬರುತ್ತಾರೆ. ಆ ದೇವತೆಗಳ ತೇಜೋರಾಶಿಯು ಆಶ್ರಮದ ನಾಲ್ಕು ದಿಕ್ಕುಗಳನ್ನೂ ಆವರಿಸಿಕೊಳ್ಳುತ್ತದೆ. ಕಸ್ಸಪ ಮತ್ತು ಅವನ ಶಿಷ್ಯರು ಆ ದೃಶ್ಯವನ್ನು ನೋಡಿ ದಿಗ್ಭ್ರಾಂತರಾಗುತ್ತಾರೆ. ಮರುದಿನ ಭೋಜನದ ವೇಳೆ ಕಸ್ಸಪ ಆ ಸರಿರಾತ್ರಿಯಲ್ಲಿ ನಿಮ್ಮನ್ನು ಸಂಧಿಸಿದವರು ಯಾರು ಎಂದು ಕೇಳುತ್ತಾನೆ. ಅವರು ಚತುಮ್ಮಹಾರಾಜಿಕರೆಂಬ ನಾಲ್ಕು ದಿಕ್ಕಿನ ದೇವತೆಗಳು, ಗೌರವ ಸಲ್ಲಿಸಲು ಮತ್ತು ಧಮ್ಮವನ್ನು ಕೇಳಲು ಬಂದಿದ್ದರು ಎಂದು ಬುದ್ಧ ಹೇಳುತ್ತಾರೆ. ಕಸ್ಸಪ ಯೋಚಿಸುತ್ತಾನೆ 'ಓ, ಎಂಥಾ ಪ್ರಬಲ ಸಂನ್ಯಾಸಿ ಈತ, ಆದರೆ ನನ್ನಂತೆ ಅರಹಂತನಲ್ಲ' ಎಂದುಕೊಳ್ಳುತ್ತಾನೆ. ಬುದ್ಧರಿಗೆ ಅವನ ಅಹಂಕಾರ ಗುಣದ ಅರಿವಾಗುತ್ತದೆ. ಇವನನ್ನು ಸರಿಯಾದ ಸಮಯದಲ್ಲಿ ತಿದ್ದಬೇಕು ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ. ಇದು ಬುದ್ಧರ ಎರಡನೆಯ ಅತೀಂದ್ರಿಯ ಪ್ರದರ್ಶನವಾಗಿದೆ.**

**ಮೂ**ವತ್ತು ರಾಜಕುವರರು

ಬುದ್ಧರು ಕಾಶಿಯಿಂದ ಉರುವೇಲದ ಕಡೆಗೆ ತೆರಳುತ್ತಿರುವಾಗ ವಿಶ್ರಾಂತಿಯನ್ನು ಬಯಸಿ ಕಪ್ಪಸಿಕ ಅರಣ್ಯದಲ್ಲಿ ಒಂದು ಮರದ ಕೆಳಗೆ ಕುಳಿತುಕೊಳ್ಳುತ್ತಾರೆ. ಅದೇ ಸಮಯದಲ್ಲಿ ಕೋಸಲರಾಜನ ಸಹಸಹೋದರರಾದ ಮೂವತ್ತು ರಾಜಕುಮಾರರು ತಮ್ಮ ಪತ್ನಿಯರೊಡಗೂಡಿ ವನವಿಹಾರಕ್ಕೆ ಬಂದಿರುತ್ತಾರೆ. ಅವರಲ್ಲಿ ಅವಿವಾಹಿತನಾಗಿದ್ದ ಒಬ್ಬನು ಜೊತೆಗಾರ್ತಿಯಾಗಿ ಒಬ್ಬ ಗಣಿಕೆಯನ್ನು ಕರೆತಂದಿರುತ್ತಾನೆ. ರಾಜಕುಮಾರರು ಮತ್ತು ಅವರ ಪತ್ನಿಯರು ತಮ್ಮ ಒಡವೆ ವಸ್ತ್ರಗಳನ್ನೆಲ್ಲಾ ಕಳಚಿ ಒಂದೆಡೆ ಇರಿಸಿ ಜಲಕ್ರೀಡೆಗಾಗಿ ನದಿಗೆ ಇಳಿಯುತ್ತಾರೆ. ಅದೇ ಸಂದರ್ಭಕ್ಕಾಗಿ ಹೊಂಚುಹಾಕುತ್ತಿದ್ದ ಆ ಗಣಿಕಾ ಸ್ತ್ರೀ ಒಡವೆಗಳನ್ನು ದೋಚಿಕೊಂಡು ಪರಾರಿಯಾಗಿಬಿಡುತ್ತಾಳೆ. ರಾಜಕುಮಾರರು ಮತ್ತು ಅವರ ಪತ್ನಿಯರಿಗೆ ತಮ್ಮ ಒಡವೆಗಳು ಕಾಣೆಯಾಗಿರುವುದು ತಿಳಿದು ಚಿಂತಿತರಾಗಿ ಆ ಗಣಿಕೆಯನ್ನು ಹುಡುಕುತ್ತಾ ಬುದ್ಧರು ಕುಳಿತಿರುವ ಜಾಗಕ್ಕೆ ಬರುತ್ತಾರೆ. ಧ್ಯಾನದಲ್ಲಿ ಕುಳಿತಿದ್ದ ಬುದ್ಧರನ್ನು "ಸ್ವಾಮಿ, ಈ ದಾರಿಯಲ್ಲಿ ಒಬ್ಬ ಹೆಂಗಸು ಹೋಗಿದ್ದನ್ನು ತಾವು ನೋಡಿದಿರಾ" ಎಂದು ಕೇಳುತ್ತಾರೆ. ಬುದ್ಧ 'ಆ ಹೆಂಗಸಿನಿಂದ ನಿಮಗೇನಾಗಬೇಕಾಗಿದೆ ತರುಣರೇ?' ಎಂದು ಕೇಳುತ್ತಾರೆ. ಆಗ ರಾಜಕುಮಾರರು ನಡೆದುದೆಲ್ಲವನ್ನೂ ವಿವರಿಸುತ್ತಾರೆ. ಆ ಯುವ ಸಮೂಹದ ಪ್ರಜ್ಞೆಯ ಪರಿಪಕ್ವತೆಯನ್ನು ತಮ್ಮ ದಿವ್ಯ ದೃಷ್ಟಿಯಿಂದ ಅರಿತ ಭಗವಾನರು 'ಯುವಕರೇ, ಯಾವುದು ಮುಖ್ಯ ಹಾಗೂ ಶ್ರೇಷ್ಠವೆಂದು ಯೋಚಿಸಿ ಹೇಳಿ. ನೀವು ಆ ಹೆಂಗಸನ್ನು ಹುಡುಕುವುದೋ ಅಥವಾ ನಿಮ್ಮನ್ನು ನೀವು ಹುಡುಕಿಕೊಳ್ಳುವುದೋ?' ಪ್ರಶ್ನೆಯಿಂದ ಚಕಿತರಾದ ಯುವಕರು "ನಮ್ಮನ್ನು ನಾವು ಹುಡುಕುವುದು ಮುಖ್ಯ ಹಾಗೂ ಶ್ರೇಷ್ಠ ಸ್ವಾಮಿ" ಎಂದು ಒಕ್ಕೊರಲಿನಲ್ಲಿ ಹೇಳುತ್ತಾರೆ. ಹಾಗಾದರೆ ಬಂದು ಕುಳಿತುಕೊಳ್ಳಿರಿ, ನಿಮಗೆ ಧಮ್ಮವನ್ನು ಉಪದೇಶಿಸುತ್ತೇನೆ ಎಂದು ಬುದ್ಧ ಆಹ್ವಾನಿಸುತ್ತಾರೆ. ಅವರೆಲ್ಲರೂ ಬುದ್ಧರಿಗೆ ವಂದಿಸಿ ಒಂದೆಡೆ ಕುಳಿತುಕೊಳ್ಳುತ್ತಾರೆ. ಬುದ್ಧ ಅವರಿಗೆ ಧಮ್ಮವನ್ನು ಹಂತ ಹಂತವಾಗಿ ವಿವರಿಸುತ್ತಾರೆ. ಯುವಕರ ಧಮ್ಮಚಕ್ಕುವು ಉದ್ದೀಪನಗೊಳ್ಳುತ್ತದೆ. ಅವರೆಲ್ಲರಿಗೂ ಸೋತಾಪತ್ತಿ ಫಲವು ಲಭಿಸುತ್ತದೆ. ಅವರ ಇಚ್ಛೆಯಂತೆ 'ಏಹಿ ಭಿಕ್ಕುವೇ' ಎಂದು ಹೇಳಿ ಸಂಘಕ್ಕೆ ಬರಮಾಡಿಕೊಳ್ಳುತ್ತಾರೆ. ಮುಂದೆ ಅವರು ಪವೇಯಕ ಥೇರರೆನಿಸಿಕೊಳ್ಳುತ್ತಾರೆ [ಪವೆಯ್ಯ ನಗರದಿಂದ ಬಂದವರಾದ್ದರಿಂದ]. ಮುಂದೆ ಬುದ್ಧರ 'ಅನಮತಗ್ಗ ಸಂಸಾರವತ್ತ' ಎಂಬ ಉಪದೇಶವನ್ನು ಕೇಳಿದಾಗ ಅವರೆಲ್ಲರಿಗೂ ಅರಹಂತತ್ವ ಪ್ರಾಪ್ತವಾಗುತ್ತದೆ.


ಮೂವರು ಜಟಿಲ ಕಶ್ಯಪ ಋಷಿಗಳು ಮತ್ತು ಅವರ ಒಂದು ಸಾವಿರ ಶಿಷ್ಯರು



ಡಾ. ಮೂಡ್ನಾಕೂಡು ಚಿನ್ನಸ್ವಾಮಿ

# ಧಮ್ಮಯಾನ

20



# ಧರ್ಮೋಪದೇಶ ಮತ್ತು ಪರಿವರ್ತನೆ

ಬುದ್ಧರು ತಮ್ಮ ಪ್ರಯಾಣವನ್ನು ಮುಂದುವರೆಸುತ್ತಾ ಉರುವೇಲಕ್ಕೆ ಬರುತ್ತಾರೆ. ಅಲ್ಲಿ ಅಗ್ನಿ ಆರಾಧಕನಾದ ಉರುವೇಲ ಕಸ್ಸಪ ತನ್ನ ಐನೂರು ಶಿಷ್ಯರೊಂದಿಗೆ ಆಶ್ರಮವಾಸಿಯಾಗಿರುತ್ತಾನೆ. ಬುದ್ಧರು ಆಶ್ರಮದ ಅಗ್ನಿಕರ್ಮಗಳು ನಡೆಯುತ್ತಿದ್ದ ಸ್ಥಳದಲ್ಲಿ ಒಂದು ರಾತ್ರಿಯನ್ನು ಕಳೆಯಲು ಕಸ್ಸಪನ ಅನುಮತಿಯನ್ನು ಕೋರುತ್ತಾರೆ. ಆದರೆ ಕಸ್ಸಪನು ಒಪ್ಪುವುದಿಲ್ಲ. ಯಾಕೆಂದರೆ ಅದು ಅತ್ಯಂತ ಪ್ರಬಲನಾದ ನಾಗರಾಜ ಮುಚಲಿಂದನ ಆಶ್ರಯತಾಣವಾಗಿರುತ್ತದೆ. ಅಲ್ಲಿ ಮಲಗುವುದರಿಂದ ನಿನ್ನ ಜೀವಕ್ಕೆ ಅಪಾಯವಾಗಬಹುದು ಎಂದು ಕಸ್ಸಪ ತಿಳಿಹೇಳುತ್ತಾನೆ. ಬುದ್ಧ ಎರಡನೆಯ ಬಾರಿ ಕೇಳುತ್ತಾರೆ, ಮೂರನೆಯ ಬಾರಿಯೂ ಕೇಳುತ್ತಾರೆ. ಆದರೆ ಕಸ್ಸಪನಿಂದ ಅದೇ ಉತ್ತರ ದೊರಕುತ್ತದೆ. ನಾಲ್ಕನೆಯ ಬಾರಿ ಬುದ್ಧರು ನಾಗರಾಜನಿಂದ ನನಗೇನೂ ತೊಂದರೆ ಉಂಟಾಗುವುದಿಲ್ಲವೆಂದು, ನಾಗಗಳ ಭಯ ನನಗಿಲ್ಲವೆಂದು ವಿನಮ್ರವಾಗಿ ಅರುಹುತ್ತಾರೆ. ಹಾಗಾದರೆ ನಿನ್ನಿಷ್ಟದಂತೆ ಮಾಡು ಎಂದು ಕಸ್ಸಪ ತಂಗಲು ಅವಕಾಶ ನೀಡುತ್ತಾನೆ.

ಅಗ್ನಿ ಯಾಗಶಾಲೆಯನ್ನು ಪ್ರವೇಶಿಸಿದ ಬುದ್ಧರು ಒಂದು ಹುಲ್ಲು ಚಾಪೆಯನ್ನು ಹಾಸಿಕೊಂಡು ಧ್ಯಾನಸ್ಥರಾಗಿ ಕುಳಿತುಕೊಳ್ಳುತ್ತಾರೆ. ಬುದ್ಧರನ್ನು ನೋಡಿದ ಮುಚಲಿಂದನು ಕೋಪಾವಿಷ್ಟನಾಗಿ ತನ್ನ ನಾಲಿಗೆಯಿಂದ ವಿಷಯುಕ್ತ ಜ್ವಾಲೆಯನ್ನು ಘೂತ್ಕರಿಸುತ್ತಾನೆ. ಸ್ವಲ್ಪವೂ ವಿಚಲಿತರಾಗದ ಬುದ್ಧರು ತಮ್ಮ ಕರುಣಾ ದೃಷ್ಟಿಯಿಂದ ನೇರವಾಗಿ ದಿಟ್ಟಿಸುವ ಮೂಲಕ ಜ್ವಾಲೆಯನ್ನು ಶಮನಗೊಳಿಸುತ್ತಾರೆ. ನಾಗ ರಾಜನು ಮತ್ತಷ್ಟು ವಿಷಯುಕ್ತ ಜ್ವಾಲೆಯನ್ನು ಉಗುಳುತ್ತಾನೆ. ಅದೂ ಶಮನಗೊಳ್ಳುತ್ತದೆ. ಕೆರಳಿದ ನಾಗ ರಾಜನು ತನ್ನೆಲ್ಲ ಬಲ ಪ್ರಯೋಗದಿಂದ ವಿಷಾನಿಲದ ಬೆಂಕಿಯನ್ನು ಕಾರುತ್ತಾನೆ. ಬುದ್ಧರು ಮೆತ್ತ ಭಾವನದಿಂದ ಅವನ ಕೋಪವನ್ನು ತಗ್ಗಿಸಿ ಪಳಗಿಸುತ್ತಾರೆ. ದುರ್ಬಲಗೊಂಡು ಶಾಂತನಾದ ಮುಚಲಿಂದನನ್ನು ತಮ್ಮ ಭಿಕ್ಷಾಪಾತ್ರೆಯೊಳಗೆ ಕೂಡಿಹಾಕಿ ವಿಶ್ರಾಂತಿಗೆ ಮರಳುತ್ತಾರೆ.

ಈ ಮಧ್ಯೆ ರಾತ್ರಿ ಆಶ್ರಮವೇ ಹೊತ್ತಿ ಉರಿಯುವಂತೆ ಕಾಣುತ್ತಿದ್ದುದರಿಂದ ಕಸ್ಸಪ ಮತ್ತು ಅವನ ಐನೂರು ಜನ ಶಿಷ್ಯರು ಯಾಗಶಾಲೆಯ ಹೊರಗೆ ನಿಂತು 'ಅಯ್ಯೋ, ಸುರಸುಂದರ ಸನ್ಯಾಸಿಯನ್ನು ನಾಗ ರಾಜನು ಕೊಂದುಬಿಟ್ಟನಲ್ಲ ಎಂದು ವ್ಯಥೆಪಡುತ್ತಾ ನಿಂತಿದ್ದರು. ಮರುದಿನ ಮುಂಜಾನೆ ಕಸ್ಸಪನು ಹೋಗಿ ನೋಡಿದಾಗ ಬುದ್ಧರು ದೀರ್ಘ ಧ್ಯಾನದಲ್ಲಿ ಕುಳಿತಿದ್ದುದನ್ನು ಕಂಡು ಆಶ್ಚರ್ಯಚಕಿತನಾಗಿ ಬುದ್ಧರನ್ನು ಭೋಜನಕ್ಕೆ ಆಹ್ವಾನಿಸಿ ರಾತ್ರಿ ಏನು ನಡೆಯಿತೆಂದು ಕೇಳಿದನು. ಬುದ್ಧರು ತಮ್ಮ ಪಿಂಡಪಾತ್ರೆಯಲ್ಲಿ ಅಡಗಿಸಿಟ್ಟಿದ್ದ ನಾಗ ರಾಜನನ್ನು ತೋರಿಸಿ ನಡೆದುದೆಲ್ಲವನ್ನು ಹೇಳಿದರು. ಉರುವೇಲ ಕಸ್ಸಪನು ತನ್ನ ಮನಸ್ಸಿನಲ್ಲಿ 'ಈ ಯುವ ಸಂನ್ಯಾಸಿಯು ಅಸಾಧಾರಣ ಶಕ್ತಿಯನ್ನು ಹೊಂದಿದ್ದಾನೆ, ಆದರೆ ನನ್ನ ಹಾಗೆ ಅರಹಂತನಲ್ಲ' ಎಂದುಕೊಳ್ಳುತ್ತಾನೆ. ಇದು ಬುದ್ಧರು ಪ್ರದರ್ಶಿಸಿದ ಮೊದಲ ಅತೀಂದ್ರಿಯ ಶಕ್ತಿ ಪ್ರದರ್ಶನ.

ಅಗ್ನಿ ಆರಾಧಕರಾದ ಜಟಿಲರು ಅತೀಂದ್ರಿಯ ಶಕ್ತಿಯನ್ನು ಗಳಿಸುವುದೇ ಆಧ್ಯಾತ್ಮ ಸಿದ್ಧಿ ಎಂದು ನಂಬಿದವರು. ಆದ್ದರಿಂದ ಮುಂದೆ ನಡೆಯಬಹುದಾದ ಘಟನೆಗಳನ್ನು ಊಹಿಸಿ ಇವರನ್ನು ಹೀಗೆಯೇ ತಮ್ಮ ತೆಕ್ಕೆಗೆ ಒಗ್ಗಿಸಿಕೊಂಡು ಅಭಿನ್ನಾ [ಅಲೌಕಿಕ] ಜ್ಞಾನವನ್ನು ಉಪದೇಶಿಸಬೇಕೆಂದು ಬುದ್ಧರು ತೀರ್ಮಾನಿಸಿದರು. ಅದಕ್ಕಾಗಿ ತಮ್ಮ ಆಶ್ರಮದ ಹತ್ತಿರದಲ್ಲೇ ನೆಲೆಸಬೇಕೆಂಬ ಕಸ್ಸಪನ ಬೇಡಿಕೆಯನ್ನು ಮನ್ನಿಸಿ ಆಶ್ರಮದ ಪಕ್ಕದಲ್ಲಿಯೇ ಒಂದು ಕುಟೀರದಲ್ಲಿ ನೆಲೆಸಿದರು.

ಜಟಿಲ ಕಸ್ಸಪರು ಒಂದು ಮಟ್ಟದ ಸಾಧನೆಗೈದಿದ್ದಾರೆಂದೂ, ಪುಣ್ಯವನ್ನು ಗಳಿಸಿದ್ದಾರೆಂದೂ ಬುದ್ಧರಿಗೆ ತಿಳಿದಿರುತ್ತದೆ. ಅವರನ್ನು ನಿಬ್ಬಾಣದ ಹಾದಿಗೆ ತರಲು ಸಹಾಯ ಮಾಡಬೇಕೆಂದು ಮನಸ್ಸು ಮಾಡುತ್ತಾರೆ. ಎರಡನೆಯ ದಿನ ರಾತ್ರಿ ಚತುಮ್ಮಹಾರಾಜಿಕರೆಂಬ ನಾಲ್ಕು ದಿಕ್ಕುಗಳ ದೇವತೆಗಳು ಬುದ್ಧರ ದರ್ಶನಕ್ಕಾಗಿ ಬರುತ್ತಾರೆ. ಆ ದೇವತೆಗಳ ತೇಜೋರಾಶಿಯು ಆಶ್ರಮದ ನಾಲ್ಕು ದಿಕ್ಕುಗಳನ್ನೂ ಆವರಿಸಿಕೊಳ್ಳುತ್ತದೆ. ಕಸ್ಸಪ ಮತ್ತು ಅವನ ಶಿಷ್ಯರು ಆ ದೃಶ್ಯವನ್ನು ನೋಡಿ ದಿಗ್ಭ್ರಾಂತರಾಗುತ್ತಾರೆ. ಮರುದಿನ ಭೋಜನದ ವೇಳೆ ಕಸ್ಸಪ ಆ ಸರಿರಾತ್ರಿಯಲ್ಲಿ ನಿಮ್ಮನ್ನು ಸಂಧಿಸಿದವರು ಯಾರು ಎಂದು ಕೇಳುತ್ತಾನೆ. ಅವರು ಚತುಮ್ಮಹಾರಾಜಿಕರೆಂಬ ನಾಲ್ಕು ದಿಕ್ಕಿನ ದೇವತೆಗಳು, ಗೌರವ ಸಲ್ಲಿಸಲು ಮತ್ತು ಧಮ್ಮವನ್ನು ಕೇಳಲು ಬಂದಿದ್ದರು ಎಂದು ಬುದ್ಧ ಹೇಳುತ್ತಾರೆ. ಕಸ್ಸಪ ಯೋಚಿಸುತ್ತಾನೆ 'ಓ, ಎಂಥಾ ಪ್ರಬಲ ಸಂನ್ಯಾಸಿ ಈತ, ಆದರೆ ನನ್ನಂತೆ ಅರಹಂತನಲ್ಲ' ಎಂದುಕೊಳ್ಳುತ್ತಾನೆ. ಬುದ್ಧರಿಗೆ ಅವನ ಅಹಂಕಾರ ಗುಣದ ಅರಿವಾಗುತ್ತದೆ. ಇವನನ್ನು ಸರಿಯಾದ ಸಮಯದಲ್ಲಿ ತಿದ್ದಬೇಕು ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ. ಇದು ಬುದ್ಧರ ಎರಡನೆಯ ಅತೀಂದ್ರಿಯ ಪ್ರದರ್ಶನವಾಗಿದೆ.

ಮೂರನೆಯ ದಿನ ತಾವತಿಂಸದ ರಾಜನಾದ, ಚತುಮ್ಮಹಾರಾಜಿಕರಿಗೂ ಅಧಿಪತಿಯಾದ ಸಕ್ಕ ಅಂದರೆ ದೇವೇಂದ್ರನು ಇಡೀ ಅರಣ್ಯವೇ ಪ್ರಕಾಶಿಸುವಂತೆ ಪ್ರಜ್ವಲಿಸುವ ಬೆಳಕನ್ನು ಹೊರಸೂಸುತ್ತಾ ಬಂದು ಬುದ್ಧರಿಗೆ ಭಕ್ತಿಪೂರ್ವಕವಾಗಿ ವಂದಿಸಿ ಧಮ್ಮೋಪದೇಶವನ್ನು ಪಡೆದು ಅದೃಶ್ಯನಾಗುತ್ತಾನೆ. ಕಸ್ಸಪನು ಮರುದಿನ ಬಂದು ಭೋಜನಕ್ಕೆ ಆಹ್ವಾನಿಸಿ ರಾತ್ರಿ ಅರಣ್ಯವೇ ಪ್ರಕಾಶಿಸುವಂತೆ ಪ್ರಜ್ವಲಿಸುವ ಬೆಳಕಿನೊಂದಿಗೆ ಬಂದು ಹೋದವರು ಯಾರು? ಎಂದು ಕೇಳುತ್ತಾನೆ. ಅವನು ಸಕ್ಕ ದೇವತೆ. ದೇವತೆಗಳ ಅಧಿಪತಿ ಎಂದು ಬುದ್ಧ ಹೇಳುತ್ತಾರೆ. ಕಸ್ಸಪನಿಗೆ ಅದೂ ಸೋಜಿಗವೆನಿಸುತ್ತದೆ. ಆದರೆ ಅವನಲ್ಲಿ ಬುದ್ಧರ ಕುರಿತು ಅದೇ ಅಭಿಪ್ರಾಯವಿರುತ್ತದೆ. 'ಈತ ಮಹಾ ಚತುರ ಸಂನ್ಯಾಸಿ, ಆದರೆ ನನ್ನಂತೆ ಅರಹಂತನಲ್ಲ' ಎಂದುಕೊಳ್ಳುತ್ತಾನೆ. ಇದು ಬುದ್ಧರು ಪ್ರದರ್ಶಿಸಿದ ಮೂರನೆಯ ಪವಾಡವಾಗಿದೆ.

ಮತ್ತೆ ಒಮ್ಮೆ ನಡುರಾತ್ರಿಯಲ್ಲಿ ಬ್ರಹ್ಮ ಸಹಂಪತಿ ತನ್ನ ದಿವ್ಯ ತೇಜಸ್ಸಿನೊಂದಿಗೆ ಬುದ್ಧರ ಬಳಿಬಂದು ಗೌರವದಿಂದ ವಂದಿಸಿ ಧಮ್ಮೋಪದೇಶವನ್ನು ಪಡೆದು ಹಿಂದಿರುಗುತ್ತಾನೆ. ಎಂದಿನಂತೆ ಉರುವೇಲ ಕಸ್ಸಪನು ಮರುದಿನ ಅದೇ ಪ್ರಶ್ನೆಯನ್ನು ಕೇಳುತ್ತಾನೆ. ಬ್ರಹ್ಮ ಸಹಂಪತಿಯ ಆಗಮನವನ್ನು ಕೇಳಿ ದಿಙ್ಮೂಢನಾಗುತ್ತಾನೆ.

ಆದರೂ 'ಈ ಸಂನ್ಯಾಸಿಯು ಸರ್ವಶ್ರೇಷ್ಠನೇನೋ ಹೌದು ಆದರೆ ನನ್ನ ಹಾಗೆ ಅರಹಂತನಲ್ಲ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾನೆ. ಇದು ಬುದ್ಧರ ನಾಲ್ಕನೆಯ ಪವಾಡವಾಗಿರುತ್ತದೆ.

ಹೀಗೆ ಮುಂದಿನ ಮೂರು ತಿಂಗಳ ಕಾಲ ಬುದ್ಧರು ಅಲೌಕಿಕ ಎನ್ನಬಹುದಾದ ದಿಬ್ಬಚಕ್ಕು, ಪರಚಿತ್ತ, ವಿನ್ಯಾನ ಜ್ಞಾನ, ಇದ್ದಿವಿದ್ದಂ ಎಂಬ ಹದಿನಾರು ಶಕ್ತಿಗಳನ್ನು ಸಂದರ್ಭೋಚಿತವಾಗಿ ಪ್ರದರ್ಶಿಸಿ ಕಸ್ಸಪನ ಚಿತ್ತಪರಿಪಕ್ವತೆಗಾಗಿ ಕಾದರು. ಆಮೇಲೆ ಒಂದು ದಿನ ಕಸ್ಸಪನನ್ನು ಹತ್ತಿರ ಕರೆದು "ಕಸ್ಸಪ ನೀನು ಆಸವಗಳನ್ನು ನಾಶ ಮಾಡಿರುವ ಅರಹಂತನೂ ಅಲ್ಲ ಅಥವಾ ನಿಬ್ಬಾಣದ ಪಥದಲ್ಲಿರುವ ಯಾಚಕನೂ ಅಲ್ಲ. ಆ ದಾರಿಯಲ್ಲಿ ಸಾಗುವುದಕ್ಕೆ ನಿನ್ನ ಚಿತ್ತವು ಈಗ ಸನ್ನದ್ಧಗೊಳ್ಳುತ್ತಿದೆ. ನೀನು ಕ್ರಮಿಸಬೇಕಾದ ದಾರಿ ಮುಂದಿದೆ" ಎಂದು ಹೇಳುತ್ತಾರೆ. ಈ ಮಾತುಗಳನ್ನು ಕೇಳುತ್ತಲೇ ಸಂವೇಗಕ್ಕೊಳಗಾದ ಕಸ್ಸಪನು ಬುದ್ಧರ ಪಾದಗಳಿಗೆರಗಿ 'ಭಗವಾನ್ ನನಗೂ ಮತ್ತು ನನ್ನ ಶಿಷ್ಯರಿಗೂ ಧಮ್ಮದೀಕ್ಷೆ ನೀಡಿ ತಮ್ಮ ಶಿಷ್ಯರಾಗಿ ಸ್ವೀಕರಿಸಿ ಎಂದು ಬೇಡಿಕೊಳ್ಳುತ್ತಾನೆ. ಆಗ ಬುದ್ಧರು "ನಿನಗೆ ಐನೂರು ಮಂದಿ ಶಿಷ್ಯರಿದ್ದಾರೆ. ಅವರ ಇಚ್ಛೆಯನ್ನು ಅರಿಯದೆ ನೀನು ಅವರಿಗೆ ಧಮ್ಮದೀಕ್ಷೆಯನ್ನು ಕೊಡಿಸುವುದು ಸರಿ ಕಾಣುವುದಿಲ್ಲ. ಹೋಗು, ಮೊದಲು ಅವರೊಡನೆ ಚರ್ಚಿಸಿ ಅವರು ಒಪ್ಪಿದರೆ ನನ್ನ ಬಳಿಗೆ ಬಾ" ಎಂದು ಹೇಳುತ್ತಾರೆ.

ಅದರಂತೆ ಕಸ್ಸಪ ಋಷಿಯು ತನ್ನ ಶಿಷ್ಯರ ಬಳಿಗೆ ಹೋಗಿ 'ನಾನು ಈ ಪರಮ ಶ್ರೇಷ್ಠ ಅರಹಂತರಲ್ಲಿ ಧಮ್ಮವನ್ನು ಸ್ವೀಕರಿಸಿ ಶಿಷ್ಯತ್ವವನ್ನು ಪಡೆಯುವವನಿದ್ದೇನೆ. ನಿಮ್ಮ ಇಚ್ಛಾನುಸಾರ ನಿಮ್ಮ ನಿಮ್ಮ ದಾರಿ ನೋಡಿಕೊಳ್ಳಬಹುದು' ಎಂದು ಹೇಳುತ್ತಾನೆ. ಅದಕ್ಕೆ ಐದುನೂರು ಶಿಷ್ಯರು ಒಕ್ಕೊರಲಿನಿಂದ 'ಆತ ಮಹಾಮಹಿಮರು. ಮೂರು ತಿಂಗಳ ಹಿಂದೆ ಉಗ್ರವಿಷಸರ್ಪ ನಾಗರಾಜ ಮುಚಲಿಂದನನ್ನು ಪಳಗಿಸಿದಾಗಲೇ ಅವರ ದಿವ್ಯಶಕ್ತಿಯ ಪರಿಚಯವಾಯಿತು. ಅವರು ಅರಹಂತರು. ನಾವೂ ಅವರನ್ನು ಗುರುವಾಗಿ ಸ್ವೀಕರಿಸುತ್ತೇವೆ ಎಂದರು. ಹೀಗೆ ಉರುವೇಲ ಕಸ್ಸಪ ಮತ್ತು ಅವನ ಐನೂರು ಜನ ಶಿಷ್ಯರು ಹುಲುಸಾಗಿ ಬೆಳೆದು ಜಡೆಗಟ್ಟಿದ ತಮ್ಮ ಕೇಶರಾಶಿಯನ್ನು, ಗಡ್ಡ ಮೀಸೆಗಳನ್ನು ಕತ್ತರಿಸಿ ಅಗ್ನಿಪೂಜೆಗೆಂದು ಇರಿಸಿಕೊಂಡಿದ್ದ ಅಗ್ಗಿಷ್ಟಿಕೆ ಇತ್ಯಾದಿ ಪರಿಕರಗಳನ್ನು ನೆರಂಜಾರ ನದಿಗೆ ಎಸೆದು ಬುದ್ಧರಲ್ಲಿ ಶರಣುಹೋಗುತ್ತಾರೆ. ತುಸು ದೂರದಲ್ಲಿಯೆ ತನ್ನ ಮನ್ನೂರು ಶಿಷ್ಯರೊಂದಿಗೆ ಆಶ್ರಮವಾಸಿಯಾಗಿದ್ದ ಉರುವೇಲ ಕಸ್ಸಪನ ಸೋದರ ನಾಡಿ ಕಸ್ಸಪ ನದಿಯಲ್ಲಿ ತೇಲಿಕೊಂಡು ಹೋಗುತ್ತಿದ್ದ ಜಟಿಲ ಕೇಶರಾಶಿಯನ್ನು, ಅಗ್ಗಿಷ್ಟಿಕೆಗಳನ್ನು ನೋಡಿ ಏನೋ ಅನಾಹುತವಾಗಿರಬಹುದೆಂದು ಅಣ್ಣನ ಆಶ್ರಮಕ್ಕೆ ಬಂದು ನೋಡುತ್ತಾನೆ. ತಲೆ ಬೋಳಿಸಿಕೊಂಡು ಚೀವರ ಧರಿಸಿದ ಭಿಕ್ಕುಗಳು! ಆಗಿರುವ ಬದಲಾಣೆಯನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸುತ್ತಾನೆ. ತಾನೂ ಹಿರಿಯ ಅಣ್ಣನ ದಾರಿಯಲ್ಲಿ ಸಾಗುತ್ತೇನೆಂದು ತನ್ನ ಮುನ್ನೂರು ಶಿಷ್ಯರೊಂದಿಗೆ ಬುದ್ಧರಲ್ಲಿ ಶರಣುಹೋಗುತ್ತಾನೆ. ತುಸುವೇ ಕೆಳ ತಪ್ಪಲಿನಲ್ಲಿ ಕಿರಿಯ ತಮ್ಮನಾದ ಗಯಾ ಕಸ್ಸಪನ ಆಶ್ರಮವಿರುತ್ತದೆ. ಅವನೂ ಸಹ ನೆರಂಜಾರಾ ನದಿಯಲ್ಲಿ ತೇಲಿ ಹೋಗುತ್ತಿದ್ದ ಹೆಣೆಗಂಟಿನ ಕೇಶರಾಶಿಯನ್ನೂ, ಅಗ್ನಿ ಸಾಮಗ್ರಿಗಳನ್ನೂ ನೋಡಿ ಹಿರಿಯಣ್ಣನ ಆಶ್ರಮಕ್ಕೆ ಓಡಿ ಬರುತ್ತಾನೆ. ಇಬ್ಬರೂ ಅಣ್ಣಂದಿರು ತಮ್ಮ ತಮ್ಮ ಶಿಷ್ಯರೊಂದಿಗೆ ಭಿಕ್ಕು ದೀಕ್ಷೆ ತೆಗೆದುಕೊಂಡಿರುವುದನ್ನು ನೋಡಿ ಸತ್ಯವೇನೆಂದು ಅರಿತುಕೊಳ್ಳುತ್ತಾನೆ. ತಾನೂ ಸಹ ತನ್ನ ಇನ್ನೂರು ಶಿಷ್ಯರೊಂದಿಗೆ ಬುದ್ಧರಲ್ಲಿ ಶರಣುಹೋಗುತ್ತಾನೆ. ಬುದ್ಧರು 'ಏಹಿ ಭಿಕ್ಕವೇ' ಎಂದು ಎಲ್ಲರಿಗೂ ಧಮ್ಮದೀಕ್ಷೆಯನ್ನು ನೀಡುತ್ತಾರೆ. ಉರುವೇಲದಿಂದ ಒಂದು ಸಾವಿರ ಶಿಷ್ಯರು ಮತ್ತು ಮೂವರು ಕಸ್ಸಪರೊಂದಿಗೆ ಬುದ್ಧರು ಗಯಾಸೀಸ ಎಂಬಲ್ಲಿಗೆ ಬರುತ್ತಾರೆ. ಆ ಪರ್ವತಶ್ರೇಣಿಯ ಒಂದು ತಪ್ಪಲಿನಲ್ಲಿ ಕುಳಿತು ಹೊಸದಾಗಿ ಭಿಕ್ಕುಸಂಘಕ್ಕೆ ಸೇರಿದ ಸಾವಿರ ಶಿಷ್ಯರ ಮನಸ್ಥಿತಿಯನ್ನು ಪರೀಕ್ಷಿಸಿ ಇದು ಸರಿಯಾದ ಸಮಯ ಎಂದು ತೀರ್ಮಾನಿಸಿ ತಮ್ಮ ಮೂರನೆಯ ಧಮ್ಮೋಪದೇಶವಾದ ಅದಿಟ್ಟ ಪರಿಯಾಯ [ಎಲ್ಲವೂ ಉರಿಯುತ್ತಿದೆ] ಸುತ್ತವನ್ನು ಬೋಧಿಸುತ್ತಾರೆ.

**ಅದಿಟ್ಟ ಪರಿಯಾಯ ಸುತ್ತ:**

ಇದನ್ನು ಅಗ್ನಿ ಸುತ್ತ ಎಂದು ಕರೆಯಬಹುದು. ಮೂವರು ಜಟಿಲ ಕಸ್ಸಪರು ಮತ್ತು ಅವರ ಒಂದು ಸಾವಿರ ಶಿಷ್ಯರು ಹಿಂದೆ ಅಗ್ನಿ ಆರಾಧಕರಾಗಿದ್ದುದರಿಂದ ನಿಜವಾಗಿ ಜೀವಿಯಲ್ಲಿ ಉರಿಯುತ್ತಿರುವ ಅಗ್ನಿ ಯಾವುದು ಎಂಬುದನ್ನು ತಿಳಿಹೇಳಲು ಬುದ್ಧರು ಈ ಪ್ರವಚನವನ್ನು ನೀಡಿದ್ದಾರೆ. ರಾಗ, ದ್ವೇಷ, ಮೋಹಗಳಿಂದ ಬಿಡಿಸಿಕೊಳ್ಳಲು ಇದು ತುಂಬಾ ಪರಿಣಾಮಕಾರಿಯಾದ ಪ್ರವಚನವಾಗಿದೆ. ಜೀವಿಯು ಬದುಕು ಆರು ಇಂದ್ರಿಯಗಳನ್ನು ಮತ್ತು ಆರು ಇಂದ್ರಿಯಗಳ ಬಾಹ್ಯ ಆಲಂಭನಗಳನ್ನು (ಆಯತನಗಳು) ಆಧರಿಸಿದೆ. ಈ ಹನ್ನೆರಡು ಆಯತನಗಳು ಆರು ತೆರನಾದ ಚಿತ್ತಗಳ ಸಂಪರ್ಕಕ್ಕೆ ಬಂದು ಹದಿನೆಂಟು ವಿಧದ ವೇದನೆಗಳು ಉತ್ಪತ್ತಿಯಾಗುತ್ತವೆ ಮತ್ತು ಹನ್ನೊಂದು ವಿಧದ ಬೆಂಕಿಯಿಂದ ಜೀವಿಯು ನಿರಂತರವಾಗಿ ಸುಡಲ್ಪಡುತ್ತಿರುವುದನ್ನು ಈ ಸುತ್ತದಲ್ಲಿ ವಿವರಿಸಲಾಗಿದೆ. ಮನಶ್ಶಾಸ್ತ್ರೀಯವಾಗಿರುವ ಈ ಸುತ್ತವನ್ನು ಮೂಲದಲ್ಲಿ ಇರುವ ಹಾಗೆಯೆ ಓದಿಕೊಂಡರೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಅದು ಹೀಗಿದೆ:

"ಭಿಕ್ಕುಗಳೇ, ಎಲ್ಲವೂ ಉರಿಯುತ್ತಿದೆ, ಯಾವುದು ಉರಿಯುತ್ತಿದೆ ಭಿಕ್ಕುಗಳೆ? ಅಕ್ಷಿ (ಕಣ್ಣು) ಉರಿಯುತ್ತಿದೆ, ದೃಶ್ಯ ಉರಿಯುತ್ತಿದೆ, ದೃಷ್ಟಿ ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".

"ಭಿಕ್ಕುಗಳೇ, ಮೂಗು ಉರಿಯುತ್ತಿದೆ, ಗಂಧ ಉರಿಯುತ್ತಿದೆ, ಘ್ರಾಣ ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".

**"ಭಿಕ್ಕುಗಳೇ, ಮನಸ್ಸು ಉರಿಯುತ್ತಿದೆ, ಸಂಖಾರಗಳು ಉರಿಯುತ್ತಿವೆ, ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".**

"ಭಿಕ್ಕುಗಳೇ, ಕಿವಿಯು ಉರಿಯುತ್ತಿದೆ, ಶಬ್ದ ಉರಿಯುತ್ತಿದೆ, ಶ್ರವಣ ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".

"ಭಿಕ್ಕುಗಳೇ, ನಾಲಿಗೆಯು ಉರಿಯುತ್ತಿದೆ, ರುಚಿಯು ಉರಿಯುತ್ತಿದೆ, ಜಿಹ್ವಾ ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು, ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".

"ಭಿಕ್ಕುಗಳೇ, ಕಾಯವು ಉರಿಯುತ್ತಿದೆ, ಪೊತ್ತಬ್ಬವು (ಕಾಯದ ಸಂಪರ್ಕಕ್ಕೆ ಬರುವ ವಸ್ತುಗಳು) ಉರಿಯುತ್ತಿದೆ, ಸ್ಪರ್ಶ ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".


"ಭಿಕ್ಕುಗಳೇ, ಮನಸ್ಸು ಉರಿಯುತ್ತಿದೆ, ಸಂಖಾರಗಳು ಉರಿಯುತ್ತಿವೆ, ಚಿತ್ತವು ಉರಿಯುತ್ತಿದೆ. ಈ ಮೂರೂ ಸಂಪರ್ಕಕ್ಕೆ (ಸ್ಪರ್ಶ) ಬಂದಾಗ ವೇದನೆ ಉತ್ಪತ್ತಿಯಾಗುತ್ತದೆ. ಅದು ಸುಖದ ಅನುಭವ ಇರಬಹುದು, ದುಃಖದ ಅನುಭವ ಇರಬಹುದು, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವ ಇರಬಹುದು ಎಲ್ಲವೂ ಉರಿಯುತ್ತಿವೆ. ಯಾವುದರಿಂದ ಉರಿಯುತ್ತಿವೆ? ರಾಗವೆಂಬ ಬೆಂಕಿಯಿಂದ ಉರಿಯುತ್ತಿವೆ, ದ್ವೇಷವೆಂಬ ಬೆಂಕಿಯಿಂದ ಉರಿಯುತ್ತಿವೆ, ಮೋಹವೆಂಬ ಬೆಂಕಿಯಿಂದ ಉರಿಯುತ್ತಿವೆ. ಹುಟ್ಟಿನಿಂದ ಉರಿಯುತ್ತಿವೆ, ಮುಪ್ಪಿನಿಂದ ಉರಿಯುತ್ತಿವೆ, ಸಾವಿನಿಂದ ಉರಿಯುತ್ತಿವೆ ಮತ್ತು ಶೋಕ, ರೋಧನ, ದೈಹಿಕ ದುಃಖ, ದೋಮನಸ್ಸ ಹಾಗೂ ಹತಾಶೆಯಿಂದ ಉರಿಯುತ್ತಿವೆ ಎಂದು ನಾನು ಹೇಳುತ್ತೇನೆ ಭಿಕ್ಕುಗಳೆ".

"ಭಿಕ್ಕುಗಳೇ, ಈ ರೀತಿ ವಿಷಯಗಳನ್ನು ಅರಿಯುವಾಗ ಒಬ್ಬ ಅರಿಯ ಶಿಷ್ಯನು ಕಣ್ಣಿನ ಬಗ್ಗೆ ವಿರಾಗ ಭಾವನೆಯನ್ನು ಅನುಭವಿಸುತ್ತಾನೆ. ದೃಶ್ಯದ ಬಗ್ಗೆ ವಿರಾಗ ಭಾವನೆಯನ್ನು ಅನುಭವಿಸುತ್ತಾನೆ. ದೃಷ್ಟಿ ಚಿತ್ತದ ಬಗ್ಗೆ ವಿರಾಗ ಭಾವನೆಯನ್ನು ಅನುಭವಿಸುತ್ತಾನೆ. ಕಣ್ಣು, ದೃಶ್ಯ, ದೃಷ್ಟಿ ಚಿತ್ತ ಮತ್ತು ಈ ಮೂರರ ಸಂಪರ್ಕದಿಂದ ಉಂಟಾಗುವ ಸುಖದ ಅನುಭವ, ದುಃಖದ ಅನುಭವ, ಸುಖವೂ ಅಲ್ಲದ, ದುಃಖವೂ ಅಲ್ಲದ ಅನುಭವಗಳ ಬಗ್ಗೆ ವಿರಾಗ ಭಾವನೆಯನ್ನು ಅನುಭವಿಸುತ್ತಾನೆ".

ಹಾಗೆಯೇ ಕಿವಿಯ ಬಗ್ಗೆ, ಮೂಗಿನ ಬಗ್ಗೆ, ನಾಲಿಗೆಯ ಬಗ್ಗೆ ಕಾಯ ಮತ್ತು ಮನಸ್ಸಿನ ಬಗ್ಗೆ ವಿರಾಗ ಭಾವನೆ ಮೂಡುವುದಲ್ಲದೆ ಅವುಗಳ ಆಲಂಭನಗಳು ಮತ್ತು ಸಂಪರ್ಕ ಚಿತ್ತಗಳ ಬಗೆಗೂ ವಿರಾಗ ಭಾವನೆ ಅನುಭವಿಸುತ್ತಾನೆ. ಹೀಗೆ ವಿರಾಗ ಭಾವನೆಯನ್ನು ಅನುಭವಿಸುವ ಮೂಲಕ ವ್ಯಾಮೋಹ ಮುಕ್ತನಾಗುತ್ತಾನೆ. 'ನಾನು ಮುಕ್ತಿ ಹೊಂದಿದ್ದೇನೆ' ಎಂಬ ಅರಿವು ಹುಟ್ಟು, ಮುಪ್ಪು, ಸಾವುಗಳಿಂದ ಮುಕ್ತಿಯನ್ನು ತಂದುಕೊಡುತ್ತದೆ. ಈ ಪ್ರವಚನವನ್ನು ಕೇಳಿದ ಮೂವರು ಜಟಿಲ ಕಸ್ಸಪರು ಮತ್ತು ಅವರ ಸಾವಿರ ಶಿಷ್ಯರು ತಮ್ಮ ಆಸವಗಳನ್ನು (ಜಜಜುಟಜಟಜಟಿಣ) ನಿವಾರಿಸಿಕೊಂಡು ಜ್ಞಾನೋದಯ ಹೊಂದಿ ಅರಹಂತರಾಗುತ್ತಾರೆ.

ರಾಜಗೃಹಕ್ಕೆ ಪಯಣ

ಗಯಾಸೀಸಾದಿಂದ ತಮ್ಮ ಸಾವಿರದ ಮೂರು ಶಿಷ್ಯರೊಂದಿಗೆ ಹೊರಟ ಬುದ್ಧರು ರಾಜಗೃಹವನ್ನು ತಲುಪುತ್ತಾರೆ. ಮಗಧದ ರಾಜಧಾನಿಯಾಗಿದ್ದ ರಾಜಗೃಹದಲ್ಲಿ ಬಿಂಬಿಸಾರನು ರಾಜ್ಯವಾಳುತ್ತಿದ್ದನು. ಸಿದ್ಧಾರ್ಥನು ಗೃಹತ್ಯಾಗ ಮಾಡಿ ಹೊರಟಿರುವಾಗ ರಾಜಗೃಹದಲ್ಲಿ ಬಿಂಬಿಸಾರನು ಭೇಟಿಯಾಗಿದ್ದು ಸತ್ಯದರ್ಶನವಾದಮೇಲೆ ಮತ್ತೆ ರಾಜಗೃಹಕ್ಕೆ ಭೇಟಿ ನೀಡಿ ಧಮ್ಮಸೂಕ್ಷ್ಮವನ್ನು ತನಗೆ ಅರುಹಬೇಕೆಂಬ ಅವನ ಕೋರಿಕೆಯನ್ನು ಈಡೇರಿಸುವ ಆಶಯದಿಂದಲೂ ಬುದ್ಧರು ಮೊದಲು ಇಲ್ಲಿಗೆ ಬಂದಿದ್ದರು. ನಗರದ ಹೊರವಲಯದಲ್ಲಿರುವ ಲತ್ತಿವನದ ಸುಪ್ಪತಿತ್ತ ಎಂಬ ವಿಶಾಲ ಆಲದ ಮರದ ಅಡಿಯಲ್ಲಿ ನೆಲೆಸಿದರು. ವನಪಾಲಕರು ಬುದ್ಧರು ಶಿಷ್ಯರೊಡಗೂಡಿ ಬಂದು ಅಲ್ಲಿ





ನೆಲೆಸಿರುವುದನ್ನು ರಾಜ ಬಿಂಬಿಸಾರನಿಗೆ ತಿಳಿಸುತ್ತಾರೆ. ಬುದ್ಧ ಆಗಮಿಸಿರುವ ಶುಭ ಸಮಾಚಾರವನ್ನು ತಿಳಿಯುತ್ತಲೇ ಬಿಂಬಿಸಾರನು ತನ್ನ ಮಂತ್ರಿಗಳು, ಶ್ರೀಮಂತರು ಮತ್ತು ಇತರ ಪರಿವಾರದೊಡನೆ ಬಂದು ಗೌರವಾದರಗಳನ್ನು ಸಲ್ಲಿಸಿಸುತ್ತಾರೆ. ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಬ್ರಾಹ್ಮಣರು ಬುದ್ಧರಿಗೆ ಗೌರವ ಕೊಡುವುದರಲ್ಲಿ ಕೊಂಚ ಎಡವುತ್ತಾರೆ. ಅವರಿಗೆ ಒಂದು ಅನುಮಾನ; ಅಲ್ಲಿ ಹಿರಿಯನಾಗಿದ್ದ ಉರುವೇಲ ಕಸ್ಸಪನೇ ಗೌತಮ ಬುದ್ಧರ ಗುರುವೋ ಅಥವಾ ಬುದ್ಧರು ಕಸ್ಸಪನ ಗುರುವೋ? ಎಂಬುದು. ಅದನ್ನು ಅರಿತ ಬುದ್ಧ ಈ ದಂದ್ವವನ್ನು ನಿವಾರಿಸಲು ಕಸ್ಸಪನಿಗೆ ಒಂದು ಪ್ರಶ್ನೆ ಹಾಕುತ್ತಾರೆ. "ಕಸ್ಸಪ ಅಗ್ನಿಹೋತ್ರವನ್ನು ನೀನು ಏಕೆ ತ್ಯಜಿಸಿದೆ ಎಂಬುದನ್ನು ತಿಳಿಸು" ಎಂದು ಕೇಳುತ್ತಾರೆ. ಅದಕ್ಕೆ ಕಸ್ಸಪ "ಯಜ್ಞ ಯಾಗಗಳು ಇಂದ್ರಿಯಾಸಕ್ತಿಗಳನ್ನು ಅಂದರೆ ದೃಶ್ಯ, ಗಂಧ, ರಸ, ಸ್ತ್ರೀ ಮೋಹ ಮತ್ತು ಇತರ ಬಯಕೆಗಳನ್ನು ಹುಟ್ಟಿಸಿ ಮನೋವಿಕಾರಕ್ಕೆ ಕಾರಣವಾಗುತ್ತವೆ. ಆದ್ದರಿಂದ ನಾನು ಯಜ್ಞ ಯಾಗಗಳನ್ನು ತ್ಯಜಿಸಿದೆ" ಎಂದು ಹೇಳುತ್ತಾನೆ. ಅದೇ ಸಮಯದಲ್ಲಿ ಎದ್ದು ನಿಂತು ತನ್ನ ವಸ್ತ್ರವನ್ನು ಸರಿಪಡಿಸಿಕೊಂಡು, ಮಂಡಿಯೂರಿ ಬುದ್ಧರ ಪಾದಗಳಿಗೆ ನಮಸ್ಕರಿಸಿ ಎರಡು ಬಾರಿ ಹೀಗೆ ನುಡಿದನು. "ಭಗವಾನ್ ಬುದ್ಧರೆ, ನೀವೆ ನನ್ನ ಗುರು, ನಾನು ನಿಮ್ಮ ಶಿಷ್ಯ".

ಆಗ ಜ್ಞಾನೋದಯವನ್ನು ಪಡೆದಿರುವ ಬುದ್ಧರೇ ಗುರು ಎಂಬುದು ನಾಗರಿಕರಿಗೆ ಅರ್ಥವಾಯಿತು. ಬುದ್ಧರು ಅಲ್ಲಿ ನೆರೆದಿದ್ದ ಒಂದು ಲಕ್ಷ ಹತ್ತು ಸಾವಿರ ಜನರಿಗೆ ಹಂತ ಹಂತವಾಗಿ ಧಮ್ಮ ಬೋಧನೆ ಮಾಡಿದರು ಮತ್ತು ಅವರೆಲ್ಲರೂ ಧಮ್ಮ ಸ್ವೀಕಾರ ಮಾಡಿದರು. ಅವರಲ್ಲಿ ಸಾವಿರಾರು ಮಂದಿ ಭಿಕ್ಕು ಸಂಘವನ್ನು ಸೇರಿದರು ಎಂದು ಹೇಳಲಾಗಿದೆ.

ಬಿಂಬಿಸಾರನು ಧಮ್ಮವನ್ನು ಸ್ವೀಕರಿಸಿದ ಮೇಲೆ ಧನ್ಯತಾ ಭಾವದಿಂದ ಬುದ್ಧರನ್ನು ಉದ್ದೇಶಿಸಿ "ಭಗವಾನ್ ನಾನು ರಾಜಕುಮಾರನಾಗಿದ್ದಾಗ ಐದು ಸಂಕಲ್ಪಗಳನ್ನು ಮಾಡಿದ್ದೆ. ಈ ದಿನ ಆ ಎಲ್ಲಾ ಐದು ಸಂಕಲ್ಪಗಳೂ ಈಡೇರಿದವು. ಮೊದಲನೆಯದು ಮಗಧದ ಜನರು ನನ್ನನ್ನು ರಾಜನನ್ನಾಗಿ ಆರಿಸಿ ಪಟ್ಟಾಭಿಷೇಕ ಮಾಡಬೇಕು ಎಂಬುದು. ಅವರು ನನ್ನನ್ನು ರಾಜನನ್ನಾಗಿ ಆರಿಸಿದರು. ಎರಡನೆಯದಾಗಿ ಸಮ್ಮಾಸಂಬುದ್ಧರು ನನ್ನ ರಾಜ್ಯಕ್ಕೆ ಭೇಟಿ ನೀಡಬೇಕು ಎಂದು ಆಶಿಸಿದ್ದೆ. ನಾನು ರಾಜನಾಗಿದ್ದಾಗಲೇ ರಾಜ್ಯಕ್ಕೆ ಸಮ್ಮಾಸಂಬುದ್ಧರ ಭೇಟಿಯಾಯಿತು. ಮೂರನೆಯದು ನಾನು ತಮ್ಮ ಅನುಯಾಯಿಯಾಗಬೇಕು ಎಂಬುದು. ನಾಲ್ಕನೆಯದು ನಾನು ಸಂಬುದ್ಧರಿಂದಲೇ ಧಮ್ಮವನ್ನು ಸ್ವೀಕರಿಸಬೇಕು ಎಂಬುದಾಗಿತ್ತು. ಅದೂ ಸಹ ಇಂದು ನೆರವೇರಿದೆ. ಕೊನೆಯದಾಗಿ ನಾನು ಬುದ್ಧರ ಶಿಷ್ಯನಾಗಿದ್ದು ನಿಬ್ಬಾಣ ಪಥದಲ್ಲಿ ನಡೆಯಬೇಕೆಂಬುದು ನನ್ನ ಇಚ್ಛೆಯಾಗಿದೆ".

ಇಷ್ಟು ಹೇಳಿ ಭಗವಾನರನ್ನು ಮರುದಿನ ಭೋಜನಕ್ಕೆ ಶಿಷ್ಯರೊಡಗೂಡಿ ಅರಮನೆಗೆ ಬರಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಬುದ್ಧ ಮೌನವಾಗಿಯೆ ಆಮಂತ್ರಣವನ್ನು ಸ್ವೀಕರಿಸಿ ರಾಜನನ್ನು ಬೀಳ್ಕೊಡುತ್ತಾರೆ.

ಬುದ್ಧ ಮತ್ತು ಅವರ ಶಿಷ್ಯರು ಅರಮನೆಗೆ ಬಂದು ತಲುಪಿದರು. ಸೂಕ್ತ ಸ್ಥಳದಲ್ಲಿ ಕುಳ್ಳಿರಿಸಿ ಪರಿಚರ್ಯೆಯನ್ನು ಮುಗಿಸಿದಮೇಲೆ ರಾಜ ಬಿಂಬಿಸಾರನು ಬುದ್ಧರಿಗೂ ಮತ್ತು ಅವರ ಶಿಷ್ಯರಿಗೂ ಸ್ವತಃ ಆಹಾರವನ್ನು ಬಡಿಸಿದನು. ಅದೇ ಸಮಯದಲ್ಲಿ ನಗರಕ್ಕೆ ಹತ್ತಿರವೇ ಇದ್ದ ವೇಲುವನವೆಂಬ ಬಿದಿರು ತೋಟದಲ್ಲಿ ಕುಟೀರಗಳು, ಧ್ಯಾನಕೇಂದ್ರ ಧಮ್ಮೋಪದೇಶಕ್ಕೆ ಬೇಕಾಗುವ ಸಭಾಂಗಣ ಮುಂತಾದುವುಗಳನ್ನು ಸುಸಜ್ಜಿತಗೊಳಿಸಿ ಸಂಘಕ್ಕೆ ದಾನ ಮಾಡುತ್ತಾನೆ.

ಸಂಘದಾನದಿಂದ ಸಂಪ್ರೀತನಾದ ಬಿಂಬಿಸಾರ ರಾತ್ರಿ ನಿದ್ದೆ ಹೋದ ಸಮಯದಲ್ಲಿ ಒಂದು ಭಯಾನಕ ಕನಸು ಕಂಡು ಬೆಚ್ಚಿಬೀಳುತ್ತಾನೆ. ಅರಮನೆಯ ಸುತ್ತಲೂ ಅಸಂಖ್ಯಾತ ಪ್ರೇತಗಳು ಒಂದೆಡೆ ಸೇರಿಕೊಂಡು ಬೀಭತ್ಸವಾಗಿ ಗೋಳಿಡುತ್ತಿರುವುದನ್ನು ಕಾಣುತ್ತಾನೆ. ಭಯಬೀತನಾದ ರಾಜ ಮರುದಿನ ವೇಲುವನಕ್ಕೆ ಹೋಗಿ ಬುದ್ಧರಲ್ಲಿ ಹಿಂದಿನ ರಾತ್ರಿ ಕನಸಿನಲ್ಲಿ ನಡೆದುದನ್ನು ಹೇಳಿಕೊಳ್ಳುತ್ತಾನೆ. ಅದರಿಂದ ತನಗೇನಾದರೂ ಆಪತ್ತು ಸಂಭವಿಸುವ ಸೂಚನೆಯೇ ಎಂದು ಅಲವತ್ತುಕೊಳ್ಳುತ್ತಾನೆ. ಬುದ್ಧರು ರಾಜನಿಗೆ ಧೈರ್ಯ ತುಂಬುತ್ತಾ ಹೆದರುವ ಅಗತ್ಯವಿಲ್ಲವೆಂದೂ, ಆ ಪ್ರೇತಗಳು ರಾಜನ ಹಿಂದಿನ ಸಂಬಂಧಿಕರೆಂದೂ, ಈಗ ಸುಗತಿಯನ್ನು ಪಡೆಯಲು ಹತಾಶ ಪ್ರಯತ್ನ ನಡೆಸಿರುವರೆಂದೂ ಹೇಳುತ್ತಾರೆ ಮತ್ತು ಅದಕ್ಕೆ ಕಾರಣವಾದ ತೊಂಬತ್ತೆರಡು ಕಲ್ಪಗಳಷ್ಟು ಹಿಂದಿನ ಬುದ್ಧ ಫುಸ್ಸನ ಕಥೆಯನ್ನು ಹೇಳುತ್ತಾರೆ. ಆ ನಂತರ ಪ್ರೇತಲೋಕದಲ್ಲಿರುವ ಗತಿಸಿದ ನಮ್ಮ ಸಂಬಂಧಿಕರಿಗೆ ನಾವು ಸಂಪಾದಿಸಿದ ಪುಣ್ಯದ ಒಂದು ಭಾಗವನ್ನು ಅವರಿಗೆ ಅನುಮೋದಿಸುವ ಮೂಲಕ ಅವರ ಸುಗತಿಗೆ ಕಾರಣವಾಗಬಹುದು ಎಂದು ಹೇಳಿ 'ತಿರೋಕುದ್ದ ಸುತ್ತ'ವನ್ನು ಉಪದೇಶಿಸುತ್ತಾರೆ.

ತಿರೋಕುದ್ದ ಸುತ್ತ

ಪ್ರೇತಗಳು ಗೋಡೆಗಳ ಹೊರಗೆ, ರಸ್ತೆಗಳು ಕೂಡುವಲ್ಲಿ ರೋಧಿಸುತ್ತ ನಿಲ್ಲುತ್ತವೆ. ಪೂರ್ವದಲ್ಲಿ ತಾವು ವಾಸವಾಗಿದ್ದ ಮನೆಗಳಿಗೆ ಹೋಗಿ ಆತಂಕಪೂರ್ವಕವಾಗಿ ಕಾಯುತ್ತಿರುತ್ತವೆ. ಪುಷ್ಕಳವಾದ ಭೋಜನ ಸಿದ್ಧಪಡಿಸಿದ್ದರೂ ಮನೆಯವರಿಗೆ ಇವರು ನೆನಪಿಗೆ ಬರುವುದಿಲ್ಲ. ಆದರೆ ಕೆಲವು ಧಾರಾಳ ಸಂಬಂಧಿಗಳು ಅನುಕಂಪ ತೋರಿ ಅವರು ವಿಶೇಷವಾಗಿ ಇಷ್ಟಪಡುತ್ತಿದ್ದ ತಿಂಡಿತಿನಿಸುಗಳನ್ನು, ಪಾನೀಯಗಳನ್ನು ತಯರಿಸಿ ಗತಿಸಿದ ಸಂಬಂಧಿಗಳಿಗೆ ಅರ್ಪಿಸಿ ಅವರೂ ಸುಖಪಡುವಂತಾಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತಾರೆ. ಇದನ್ನು ಪುಣ್ಯಾನುಮೋದನೆ ಎಂದು ಕರೆಯುತ್ತಾರೆ. ಗತಿಸಿದ ಸಂಬಂಧಿಗಳು ಅದರಲ್ಲಿ ಸಂತೋಷದಿಂದ ಭಾಗವಹಿಸುತ್ತಾರೆ. ಆ ಗತಿಸಿದ ಸಂಬಂಧಿಗಳೂ ಸಹ ಪುಣ್ಯಾನುಮೋದನೆಯಿಂದ ಸಂತುಷ್ಟರಾಗಿ ಕರುಣಾಮಯಿ ದಾನಿಗಳು ಇದರ ಪ್ರತಿಫಲದಿಂದ ವಂಚಿತರಾಗದಿರಲಿ ಎಂದು ಮನಸಾರೆ ಹಾರೈಸುತ್ತಾರೆ. ಪ್ರೇತಲೋಕದ ಜೀವಿಗಳು ಭೂಲೋಕದಲ್ಲಿ ನಡೆಯುವ ದಾನಧರ್ಮದಿಂದ ಉತ್ಪತ್ತಿಯಾಗುವ ಪುಣ್ಯದ ಅನುಮೋದನೆಯನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತಾರೆ.

ಎತ್ತರದ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ತಗ್ಗು ಪ್ರದೇಶಕ್ಕೆ ಹರಿಯುವಂತೆ ಭೂಲೋಕದಲ್ಲಿ ನಡೆಯುವ ದಾನಧರ್ಮದಿಂದ ಸಂಚಯವಾದ ಪುಣ್ಯವು ಪ್ರೇತಲೋಕದ ನತದೃಷ್ಟರನ್ನು ಕಾಪಾಡುತ್ತದೆ. ಅವನು ನನಗೆ ಒಳ್ಳೆಯದನ್ನು ಮಾಡಿದ್ದ, ಅವನು ನನಗೆ ಉಡುಗೊರೆಯನ್ನು ಕೊಟ್ಟಿದ್ದ, ಅವಳು ನನ್ನ ಸಂಬಂಧಿ, ಅವನು ನನ್ನ ಮಿತ್ರ ಇತ್ಯಾದಿಯಾಗಿ ಮನುಷ್ಯರು ಸಂಬಂಧಿಗಳ ಸಹಾಯವನ್ನು ನೆನಪು ಮಾಡಿಕೊಂಡು ದಾನಧರ್ಮಗಳನ್ನು ಮಾಡಿ ಅದರಿಂದ ಉಂಟಾದ ಪುಣ್ಯವನ್ನು ಗತಿಸಿದ ಸಂಬಂಧಿಗಳೊಂದಿಗೆ ಹಂಚಿಕೊಳ್ಳಬೇಕು. ಅದನ್ನು ಬಿಟ್ಟು ಅಳುವುದರಿಂದ, ರೋಧಿಸುವುದರಿಂದ ತಮ್ಮ ಗತಿಸಿದ ಸಂಬಂಧಿಗಳಿಗೆ ಯಾವ ಸಹಾಯವನ್ನೂ ಮಾಡಿದಂತಾಗುವುದಿಲ್ಲ.

ಆದರೆ ಪರಮೋಚ್ಚ ಜ್ಞಾನೋದಯವನ್ನು ಹೊಂದಿದ ಸಮ್ಮಾಸಂಬುದ್ಧರಿಗೆ ಮತ್ತು ಸಂಘಕ್ಕೆ ದಾನ ಮಾಡುವುದರಿಂದ ಗಳಿಸುವ ಪುಣ್ಯದಲ್ಲಿ ಗತಿಸಿದ ಸಂಬಂಧಿಗಳು ತಕ್ಷಣದ ಮತ್ತು ದೀರ್ಘಕಾಲದ ಲಾಭಗಳನ್ನು ಪಡೆಯುತ್ತಾರೆ. ಹೀಗೆ ಪ್ರೇತಗಳ ಬಗ್ಗೆ ಮತ್ತು ಅವರ ಸಂಬಂಧಿಕರ ಜವಾಬ್ದಾರಿಯನ್ನು ಸ್ಪಷ್ಟವಾಗಿ ವಿವರಿಸಲಾಯಿತು. ಉತ್ಕೃಷ್ಟವಾದ ದಾನ ನೀಡಿ ಪುಣ್ಯಫಲಗಳನ್ನು ಪ್ರೇತಗಳಿಗೆ ಅರ್ಪಿಸಲಾಯಿತು. ಭಿಕ್ಕುಗಳೇ, ಇದರಿಂದ ನೀವು ಪುಣ್ಯವನ್ನು ಗಳಿಸಿದಂತಾಯಿತು.

–ಮುಂದುವರಿಯುವುದು





At Pristine we believe in responsible, intelligent food choices that have a positive impact on our health - and on the planet. Here tradition meets innovation, to bridge health gaps and help people live healthier and happier.



'SAMVADA' Kannada Monthly, APRIL 2020 Regd No. KA/BGW-706/2018-2020 RNI No. KARKAN/ 2002/ 09246.
Posted at Bangalore PSO Bangalore-26 on 4th or 7th of Every Month. (No of pages- 82) Published on 1st of every month
Licensed to post without prepayment. Licence No PMG BG/WPP-367/2018-20

# Spoorthidhama



2020

## AMBEDKAR MEMORIAL

- The Ambedkar Memorial is being built in Spoorthidhama in the cosmopolitan city of Bangalore. A circular building about seventy feet high, it rises unhurriedly like a spring on the top of a raised mass of granite.
- It is designed to house museums, library, research and publications division, a meditation area, places for seminars, workshops and exhibition halls.
- It encloses two water bodies carved into hard granite and an open platform for different performances.
- A powerful light gushes through a six feet diameter cylinder placed at the centre and comes out through perforations at the top, lighting up the sky. A symbol of freedom and progress.
- It is conceptualized on Ambedkar's final call to go to the Buddha. A place for spiritual rejuvenation and retreat.

### An appeal

- The memorial is estimated to cost Rs.35 crores.
- Please join hands with us in this holy effort of expressing our gratitude to the greatest son of India and benefactor of mankind.

Your contributions may please be credited to:
Dr Baba Saheb Ambedkar Shatamanotsava Samiti Trust
A/c No: 100118690000008
IFSC Code: KSCB0000001,
At the Karnataka State Co-operative Apex Bank Bank Ltd.,
Chamarajpet, Bangalore–560018

OR

Cheque/ Demand Draft (DD) drawn on "Dr Baba Saheb Ambedkar Shatamanotsava Samiti Trust"
May please be sent to the following address:
The president,
Baba Saheb Ambedkar Shatamanotsava Samithi Trust®, Spoorthidhama, Vishwaneedam post,
Post Box No: 9143, Bengaluru – 560091
Mob: 9108830438 / 9108830437

Spoorthidhama, Anjananagara, Magadi Main Road, Vishwaneedam Post, Bengaluru – 560091
Email: spoorthidhama1992@gmail.com, Ph: 9108830437 | 9108830438

EDITOR : INDUDHARA HONNAPURA, PRINTED AND PUBLISHED BY S.R. GOVINDU ON BEHALF OF SPOORTHIDHAMA ANJANA NAGAR, MAGADI ROAD VISHWANEEDAM POST BANGALORE - 560 091